# DAMAGE BOOK

# THE BOOK WAS DRENCHED

OSMANIA UNIVERSITY LIBRARY

Call No. K83 G14K Accession No. K5891

Author

Title 1955

This book should be returned on or before the date last marked below.

UNIVERSAL LIBRARY

OU_200126

UNIVERSAL LIBRARY

ಗಳಗನಾಥ ಸುರಸ ಗ್ರಂಥಮಾಲೆ, ಧಾರವಾಡ.

# ಕ್ಷಾತ್ರತೇಜ

ಅಥವಾ

# ಸ್ವಾಮಿಭಕ್ತಿಪ್ರದರ್ಶನ.

ಲೇಖಕರು:

ವೇ. ತಿ. ಗಳಗನಾಥರು

೧೯೫೫

ಬೆಲೆ ೧-೮-೦

ಗಳಗನಾಥ ಸುರಸ ಗ್ರಂಥಮಾಲೆ
ಜವಳಿಪೇಟೆ ೬೬ ಧಾರವಾಡ

ಪ್ರಕಾಶಕರು:

ಎಸ್. ಎಮ್. ಜೋಶಿ

ಗಳಗನಾಥ ಸುರಸ ಗ್ರಂಥಮಾಲೆ,

ಜವಳಿಪೇಟಿ ಧಾರವಾಡ.

ಮೊದಲನೆಯ ಮುದ್ರಣ ೧೯೧೪

೨ನೆಯ ಮುದ್ರಣ —

೩ನೆಯ ಮುದ್ರಣ —

೪ನೆಯ ಮುದ್ರಣ ೧೯೫೫

( ಈ ಪುಸ್ತಕದ ಎಲ್ಲ ಒಡೆತನವು ಎಸ್. ಎಮ್. ಜೋಶಿಯವರಿಗೆ ಸೇರಿದೆ. )

ಮುದ್ರಕರು:

ಎಸ್. ಎಮ್. ಜೋಶಿ.

ಗಳಗನಾಥ ಮುದ್ರಣಾಲಯ,

ಜವಳಿಪೇಟಿ ಧಾರವಾಡ.

# ಪ್ರಸ್ತಾವನೆ

ಈ ಪುಸ್ತಕವು ಮ. ರಾ. ರಾ. ಹರಿ ನಾರಾಯಣ ಆಪಟೆಯವರು ಮಹಾರಾಷ್ಟ್ರದಲ್ಲಿ ಬರೆದಿದ್ದ "ರೂಪನಗರಚಿರಾಜಕನ್ಯಾ" ಎಂಬ ಐತಿಹಾಸಿಕ ಕಾದಂಬರಿಯ ಆಧಾರದಿಂದ ಬರೆದಿದ್ದಾಗಿರುತ್ತದೆ. ಇದರಲ್ಲಿ ಔರಂಗಜೇಬನಿಗೂ, ರಜಪೂತರಿಗೂ ನಡೆದ ಒಂದು ಯುದ್ಧ ಪ್ರಸಂಗದ ವರ್ಣನವಿದ್ದು, ಇದರಿಂದ ಔರಂಗಜೇಬನ, ಹಾಗು ರಜಪೂತರ ಗುಣಸ್ವಭಾವಾದಿಗಳು ಚಿತ್ತಾಕರ್ಷಣಪೂರ್ವಕವಾಗಿ ಗೊತ್ತಾಗುತ್ತವೆ. ಇದರಲ್ಲಿ ರಜಪೂತರ ಕ್ಷಾತ್ರತೇಜಸ್ಸು ಚನ್ನಾಗಿ ವ್ಯಕ್ತವಾಗಿರುವದರಿಂದ, ಇದಕ್ಕೆ 'ಕ್ಷಾತ್ರತೇಜ' ವೆಂಬ ಹೆಸರನ್ನೂ, ಸ್ವಾಮಿಭಕ್ತಿಯ ಉದಾಹರಣಗಳು ಅಲ್ಲಲ್ಲಿ ವ್ಯಕ್ತವಾಗಿರುವದರಿಂದ ಇದಕ್ಕೆ "ಸ್ವಾಮಿಭಕ್ತಿ ಪ್ರದರ್ಶನ" ವೆಂಬ ಮತ್ತೊಂದು ಹೆಸರನ್ನೂ ಇಟ್ಟಿರುತ್ತದೆ.

ಈ ಕಾದಂಬರಿಯಿಂದ ನಾವು ಹಲವು ಸಂಗತಿಗಳನ್ನು ಕಲಿಯಬಹುದಾಗಿದೆ. ರೂಪನಗರದ ವಿಜಯಸಿಂಹನ ಸ್ವಾಭಿಮಾನ-ಸ್ವಕುಲಾಭಿಮಾನ, ಉದೇಪುರದ ರಾಜಸಿಂಹನ ವಿಚಾರಪೂರ್ವಕವಾದ ಕಾರ್ಯಪ್ರವೃತ್ತಿ, ರೂಪಮತಿಯ ಕುಲೀನತೆ, ಇಂದಿರೆ-ಪದ್ಮೆ-ದುರ್ಗಾದಾಸ ಇವರ ಸ್ವಾಮಿನಿಷ್ಠೆ, ಔರಂಗಜೇಬನ ವಿಷಯಾಸಕ್ತಿಯಲ್ಲಿಯ ಜಾಗರೂಕತೆ, ವೈಕುಂಠಯೋಗಿಗಳ ನಿಸ್ಪೃಹತೆ, ಉದೇಪುರಿಯ ಪತಿನಿಷ್ಠೆ, ಚಂದ್ರಾವತಿಯ ತೇಜಸ್ವಿತೆ, ಇವನ್ನು ಸಾಂಸಾರಿಕರಾದ ನಾವು, ಲಕ್ಷಪೂರ್ವಕ ಅವಲೋಕಿಸಬಹುದಾಗಿದೆ. ಒಟ್ಟಿನಿಂದ ಕಾದಂಬರಿಯು ಚಿತ್ತಾಕರ್ಷಕವಾಗಿದ್ದು ರಾಜಸಗುಣ ಪ್ರಧಾನವಾದ ನೀತಿಯನ್ನು ಚನ್ನಾಗಿ ವ್ಯಕ್ತಮಾಡುತ್ತದೆ.

ಪುಸ್ತಕವು ಮಿತಿಮೀರಿ ದೊಡ್ಡದಾಗದಂತೆಯೂ, ಕನ್ನಡ ವಾಚಕರಿಗೆ ಓದುವಾಗ ಬೇಸರವಾಗದಂತೆಯೂ ಮೂಲಕಾದಂಬರಿಯಲ್ಲಿಯ ಕೆಲವು

ವಿಷಯವನ್ನು ಬಿಟ್ಟಿರುತ್ತದೆ. ಇದನ್ನು ಮಹಾರಾಷ್ಟ್ರ ಭಾಷೆಯನ್ನರಿತ ಕನ್ನಡಿಗರು, ಮೂಲ ಕಾದಂಬರಿಯನ್ನು ಮರ್ಮವರಿತು ಓದಿ ಮನಗಾಣ ಬಹುದು; ಮತ್ತು ಮಹಾರಾಷ್ಟ್ರವರಿಯದ ಕನ್ನಡಿಗರು, ಇದೊಂದು ಮನೋರಂಜಕ ನೈತಿಕಕಾದಂಬರಿಯು, ವಿಚಾರಪೂರ್ವಕವಾಗಿ ಮರ್ಮ ವರಿತು ಬರೆಯಲ್ಪಟ್ಟಿರುತ್ತದೆಂಬ ನಂಬಿಗೆಯಿಂದ ಸಮಾಧಾನಪಡಬೇಕಲ್ಲದೆ, ಇನ್ನೂ ಮೂಲಕಾದಂಬರಿಯಲ್ಲಿ ಎಷ್ಟು ಸವಿಯತ್ತೋ ಏನೋ ಎಂದು ಅಸಮಾಧಾನಪಡಬಾರದು. ಈ ಅಭಿಮಾನೋಕ್ತಿಗಾಗಿ ವಾಚಕರು, ಲೇಖಕ ನನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಲಾಗುವದು.

ಮ. ರಾ. ರಾ. ಆಪಟೆಯವರಿಂದ ನಮಗೂ, ಕನ್ನಡಿಗರಿಗೂ ಈಗ ಆಗಿದ್ದ ಹಾಗು ಮುಂದೆ ಆಗಬೇಕಾಗಿರುವ ಲಾಭವನ್ನು ಬರೆದು ತೋರಿಸಲ ವಶ್ಯವಿಲ್ಲ. ಮ. ರಾ. ರಾ. ಆಪಟೆಯವರಿಗೆ ಪ್ರತಿಫಲಕೊಡಲು ಈಶ್ವರನು ಸಮರ್ಥನಿದ್ದಾನೆ, ಆ ಸತ್ಫಲವನ್ನು ಭೋಗಿಸಲಿಕ್ಕೆ ನಮ್ಮ ಮ. ರಾ. ರಾ. ರಸಿಕ ಆಪಟೆಯವರು ಸರ್ವಾಂಶದಿಂದ ಪಾತ್ರರಿರುತ್ತಾರೆ. ಅಂದಬಳಿಕ, ಓದಲಿಕ್ಕೆ ತಕ್ಕ ವಿಷಯಗಳು ಕನ್ನಡದಲ್ಲಿಲ್ಲೆಂದು ಚಡಪಡಿಸುವ ನಾವು, ಅತ್ತಿತ್ತ ನೋಡದೆ, ಸದ್ಗ್ರಂಥಗಳ ಸ್ವಾರಸ್ಯದ ಸೇವನದಿಂದ ತೃಪ್ತರಾಗಿ, ಅನ್ನದಾತೃವಿನ ಕಲ್ಯಾಣವನ್ನು ಚಿಂತಿಸಿದರೆ ತೀರಿತು. ಅಷ್ಟೇ ಕೆಲಸಮಾಡು ವದು ನಮ್ಮ ಕೈಯಲ್ಲಿರುವದರಿಂದ ನಮ್ಮ ಮ. ರಾ. ರಾ. ಆಪಟೆಯವರ ಅಭ್ಯುದಯಕ್ಕಾಗಿ ಶ್ರೀ ಸದ್ಗುರುವನ್ನು ಪ್ರಾರ್ಥಿಸಿ, ಸುಮ್ಮನಾಗುವೆವು.

ಆನಂದವನ (ಅಗಡಿ), ತಾರೀಖು ೧ನೇ ಜೂನ ೧೯೧೪ } ವಿಧೇಯ,

ವೇ. ತಿ. ಗಳಗನಾಥ

# ಕ್ಷಾತ್ರತೇಜ

ಅಥವಾ

# ಸ್ವಾಮಿಭಕ್ತಿ ಪ್ರದರ್ಶನ

## ೧ನೆಯ ಪ್ರಕರಣ—ಭವಿಷ್ಯ

ಭರತಭೂಮಿಯಲ್ಲಿ ಸೂರ್ಯ-ಚಂದ್ರವಂಶಗಳ ಕ್ಷ ಪ್ರಾಚೀನಕಾಲದಿಂದ ಪ್ರಸಿದ್ಧರಾಗಿರುವರು. ಅವರ ಪ್ರಖರವಾದ ಕ್ಷಾತ್ರ-ತೇಜಸ್ಸು ಭರತಖಂಡದ ಅವನತಕಾಲದಲ್ಲಿ ಕೂಡ ವೈರಿಗಳ ಕಣ್ಣು ಕುಕ್ಕದೆ ಇರಲಿಲ್ಲ. ಸೂರ್ಯವಂಶದ ಮೊದಲನೆಯ ಅರಸನು ಇಕ್ಷ್ವಾಕುವು. ಆತನ ರಾಜಧಾನಿ ಅಯೋಧ್ಯೆ. ಇಕ್ಷ್ವಾಕುವಿನಿಂದ ಐವತ್ತೇಳನೆಯ ತಲೆಯವನೇ ಕುಲಭೂಷಣನಾದ ಶ್ರೀ ರಾಮಚಂದ್ರನು. ಈಗಿನ ಜಯಪುರ, ಉದೇಪುರ, ಜೋಧಪುರಗಳಲ್ಲಿಯ ರಜಪೂತ ಅರಸರು ಸೂರ್ಯವಂಶದವರೆನಿಸಿಕೊಳ್ಳುವರು. ಇಕ್ಷ್ವಾಕುವಿನ ತಂಗಿಯಾದ "ಇಲಾ" ಎಂಬವಳನ್ನು ಚಂದಪುತ್ರನಾದ ಬುಧನಿಗೆ ಕೊಟ್ಟಿತ್ತು. ಆಕೆಯಿಂದ ಚಂದ್ರವಂಶವು ಉತ್ಪನ್ನವಾಯಿತು. ಬುಧನ ಪುತ್ರನು ಪುರೂರವನು, ಆತನ ಪುತ್ರ ಯಯಾತಿಯು. ಯಯಾತಿಗೆ ಉರು, ಪುರು, ಯದು, ಎಂಬ ಮೂವರು ಮಕ್ಕಳಾದರು. ಇವರಲ್ಲಿ ಪುರುವಿ

ನಿಂದ ಇಪ್ಪತ್ತೇಳನೆಯ ತಲೆಯವನಾದ ಹಸ್ತಿರಾಜನೆಂಬವನು ಹಸ್ತಿನಾವತೀ ಪಟ್ಟಣವನ್ನು ಸ್ಥಾಪಿಸಿದನು. ಹಸ್ತಿರಾಜನಿಂದ ಇಪ್ಪತ್ತೆರಡನೆಯ ತಲೆಯವರು ಪಾಂಡವರು. ಪಾಂಡವರೊಳಗಿನ ಯುಧಿಷ್ಠಿರ (ಧರ್ಮರಾಜ) ನೆಂಬವನು ಭಾರತಯುದ್ಧದಲ್ಲಿ ಜಯಶಾಲಿಯಾದಬಳಿಕ ಇಂದ್ರಪ್ರಸ್ಥದ ಕೋಟೆಯನ್ನು ಕಟ್ಟಿಸಿದನು. ಇದು ಪುರುವಂಶದ ಮಾತಾಯಿತು. ಇತ್ತ ಯದುವಂಶದಲ್ಲಿ ಐವತ್ತೊಂದನೆಯ ತಲೆಯಲ್ಲಿ ಬಲರಾಮ–ಶ್ರೀ ಕೃಷ್ಣರೆಂಬವರು ಅರಸರಾದರು. ಅವರು ತಮ್ಮ ರಾಜಧಾನಿಯನ್ನು ಗುಜರಾಥದೊಳಗಿನ ದ್ವಾರಕೆಯೆಂಬ ನಡುಗಡ್ಡೆಯಲ್ಲಿ ಸ್ಥಾಪಿಸಿದರು. ಈಗಿನ ಜಸಲಮೀರದ ಭಾಟವಂಶದ ಕ್ಷತ್ರಿಯರಾಜರೂ, ಕಚ್ಛದ "ಜಾಡೇಜೀ" ಹಾಗು " ಜೋಡಾಸವೇ" ಎಂಬ ಅರಸರೂ ತಾವು ಕೃಷ್ಣವಂಶದವರೆನಿಸಿಕೊಳ್ಳುವರು.

ಸೂರ್ಯವಂಶದ ಪ್ರಸಿದ್ಧಸಾರ್ವಭೌಮರಾಜನಾದ ಶ್ರೀರಾಮನ ಪ್ರತಾಪದ ವರ್ಣನವನ್ನು ಶ್ರೀಮದ್ರಾಮಾಯಣದಲ್ಲಿಯೂ, ಚಂದ್ರವಂಶದ ಕೌರವ–ಪಾಂಡವ–ಶ್ರೀ ಕೃಷ್ಣ ಮೊದಲಾದವರ ಪ್ರತಾಪದ ವರ್ಣನವನ್ನು ಮಹಾಭಾರತದಲ್ಲಿಯೂ ಕೊಟ್ಟಿರುವದಷ್ಟೇ ? ವೇದತುಲ್ಯವಾದ ಈ ಎರಡು ಐತಿಹಾಸಿಕ ಪ್ರಚಂಡ ಗ್ರಂಥಗಳಲ್ಲಿ ಉಜ್ವಲರೂಪದಿಂದ ವರ್ಣಿಸಿದ ತಮ್ಮ ಪೂರ್ವಜರ ಪರಿಣಾಮಕಾರಕ ಕ್ಷಾತ್ರತೇಜಸ್ಸನ್ನು ಕ್ಷತ್ರಿಯರು ಸ್ಮರಿಸಿ ಸ್ಮರಿಸಿ, ಅಭಿಮಾನಪುರಸ್ಸರವಾಗಿ ವಂಶಪರಂಪರೆಯಿಂದ ತಮ್ಮ ತೇಜಸ್ಸನ್ನು ಕಾಯ್ದುಕೊಳ್ಳುತ್ತ ಬಂದರು. ಕಾಲಮಹಿಮೆಯಿಂದ ಈ ಭರತಖಂಡದ ಮೇಲೆ ಸಾಗಿಬಂದ ಮಹಮ್ಮದೀಯ ಧರ್ಮದ ಪಠಾಣರಾಜರೂ, ಮೊಗಲರಾಜರೂ ಈ ಸೂರ್ಯ–ಚಂದ್ರವಂಶದ ಕ್ಷತ್ರಿಯರ, ಅಥವಾ ರಜಪೂತರ ತೇಜಸ್ಸನ್ನು ಬಹುಮಟ್ಟಿಗೆ ಕಡಿಮೆಮಾಡಿದರೂ, ಆ ಮುಸಲ್ಮಾನರಿಗೆ ರಜಪೂತರ ಕ್ಷಾತ್ರತೇಜಸ್ಸಿನ ಪ್ರಖರತೆಯು ಆಗಾಗ್ಗೆ ಅನುಭವಕ್ಕೆ ಬಾರದೆ ಹೋಗಲಿಲ್ಲ. ಕ್ಷತ್ರಿಯರ ತೇಜಸ್ಸನ್ನು ಕಳೆಯಲಿಕ್ಕೆ ಬದ್ಧಕಂಕಣರಾಗಿ ನಿಂತ ಮುಸಲ್ಮಾನರಲ್ಲಿ, ಮೊಗಲವಂಶದ ಔರಂಗಜೇಬಬಾದಶಹನು ಅಗ್ರೇಸರನೆಂದು ಹೇಳಬಹುದು. ಆತನು ತನ್ನನ್ನು 'ಅಲಮಗೀರ' ಅಂದರೆ ಜಗತ್ತನ್ನು ಗೆಲ್ಲುವವನೆಂದು ಕರೆಸಿಕೊಳ್ಳುತ್ತಿದ್ದನು. ಅಲಮಗೀರನು ಹಿಂದೂಜನರನ್ನು ಬಹಳವಾಗಿ ದ್ವೇಷಿಸುತ್ತಿದ್ದನು. ತಾವು ರಾಮ-ಕೃಷ್ಣರ ಪವಿತ್ರ

ವಂಶಜರೆಂದು ತಿಳಿದು ರಜಪೂತರಾಜರು ಅಕಬರಬಾದಶಹನವರೆಗೆ ಮುಸಲ್ಮಾನರೊಡನೆ ಶರೀರ ಸಂಬಂಧವನ್ನಂತು ಇರಲಿ, ಅನ್ನವ್ಯವಹಾರವನ್ನು ಕೂಡ ಮಾಡಲಿಲ್ಲ; ಆದರೆ ಅಕಬರ ಬಾದಶಹನ ಗುಣಗಳಿಗೂ, ಪ್ರತಾಪಕ್ಕೂ, ವೈಭವಕ್ಕೂ ಮರುಳಾದ ಹೆಣ್ಣುಗಳ್ಳಿನ ಜೋಧಪುರದ ಅರಸರೇ ಮೊದಲಾದ ಕೆಲವು ರಜಪೂತರಾಜರು ಅಕಬರನಿಗೆ ·ತಮ್ಮ ಮನೆತನದ ಹೆಣ್ಣನ್ನು ಕೊಟ್ಟು ಲಗ್ನಮಾಡಿದರು. ಅಕಬರನ ಮುಂದಿನ ಇಬ್ಬರು ಬಾದಶಹರಾದ ಸೇಲಿಮ–ಶಹಾಜಹಾನರು, ತಾವು, ಇಲ್ಲವೆ ತಮ್ಮ ಮಕ್ಕಳು ರಜಪೂತ ಕನ್ಯೆಯರ ಪಾಣಿಗ್ರಹಣಮಾಡುವದು ಅವಶ್ಯವೆಂತಲೂ, ಬಹುಮಾನದ ದರ್ಶಕವೆಂತಲೂ ಭಾವಿಸತೊಡಗಿದರು; ಆದರೆ ಉದೇಪುರದ ಪ್ರತಾಪಶಾಲಿ ರಾಜರೇ ಮೊದಲಾದ ಕೆಲವು ರಜಪೂತ ಅರಸರು ತಮಗೆ ಎಂಥ ವಿಪತ್ತು ಒದಗಿದರೂ ಮುಸಲ್ಮಾನಬಾದಶಹರಿಗೆ ತಮ್ಮ ಮನೆತನದ ಹೆಣ್ಣನ್ನು ಕೊಟ್ಟು ತಮ್ಮ ಪವಿತ್ರಕುಲವನ್ನು ಕೆಡಿಸಿಕೊಳ್ಳಲಿಲ್ಲ. ಶಹಾಜಹಾನನ ಮಗನಾದ ಪ್ರಸಿದ್ಧ ಔರಂಗಜೇಬಬಾದಶಹನು ಉದೇಪುರದ ಅರಸು ಮನೆತನದ ಕನ್ಯೆಯನ್ನು ಮದುವೆಯಾಗಲು ವಿಶ್ವಪ್ರಯತ್ನಮಾಡಿ ಕೈಊರಿ ನಿರಾಶೆಪಟ್ಟನು. ಪ್ರತ್ಯಕ್ಷ ಉದೇಪುರದ ಅರಸುಮನೆತನದವರಂತು ಇರಲಿ, ಅವರ ಮಾಂಡಲಿಕರಲ್ಲಿ ಒಬ್ಬನಾದ ರೂಪನಗರದ ವಿಜಯಸಿಂಹನಂಥ ಸಣ್ಣ ಸಂಸ್ಥಾನಿಕನು ಕೂಡ, ತನ್ನ ಮಗಳಾದ ರೂಪಮತಿಯನ್ನು ಔರಂಗಜೇಬನಿಗೆ ಕೊಟ್ಟು ತನ್ನ ವೈಭವವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಮನಸ್ಸು ಮಾಡಲಿಲ್ಲ. ತನ್ನ ಸರ್ವಸ್ವದ ನಾಶವಾದರೂ ಚಿಂತೆಯಿಲ್ಲ, ಯವನರಿಗೆ ತನ್ನ ಮಗಳನ್ನು ಕೊಟ್ಟು ತನ್ನ ವಂಶಕ್ಕೆ ಕಲಂಕವನ್ನುಂಟುಮಾಡಲಿಕ್ಕಿಲ್ಲೆಂದು ಆತನು ಪ್ರತಿಜ್ಞೆಮಾಡಿದ್ದನು. ವಿಜಯಸಿಂಹನು ಮುದುಕನಾಗಿದ್ದರೂ ಆತನ ಕ್ಷಾತ್ರತೇಜಸ್ಸೂ, ಸ್ವಾಮಿಭಕ್ತಿಯೂ ಕುಂದಿದ್ದಿಲ್ಲ. ಆತನ ಈ ಸದ್ಗುಣಗಳ ಮೂಲಕವಾಗಿ ಉದೇಪುರದ ರಾಜಸಿಂಹನೂ, ಬೇರೆ ರಜಪೂತ ಅರಸರೂ ಆತನನ್ನು ಬಹಳವಾಗಿ ಮನ್ನಿಸುತ್ತಿದ್ದರು.

ರೂಪಮತಿಯು ವಿಜಯಸಿಂಹನ ಪಂಚಪ್ರಾಣವಾಗಿದ್ದಳು. ವಯಸ್ಸಿಗೆ ಬಂದದ್ದರಿಂದ ಆಕೆಯು ರಜಪೂತರ ಪದ್ಧತಿಯಂತೆ ಗಂಡಸರ ಕಣ್ಣಿಗೆ ಬೀಳದೆ ಗೋಷೆಯಿಂದ ಅಂತಃಪುರದಲ್ಲಿ ಇರಬೇಕಾಗಿತ್ತು. ಆದರೆ ವಿಜಯ

ಸಿಂಹನ ಹಿರಿಯ ಮಗನಾದ ಶೂರ ಶಿವಸಿಂಗನು ತನ್ನ ಶೌರ್ಯವನ್ನು ತೋರಿಸಲಿಕ್ಕೆ ರಜಪೂತಸ್ಥಾನದಲ್ಲಿ ಅನುವು ದೊರೆಯದ್ದರಿಂದ ನೊಣಜಾಡಿಸುತ್ತ ಮನೆಯಲ್ಲಿ ಕುಳಿತುಕೊಳ್ಳಲಾರದೆ, ಜೋಧಪುರದ ಅರಸನಾದ ಜಸವಂತಸಿಂಗನ ಮನೆತನದ ಕನ್ಯೆಯನ್ನು ಔರಂಗಜೇಬನ ಮನೆತನಕ್ಕೆ ಕೊಟ್ಟಿದ್ದರಿಂದ, ಜಸವಂತಸಿಂಗನು ಮುಸಲ್ಮಾನರಿಗೆ ಕುಲಗೆಟ್ಟಂತೆ ಆಗಿತ್ತು. ಇಂಥ ಕುಲಗೇಡಿಯ ಪಕ್ಷವನ್ನು ವಹಿಸಿ, ತನ್ನ ಮಗನು ಮನೆಬಿಟ್ಟು ಹೋದದ್ದರಿಂದ ಅಭಿಮಾನಿಯಾದ ವಿಜಯಸಿಂಗನು ತನ್ನ ಪಾಲಿಗೆ ಆ ಮಗನು ಸತ್ತನೆಂತಲೇ ತಿಳಿದಿದ್ದನು. ಆದ್ದರಿಂದ ವಿಜಯಸಿಂಹನು, ಗಂಡುಮಗನೆಂದರೂ ರೂಪಮತಿಯೆ, ಹೆಣ್ಣುಮಗಳೆಂದರೂ ರೂಪಮತಿಯೆ, ಎಂದು ತಿಳಿದು ಮಿತಿಮೀರಿ ಪ್ರೀತಿಸುತ್ತ ಆಕೆಯ ಮೋರೆನೋಡಿ ಕಾಲಕಳೆಯುತ್ತಿದ್ದನು. ತಾನು ಬೇಟೆಗೆ ಹೋಗಲಿ, ದರ್ಬಾರಕ್ಕೆ ಹೋಗಲಿ, ವಿಶ್ರಾಂತಿಗಾಗಿ ಉಪವನಕ್ಕೆ ಹೋಗಲಿ ವಿಜಯಸಿಂಹನು ಮಗಳನ್ನು ಸಂಗಡ ಕರಕೊಂಡು ಹೋಗುತ್ತಿದ್ದನು. ಊರಿಗೆ ಹೋಗುವಾಗ ಮಾತ್ರ ಆ ವೃದ್ಧರಜಪೂತನು ನಿರ್ವಾಹವಿಲ್ಲದೆ ಮಗಳನ್ನು ಬಿಟ್ಟು ಹೋಗುತ್ತಿದ್ದನು. ಇನ್ನು ಮೇಲೆ ಮಗನ ಮುಖಾವಲೋಕನಕೂಡ ಮಾಡುವಹಾಗಿಲ್ಲಾದ್ದರಿಂದ ತನ್ನ ಹಿಂದೆ ತನ್ನ ಮಗಳೇ ಪಟ್ಟಕ್ಕೆ ಬಾಧ್ಯಸ್ಥಳೆಂದು ಆತನು ಡಂಗುರ ಸಾರಿಸಿ, ಆರಗಳಿಗೆಯೂ ಮಗಳನ್ನು ಅಗಲದೆ ರಕ್ಷಿಸುತ್ತಿದ್ದನು. ತಂದೆಯ ಶಿಕ್ಷಣದಿಂದ ರೂಪಮತಿಯು ಕುದುರೆಹತ್ತಲಿಕ್ಕೆ ಕಲಿತಿದ್ದಳು; ಯುದ್ಧವಿದ್ಯೆಯನ್ನು ಅರಿತಿದ್ದಳು; ತಂದೆಯ ಸಂಗಡ ಬೇಟೆಗೆ ಹೋದಾಗ ಎಷ್ಟೋ ಕ್ರೂರಮೃಗಗಳನ್ನು ಕೊಂದಿದ್ದಳು. ಒಬ್ಬ ತರುಣ ರಜಪೂತವೀರನನ್ನು ಹುಡುಕಿ, ಆತನಿಗೆ ಮಗಳನ್ನು ಕೊಟ್ಟು ಮನೆಯ ಅಳಿಯನನ್ನಾಗಿ ಮಾಡಿ, ಅವನಿಗೆ ತನ್ನ ರಾಜ್ಯವನ್ನು ಒಪ್ಪಿಸುವ ವಿಚಾರವು ಮೇಲೆ ಮೇಲೆ ಆ ವೃದ್ಧರಜಪೂತವೀರನ ಮನಸ್ಸಿನಲ್ಲಿ ಬರುತ್ತಿತ್ತು. ಆದರೆ ತನ್ನ ಮೇಲಿದ್ದ ಮಗಳ ಪ್ರೇಮದಲ್ಲಿ ಅರ್ಧಕ್ಕರ್ಧ ಪ್ರೇಮವು ಕಡಿಮೆಯಾದೀತೆಂದು ಅಂಜಿ, ಆ ತಾಯಿಸತ್ತ ಮಗಳ ಮದುವೆಯ ವಿಚಾರವನ್ನುಆತನು ಆದಷ್ಟು ಮುಂದಕ್ಕೆ ಹಾಕುತ್ತಿದ್ದನು.

ರೂಪಮತಿಯಾದರೂ ತಂದೆಯ ಈ ಅಕೃತ್ರಿಮ ಪ್ರೇಮಕ್ಕೆ ಪೂರ್ಣ

ಪಾತ್ರಳಿದ್ದಳು. ಆಕೆಯು ಸೌಂದರ್ಯದ ಖನಿಯೂ, ಸದ್ಗುಣಗಳ ನಿಧಿಯೂ ಸತ್ವದ ರಾಶಿಯೂ ಆಗಿದ್ದಳು. ವಿಜಯಸಿಂಹನ ಅಳಿಯನಾಗುವದು ಪರಮ ಭಾಗ್ಯವೆಂದು ರಜಪೂತಸ್ಥಾನದೊಳಗಿನ ತರುಣ ವೀರರೆಲ್ಲರು ತಿಳಿಯುತ್ತಿದ್ದರೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಇಂಥ ಲೋಕಸುಂದರಿಯ ಸುದ್ದಿಯು ಔರಂಗಜೇಬನಿಗೆ ತಿಳಿದರೆ, ಅನರ್ಥವಾಗದೆಯಿರದೆಂದು ವಿಜಯ ಸಿಂಗನ ಮನಸ್ಸಿನಲ್ಲಿ ಕಟಿಯುತ್ತಿತ್ತು. ಮೊಗಲಬಾದಶಹರ ಕಾಮವಾಸನೆಯಿಂದ ಈ ವರೆಗೆ ಹಲವು ರಜಪೂತ ರಾಜಕನ್ಯೆಯರು ಸಂಕಟಕ್ಕೆ ಗುರಿಯಾಗಿದ್ದರಲ್ಲದೆ, ಹಲವು ರಾಜವಂಶಗಳು ಮಣ್ಣುಗೂಡಿದ್ದವು. ರಜಪೂತ ಸಂಸ್ಥಾನಿಕರೊಳಗಿನ ಇಂಥವನೊಬ್ಬನ ಮನೆಯಲ್ಲಿ ಉಪವರಳಾದ ಸುಂದರಿಯೊಬ್ಬಳಿರುವಳೆಂಬ ಸುದ್ದಿಯು ಗೊತ್ತಾದಕೂಡಲೆ ಮೊಗಲಬಾದಶಹರು, ತಮ್ಮ ಸಲುವಾಗಿಯಾಗಲಿ, ತಮ್ಮ ಮಕ್ಕಳ ಸಲುವಾಗಿಯಾಗಲಿ ಆಕೆಯನ್ನು ಬೇಡಿದರೆಂತಲೇ ತಿಳಿಯಬೇಕು. ಬರಿಯ ಬೇಡುವದಷ್ಟೇ ಅಲ್ಲ, ನಮ್ಮ ಬೇಡಿಕೆಯನ್ನು ಪೂರ್ಣಮಾಡದಿದ್ದರೆ, ಆದ ಅಪಮಾನವನ್ನು ರಕ್ತದ ಕಾಲಿವೆ ಹರಿಸಿ ಆದರಿಂದ ದೂರ ಮಾಡಿಕೊಳ್ಳುವೆವೆಂದು ಅವರು ಅಂಜಿಸುತ್ತಿದ್ದರು. ಈವೊತ್ತಿನವರೆಗೆ ಮೊಗಲರ ಈ ನೀಚತನದಿಂದಲೂ, ಕಠೋರತನದಿಂದಲೂ ಎಷ್ಟೋ ರಜಪೂತ ಕನ್ಯೆಯರ ಪ್ರಾಣಗಳು ಹೋಗಿದ್ದವು. ಎಷ್ಟೋ ಸುಂದರಿಯರನ್ನು ಅವರ ತಾಯಿ ತಂದೆಗಳು ಕೈಮುಟ್ಟಿ ಸ್ವರ್ಗಕ್ಕೆ ಕಳಿಸಿದ್ದರು, ಎಷ್ಟೋ ಸುಂದರಿಯರ ಕಾಲಲ್ಲಿ ಘೋರ ಸಂಗ್ರಾಮವುಂಟಾಗಿ ರಾಜಸ್ಥಾನದೊಳಗಿನ ತರುಣ ವೀರರು ಆದಕ್ಕೆ ಆಹುತಿಯಾಗಿದ್ದರು. ಕೇವಲ ವಾತ್ಸಲ್ಯದಿಂದ ಇಷ್ಟು ದಿವಸಗಳವರೆಗೆ ಮದುವೆಮಾಡದೆ ಬಿಟ್ಟಿದ್ದ ತನ್ನ ಮಗಳ ಮೇಲೆ, ದುಷ್ಟಔರಂಗಜೇಬನ ವಕ್ರದೃಷ್ಟಿಯು ಬಿದ್ದು, ಎಲ್ಲಿ ಅನರ್ಥವುಂಟಾಗುವದೋ ಎಂಬ ವಿಚಾರವು, ವಿಜಯಸಿಂಹನ ಮನಸ್ಸಿನಲ್ಲಿ ಆಗಾಗ್ಗೆ ಬರುತ್ತಿದ್ದಿಲ್ಲೆಂತಲ್ಲ; ಆದರೆ ಆ ವೃದ್ಧ ರಜಪೂತವೀರನಲ್ಲಿ ಕ್ಷಾತ್ರ ತೇಜಸ್ಸು ಮೂರ್ತಿಮಂತವಾಗಿ ವಾಸಿಸುತ್ತಿದ್ದದ್ದರಿಂದ, ಕೇವಲ ಔರಂಗ ಜೇಬನ ಭಯಕ್ಕಾಗಿ ಆತನು ತನ್ನ ಮಗಳ ಲಗ್ನವನ್ನು ಅವಸರದಿಂದ ಮಾಡಿಕೊಡುವ ಸಂಭವವಿದ್ದಿಲ್ಲ. ತನ್ನ ಪವಿತ್ರವಾದ ರಜಪೂತಕುಲಕ್ಕೂ, ನಿಷ್ಕಲಂಕವಾದ ವಂಶಕ್ಕೂ, ನಿರ್ದೋಷವಾದ ಶೀಲಕ್ಕೂ ಕುಂದನ್ನುಂಟು

ಮಾಡುವ ಪ್ರಸಂಗ ಒದಗಿದಲ್ಲಿ, ಶೂರ ರಜಪೂತರ ಸಾಂಪ್ರದಾಯದಂತೆ, ತನ್ನ ಪ್ರೀತಿಯ ರೂಪಮತಿಯನ್ನು ಕೈಯಮುಟ್ಟಿ ಸಂಹರಿಸಿ, ತನ್ನ ಹಾಗು ತನ್ನ ಶೂರಪರಿವಾರದ ದೇಹಗಳು ರಣಭೂಮಿಯಲ್ಲಿ ಪತನಹೊಂದುವವರೆಗೆ ಮೊಗಲರೊಡನೆ ಕಾದತಕ್ಕದ್ದೆಂದು ಆತನು ನಿಶ್ಚಯಿಸಿದ್ದನು. ಮೊಗಲ ಬಾದಶಹರ ಮೇಲೆ, ವಿಶೇಷವಾಗಿ ಔರಂಗಜೇಬಬಾದಶಹನಮೇಲೆ ವಿಜಯ ಸಿಂಹನ ಸಿಟ್ಟು ಬಹಳ. ವಿಜಯಸಿಂಹನು, ಶೂರನೂ–ಸತ್ಯಪ್ರತಿಜ್ಞನೂ-ಶೀಲ ವಂತನೂ–ವಯೋವೃದ್ಧನೂ ಇದ್ದದ್ದರಿಂದ, ಯಾವತ್ತೂ ರಜಪೂತರು ಆತನನ್ನು ಬಹಳವಾಗಿ ಮನ್ನಿಸುತ್ತಿದ್ದರಲ್ಲದೆ, ಆತನ ಸಾರ್ವಭೌಮನಾದ ಉದೇಪುರದ ರಾಜಸಿಂಹನೂ ಆತನನ್ನು ಮಿತಿಮೀರಿ ಆದರಿಸುತ್ತಿದ್ದನು. ಉದೇಪುರದ ಮನೆತನವು ಸಾಮಾನ್ಯವಾದದ್ದಲ್ಲ; ಪ್ರಸಿದ್ಧ ಅಕಬರ ಬಾದ ಶಹನಿಗೆ ಕೂಡ ಹಣಿಯದೆ, ತನ್ನ ಸೂರ್ಯವಂಶದ ಗೌರವವನ್ನು ಕಾಯ್ದು ಕೊಂಡದ್ದು, ಇಡಿಯ ರಜಪೂತಸ್ಥಾನಕ್ಕೇ ಆ ಮನೆತನವು ಪೂಜ್ಯ ವಾದದ್ದು. ಇಂಥ ಮನೆತನದ ರಾಜಸಿಂಹನು ವಿಜಯಸಿಂಹನನ್ನು ಮೇಲಿಂದ ಮೇಲೆ ತನ್ನ ದರ್ಬಾರಕ್ಕೆ ಕರೆಸಿಕೊಂಡು ರಾಜ್ಯಕಾರಭಾರದಲ್ಲಿ ಆತನ ವಿಚಾರಗಳನ್ನು ಕೇಳಿಕೊಳ್ಳುತ್ತಿದ್ದನು. ಹೆಚ್ಚಿಗೆ ಹೇಳುವದೇನು ? ರಾಜ ಸಿಂಹನು, ವಿಜಯಸಿಂಹನನ್ನು ತನ್ನ ಅಧಿಕಾರಕ್ಕೊಳಪಟ್ಟ ಸಂಸ್ಥಾನಿಕನೆಂದು ಮನಸ್ಸಿನಲ್ಲಿ ತಾರದೆ, ಆತನೊಡನೆ ಮಗನಂತೆ ನಡಕೊಳ್ಳುತ್ತಿದ್ದನು ! ಅದ ರಿಂದ ಇಡಿಯ ರಾಜಸ್ಥಾನದಲ್ಲಿ ವಿಜಯಸಿಂಹನಿಗೆ ವಿಶೇಷಮಾನವಿತ್ತು.

ವಿಜಯಸಿಂಹನು ಇಷ್ಟು ಸತ್ವಸ್ಥನಿದ್ದರೂ, ಒಮ್ಮೊಮ್ಮೆ ಆತನನ್ನು ಮಗಳ ಮೋಹವು ಬಾಧಿಸದೆ ಇರುತ್ತಿದ್ದಿಲ್ಲ. ಮಗಳ ಗತಿಯು ಏನಾಗು ವದೋ, ಎಂಬ ಚಿಂತೆಯಿಂದ ಆತನು ಒಮ್ಮೊಮ್ಮೆ ಉದಾಸೀನನಾಗು ತ್ತಿದ್ದನು; ಅಂದಬಳಿಕ ಬಲವತ್ತರವಾದ ಸಾಂಸಾರಿಕಮೋಹದ ಮಹಿಮೆ ಯನ್ನು ಹೆಚ್ಚಿಗೆ ಏನು ವರ್ಣಿಸಬೇಕು ? ರಾಜಕರಣದ ಸಲುವಾಗಿ ಉದೇ ಪುರಕ್ಕೆ ಹೋಗಿದ್ದ ವಿಜಯಸಿಂಹನು, ತಿರುಗಿ ಬರುವಾಗ ದುರ್ಗಾಚರಣ ನೆಂಬ ಪ್ರಸಿದ್ಧ ಜ್ಯೋತಿಷಿಯನ್ನು ಬುದ್ಧಿಪೂರ್ವಕವಾಗಿ ಸಂಗಡ ಕರಕೊಂಡು ಬಂದಿದ್ದನು. ದುರ್ಗಾಚರಣನು ಜ್ಯೋತಿಷ್ಯದಂತೆ ಸಾಮುದ್ರಿಕಶಾಸ್ತ್ರ ದಲ್ಲಿಯೂ ಪ್ರವೀಣನಿದ್ದನು. ತನ್ನ ಮಗಳ ಭವಿಷ್ಯವನ್ನು ತಿಳಕೊಳ್ಳಲಿಕ್ಕೆ

ಆತುರಪಟ್ಟಿದ್ದ ವಿಜಯಸಿಂಹನು ವಾತ್ಸಲ್ಯದಿಂದ ರೂಪಮತಿಯನ್ನು ಹತ್ತರ ಕುಳ್ಳಿರಿಸಿಕೊಂಡು, ಆಕೆಯ ಬಲಹೆಗಲಮೇಲೆ ಕೈಯನ್ನಿಟ್ಟು ಆಕೆಯನ್ನು ತಬ್ಬಿಕೊಳ್ಳಲು, ರೂಪಮತಿಯು ತಂದೆಯ ಬಲದೊಡೆಯ ಮೇಲೆ ಕೈಯೂರಿ ತನ್ನ ಮೈಭಾರವನ್ನು ಹಾಕಿ ಕುಳಿತುಕೊಂಡಳು. ಆಗ ವಿಜಸಿಂಹನು ದುರ್ಗಾಚರಣನನ್ನು ಕರೆದು, ಮಗಳ ಹಸ್ತಪರೀಕ್ಷೆಮಾಡಿ ಭವಿಷ್ಯವನ್ನು ಹೇಳಬೇಕೆಂದು ಸೂಚಿಸಿದನು. ದುರ್ಗಾಚರಣನು ರೂಪಮತಿಯ ಹಸ್ತವನ್ನು ಪರೀಕ್ಷಿಸುತ್ತ, ಬೆರಳುಹಾಕುತ್ತ, ಕೆಳಗೆಮೇಲೆ ನೋಡುತ್ತ, ರೂಪಮತಿಯ ಮುಖವನ್ನು, ಪರೀಕ್ಷಿಸುತ್ತ, ನಡುನಡುವೆ ಕಾಗದದ ಮೇಲೆ ಏನೋ ಬರೆದಿಡಹತ್ತಿದನು. ಆಗ ವಿಜಯಸಿಂಹನ ಜೀವವು ಬಹಳ ಅಸ್ವಸ್ಥವಾಗಿತ್ತು. ಮಗಳ ಭವಿಷ್ಯವು ಸಮಾಧಾನಕರವಾಗಿರುವದೋ ಇಲ್ಲವೋ ಎಂದು ಆತನು ಚಿಂತಿಸತೊಡಗಿದ್ದನು. ಸರಳಹೃದಯದ ರೂಪಮತಿಯು ಕೌತುಕದಿಂದ ಏನೇನೋ ಮನಸ್ಸಿನಲ್ಲಿ ವಿಚಾರಿಸುತ್ತ, ಯಾವಾಗಾದರೊಮ್ಮೆ ದುರ್ಗಾಚರಣನ ಮುಖವನ್ನು ನೋಡುತ್ತ ಅಧೋಮುಖಿಯಾಗಿ ಸುಮ್ಮನೆ ಕುಳಿತಿದ್ದಳು. ದುರ್ಗಾಚರಣನ ಭವಿಷ್ಯಲೇಖನವು ಮುಗಿಯುವವರೆಗೆ ಒಬ್ಬರೂ ಪಿಟ್ಟೆಂದು ಮಾತಾಡಲಿಲ್ಲ. ತಂದೆಮಕ್ಕಳ ಚಿತ್ತವು ಭವಿಷ್ಯಶ್ರವಣದಲ್ಲಿ ಏಕಾಗ್ರವಾಗಿತ್ತು. ದುರ್ಗಾಚರಣನು ಭವಿಷ್ಯವನ್ನು ಕಂಡು ಹಿಡಿಯುವಲ್ಲಿ ಮಗ್ನನಾಗಿ ಹೋಗಿದ್ದನು. ಈ ಸ್ಥಿತಿಯಲ್ಲಿ ಸರಾಸರಿ ಅರ್ಧತಾಸು ಕಳೆದುಹೋಗುತ್ತಿರಲು, ದುರ್ಗಾಚರಣನು ರೂಪಮತಿಯ ಹಸ್ತವನ್ನು ಬಿಟ್ಟು ಉಸುರ್ಗರೆದು, ಕಾಗದವನ್ನು ವಿಜಯಸಿಂಹನಮುಂದೆ ಇಟ್ಟನು. ಕೂಡಲೆ ವಿಜಯಸಿಂಹನು ಕಾಗದವನ್ನು ಕೈಯಲ್ಲಿ ತಕ್ಕೊಂಡು ಮೊದಲಿನ ಎರಡು ಸಾಲುಗಳನ್ನು ಓದಲು, ಆತನ ಕೈಯೊಳಗಿನ ಕಾಗದವು ತಾನೇ ಕಳಚಿ ಬಿದ್ದಿತು!

ಅಂಥ ಭಯಂಕರ ಮಾತನ್ನೇನು ಬರೆದಿರಬಹುದೆಂದು ವಾಚಕರು ಆತುರಪಡುತ್ತಿರಬಹುದು. ದುರ್ಗಾಚರಣನು ತನ್ನ ಭವಿಷ್ಯಲೇಖನದ ಮೊದಲಿನ ಎರಡು ಸಾಲುಗಳಲ್ಲಿ ವಿಜಯಸಿಂಹನನ್ನು ಕುರಿತು—"ಮಹಾರಾಜರೇ, ಈ ಕನ್ಯೆಯಮೂಲಕವಾಗಿ ನಿಮ್ಮ ಮೇಲೆಯೂ, ಯಾವತ್ತು ರಾಜಸ್ಥಾನದಮೇಲೆಯೂ ಬೇಗನೆ ಭಯಂಕರ ಸಂಕಟವು ಒದಗುವದು"

ಎಂದು ಬರೆದಿದ್ದನು. ಇದನ್ನು ಓದಿದ ಕೂಡಲೆ ವಿಜಯಸಿಂಹನ ಮನಸ್ಸಿನಲ್ಲಿ ಔರಂಗಜೇಬನ ದುಷ್ಟತನವು ತಟ್ಟನೆ ಬಂದು ನಿಂತಿತು. ತನ್ನ ಮಗಳ ನೆವದಿಂದ ರಜಪೂತಸ್ಥಾನವನ್ನೆಲ್ಲ ಸಂಕಟದಲ್ಲಿ ದೂಡುವಂಥ ಬಲಾಢ್ಯನು ಔರಂಗಜೇಬನಹೊರತು ಮತ್ತೊಬ್ಬನು ಆಗಿನಕಾಲದಲ್ಲಿ ಇದ್ದಿಲ್ಲ. ಈ ಸಂಗತಿಯು ಮನಸ್ಸಿನಲ್ಲಿ ಬಂದಕೂಡಲೆ ವಿಜಯಸಿಂಹನು ತನ್ನೊಳಗೆ— ಹಿಂದಕ್ಕೆ ರಾಜಪುತ್ರಿಯರ ಕಾಲಲ್ಲಿ ದುಷ್ಟ ಮುಸಲ್ಮಾನರ ಯೋಗದಿಂದೊದಗಿದ ಭಯಂಕರ ಪ್ರಸಂಗಗಳೇ ಈಗ ತನ್ನ ಮೇಲೆಯೂ, ರಾಜಸ್ಥಾನದ ಮೇಲೆಯೂ ಬರಬಹುದೋ ? ಬರಬಹುದು, ಇದರಲ್ಲಿ ಅಸಂಭವವೇನೂ ತೋರುವದಿಲ್ಲ. ಔರಂಗಜೇಬಬಾದಶಹನ, ಇಲ್ಲವೆ ಅವನ ಮಕ್ಕಳಲ್ಲಿ ಯಾವನೊಬ್ಬನ ಕಿವಿಗೆ ನನ್ನ ಮಗಳ ಸೌಂದರ್ಯದ ಸುದ್ದಿಯು ಮುಟ್ಟಿದ್ದರೆ ಸಾಕು, ಆ ಭಯಂಕರ ಪ್ರಸಂಗವು ಒದಗಿತೆಂತಲೇ ತಿಳಿಯಬೇಕು. ಆ ದುಷ್ಟನ ಮನಸ್ಸಿನಲ್ಲಿ ಒಮ್ಮೆ ಈ ವಿಚಾರವು ಸೇರಿದರೆ, ಅವನು ಏನು ಮಾಡಿಯಾನು ಏನು ಮಾಡಲಿಕ್ಕಿಲ್ಲ ಎಂಬದರ ನಿಯಮವಿಲ್ಲ. ಆತನು ನನ್ನ ರಾಜ್ಯವನ್ನು ವಿಧ್ವಂಸಮಾಡದೆ ಬಿಡಲಿಕ್ಕಿಲ್ಲ. ನಾನು ನನ್ನ ಮಗಳನ್ನು ಕೊಡುವದಿಲ್ಲೆಂದು ಹೇಳಿದರೆ, ಬೇಕಾದ ಮಾರ್ಗದಿಂದ ಅವನು ತನ್ನ ದುಷ್ಟವಾಸನೆಯನ್ನು ಪೂರ್ಣಮಾಡಿಕೊಳ್ಳಲಿಕ್ಕೆ ಮುಂದುವರಿಯುವನು. ಆಗ ರಾಜಸಿಂಹಮಹಾರಾಜರೂ ಬೇರೆ ರಜಪೂತ ಸಂಸ್ಥಾನಿಕರೂ ನನಗೆ ಸಹಾಯಕರಾಗಿ ಬರಲು, ರಣಯಜ್ಞವು ಆರಂಭವಾಗಿ ಹಲವು ರಜಪೂತವೀರರ ಆಹುತಿಯನ್ನು ಕೊಡುವ ಪ್ರಸಂಗಬರುವದು. ಯಾರಿಗೆ ಗೊತ್ತು, ಇಷ್ಟೆಲ್ಲ ಅನರ್ಥವನ್ನುಂಟು ಮಾಡುವದಕ್ಕಿಂತ, ನನ್ನ ಮಗಳನ್ನೇ ನನ್ನ ಕೈಯಿಂದ ಸ್ವರ್ಗಕ್ಕೆ ಕಳಿಸುವದು ಯೋಗ್ಯವೆಂದು ತಿಳಿಯುವ ಪ್ರಸಂಗಬರುತ್ತದೋ ಏನೋ !

ಈ ಪ್ರಕಾರದ ವಿಚಾರಗಳ ಗಲಬಿಲಿಯು ಮನಸ್ಸಿನಲ್ಲಿ ಉಂಟಾಗಿರಲು ಸ್ವಲ್ಪ ಹೊತ್ತಿನಮೇಲೆ ದುರ್ಗಾಚರಣಜ್ಯೋತಿಷಿಯು ಬರೆದಿಟ್ಟಿದ್ದ ಭವಿಷ್ಯವನ್ನು ಪೂರ್ಣವಾಗಿ ಓದುವ ಇಚ್ಛೆಯು ವಿಜಯಸಿಂಹನಿಗೆ ಉತ್ಪನ್ನವಾಯಿತು. ಕೂಡಲೆ ಆತನು ಕಾಗದವನ್ನು ಮತ್ತೆ ತಕ್ಕೊಂಡು ಭವಿಷ್ಯವನ್ನು ಓದಹತ್ತಲು, ಕಡೆಕಡೆಗೆ ಆತನಿಗೆ ಆನಂದವಾಯಿತು. ಆತನು

ದುರ್ಗಾಚರಣನನ್ನು ಕುರಿತು—ಇಷ್ಟೆಲ್ಲ ಆಗುವದಿದ್ದರೆ, ಅದಕ್ಕಾಗಿ ಚಿಂತಿಸುವ ಕಾರಣವಿಲ್ಲ. ನಿಮ್ಮ ಎಲ್ಲ ಭವಿಷ್ಯವು ನಿಜವಾದರೆ ನನಗೊಂದು ಬಗೆಯ ಸಮಾಧಾನವೇ ಆಗುವದು. ದುಷ್ಟ ಔರಂಗಜೇಬನ ಕಣ್ಣಲ್ಲಿ ತೀಕ್ಷ್ಣವಾದ ಅಂಜನವನ್ನು ಹಾಕಿದಹೊರತು ಆತನಿಗೆ ಎಚ್ಚರವಾಗುವ ಸಂಭವವಿಲ್ಲ. ಅಂಥ ಅಂಜನವು ನನ್ನಮಗಳಯೋಗದಿಂದಲೇ ಅವನ ಕಣ್ಣಲ್ಲಿ ಬೀಳುತ್ತಿದ್ದರೆ, ಅದಕ್ಕಾಗಿ ನಾನು ಅಸಮಾಧಾನಪಡುವದೇಕೆ ? ಜ್ಯೋತಿಷಿಗಳೇ, ನಿಮಗೆ ಔರಂಗಜೇಬನ ನೀಚತನವು ಗೊತ್ತಿಲ್ಲೆಂತಲ್ಲ. ಆತನು ಹಿಂದೂಧರ್ಮದ, ಹಾಗು ಹಿಂದೂ ಜನರ, ಅದರಂತೆ ಹಿಂದೂಸ್ತ್ರೀಯರ ಸುತ್ತು ಒಂದೇ ಸವನೆ ಕೈತೊಳಕೊಂಡು ಬೆನ್ನುಹತ್ತಿರುವದನ್ನು ನೋಡಿದರೆ, ನಾವು ಬಿಟ್ಟೆದ್ದುಬಿಟ್ಟು ಆತನ ಪಾರುಪತ್ಯ ಮಾಡುವದು ಅವಶ್ಯವಾಗಿರುತ್ತದೆ. ಈ ದುಷ್ಟನ ಶಾಸನಕ್ಕಾಗಿ ರಜಪೂತವೀರರು ತಮ್ಮ ಅಂತಃಕಲಹಗಳನ್ನು ಮರೆತು ಒಟ್ಟುಗೂಡಬಹುದೋ ? ಆ ದುಷ್ಟ ಆಲಮಗೀರನಿಗೆ ಒಮ್ಮೆ ರಜಪೂತರ ಕೈಯನ್ನು ಚನ್ನಾಗಿ ತೋರಿಸದಿದ್ದರೆ ಪರಿಣಾಮವಾಗದು. ಆತನಿಗೆ ರಾಜ್ಯದ ಮದವೂ, ಧರ್ಮದ ಹುಚ್ಚೂ, ಸಾಮರ್ಥ್ಯದ ಅಹಂಭಾವವೂ ತಲೆಗೇರಿರುತ್ತವೆ. ಅವನಂಥ ಘಾತಕಿಯು ಮತ್ತೊಬ್ಬನಿಲ್ಲ. ನಿಮ್ಮ ಭವಿಷ್ಯದಂತೆ ಎಲ್ಲ ಸಂಗತಿಯು ವರ್ತಿಸಿದರೆ, ನೀವು ಬೇಡಿದ ಇನಾಮು ಕೊಡುವೆನು; ಆದರೆ ನಿಮ್ಮ ಭವಿಷ್ಯವು ನಿಜವಾದದ್ದೆಂಬದರ ಅನುಭವವನ್ನು ನೀವು ಈಗಲೇ ನನಗೆ ಮಾಡಿಕೊಡಬೇಕು. ಇಲ್ಲದಿದ್ದರೆ ನನಗೆ ಸಮಾಧಾನವಾಗದು. ನೋಡಿರಿ ನನ್ನ ಕೈಯನ್ನು. ಇನ್ನು ಒಂದು ಗಳಿಗೆಯೊಳಗೆ ಏನಾಗುವದೆಂಬುದನ್ನು ನನಗೆ ಹೇಳಿರಿ. ನೋಡೋಣ ಅದರಲ್ಲಿ ಎಷ್ಟು ಮಾತು ನಿಜವಾಗುತ್ತವೆ—ಎಷ್ಟುಮಾತು ಸುಳ್ಳಾಗುತ್ತವೆಂಬುದನ್ನು.

ವಿಜಯಸಿಂಹನ ಈ ಮಾತುಗಳನ್ನು ಕೇಳಿ ದುರ್ಗಾಚರಣನು ತನ್ನ ಪರೀಕ್ಷೆಯು ಹೊತ್ತು ಬಂತೆಂದು ಮನಸ್ಸಿನಲ್ಲಿ ಅಂದುಕೊಂಡನು; ಆದರೆ ಆತನು ಸ್ವಲ್ಪವಾದರೂ ಹೆದರಲಿಲ್ಲ. ಕೂಡಲೆ ವಿಜಯಸಿಂಹನ ಕೈಯನ್ನು ನೋಡಿ ಆತನ ಮೋರೆಯನ್ನು ಪರೀಕ್ಷಿಸಿ ಆತನನ್ನು ಕುರಿತು—ರಾಣಾಜೀ, ಔರಂಗಜೇಬನು ಘಾತಕೀಯೆಂದು ಈಗ ನೀವು ನುಡಿದಿರಲ್ಲವೇ? ಇನ್ನೊಂದು ಗಳಿಗೆಯೊಳಗಾಗಿ ಯಾರಾದರೂ ನಿಮ್ಮ ಬಳಿಗೆ ಬಂದುಆತನ ಘಾತಕ

ಕೃತ್ಯದ ಒಂದು ಸುದ್ದಿಯನ್ನು ಹೇಳುವರು. ಆ ಸುದ್ದಿಯನ್ನು ಕೇಳಿ ನಿಮಗೆ ಅಷ್ಟು ವಿಷಾದವಾಗದಿದ್ದರೂ ಔರಂಗಜೇಬನ ಮೇಲಿನ ನಿಮ್ಮ ದ್ವೇಷವು ನೂರುಪಟ್ಟು ಹೆಚ್ಚುವದರಲ್ಲಿ ಸಂಶಯವಿಲ್ಲ. ನನ್ನ ಈ ಭವಿಷ್ಯದ ಅನುಭವವನ್ನು ನೋಡಿರಿ; ಇದು ಸುಳ್ಳಾದರೆ ತಿರುಗಿ ನಾನು ಕೈಯಲ್ಲಿ ಪಂಚಾಂಗವನ್ನು ಹಿಡಿಯಲಿಕ್ಕಿಲ್ಲ, ಎಂದು ಅನ್ನಲು, "ಒಳ್ಳೇದು ನೋಡೋಣ" ಎಂದು ವಿಜಯಸಿಂಹನು ನುಡಿದನು. ಇಬ್ಬರೂ ಒಬ್ಬರನ್ನೊಬ್ಬರು ನೋಡುತ್ತ ಕುಳಿತುಕೊಂಡರು. ಸುಮಾರು ಕಾಲುಗಳಿಗೆಯು ಕ್ರಮಿಸಿಹೋಯಿತು. ವಿಜಯಸಿಂಹನು ತೀರ ಅವಿಶ್ವಾಸದಿಂದ ದುರ್ಗಾಚರಣನನ್ನು ನೋಡುತ್ತಿದ್ದನು. ದುರ್ಗಾಚರಣನು ಚಿಂತೆಯಿಂದ ಹುಬ್ಬುಗಂಟಿಕ್ಕಿ "ಏನು, ನನ್ನ ಭವಿಷ್ಯವು ಸುಳ್ಳಾಗುವದೋ" ಎಂದು ಮನಸ್ಸಿನಲ್ಲಿ ಅನ್ನುವವನಂತೆ ಕುಳಿತಿದ್ದನು. ಅಷ್ಟರಲ್ಲಿ ದ್ವಾರಪಾಲಕನು ಬಂದು, ದಿಲ್ಲಿಯಿಂದ ಒಬ್ಬ ಚಾರನು ಬಂದಿರುತ್ತಾನೆಂದು ಹೇಳಿದನು. ಅದನ್ನು ಕೇಳಿ ವಿಜಯಸಿಂಹನು ಆಶ್ಚರ್ಯಮಗ್ನನಾಗಿ ಅತ್ತಿತ್ತ ನೋಡಹತ್ತಿದನು. ಇತ್ತ ದುರ್ಗಾಚರಣನು ಆನಂದಭರಿತನಾದನು. ಚಾರನನ್ನು ಒಳಗೆ ಬಿಡುವದಕ್ಕೆ ಅಪ್ಪಣೆಯಾಗಲು, ಆತನು ಒಳಗೆ ಬಂದು ನಮಿಸಿ ವಿಜಯಸಿಂಹನ ಮುಂದೆ ಒಂದು ಪತ್ರವನ್ನು ಇಟ್ಟು ಹಿಂದಕ್ಕೆ ಸರಿದು ನಿಂತುಕೊಂಡನು. ವಿಜಯಸಿಂಹನು ಅದನ್ನು ಒಡೆದು ನೋಡಿದನು. ಅದನ್ನು ದಿಲ್ಲಿಯಲ್ಲಿದ್ದ ಆತನ ವಕೀಲನು ಕಳಿಸಿದ್ದನು. ಅದರಲ್ಲಿ ಮೊದಲಿಗೇ ಬರೆದಿದ್ದ ಸಂಗತಿಯನ್ನು ವಿಜಯಸಿಂಹನು ಎಲ್ಲರಿಗೂ ಕೇಳಿಸುವಂತೆ ಓದಿದನು. ಅದರ ತಾತ್ಪರ್ಯವೇನಂದರೆ—ಮಹಾರಾಜರೇ, ಬಾದಶಹನ ದುಷ್ಟತನದ ಮಿತಿಯು ಮೀರಿತು. ಆತನು ರಾಣಾಜಸವಂತಸಿಂಗನ ಕುಮಾರನಾದ ಪೃಥ್ವೀಸಿಂಗನನ್ನು ಸ್ನೇಹದಿಂದ ಕರೆಕಳುಹಿ, ಆತನಿಗೆ ಕೂಡಿದ ದರ್ಬಾರದಲ್ಲಿ ವಿಷಲೇಪಿತವಾದ ಉಡುಪು-ತೊಡಪುಗಳನ್ನುಕೊಟ್ಟು ಆತನ ಪ್ರಾಣಹರಣ ಮಾಡಿದನು. ನಿಮ್ಮ ಮೇಲೆಯೂ ಏನೋ ಸಂಕಟ ಒದಗುವಹಾಗೆ ತೋರುತ್ತದೆ, ಜಾಗರೂಕರಾಗಿರತಕ್ಕದ್ದು. ಸವಿಸ್ತರ ವೃತ್ತಾಂತವನ್ನು ಇನ್ನೊಬ್ಬ ಚಾರನಸಂಗಡ ನಾಳೆ ಕಳಿಸುವೆನು.

೨ನೆಯ ಪ್ರಕರಣ

# ವಕೀಲನ ಪತ್ರ.

ಸುದ್ದಿಯು ಕೆಡಕಾದರೂ ತನ್ನ ಭವಿಷ್ಯದ ಬಗ್ಗೆ ಅವಿಶ್ವಾಸವನ್ನು ವ್ಯಕ್ತಪಡಿಸಿದ ವಿಜಯಸಿಂಹನ ಮುಂದೆ ಭವಿಷ್ಯವು ನಿಜವಾಗಿ, ತನ್ನ, ಹಾಗು ತನ್ನ ಶಾಸ್ತ್ರದ ಗೌರವವು ಹೆಚ್ಚಿದ್ದಕ್ಕಾಗಿ ದುರ್ಗಾಚರಣನಿಗೆ ಸ್ವಲ್ಪ ಸಮಾಧಾನವಾದಂತೆ ತೋರಿತು. ಇತ್ತ ವಿಜಯಸಿಂಹನು, ಭವಿಷ್ಯವು ಅಕ್ಷರಶಃ ನಿಜವಾದದ್ದಕ್ಕಾಗಿ ಸದಭಿಪ್ರಾಯಪಟ್ಟನು. ಆತನು ಪತ್ರವನ್ನು ಪೂರ್ಣ ಓದಿ ದುರ್ಗಾಚರಣನನ್ನು ಕುರಿತು—ಜ್ಯೋತಿಷಿಗಳೇ, ನಿಮ್ಮ ವಿದ್ಯೆಯು ಸರ್ವಥಾ ನಿಜವಿರುತ್ತದೆ. ನಿಮ್ಮನ್ನು ಪರೀಕ್ಷಿಸುವದಕ್ಕಾಗಿ ನಾನು ಸ್ವಲ್ಪ ನಿರಾಕರಿಸಿ ಮಾತಾಡಿದ್ದು ನಿಜವು, ಅದಕ್ಕಾಗಿ ಕ್ಷಮಿಸಬೇಕು, ಎಂದು ನುಡಿದು, ಪತ್ರವನ್ನು ದುರ್ಗಾಚರಣನ ಮೈಮೇಲೆ ಒಗೆದನು. ಆಗ ದುರ್ಗಾಚರಣನು ಅದನ್ನು ಓದಿ, ಕೂಡಲೆ ವಿಜಯಸಿಂಹನ ಕಡೆಗೆ ತಿರುಗಿ—ಮಹಾರಾಣಾಜಿಯವರೇ, ಈ ಪತ್ರದ ಕಡೆಯಲ್ಲಿ ಬರೆದಿರುವ ಸಂಕಟವು ನಿಮ್ಮ ಮೇಲೆ ಬರಲಿಕ್ಕೆ ಇನ್ನೂ ಸ್ವಲ್ಪ ಅವಕಾಶವಿರುವದು. ಈ ಪತ್ರದೊಳಗಿನ, ಅಥವಾ ನಾಳೆ ಬರುವ ಪತ್ರದೊಳಗಿನ ಸಂಗತಿಯ ಬಗ್ಗೆ ತಾವು ಸ್ವಲ್ಪವೂ ಭಯಪಡಬಾರದು, ಎಂದು ಹೇಳಿದನು; ಆದರೆ ವಿಜಯಸಿಂಹನ ಲಕ್ಷವು ದುರ್ಗಾಚರಣನ ಮಾತಿನಕಡೆಗೆ ಇದ್ದಿಲ್ಲ, ಮಗಳ ಕಡೆಗೆ ಹೋಗಿತ್ತು. ಆತನು ವಿಚಾರದ ಭರದಲ್ಲಿ ಚಟ್ಟನೆ ಎದ್ದು ರೂಪಮತಿಯನ್ನು ಕುರಿತು—"ತಂಗೀ, ರೂಪೇ, ಒಟ್ಟಿಗೆ ನೀನು........" ಆದರೆ ಮುಂದಿನ ಅಕ್ಷರಗಳು

ಆತನ ಮುಖದಿಂದ ಹೊರಡಲೊಲ್ಲವು. ಆತನು ತನ್ನ ಮಗಳ ಹೆಗಲಮೇಲೆ ಕೈಹಾಕಿಕೊಂಡು ಶಯನಮಂದಿರದ ಕಡೆಗೆ ಹೊರಟನು. ಆತನು ಎದ್ದ ಕೂಡಲೆ ಎಲ್ಲ ಜನರು ಎದ್ದರು. ದುರ್ಗಾಚರಣನ ಆದರಾತಿಥ್ಯವನ್ನು ಸರಿಯಾಗಿ ಮಾಡುವದಕ್ಕಾಗಿ ಕಾರಭಾರಿಯಾದ ಮಾನಸಿಂಗನಿಗೆ ಅಪ್ಪಣೆಯಾಯಿತು. ನಡೆದ ಸಂಗತಿಯನ್ನು ನೋಡಿ ರೂಪಮತಿಯು ವ್ಯಸನಪಟ್ಟಳು. ತನ್ನಿಂದ ವೃದ್ಧಾಪ್ಯಕಾಲದಲ್ಲಿ ತಂದೆಗೆ ಸುಖವಾಗುವದೊತ್ತಟ್ಟಿಗುಳಿದು, ಮಹದ್ದುಃಖವಾಗುವದೆಂಬ ಮಾತು ಆಕೆಯ ಮನಸ್ಸಿಗೆ ಹತ್ತಿತು. ಮೊಗಲರ ಹಸ್ತಕನಾದ ಜಸವಂತಸಿಂಗನ ಪಕ್ಷವನ್ನು ವಹಿಸಿ ತಂದೆಗೆ ದುಃಖಕೊಡಬಾರದೆಂದು ಆಕೆಯು ತನ್ನ ಅಣ್ಣನಾದ ಶಿವಸಿಂಗನಿಗೆ ಪರಿಪರಿಯಾಗಿ ಹೇಳಿದಳು. ಆದರೆ ಶಿವಸಿಂಗನು ತನ್ನ ಹಟವನ್ನೇ ನಡಿಸಿದ್ದರಿಂದ ರೂಪಮತಿಯು ವ್ಯಸನಪಟ್ಟು, ವೃದ್ಧಾಪ್ಯದಲ್ಲಿ ತಂದೆಯ ಮನಸ್ಸನ್ನು ಸಂತೋಷಪಡಿಸುವದು ತನ್ನ ಅವಶ್ಯ ಕರ್ತವ್ಯವೆಂದು ತಿಳಿದು ಆತನ ಸಂಗಡ ನಡಕೊಳ್ಳುತ್ತಿದ್ದಳು. ಹೀಗಿದ್ದು, ತಂದೆಗೆ ದುಃಖವಾಗುವ ಭವಿಷ್ಯವನ್ನು ದುರ್ಗಾಚರಣಜ್ಯೋತಿಷಿಯು ಈದಿನ ವರ್ತಿಸಿದ್ದರಿಂದ ಆಕೆಗೆ ಬಹಳ ವ್ಯಸನವಾಯಿತು. ದುರ್ಗಾಚರಣನು ಭವಿಷ್ಯಕಥನದಲ್ಲಿ ಎಂಥ ಸಮರ್ಥನಿದ್ದರೂ ಆತನದೊಂದು ಭವಿಷ್ಯವು ಸುಳ್ಳಾಗಲೆಂದು ಆಕೆಯು ದೇವರನ್ನು ಮನಸ್ಸಿನಲ್ಲಿ ಪ್ರಾರ್ಥಿಸುತ್ತ ತಂದೆಯೊಡನೆ ಶಯನಮಂದಿರಕ್ಕೆ ನಡೆದಿದ್ದಳು. ವಿಜಯಸಿಂಹನು ಸುಮ್ಮನೆ ಸಾಗಿದ್ದನು, ಆತನು ಒಂದು ತುಟಿಯನ್ನು ಎರಡು ಮಾಡಲಿಲ್ಲ. ನಡನಡುವೆ ಆತನು ಉಸುರ್ಗರೆಯುತ್ತಿದ್ದದ್ದರಿಂದ, ಖೇದ-ಸಂತಾಪಗಳನ್ನು ಹುಟ್ಟಿಸುವ ವಿಚಾರಗಳು ಆತನ ಮನಸ್ಸಿನಲ್ಲಿ ಬರುತ್ತಿರುವವೆಂದು ರೂಪಮತಿಯು ತರ್ಕಿಸುತ್ತಿದ್ದಳು. ವಿಜಯಸಿಂಹನು ಶಯನಮಂದಿರದ ಬಾಗಿಲಿಗೆ ಹೋದಕೂಡಲೆ ಮಗಳ ಹೆಗಲಮೇಲಿನ ಕೈಯನ್ನು ತೆಗೆದು ಆಕೆಯನ್ನು ಕುರಿತು—ತಂಗೀ, ಹೋಗು, ಇನ್ನು ಸ್ವಸ್ಥವಾಗಿ ಮಲಗಿಕೋ; ನಾನೂ ಮಲಗಿಕೊಳ್ಳುತ್ತೇನೆ.

ರೂಪಮತಿ—ಏನು ? ಅಪ್ಪಾಜಿಯವರೇ, ನೀರನ್ನು ಸಹ ಕುಡಿಯದೆ ಮಲಗಿಕೊಳ್ಳುವಿರೋ ? ಇಂದು ಇಷ್ಟೇಕೆ ಬೇಗನೆ ಮಲಗಿಕೊಳ್ಳುವದು ?

ವಿಜಯಸಿಂಹ— ಛೀ ಹುಚ್ಚೀ, ಇದೇನು ನಿನ್ನ ಕೇಳೋಣವು ?

ಹೊತ್ತು ಮುಣುಗಿ ಎಷ್ಟು ಹೊತ್ತಾಯಿತು, ಈಗ ನೀರು ಕುಡಿಯಬೇಕೆನ್ನು ವೆಯಾ ? ನನ್ನಂತೆ ನಿನ್ನ ಮನಸ್ಸೂ ಅಸ್ವಸ್ಥವಾಗಿರುವಂತೆ ತೋರುತ್ತದೆ. ಹೋಗು, ಇಂದು ಸ್ವಲ್ಪ ತಲೆನೋವುಯೆದ್ದಿರುವದರಿಂದ ನಾನು ಬೇಗನೆ ಮಲಗಿಕೊಳ್ಳುತ್ತೇನೆ, ಎರಡನೆಯದೇನೂ ಇಲ್ಲ. ರೂಪೇ, ಎಂಥ ಮರು ಳೆಯೋ ನೀನು! ತಲೆನೋವುಯೆದ್ದದೆಯೆಂದ ಕೂಡಲೆ ಸಣ್ಣಮೋರೆ ಮಾಡಿದೆ ಯಲ್ಲ! ಹೋಗುಹೋಗು, ಅಸಮಾಧಾನಪಡಬೇಡ. ಅಂಥದೇನು ನನಗೆ ಆಗಿರುವದಿಲ್ಲ.

ರೂಪಮತಿ (ದೈನ್ಯವಾಣಿಯಿಂದ)—ಅಪ್ಪಾ, ನೀವು ಮಲಗಿಕೊಳ್ಳಿರಿ, ನಾನು ತಲೆಗೆ ಸ್ವಲ್ಪ ಜಾಜಿಕಾಯಿ ತೇದು ತಿಕ್ಕುತ್ತೇನೆ, ಅಂದರೆ ತಲೆನೋವು ಕಡಿಮೆಯಾಗಿ ನಿಮಗೆ ಸ್ವಸ್ಥ ನಿದ್ದೆ ಬಂದೀತು.

ಮಗಳ ಈ ಪ್ರೇಮದ ಮಾತುಗಳನ್ನು ಕೇಳಿದಕೂಡಲೆ ವಿಜಯಸಿಂಹನ ಖಿನ್ನತೆಯು ದೂರವಾಗಿ ನಗುತ್ತ, ಆತನು ಮಗಳ ತಲೆಯ ಮೇಲೆ ಕೈಯ ನ್ನಿಟ್ಟು—ನನ್ನ ಸೌಖ್ಯದ ನಿಧಿಯು ನನ್ನ ರೂಪಮತಿಯೆಂದು ನಾನು ಹೇಳು ವದು ಸುಳ್ಳಲ್ಲ! ತಂಗೀ, ನಿನ್ನ ಮಾತುಗಳಿಂದಲೇ ನನ್ನ ತಲೆನೋವು ಹೋಯಿತು. ಹೋಗು, ಇನ್ನು ನಿನ್ನ ಮಹಾಲಿಗೆ ಹೋಗಿ ಮಲಗಿಕೋ. ಕುಂದೇ, ಪದ್ಮೇ, ಹೋಗಿರಿ, ಈಕೆಯನ್ನು ಕರಕೊಂಡು ಹೋಗಿರಿ.

ರೂಪಮತಿ— ಅಪ್ಪಾಜಿಯವರೇ, ನಾನು ಚಿಕ್ಕವಳಿರುವಾಗ ನಿಮ್ಮ ಶಯನಮಂದಿರದ ಬಳಿಯ ಈ ಕೋಣೆಯಲ್ಲಿ ಮಲಗುತ್ತಿದ್ದೆನಲ್ಲ, ಇಂದು ಅದೇ ಕೋಣೆಯಲ್ಲಿಯೇ ಈ ಸಖಿಯರೊಡನೆ ಮಲಗಿಕೊಳ್ಳುವೆನು. ಇದಕ್ಕೆ ನಿಮ್ಮ ಪ್ರತಿಬಂಧವಿಲ್ಲವಷ್ಟೆ ?

ವಿಜಯಸಿಂಹ ( ಮುಗುಳುನಗೆ ನಗುತ್ತ ಮನಸ್ಸಿನಲ್ಲಿ ಆನಂದ ಪಡುತ್ತ )—ಎಂಥ ಹುಚ್ಚುಹುಡುಗೆಯಿದು ! ರೂಪೇ, ನನ್ನ ಶಯನಮಂದಿ ರದ ಕೋಣೆಯಲ್ಲಿ ಮಲಗಿಕೊಳ್ಳಲಿಕ್ಕೆ ನೀನು ಸಣ್ಣವಳಲ್ಲ.

ರೂಪಮತಿ— ಅಪ್ಪಾ, ಇಷ್ಟೂ ನನ್ನ ಮಾತು ಕೇಳಬಾರದೇನು ? ನಾನು ಹೋಗುವದಿಲ್ಲ; ನಾನು ಇಂದು ಇಲ್ಲಿಯೇ ಮಲಗಿಕೊಳ್ಳುವೆನು.

ಕಡೆಗೆ ರೂಪಮತಿಯು ತನ್ನ ಮಾತನ್ನೇ ನಡಿಸಿ, ತಂದೆಯ ಶಯನ ಮಂದಿರದ ಬಳಿಯ ಕೋಣೆಯಲ್ಲಿಯೇ ಮಲಗಿಕೊಂಡಳು. ವಿಜಯಸಿಂಹನ

ಅಪ್ಪಣೆಯಿಂದ ಕುಂದೆಯೂ, ಪದ್ಮೆಯೂ ಆವಳ ಬಳಿಯಲ್ಲಿ ಮಲಗಿಕೊಂಡರು. ಬೇರೆ ಒಕ್ಕಲಗಿತ್ತಿಯರು ಶಯನಮಂದಿರದ ಹೊರಗೆ ಮಲಗಿಕೊಂಡಿದ್ದರು. ಏನುಮಾಡಿದರೂ ರೂಪಮತಿಗೆ ನಿದ್ದೆ ಬರಲೊಲ್ಲದು. ದುರ್ಗಾಚರಣನು ಹೇಳಿದ ಭವಿಷ್ಯವನ್ನು ಕುರಿತು ಆಕೆಯು ವಿಚಾರಿಸುತ್ತಿದ್ದಳು. ಹೆಸರಿಗೆ ತಕ್ಕಂತೆ ತಾನು ರೂಪಮತಿಯೇ ಇದ್ದುದ್ದಕ್ಕಾಗಿ ಆಕೆಗೆ ಈವೊತ್ತಿನವರೆಗೆ ಎಂದೂ ಅಸಮಾಧಾನವಾಗಿದ್ದಿಲ್ಲ; ಆದರೆ ಈ ರೂಪವು ನನಗಿರದಿದ್ದರೆ ತಂದೆಗೆ ಸಂಕಟ ಒದಗುತ್ತಿದ್ದಿಲ್ಲೆಂದು ತಿಳಿದು ಆಕೆಯು ತನ್ನ ಸೌಂದರ್ಯಕ್ಕಾಗಿ ಇಂದು ಅಸಮಾಧಾನಪಡಹತ್ತಿದಳು. ಆಕೆಯು ಔರಂಗಜೇಬನ ದುಷ್ಟಗುಣಗಳ ಸುದ್ದಿಯನ್ನು ಬಹಳ ಕೇಳಿದ್ದಳು. ಉದೇಪುರದ ಮನೆತನದ ಚಂದ್ರಾವತಿಯೆಂಬ ಕನ್ಯೆಯು ತನ್ನ ಹೆಂಡತಿಯಾಗಬೇಕೆಂದು ಆತನು ಮಾಡಿದ ಪ್ರಯತ್ನವು ವ್ಯರ್ಥವಾದದ್ದರಿಂದ, ಆ ಮನೆತನದ ಮೇಲೆ ಆತನ ಸಿಟ್ಟು ಎಷ್ಟು ಇರುವದೆಂಬದೂ ರೂಪಮತಿಗೆ ಗೊತ್ತಿತ್ತು. ತನ್ನ ಪಾಣಿಗ್ರಹಣ ಮಾಡಬೇಕಾಗಿದ್ದ ಚಂದ್ರಾವತಿಯು ಜೋಧಪುರದ ಆರಸನಾದ ಜಸವಂತಸಿಂಗನ ಪಾಣಿಗ್ರಹಣ ಮಾಡಿದ್ದರಿಂದ ಔರಂಗಜೇಬನು ಜಸವಂತಸಿಂಗನ ಮೇಲೆ ಗುಪ್ತದ್ವೇಷವನ್ನು ತಾಳಿ, ಹೊತ್ತು ಬಂದರೆ ಜಸವಂತಸಿಂಗನನ್ನು ಕೊಲ್ಲಿಸಿ ಚಂದ್ರಾವತಿಯನ್ನು ತನ್ನ ಜನಾನಖಾನೆಯಲ್ಲಿ ಸೇರಿಸಿಕೊಳ್ಳಬೇಕೆಂದು ಯತ್ನಿಸುತ್ತಿದ್ದುದ್ದನ್ನು ರೂಪಮತಿಯು ಜನರಿಂದ ಕೇಳಿದ್ದಳು. ರಾಣೀವಾಸದಲ್ಲಿ, ಅಥವಾ ತನ್ನ ಗೆಳತಿಯರ ಬಳಿಯಲ್ಲಿ ಇಲ್ಲವೆ ಉಪವನದಲ್ಲಿ ಹೊತ್ತುಗಳೆಯುವದಕ್ಕಿಂತ ತಂದೆಯ ಬಳಿಯಲ್ಲಿದ್ದು ಹೊತ್ತುಗಳೆಯುವದು ಹೆಚ್ಚು ಇದ್ದುದ್ದರಿಂದ, ರೂಪಮತಿಗೆ ರಾಜಕರಣಕ್ಕೆ ಸಂಬಂಧಿಸಿದ ಎಷ್ಟೋ ಸಂಗತಿಗಳು ಗೊತ್ತಿದ್ದವು. ತಂದೆಯೂ ಆತನ ಸರದಾರರೂ ಔರಂಗಜೇಬನ ವಿಷಯವಾಗಿ ಮಿತಿಮೀರಿ ತಿರಸ್ಕಾರವನ್ನು ವ್ಯಕ್ತಪಡಿಸುತ್ತಿದ್ದುದ್ದರಿಂದ, ಆ ತಿರಸ್ಕಾರವು ರೂಪಮತಿಯ ಮೈಯುಂಡಿತ್ತು. ಆಕೆಯು ಔರಂಗಜೇಬನನ್ನು ಸಮೂಲವಾಗಿ ನಾಶಮಾಡಲು ಯೋಗ್ಯನಾದವನನ್ನೇ ತಾನು ಲಗ್ನವಾಗಬೇಕೆಂತಲೂ, ತನಗೆ ಸಂತತಿಯಾದರೆ ಅದು ಯಾವಾಗಲೂ ಔರಂಗಜೇಬನನ್ನು ದ್ವೇಷಿಸುತ್ತಿರುವಂತೆ ಮಾಡಬೇಕೆಂತಲೂ ಆಕೆಯು ನಿಶ್ಚಯಿಸಿದ್ದಳು. ಇಂಥ ತಿರಸ್ಕರಣೀಯನಾದ ಔರಂಗಜೇಬ

ನಿಂದ, ದುರ್ಗಾಚರಣನ ಭವಿಷ್ಯದಂತೆ, ತನ್ನ ತಂದೆಗೆ ಸಂಕಟ ಒದಗುವ ದೆಂಬ ಚಿಂತೆಯಿಂದ ಆಕೆಗೆ ನಿದ್ರೆಬಾರದ್ದರಿಂದ ಆಕೆಯು ಮೇಲೆ ಹೇಳಿದಂತೆ ತಳಮಳಿಸುತ್ತಿದ್ದಳು.

ಇತ್ತ ವಿಜಯಸಿಂಹನಿಗಾದರೂ ನಿದ್ದೆಬಂದಿದ್ದಿಲ್ಲ. ದುರ್ಗಾಚರಣನ ಭವಿಷ್ಯವು ಆತನ ಮನಸ್ಸಿನಲ್ಲಿ ಒಂದೇಸವನೆ ಕಟಿಯುತ್ತಿತ್ತು. ಔರಂಗ ಜೇಬನು ತನ್ನ ತಂದೆಯನ್ನು ಸೆರೆಯಲ್ಲಿಟ್ಟು, ಅಣ್ಣತಮ್ಮಂದಿರನ್ನು ಕೊಲ್ಲಿಸಿ, ಎಷ್ಟೋ ಜನರ ಕುತ್ತಿಗೆಯನ್ನು ಕೊಯ್ಸಿ, ಎಷ್ಟೋ ಜನರಿಗೆ ಮೋಸಮಾಡಿ ದಿಲ್ಲಿಯ ಪಟ್ಟವನ್ನು ಸಂಪಾದಿಸಿದ್ದನು. ಬಾದಶಹನಾದ ಮೇಲೆ ಆ ದುಷ್ಟನು ಹಿಂದೂಜನರ ಮೇಲೆ ಜಿಜಿಯಾ ಎಂಬ ತಲೆಪಟ್ಟಿಯನ್ನು ಕೂಡ್ರಿಸಿದನು. ಎಷ್ಟೋ ದೇವಾಲಯಗಳನ್ನು ನಾಶಮಾಡಿದನು. ಹಲವರನ್ನು ಜುಲುಮೆ ಯಿಂದ ಮುಸಲ್ಮಾನರನ್ನು ಮಾಡಿದನು. ಆತನ ಒಂದೊಂದು ಕ್ರೂರಕೃತ್ಯ ವನ್ನೂ, ಹಟಮಾರಿತನವನ್ನೂ ನೆನಿಸಿಕೊಂಡರೆ ಮೈಮೇಲಿನ ಕೂದಲುಗಳು ನೆಟ್ಟಗಾಗುವವು. ಇಂಥ ಕ್ರೂರನ ಕ್ರೂರಕೃತ್ಯಗಳೆಲ್ಲ ವಿಜಯಸಿಂಗನ ಕಣ್ಣಿಗೆ ಕಟ್ಟಿದಂತಾಗಿ, ಆತನ ಮನಸ್ಸು ಅಸ್ವಸ್ಥವಾಯಿತು. ಈ ದುಷ್ಟನ ಶಾಸನ ಮಾಡಲಿಕ್ಕೆ ಈಶ್ವರನು ಯಾಕೆ ಅವತರಿಸಲೊಲ್ಲನೆಂತಲೂ, ಎಲ್ಲ ರಜಪೂತ ರಾಜರೂ, ಅವರ ಮಾಂಡಲೀಕರಾಜರೂ ಒಟ್ಟುಗೂಡಿ ಆ ದುಷ್ಟನ ಶಾಸನ ಮಾಡಲಿಕ್ಕೆ ಯಾಕೆ ಮುಂದುವರೆಯಲೊಲ್ಲರೆಂತಲೂ ಆತನು ಚಿಂತಿಸಿದನು. ಉದೇಪುರದ ರಾಜಸಿಂಹನ ಭಕ್ತಿಯು ವಿಜಯಸಿಂಹನ ಮೇಲೆ ಬಹಳವಾಗಿ ತ್ತೆಂದು ಮೇಲೆ ಹೇಳಿದೆಯಷ್ಟೇ ? ಆ ವೃದ್ಧವೀರನು ರಾಜಸಿಂಹನ ಮುಂದೆ ಈ ವಿಷಯವನ್ನು ತೆಗೆದು—ನಿಮ್ಮ ಹೊರತು ರಜಪೂತರ ಆಧಿಪತ್ಯವನ್ನು ಪಡೆಯಲಿಕ್ಕೆ ಮತ್ತೊಬ್ಬರು ಯೋಗ್ಯರಿಲ್ಲದ್ದರಿಂದ, ನೀವು ಮುಖ್ಯರಾಗಿ ಈ ದುಷ್ಟಶಾಸನದ ಕಾರ್ಯವನ್ನು ಕೊನೆಗಾಣಿಸಬೇಕೆಂದು ಎಷ್ಟೋಸಾರೆ ಹೇಳಿ ದ್ದನು. ಆ ವೃದ್ಧ ರಜಪೂತವೀರನು ಹೀಗೆ ಹೇಳಿದಾಗೆಲ್ಲ ರಾಜಸಿಂಹನು—ಆಹುದು, ನೀವು ಹೇಳುವ ಮಾತು ಒಪ್ಪತಕ್ಕದ್ದೇಸರಿ; ಆದರೆ ಔರಂಗ ಜೇಬನ ಪಕ್ಷವನ್ನು ವಹಿಸಿದ ಜೋಧಪುರದ ಜಸವಂತಸಿಂಗನೂ, ಆತನ ಮಾಂಡಲೀಕರೂ ಈ ಕಾರ್ಯಕ್ಕೆ ಅನುಕೂಲವಾಗುವಹಾಗಿಲ್ಲ; ಕಾರಣ ಅವಸರದಿಂದ ಈ ಕಠಿಣಕಾರ್ಯಕ್ಕೆ ಕೈಹಾಕಿ ಸುಮ್ಮನೆ ರಜಪೂತವೀರರನ್ನು

ಬಲಿಕೊಡುವದು ಯೋಗ್ಯವಲ್ಲ, ಎಂದು ಮುತ್ಸದ್ದಿತನದ ಉತ್ತರವನ್ನು ಹೇಳುತ್ತ ಮುದುಕನನ್ನು ಸಮಾಧಾನಪಡಿಸುತ್ತ ಬಂದಿದ್ದನು. ಜಸವಂತ ಸಿಂಗನ ಮೇಲೆ ವಿಜಯಸಿಂಹನ ಸಿಟ್ಟು ಬಹಳ. ಆದರಲ್ಲಿ, ಔರಂಗಜೇಬನ ಶಾಸನದ ಮಾತು ಹೊರಟಕೂಡಲೆ ಜಸವಂತಸಿಂಗನೂ, ಆತನ ಮಾಂಡ ಲಿಕರೂ ಅನುಕೂಲವಾಗುವದಿಲ್ಲೆಂದು ರಜಪೂತರು ಹಿಂಜರಿದಾಗ ವಿಜಯ ಸಿಂಹನು ಕೋಪಾಗ್ನಿಯಿಂದ ಸಂತಪ್ತನಾಗುತ್ತಿದ್ದನು. ಮತ್ತು "ಮೊದಲಿ ನಿಂದಲೇ ಉದೇಪುರದ ಮನೆತನವು ಹೇಡಿಯು-ಕಪಟಸ್ವಭಾವದ್ದು-ಸ್ವಾರ್ಥ ಪರಾಯಣವು ಎಂದು ಬಾಯಿಗೆ ಬಂದಹಾಗೆ ಬೈಯುತ್ತಿದ್ದನು. ಒಟ್ಟಿಗೆ ಎಲ್ಲ ರಜಪೂತರು ಒಟ್ಟಾಗುವ ಸಂಭವವಿಲ್ಲದ್ದರಿಂದ ಔರಂಗಜೇಬನ ಪಾರ ಪತ್ಯಮಾಡುವದು ವಿಜಯಸಿಂಹನಿಗೆ ಅಶಕ್ಯವಾಗಿ ತೋರುತ್ತಿತ್ತು. ಆದರೂ ಇಂದಿನ ತನ್ನ ವಕೀಲನ ಪತ್ರದಂತೆ ಔರಂಗಜೇಬನು ಜಸವಂತಸಿಂಗನ ಇದ್ದ ಒಬ್ಬ ಮಗನಾದ ಪೃಥ್ವೀಸಿಂಗನನ್ನು ಮೋಸದಿಂದ ಕೊಲ್ಲಿಸಿದ್ದರಿಂದ ಜಸ ವಂತಸಿಂಗನು ಔರಂಗಜೇಬನ ಮೇಲೆ ಸಿಟ್ಟಾಗಿ ಆತನ ಪಾರಪತ್ಯಕ್ಕಾಗಿ ರಜಪೂತರನ್ನು ಕೂಡಬಹುದೆಂಬ ಆಶೆಯು ಮುದುಕನಲ್ಲಿ ಉತ್ಪನ್ನವಾ ಯಿತು. ಹೀಗೆ ಆಶಾ–ನಿರಾಶೆಗಳ ಉತ್ಪತ್ತಿ–ಲಯಗಳಿಂದ ವಿಜಯಸಿಂಹನು ತಳಮಳಿಸುತ್ತಿರಲು, ಬೆಳ್ಳಗೆ ಬೆಳಗಾಯಿತು. ಒಟ್ಟಿಗೆ ಆಂದಿನ ಇಡಿಯ ರಾತ್ರಿ ತಂದೆಯೂ, ಮಗಳೂ ಕಣ್ಣಿಗೆ ಕಣ್ಣು ಹಚ್ಚಲಿಲ್ಲ!

ದಿಲ್ಲಿಯ ವಕೀಲನು ಸವಿಸ್ತರ ವೃತ್ತಾಂತವನ್ನು ನಾಳೆ ಇನ್ನೊಬ್ಬ ಚಾರನ ಸಂಗಡ ಕಳಿಸುತ್ತೇನೆಂದು ಬರೆದದ್ದನ್ನು ವಾಚಕರು ಮರೆತಿರ ಲಿಕ್ಕಿಲ್ಲ. ಅಸ್ವಸ್ಥಚಿತ್ತನಾದ ವಿಜಯಸಿಂಹನು ಪತ್ರದ ಹಾದಿಯನ್ನು ಆತುರ ದಿಂದ ನೋಡುತ್ತಿದ್ದನು. ಆ ಪತ್ರದಿಂದ ಪೃಥ್ವೀಸಿಂಗನ ಮರಣದ ಸವಿಸ್ತರ ವೃತ್ತಾಂತವು ಗೊತ್ತಾಗುವದಲ್ಲದೆ, ತನ್ನ ಮೇಲೆ ಬರುವ ಸಂಕಟದ ವಿವರವೂ ಗೊತ್ತಾಗುವದೆಂದು ಆತನು ತಿಳಿದಿದ್ದನು. ಹುಡುಗರೂ-ಮುದುಕರೂ ಒಂದೇ ಎಂದು ಅನ್ನುವ ವಾಡಿಕೆಯಿರುವದಷ್ಟೇ ? ಹುಡುಗರ ಆತ್ಯಾ ಸಕ್ತಿ, ಆಶೆಬುರುಕತನ, ಹಟಮಾರಿತನ, ಉಣಿಸು–ತಿನಿಸುಗಳ ಇಚ್ಛೆ ಇವು ಮುದುಕರಲ್ಲಿ ಇರುವದನ್ನು, ಮುದುಕರಿದ್ದ ಮನೆಯವರು ಬಹುತರ ಮನ ಗಂಡಿರಬಹುದು. ಅದರಂತೆ, ವೃದ್ಧವಿಜಯಸಿಂಹನು ದಿಲ್ಲಿಯ ಎರಡನೆಯ

ಪತ್ರದ ವೃತ್ತಾಂತವನ್ನು ಅರಿತುಕೊಳ್ಳಲು ಅತ್ಯಾಸಕ್ತನಾಗಿದ್ದನು. ಹೀಗಿರುವಲ್ಲಿ ದಿಲ್ಲಿಯಿಂದ ಚಾರನು ಬಂದು ವಿಜಯಸಿಂಗನ ಕೈಯಲ್ಲಿ ಪತ್ರವನ್ನು ಕೊಟ್ಟನು. ಅದರಲ್ಲಿ ಬರೆದ ಅಭಿಪ್ರಾಯವೇನಂದರೆ—

ಮಹಾರಾಣಾ ವಿಜಯಸಿಂಹ ಮುಕ್ಕಾಮು ರೂಪನಗರ ಇವರ ಚರಣ ಸನ್ನಿಧಿಗೆ—

ಅತ್ಯಂತ ವಿನಯಯುಕ್ತವಾದ ಅನೇಕ ಪ್ರಣತಿಪೂರ್ವಕ ವಿಜ್ಞಾಪನೆಗಳು—ಬಾದಶಹನಾದ ಔರಂಗಜೇಬನು ಮಾಡಿದ ಭಯಂಕರ ಕೃತ್ಯವನ್ನು ಸ್ವಲ್ಪದರಲ್ಲಿ ನಿನ್ನಿನದಿವಸ ಸನ್ನಿಧಿಗೆ ತಿಳಿಸಿದೆಯಷ್ಟೇ? ಈದಿನ ಸವಿಸ್ತರ ವೃತ್ತಾಂತವನ್ನು ಬರೆದು ತಿಳಿಸುತ್ತೇನೆ. ಪತ್ರಗಳು ಮುಟ್ಟಲಿಕ್ಕೆ ವಿಘ್ನಗಳು ಬಾರದಿದ್ದರೆ, ಇದರಂತೆ ಮುಂದೆಯಾದರೂ ಪತ್ರಗಳನ್ನು ಕಳಿಸುತ್ತ ಹೋಗುವೆನು. ದಿನಾಲು ನಾನು ಪತ್ರಕಳಿಸುವ ಪದ್ಧತಿಯಂತೆ ಈ ಪತ್ರವನ್ನು ಭಿಲ್ಲಸ್ತ್ರೀಯ ಕೈಯಿಂದ ಗಿರನಾರಕ್ಕೆ ಮುಟ್ಟಿಸುವೆನು. ಅಲ್ಲಿಂದ ನಿತ್ಯಕ್ರಮದಂತೆ ಚಾರನು ತಮಗೆ ಪತ್ರಮುಟ್ಟಿಸಬಹುದು. ಜಸವಂತಸಿಂಗರಾಜರಿಗೆ ಇಲ್ಲಿಂದ ಹೋದ ಪತ್ರಗಳು ಔರಂಗಜೇಬನ ಕೈಯಲ್ಲಿ ಸಿಕ್ಕಂತೆ, ನಾನು ತಮ್ಮ ಕಡೆಗೆ ಕಳಿಸಿದ ಒಂದು ಪತ್ರವಾದರೂ ಔರಂಗಜೇಬನ ಕೈಯಲ್ಲಿ ಸಿಕ್ಕಿರುವದಿಲ್ಲ. ನಾನು ತಮ್ಮ ಕಡೆಗೆ ಪತ್ರಗಳನ್ನು ಕಳಿಸುತ್ತೇನೆಂಬ ಸಂಶಯವು ಕೂಡ ಈವೊತ್ತಿನವರೆಗೆ ಇಲ್ಲಿ ಯಾರಿಗೂ ಬಂದಿರುವದಿಲ್ಲ. ಅಂತೇ ನನ್ನ ಪತ್ರಗಳು ಮುಂದೆಯಾದರೂ ತಮಗೆ ಮುಟ್ಟುವ ಸಂಭವವಿರುತ್ತದೆ.

ಮಹಾರಾಣಾಜೀ, ಔರಂಗಜೇಬಬಾದಶಹನು ಇಷ್ಟು ಕಪಟಿಯೂ, ತಂತ್ರಗಾರನೂ, ಡಾಂಭಿಕನೂ, ಕ್ರೂರನೂ ಇರಬಹುದೆಂದು ಈವೊತ್ತಿನವರೆಗೆ ಯಾರಿಗೂ ಗೊತ್ತಾಗಿರಲಿಕ್ಕಿಲ್ಲ; ಆದರೆ ಈಗ ಪ್ರತಿಕ್ಷಣಕ್ಕೆ ಬರುವ ಅನುಭವದಿಂದ ಜನರು, ಇವನಂಥ ನೀಚನು ಮತ್ತೊಬ್ಬನಿರಲಿಕ್ಕಿಲ್ಲೆಂದು ಭಾವಿಸಹತ್ತಿದ್ದಾರೆ. ಈವೊತ್ತಿನವರೆಗೆ ಔರಂಗಜೇಬಬಾದಶಹನು ತುಂಬಿದ ದರ್ಬಾರದಲ್ಲಿ—"ಜಸವಂತಸಿಂಗಮಹಾರಾಜರು ಮೊದಲಿಗೆ ನನ್ನ ಹಿರಿಯರ ಪಕ್ಷವನ್ನು ವಹಿಸಿ ನನ್ನ ಅಹಿತವನ್ನು ಚಿಂತಿಸಿದರೂ, ಕಡೆಗೆ ಅವರು ಅಲಮಗೀರಬಾದಶಹನ ಪತ್ಯನಿಷ್ಠಸೇವಕರಾದರು. ಅವರ ಮೇಲೆ ನನ್ನ ಪೂರ್ಣ

ವಿಶ್ವಾಸವಿರುತ್ತದೆ. ಅವರು ನನ್ನ ಸಾರ್ವಭೌಮತ್ವದ ಆಧಾರಸ್ತಂಭವಾಗಿದ್ದಾರೆ" ಎಂದು ಬಾಯಿಬಿಚ್ಚಿ ಅಂದು ತೋರಿಸುತ್ತ ಬಂದಿರುತ್ತಾನೆ. ಮೊನ್ನಿನ ನೀಚತನದ ಕೆಲಸವು ಆಗುವವರೆಗೆ ಆತನು ಹೀಗೆಯೇ ಅನ್ನುತ್ತ ಬಂದನು. ಅಂದಿನದಿನ ಮುಂಜಾನೆ ತನ್ನ ದರ್ಶನಕ್ಕಾಗಿ ಮನೆಗೆಬಂದ ಪೃಥ್ವೀಸಿಂಗನನ್ನು ಅತ್ಯಾದರದಿಂದ ಬರಮಾಡಿಕೊಂಡು ಆತನ ತಂದೆಯ ಕ್ಷೇಮ ಸಮಾಚಾರವನ್ನು ಕೇಳಿ ಆತನನ್ನು ಕುರಿತು—ನಿಮ್ಮ ಹಿರಿಯರಾದ ಜಸವಂತಸಿಂಗಮಹಾರಾಜರು ನನ್ನ ರಾಜ್ಯದ ಆಧಾರಸ್ತಂಭವಾಗಿದ್ದಾರೆ. ನೀನು ನಿನ್ನ ತಂದೆಯ ಅನುಕರಣವನ್ನೇಮಾಡು. ಉಳಿದ ರಜಪೂತರ ಹಾದಿಗೆ ಹೋಗಬೇಡ, ಇಂದು ಮಧ್ಯಾಹ್ನದಲ್ಲಿ ಕೂಡಿದ ದರ್ಬಾರದಲ್ಲಿ ನಿನ್ನ ಮನ್ನಣೆಯಾಗತಕ್ಕದ್ದದೆ, ಎಂದು ಹೇಳಿದನು. ಆದರೆ ಮಹಾರಾಜರೇ ಆ ದಿನ ಮಧ್ಯಾಹ್ನದಲ್ಲಿ ಒದಗಿದ ಭಯಂಕರ ಕೃತ್ಯವನ್ನು ಏನೆಂದು ವರ್ಣಿಸಬೇಕು! ತನ್ನ ರಾಜ್ಯದ ಆಧಾರಸ್ತಂಭವಾದ ಜಸವಂತಸಿಂಗಮಹಾರಾಜರ ಮಗನಾದ ಪೃಥ್ವೀಸಿಂಗನನ್ನು ಬಹುಮಾನಿಸತಕ್ಕದ್ದದೆಯೆಂತಲೂ, ಅದಕ್ಕಾಗಿಯೇ ಆತನನ್ನು ಬುದ್ಧಿಪೂರ್ವಕವಾಗಿ ಜೋಧಪುರದಿಂದ ಕರಿಸಿರುತ್ತೇವೆಂತಲೂ ಕಪಟಿಯಾದ ಆ ಅಲಮಗೀರನು ಬಣ್ಣಸುರಿಸಿ ಹೇಳಿದ್ದರಿಂದ, ಜನರಿಗೆ ಆತನ ಹೇತುವು ಪ್ರಶಂಸನೀಯವಾಗಿ ತೋರಿತು. ಯಾರೊಬ್ಬರು— "ಜಸವಂತಸಿಂಗನ, ಹಾಗು ಆತನ ಮಗನಾದ ಪೃಥ್ವೀಸಿಂಗನ ದೈವವು ತೆರೆಯಿತೆ"ಂದು ನುಡಿಯಹತ್ತಿದರು; ಮತ್ತು ದರ್ಬಾರಕ್ಕೆ ಹೋಗುವ ಹಕ್ಕು ಇದ್ದ ಪ್ರತಿಯೊಬ್ಬನು ಪೃಥ್ವೀಸಿಂಗನ ಸತ್ಕಾರವನ್ನು ಕಣ್ಣುಮುಟ್ಟ ನೋಡಬೇಕೆಂದು ದರ್ಬಾರಕ್ಕೆ ಹೋಗುವ ಸಿದ್ಧತೆಯಲ್ಲಿ ತೊಡಗಿದರು. ಅಂದಿನ ದರ್ಬಾರದಲ್ಲಿ ವಿಲಕ್ಷಣ ದಟ್ಟಣೆಯಾಗಿತ್ತು. ಬಾದಶಹನು ಪೃಥ್ವೀಸಿಂಗನನ್ನು ತನ್ನ ಬಲಮಗ್ಗಲಲ್ಲಿ ಕುಳ್ಳಿರಿಸಿಕೊಂಡು, ಆತನೊಡನೆ ಬಹು ಪ್ರೇಮದಿಂದ ಮಾತನಾಡಿದನು. ಆಮೇಲೆ ಅಲಮಗೀರನು ದರ್ಬಾರದ ಜನರನ್ನು ಕುರಿತು—"ದರ್ಬಾರದ ಜನರೇ, ಮಾನಕರಿಗಳೇ, ಸರದಾರರೇ, ಮನಸಬದಾರರೇ, ಈ ಪೃಥ್ವೀಸಿಂಗನು ನಮ್ಮ ಜಸವಂತಸಿಂಗಮಹಾರಾಜರ ಪುತ್ರನು. ಇಂದಿನಿಂದ ಈತನು ನಮಗೆ ಕೇವಲ ಪುತ್ರನಂತೆ ಆದನು. ಈತನ ಹಿರಿಯರು ನಮ್ಮ ಬಾದಶಾಹಿತನಕ್ಕೆ ಹ್ಯಾಗೆ ಆಧಾರಸ್ತಂಭವಾಗಿರುವರೋ, ಹಾಗೆ ಈತನಾದರೂ ಇರುವನೆಂದು ನಾವು ತಿಳಿ

ಯುವೆವು." ಎಂದು ನುಡಿದು ಹತ್ತರ ಕುಳಿತಿದ್ದ ಮಾನಕರಿಗಳನ್ನು ಸ್ವಲ್ಪ ಕಣ್ಣು ಚಿವುಟಿ ನೋಡಿ ಪೃಥ್ವೀಸಿಂಗನ ಎರಡೂ ಹಸ್ತಗಳನ್ನು ಬಲು ಸಲಿಗೆಯಿಂದ ಹಿಡಿದು ಆತನನ್ನು ಕುರಿತು—ಕ್ಯಾಪೂತಂಜಿ, ನಿನ್ನ ತಂದೆಯಂತೆ ನೀನೂ ಒಳ್ಳೇ ಶೂರನಿರುತ್ತೀಯೆಂದು ನಾವು ನಿನ್ನ ಕೀರ್ತಿಯನ್ನು ಕೇಳರುತ್ತೇವೆ, ನಿಜವೋ ? ಹಾಗಾದರೆ ನೀನು ಏನು ಮಾಡಬಲ್ಲೆ ಹೇಳು ನೋಡೋಣ ?

ಆಲಮಗೀರನ ಈ ಮಾತುಗಳನ್ನು ಕೇಳಿ, ಅಚ್ಚರಜಪೂತರಕ್ತದ ರಣಶೂರ ಪೃಥ್ವೀಸಿಂಗನು ಬಹು ಸಮಾಧಾನದಿಂದ ಆತನನ್ನು ಕುರಿತು—ಗರೀಬೋಕೆ ಬೋಲಿ! ಖಾವಿಂದ, ಇಡಿಯ ದೇಶದತುಂಬೆಲ್ಲ ಅಧಿಕಾರವುಳ್ಳ ಆಲಮಗೀರಬಾದಶಹರ ಬರಿಯ ಕೃಪಾದೃಷ್ಟಿಯಿಂದ ಯಾವನೊಬ್ಬ ಮನುಷ್ಯನು ಸ್ಫುರಣಹೊಂದುತ್ತಿರಲು, ನನ್ನಂಥವನ ಎರಡೂ ಹಸ್ತಗಳನ್ನು ತಾವು ಹಿಡಿದು ಉತ್ತೇಜನಕರ ಭಾಷಣಮಾಡುತ್ತಿರುವಾಗ ನನ್ನ ದೇಹದಲ್ಲಿ ವೀರಶ್ರೀಯ ಸಂಚಾರವು ಎಷ್ಟುರಮಟ್ಟಿಗೆ ಆಗಿರುವದೆಂಬದನ್ನು ನಾನೇನು ಹೇಳಲಿ ? ಎಂದು ವೀರಶ್ರೀಯ ಉದ್ಗಾರವನ್ನು ಹೊರಡಿಸುತ್ತಿರುವಾಗ, ನಿಜವಾಗಿಯೇ ಅವನ ಬಾಹುಗಳು ಸ್ಫುರಣಹೊಂದಿ, ಅದರ ಅನುಭವವು ಔರಂಗಜೇಬನ ಹಸ್ತಗಳಿಗೆ ಆಗಿರಬಹುದಾಗಿ ತೋರಿತು; ಯಾಕಂದರೆ, ಪೃಥ್ವೀಸಿಂಗನ ಆ ಭಾಷಣವನ್ನು ಕೇಳಿದ ಕೂಡಲೆ ಬಾದಶಹನು ಕಪಟಪ್ರೇಮಯುಕ್ತನಾಗಿ ಕಂಪಿತಶಬ್ದಗಳಿಂದ— ವಾಹವಾ ! ವಾಹವಾ ! ನಿನ್ನ ಭಾಷಣಗಳಿಂದ ಪ್ರತಿ ಜಸವಂತಸಿಂಗನೇ ಪುನಃ ದರ್ಬಾರದಲ್ಲಿ ಬಂದನೆಂಬಂತೆ ನನಗೆ ಭಾಸವಾಗಿದೆ, ಎಂದು ನುಡಿದು, ಕೂಡಲೆ, ತನ್ನ ಹಿಂದೆ ನಿಂತುಕೊಂಡಿದ್ದ ಖುದಾದಾದಾನೆಂಬ ಸಿದ್ದೀಮನುಷ್ಯನಿಗೆ ಸನ್ನೆಮಾಡಿ, ಉಡುಗರೆಗಳನ್ನು ತರಲಪ್ಪಣೆಮಾಡಿದನು. ಖುದಾದಾದಾನು ಉಡುಗರೆಗಳನ್ನು ತಂದಕೂಡಲೆ, ಬಾದಶಹನು ಅವನ್ನು ಕೈಮುಟ್ಟಿ ಪೃಥ್ವೀಸಿಂಗನಿಗೆ ತೊಡಿಸಿ, ಕೂಡಲೆ ಅವಸರದಿಂದ ದರ್ಬಾರು ಮುಗಿಸಿ ಆ ತರುಣರಜಪೂತ ರಾಜಪುತ್ರನನ್ನು ಮನೆಗೆ ಕಳಿಸಿದನು. ಬಾದಶಹನು ಕೊಟ್ಟ ಪೋಷಾಕು ಧರಿಸಿ ಮನೆಗೆ ಹೋಗುವದರೊಳಗೆ, ತನ್ನ ಮೈಯನ್ನು ಪಂಜು ಹಚ್ಚಿ ಅಲ್ಲಲ್ಲಿ ಸುಡುವಂತೆ ಪೃಥ್ವೀಸಿಂಗನಿಗೆ ವ್ಯಥೆಯಾಗಹತ್ತಿತು. ಆತನು

ನೆಲದ ಮೇಲೆ ಬುಡುಬುಡು ಉರುಳಾಡಹತ್ತಿದನು. ವೈದ್ಯರನ್ನು ಕರಿಸುವ ದಕ್ಕೂ ಅವಕಾಶ ದೊರೆಯದೆ, ಆ ಶೂರರಾಜಪುತ್ರನ ಪ್ರಾಣೋತ್ಕ್ರಮಣ ವಾಯಿತು. ಹಾಹಾ ಅನ್ನುವದರೊಳಗಾಗಿ ಈ ದುಷ್ಟವಾರ್ತೆಯು ದಿಲ್ಲೀ ಪಟ್ಟಣದಲ್ಲೆಲ್ಲ ಹಬ್ಬಿತು. ಬಾದಶಹನಕಿವಿಗೆ ಈ ಸುದ್ದಿಯು ಮುಟ್ಟಲು, ಅತ್ಯಂತ ಪ್ರೇಮದ ತನ್ನ ಹೊಟ್ಟೆಯ ಮಗನು ಸತ್ತಂತೆ ಆತನು ಶೋಕ ಮಾಡಹತ್ತಿದನು. ದರ್ಬಾರದಲ್ಲಿ ಆದ ಆತನ ಬಹುಮಾನವನ್ನೂ, ಆ ಶೂರ ರಜಪೂತನು ತುಂಬಿದ ದರ್ಬಾರದಲ್ಲಿ ವ್ಯಕ್ತಪಡಿಸಿದ ಕ್ಷಾತ್ರತೇಜ ಸ್ಸನ್ನೂ ನೋಡಿ, ಆತನಿಗೆ ದುಷ್ಟರ ದೃಷ್ಟಿಯಾಯಿತೆಂದು ಬಾದಶಹನು ಅವರವರ ಮುಂದೆ ಆಡಿತೋರಿಸಿ, ವಿಲಕ್ಷಣ ಆಕ್ರೋಶ ಮಾಡತೊಡಗಿದನು. ಬಾದಶಹನ ಆ ಆಕ್ರೋಶದಲ್ಲಿ ಎಳ್ಳಷ್ಟಾದರೂ ಅರ್ಥವಿಲ್ಲೆಂದು ನೋಡುವ ಪ್ರತಿ ಒಬ್ಬನಿಗೆ ಗೊತ್ತಾಗುತ್ತಿರುವದು. ಈ ಕುನಸಿನ ಸ್ವಭಾವದ ಬಾದ ಶಹನು, ಜಸವಂತಸಿಂಗನ ಮೇಲಿನ ಸಿಟ್ಟನ್ನು ಇನ್ನೂ ಬಿಟ್ಟಿರುವದಿಲ್ಲಾದ್ದ ರಿಂದ, ಆದರ ಸೇಡು ತೀರಿಸಿಕೊಳ್ಳುವದಕ್ಕಾಗಿಯೇ, ಒಬ್ಬನೇ ಮಗ ನಾಗಿದ್ದ ಪೃಥ್ವೀಸಿಂಗನನ್ನು ಕೊಲ್ಲಿಸಿದನೆಂದು ಜನರು ಮಾತಾಡಹತ್ತಿರು ವರು. ಅವರ ಮಾತು ಸುಳ್ಳೆಂದು ಹೇಳುವಹಾಗಿಲ್ಲ. ಯಾಕಂದರೆ, ಈ ಪುತ್ರಶೋಕದಿಂದ ಜಸವಂತಸಿಂಗನು ಮರಣಹೊಂದುವನೆಂತಲೂ, ಆಮೇಲೆ ಆತನ ಹೆಂಡತಿಯಾದ ಚಂದ್ರಾವತಿಯೆಂಬ ಉದೇಪುರದ ರಾಜಕುಮಾರಿ ಯನ್ನು ತನ್ನ ಜನಾನಖಾನೆಯಲ್ಲಿ ಸೇರಿಸಿ, ಕೃತಕೃತ್ಯನಾಗಬೇಕೆಂತಲೂ ಆ ದುಷ್ಟ ಬಾದಶಹನು ಆಲೋಚಿಸಿರುವನು. ಮೋಸಗಾರಿಕೆಯಲ್ಲಿಯೂ, ತಂತ್ರದಲ್ಲಿಯೂ ಔರಂಗಜೇಬನನ್ನು ಸರಿಗಟ್ಟುವ ಬೇರೆ ಬಾದಶಹನು ಮೊಗಲರಲ್ಲಿ ಮತ್ತೊಬ್ಬನು ಆಗಲಿಲ್ಲ. ತಾನು ಹೀಗೆ ವಿಷಹಚ್ಚಿದ ಪೋಷಾ ಕನ್ನು ಕೈಮುಟ್ಟಹಾಕಿ, ಮೋಸದಿಂದ ಪೃಥ್ವೀಸಿಂಗನ ಪ್ರಾಣಹರಣಮಾಡಿ ದ್ದರೂ, ಅಲಮಗೀರನು ಆದರ ಸುಳವನ್ನು ಹೊರಗೆ ಯಾರಿಗೂ ತೋರ ಗೊಡುವದಿಲ್ಲ. ಮತ್ತು ಪ್ರತ್ಯಕ್ಷ ಜಸವಂತಸಿಂಗನಿಗೆ ದುಃಖಪ್ರದರ್ಶನದ ಪತ್ರವನ್ನು ಕೈಮುಟ್ಟ ಬರೆದು ನೀಚತನವನ್ನು ತೋರಿಸಲಿಕ್ಕೆ ಆತನು ಹಿಂದೆ ಮುಂದೆ ನೋಡಿರುವದಿಲ್ಲ. ಮಹಾರಾಜರೇ, ಆ ದುಃಖಪ್ರದರ್ಶನದ ಪತ್ರ ವನ್ನು ಇಂದೇ ಬಾದಶಹನು ಕಾಬೂಲಕ್ಕೆ ಜಸವಂತಸಿಂಗನ ಕಡೆಗೆ ಕಳಿಸಿ

ದ್ದಾನೆ. ಆದರಲ್ಲಿ ಆತನು—"ರಾಣಾಜೀ, ನಿಮ್ಮ ಮಗನಲ್ಲ, ನನ್ನ ಹಿರಿಯಮಗನು ಸತ್ತನೆಂದು ನಾನು ತಿಳಿದಿದ್ದೇನೆ." ಎಂದು ಬರೆದಿರುವನು.

ವಿಜಯಸಿಂಗನು ಇಲ್ಲಿಯವರೆಗೆ ಪತ್ರವನ್ನು ಓದಿ ಕೆಳಗಿಟ್ಟು, ಒಮ್ಮೆ ನಿಟ್ಟುಸುರುಬಿಟ್ಟು ತನ್ನೊಳಗೆ ಸಂತಾಪಗೊಂಡು ಹಲ್ಲುಗಳಿಂದ ಕೆಳದುಟಿಯನ್ನು ಕಚ್ಚಿದನು.

## ೩ನೆಯ ಪ್ರಕರಣ

# ದುಃಖಪ್ರದರ್ಶನ

ಮೊಗಲರ ಮೇಲೆಯೇ ವಿಜಯಸಿಂಹನ ಸಿಟ್ಟು ಬಹಳ. ಅದರಲ್ಲಿ ರಾಜ್ಯಪ್ರಾಪ್ತಿಗಾಗಿ ತಂದೆಯನ್ನು ಸೆರೆಯಲ್ಲಿಟ್ಟು, ಅಣ್ಣತಮ್ಮಂದಿರನ್ನು ಕೊಲ್ಲಿಸಿ, ಧರ್ಮದ ದುರಭಿಮಾನದಿಂದ ಹಿಂದೂಜನರನ್ನು ಪರಿಪರಿಯಾಗಿ ಪೀಡಿಸುತ್ತಿರುವ ಔರಂಗಜೇಬನಮೇಲಂತು ಆತನು ಬೆಂಕಿಯನ್ನು ಕಾರುತ್ತಿದ್ದನು. ಧರ್ಮಯುದ್ಧಕ್ಕೆ ಔರಂಗಜೇಬನು ಯೋಗ್ಯನಲ್ಲದ್ದರಿಂದ ಆತನೊಡನೆ ಯುದ್ಧಮಾಡುವ ಗೊಡವಿಗೆ ಹೋಗದೆ, ಸಾಧಿಸಿದರೆ ಆತನನ್ನು ನಿಲ್ಲಿಸಿ ಸುಡಬೇಕೆಂದು ಆ ವೃದ್ಧರಜಪೂತನು ರೊಚ್ಚಿನಿಂದ ಅನ್ನುತ್ತಿದ್ದನು. ರಜಪೂತವೀರರೆಲ್ಲ ಒಟ್ಟುಗೂಡಿ ಈ ದುಷ್ಟನನ್ನು ಈ ದೇಶದಿಂದ ಓಡಿಸಬೇಕೆಂದು ಉದೇಪುರದ ರಾಜಸಿಂಗನ ಮುಂದೆ ಆತನು ಎಷ್ಟೋ ಸಾರೆ ನುಡಿದಿದ್ದನು. ಔರಂಗಜೇಬನು ಸ್ವಾರ್ಥವನ್ನು ಸಾಧಿಸುವದಕ್ಕಾಗಿ ಯಾರನ್ನು ಹ್ಯಾಗೆ ಘಾತಿಸಿಯಾನು, ಯಾರನ್ನು ಯಾವ ಬಗೆಯಿಂದ ವಂಚಿಸಿಯಾನು, ಯಾರಮೇಲೆ ಯಾವ ಬಗೆಯಿಂದ ತಿರುಗಿಬಿದ್ದಾನು ಎಂಬದರ ನಿಯಮವಿಲ್ಲದ್ದರಿಂದ, ಆತನನ್ನು ಯಾರೂ ನಂಬಲಾಗದೆಂದು ಆ

ವೃದ್ಧರಜಪೂತನು ಬರಿಯ ರಾಜಸಿಂಗನ ಮುಂದೆಯೇ ಅಲ್ಲ, ತನಗೆ ಭೆಟ್ಟಿಯಾದ ಪ್ರತಿ ಒಬ್ಬ ರಜಪೂತವೀರನ ಮುಂದೆ ಅನ್ನುತ್ತಿದ್ದನು. ಈ ಮಾತು ಬಾದಶಹನ ಕಿವಿಗೆ ಮುಟ್ಟಿದರೆ ಅನರ್ಥಕ್ಕೆ ಕಾರಣವಾದೀತೆಂದು ಧೂರ್ತರಾದ ಕೆಲವು ರಜಪೂತರು ಹೇಳಿದರೆ, ವಿಜಯಸಿಂಗನು ಅದನ್ನು ಲೆಕ್ಕಿಸುವ ಮೊತ್ತಟ್ಟಿಗೆ ಉಳಿದು, ತಿರುಗಿ ಹೇಳಿದವರನ್ನೇ ಧಿಕ್ಕರಿಸುತ್ತಿದ್ದನು. ಇಂಥ ಸ್ಥಿತಿಯಲ್ಲಿ, ಔರಂಗಜೇಬನು ಜಸವಂತಸಿಂಗನ ಮಗನನ್ನು ಮೋಸದಿಂದ ಕೊಲ್ಲಿಸಿ, ಮೇಲೆ ದೊಡ್ಡಿಸ್ತನದ ಸೋಗಿನಿಂದ ಜಸವಂತಸಿಂಗನಿಗೆ ಪತ್ರ ಹಾಕಿದ್ದನ್ನು ಕೇಳಿ ವಿಜಯಸಿಂಗನು ಸಂತಾಪಗೊಂಡದ್ದು ಆಶ್ಚರ್ಯವೇನು? ಜಸವಂತಸಿಂಗನ ವಿಷಯವಾಗಿ ವಿಜಯಸಿಂಹನ ಮನಸ್ಸಿನಲ್ಲಿ ಅಣುಮಾತ್ರವಾದರೂ ಆದರವಿದ್ದಿಲ್ಲ. ಮೊಗಲರ ಮುಂದೆ ಬಾಲಗುಂಡಾಡಿಸಿ ಅವರ ಮನಸ್ಸು ಒಲಿಸಿಕೊಂಡು, ದೊಡ್ಡಿಸ್ತನಗಳಿಸಿದ ಜಸವಂತಸಿಂಗನ ಸಲುವಾಗಿ, ವಿಜಯಸಿಂಗನಂಥ ಅಚ್ಚರಜಪೂತನ ಹೃದಯದಲ್ಲಿ ಪ್ರೇಮವಾದರೂ ಹ್ಯಾಗೆ ಹುಟ್ಟಬೇಕು ? ಇಂಥ ಮುಖಸ್ತುತಿಯ ಹೇಸಿಜನರ ಪರಿಣಾಮವು ಹೀಗಾಗುವದರಿಂದಲೇ ಅವರಿಗೆ ಎಚ್ಚರಹುಟ್ಟಿದರೆ ಹುಟ್ಟಬೇಕೆಂಬ ವಿಚಾರವು ಆ ವೃದ್ಧ ರಜಪೂತನ ಮನಸ್ಸಿನಲ್ಲಿ ಹುಟ್ಟತಕ್ಕದ್ದು; ಆದರೆ ಭಯಂಕರ ವಿಶ್ವಾಸಘಾತದಿಂದ ಜಸವಂತಸಿಂಗನ ಮಗನ ನಾಶವಾದದ್ದರಿಂದ, ವಿಜಯಸಿಂಗನ ಮನಸ್ಸಿನಲ್ಲಿ, ಔರಂಗಜೇಬನ ವಿಷಯವಾಗಿ ಮಿತಿಮೀರಿದ ಸಂತಾಪ ಜಸವಂತಸಿಂಗನವಿಷಯವಾಗಿ ದಯವೂ ಉತ್ಪನ್ನವಾದವು.

ವಿಜಯಸಿಂಗನು ಸಂತಾಪದಿಂದ ಹಲ್ಲು ಕಡಿಯುತ್ತ, ಮೇಲಕ್ಕೆ ಮೋರೆಯೆತ್ತಿ ಶೂನ್ಯದೃಷ್ಟಿಯಿಂದ ಛತ್ತನ್ನು ನೋಡುತ್ತಿರಲು, ರೂಪಮತಿಯು ಅಲ್ಲಿಗೆ ಬಂದು "ಮತ್ತೇನಾಯಿತೆ"ಂದು ತನ್ನ ತಂದೆಯ ಕಡೆಗೂ ಪತ್ರದ ಕಡೆಗೂ, ನೋಡುತ್ತ ನಿಂತುಕೊಂಡಳು; ಆದರೆ ಸಂತಾಪದ ಭರದಲ್ಲಿ ವಿಜಯಸಿಂಹನು ಮಗಳು ಬಂದದ್ದನ್ನು ನೋಡಲೇ ಇಲ್ಲ. ಒಟ್ಟುಗೂಡಿ ದುಷ್ಟ ಔರಂಗಜೇಬನ ಶಾಸನ ಮಾಡಲಾರದ ತನ್ನ ರಜಪೂತರ ಹೇಡಿತನವನ್ನು ನೋಡುತ್ತ ಜೀವಿಸುವದಕ್ಕಿಂತ, ತಟ್ಟನೆ ತನಗೆ ಮರಣವು ಬಂದರೆ ನೆಟ್ಟಗಾದೀತೆಂದು ಆತನು ಯೋಚಿಸುತ್ತಿದ್ದನು. ತನ್ನ ಮನಸ್ಸಿಗೆ

ಬಾರದ ಕೆಲಸವನ್ನು ನಿಲ್ಲಿಸುವದು ತನ್ನಿಂದಾಗದಿದ್ದರೆ, ತಾನು ಅದನ್ನು ಕಣ್ಣಿನಿಂದ ನೋಡದಿರುವದು ಉತ್ತಮ ಮಾರ್ಗವೆಂದು ಅವನು ಭಾವಿಸಿದನು. ಈ ಪ್ರಕಾರದ ನಿರಾಶೆಯ ಭಾವನೆಯಿಂದ ಆತನು ನೊಂದು ನಿಟ್ಟುಸುರುಬಿಟ್ಟು ಪತ್ರದ ಕಡೆಗೆ ದೃಷ್ಟಿಹೊರಳಿಸಲು, ಬಳಿಯಲ್ಲಿ ಬಂದು ನಿಂತಿದ್ದ ಮಗಳ ಸುಂದರ ಮುಖಕಮಲವು ಆತನ ಕಣ್ಣಿಗೆ ಬಿದ್ದಿತು. ರೂಪಮತಿಯಮೇಲಿದ್ದ ಆತನ ಅನಿವಾರ ಪ್ರೇಮುವನ್ನು ಮೇಲೆ ಹೇಳಿದೆಯಷ್ಟೆ ? ಮಗಳನ್ನು ನೋಡಿದ ಕೂಡಲೆ ಆತನ ಚಿತ್ತವು ಸ್ವಲ್ಪ ಶಾಂತವಾಗಿ, ಆತನ ಮುಖಮುದ್ರೆಯಲ್ಲಿಯ ಖಿನ್ನತೆಯ ಸ್ಥಳದಲ್ಲಿ ಮುಗುಳುನಗೆಯು ತಲೆದೋರಿತು. ಮಗಳ ಮನಸ್ಸು ನೋಯಿಸುವದೆಂದರೆ, ಆತನ ಜೀವದಸುತ್ತು ಬಂದಂತಾಗುತ್ತಿತ್ತು. ತನ್ನ ಬಾಡಿದ ಮುಖಮುದ್ರೆಯನ್ನು ನೋಡಿ ಆಕೆಯು ಎಲ್ಲಿ ನೊಂದುಕೊಂಡಾಳೋ, ಎಂದು ವಿಜಯಸಿಂಹನು ಮಗಳನ್ನು ಕಂಡ ಕೂಡಲೆ ತನ್ನ ಮನಸ್ಸಿನ ತಾಪವನ್ನು ನುಂಗಿಕೊಂಡು, ನಗೆಮೊಗದಿಂದ ಆಕೆಯೊಡನೆ ಮಾತಾಡುವ ವಿಷಯದಲ್ಲಿ ಒಳಿತಾಗಿ ಎಚ್ಚರಪಡುತ್ತಿದ್ದನು. ಮಗಳನ್ನು ನೋಡಿದ ಕೂಡಲೆ ಆತನ ಅರ್ಧಕ್ಕಿಂತ ಹೆಚ್ಚು ಖಿನ್ನತೆಯು ತಾನಾಗಿಯೇ ದೂರವಾಗುತ್ತಿತ್ತೆಂದು ಹೇಳಬಹುದು; ಉಳಿದ ಅಲ್ಪ ಸ್ವಲ್ಪ ಖಿನ್ನತೆಯನ್ನು ನುಂಗಿಕೊಳ್ಳಲಿಕ್ಕೆ ಆತನು ಪರಮಾವಧಿಯಾಗಿ ಯತ್ನಿಸುತ್ತಿದ್ದನು. ಅಂಥ ಆತನು ನಗೆಮೊಗದಿಂದ ಮಗಳನ್ನು ಕುರಿತು—ತಂಗೀ ರೂಪೇ, ನೀನು ಈಗ ಇಲ್ಲಿಗೆ ಬಂದೀಯೆಂದು ನಾನು ತಿಳಿದಿದ್ದಿಲ್ಲ. ನಿನ್ನೆ ರಾತ್ರಿ ನಿದ್ದೆಗೆಟ್ಟಿದ್ದ ನೀನು, ಇಷ್ಟು ಬೇಗನೆ ಯಾಕೆ ಬಂದೆ ? ಈದಿನ ಸಂಜೆಯವರೆಗೆ ಸ್ವಸ್ಥ ಮಲಗಿಕೊಂಡಿದ್ದರೆ, ನಿನಗೆ ಸಮಾಧಾನವಾಗುತ್ತಿತ್ತು, ನನಗೂ ಸಮಾಧಾನವಾಗುತ್ತಿತ್ತು, ಎಂದು ನುಡಿಯುತ್ತಿರಲು, ರೂಪಮತಿಯು ಮುಂದೆ ಮಾತಾಡಗೊಡದೆ ನಡುವೇ ಬಾಯಿಹಾಕಿ ತಂದೆಯನ್ನು ಕುರಿತು—ಬಾಪ್ಪಾಜೀ, ನಿನ್ನಿನ ದಿಲ್ಲಿಯ ಪತ್ರದಲ್ಲಿ ಬರೆದಂತೆ, ಈ ದಿನ ದಿಲ್ಲಿಯಿಂದ ಮತ್ತೆ ಪತ್ರವು ಬಂದಂತೆ ಕಾಣುತ್ತದೆ. ಆ ಪತ್ರದಲ್ಲಿ ಏನು ಬರೆದಿರುತ್ತದೆ ? ಅಪ್ಪಾ, ನನಗೆ ಮೊದಲು ಅದನ್ನು ಹೇಳು, ಎಂದು ಸಥಿಯಿಂದ ತಂದೆಯ ಹೆಗಲ ಮೇಲೆ ಹಸ್ತವನ್ನಿಟ್ಟು ನಿಂತುಕೊಂಡು ಕೇಳಿದಳು.

ಮಗಳ ಈ ಮಾತನ್ನು ಕೇಳಿ ವಿಜಯಸಿಂಗನು ಪತ್ರನನ್ನು ಒತ್ತಟ್ಟಿಗೆ ಸರಿಸಿ ಮಗಳನ್ನು ಕುರಿತು—ಪತ್ರದ ಸಂಗತಿಯನ್ನು ತಿಳಕೊಂಡು ನೀನು ಮಾಡುವದೇನು ? ಇಲ್ಲದ ನಿನ್ನ ಉಸಾಬರಿಯು; ಆ ಪತ್ರದಲ್ಲಿ ಹೇಳಿ ಕೊಳ್ಳುವಂಥ ಮಹತ್ವದಸಂಗತಿಯೇನೂ ಇರುವದಿಲ್ಲ; ಅದರಲ್ಲಿ ಇರುವ ದಾದರೂ ಏನು ?

ರೂಪವತಿ—ಹೌದು. ಇದರಲ್ಲಿ ಇರುವದಾದರೂ ಏನು ? ಇಷ್ಟು ಉದ್ದ ಪತ್ರವು ಸುಮ್ಮನೆ ಬರೆದಿರುತ್ತದೆ ! ಅಪ್ಪಾ, ಸುಮ್ಮನೆ ಯಾರು ಬರೆ ದಾರು ಇಷ್ಟು ಉದ್ದಪತ್ರವನ್ನು ? ನಿನ್ನೆ ಸಂಕ್ಷೇಪವಾಗಿ ಬರೆದಿದ್ದ ಸಂಗತಿ ಯನ್ನು ಈ ಪತ್ರದಲ್ಲಿ ವಕೀಲನು ವಿಸ್ತರಿಸಿ ಬರೆದಿರಬಹುದು. ಅದನ್ನು ನಾನು ಓದಿನೋಡಿಯೇ ತೀರುವೆನು. ದರ್ಬಾರದ ಎಲ್ಲ ವೃತ್ತಾಂತವನ್ನು ನನ್ನ ಮುಂದೆ ಹೇಳುವ ನೀವು, ಈದಿನ ಈ ಪತ್ರದ ಸಂಗತಿಯನ್ನು ಬಚ್ಚಿ ಇಡುವದೇಕೆ ?

ವಿಜಯಸಿಂಹ—ಬಚ್ಚಿಡುವದಿಲ್ಲವೇ ರೂಪೇ, ಆದರೆ ಇಂಥ ವಿಶ್ವಾಸ ಘಾತದ, ಹಾಗೂ ಕ್ರೂರತನದ ರಾಜಕರಣದ ಸಂಗತಿಗಳನ್ನು ಹೆಂಗಸರ ಮುಂದೆ ಹೇಳುವದರಲ್ಲಿ ಏನೂ ಅರ್ಥವಿಲ್ಲ.

ಈ ಮಾತುಗಳನ್ನು ಕೇಳಿದಕೂಡಲೆ ರೂಪವತಿಯ ಮೋರೆಯು ಬಾಡಿತು. ಅದನ್ನು ನೋಡಿ ವಿಜಯಸಿಂಹನು ಸಣ್ಣಕೂಸನ್ನು ತಬ್ಬಿಕೊಳ್ಳು ವಂತೆ ರೂಪವತಿಯನ್ನು ತಬ್ಬಿಕೊಂಡು—ಎಲಎಲಾ ! ನಿನಗೆ ಬಹಳ ಅಸ ಮಾಧಾನವಾಯಿತೆಂಬಂತೆ ಕಾಣುತ್ತದೆ ! ನೋಡು ಪತ್ರವನ್ನು, ನನ್ನದೇನು ಹೋಗುತ್ತದೆ ? ಮೊದಲಿನಿಂದ ಕಡೆತನಕ ಒಂದು ಅಕ್ಷರ ಬಿಡದಂತೆ ಅದನ್ನು ಓದು. ಅಂದರೆ ನೀಚನಾದ ಆ ಮೊಗಲನ ಬುದ್ಧಿಯು ಹ್ಯಾಗಿ ರುತ್ತದೆ, ಅವನು ಎಷ್ಟು ಕೃತಘ್ನನಿರುತ್ತಾನೆ, ತನ್ನವರೆನ್ನುವವರನ್ನು ಹೊತ್ತು ಬಂದರೆ ಅವನು ಹ್ಯಾಗೆ ಮುಣುಗಿಸುತ್ತಾನೆ, ಎಂಬುದು ನಿನಗೆ ಗೊತ್ತಾಗುವದು. ಛೀ ಛೀ ! ಇಂಥ ನೀಚರಾದ ಸ್ವಾರ್ಥಸಾಧಕರು ಇಡಿಯ ಪೃಥ್ವಿಯಲ್ಲಿ ಯಾರಾದರೂ ಇದ್ದಾರೆಂದು ನನಗೆ ತೋರುವದಿಲ್ಲ; ಆದರೆ ಏನು ಮಾಡಲಿ ? ರಜಪೂತವೀರರೆಲ್ಲ ಕೈಮುಚ್ಚಿ ಕುಳಿತುಕೊಂಡು, ಆ ನೀಚನಾದ ಮೊಗಲನ ಸೇವೆಯೇ ಪರಮ ಪುರುಷಾರ್ಥವೆಂದು ತಿಳಿದರೆ,

ನಾನು ಒಬ್ಬನೇ ಏನು ಮಾಡಲಿ ? ಅಷ್ಟು ಏಕನಿಷ್ಠೆಯಿಂದ ಸೇವೆಮಾಡಿದರೂ ದುಷ್ಟ ಔರಂಗಜೇಬನ ಹೃದಯವು ಕರಗುವದೇನು ? ಇಲ್ಲ, ಅವನ ವಜ್ರಹೃದಯವು ಸರ್ವಥಾ ಕರಗುವದಿಲ್ಲ. ನೋಡು, ತಂಗೀ, ಪತ್ರವನ್ನು ನೋಡು; ಅಂದರೆ ನೀನಾದರೂ ನಿನ್ನ ಮಕ್ಕಳನ್ನು ಮೊಗಲರ ಸೇವೆಮಾಡಗೊಡಲಿಕ್ಕಿಲ್ಲ, ಎಂದು ನುಡಿದು, ಆ ಪತ್ರವನ್ನು ಮಗಳ ಮುಂದೆ ಒಗೆದನು. ರೂಪಮತಿಯು ಅದನ್ನು ತಕ್ಕೊಂಡು ಮೊದಲಿನಿಂದ ಕಡೆತನಕ ಪುನಃ ಪೂರ್ವಕವಾಗಿ ಓದಿದಳು. ಓದುತ್ತೋದುತ್ತ ಆಕೆಯ ಸರ್ವಾಂಗವು ತಪ್ತವಾಯಿತು. ಆಕೆಯ ಕಣ್ಣುಗಳು ನೀರಿನಿಂದ ತುಂಬಿದವು. ಆಕೆಯು ನಡುನಡುವೆ ಔರಂಗಜೇಬನ ಮೇಲಿನ ಸಿಟ್ಟಿನಿಂದ ಅವಡುಗಚ್ಚುಹತ್ತಿದಳು. ಇತ್ತ ವಿಜಯಸಿಂಹನು ಮಗಳನ್ನು ಸೂಕ್ಷ್ಮ ದೃಷ್ಟಿಯಿಂದ ನೋಡುತ್ತಲಿದ್ದನು; ಮತ್ತು ಆಕೆಯ ಮನಸ್ಸಿನಮೇಲೆ ಆಗುವ ಪರಿಣಾಮಗಳ ಪ್ರತಿಬಿಂಬವು ಆಕೆಯ ಮುಖಮುದ್ರೆಯಲ್ಲಿ ವ್ಯಕ್ತವಾಗುವದನ್ನು ನೋಡಿ ಆತನು ಬಹು ಸಮಾಧಾನಪಡುತ್ತಲಿದ್ದನು. ರೂಪಮತಿಯು ಪತ್ರವನ್ನು ಓದಿ ಅದನ್ನು ತಂದೆಯ ಮುಂದೆ ಇಟ್ಟು ಕಣ್ಣು ಒರಿಸಿಕೊಳ್ಳುತ್ತ ಆತನನ್ನು ಕುರಿತು–ಬಾಪ್ಪಾಜೀ, ಈ ಸುದ್ದಿಯು ಕಾಬೂಲಕ್ಕೆ ಹೋದರೆ, ನನ್ನ ಅಬಚಿಯಾದ ಚಂದ್ರಾವತಿಯ ಗತಿಯು ಏನಾದೀತು ? ಆ ವೀರಮಾತೆಯು ಔರಂಗಜೇಬನ ಸೇವೆಯನ್ನು ಅಂಗೀಕರಿಸಬಾರದೆಂದು ಮೊದಲೇ ಗಂಡನಿಗೆ ಹೇಳಿದಳು. ಜಸವಂತಸಿಂಗನು ಒಮ್ಮೆ ಔರಂಗಜೇಬನಿಂದ ಸೋತು ತಿರುಗಿ ಬಂದಾಗ, ಆ ವೀರಪುತ್ರಿಯು ಜೋಧಪುರದ ಕೋಟೆಯ ಬಾಗಿಲುಗಳನ್ನು ಹಾಕಿಸಿ, ರಣಭೂಮಿಯಿಂದ ಓಡಿ ಬಂದವನು ನನ್ನ ಗಂಡನೇ ಅಲ್ಲೆಂದು ಹೇಳಿ, ಶೂರ ರಜಪೂತರಿಗೆ ಸಲ್ಲದ ಈ ಕೆಲಸ ಮಾಡಿದ್ದಕ್ಕಾಗಿ ಗಂಡನನ್ನು ಸ್ಪಷ್ಟವಾಗಿ ನಿಷೇಧಿಸಿದಳು. ತಿರುಗಿ ಜಸವಂತಸಿಂಗನು ಔರಂಗಜೇಬನ ಕ್ಷಮೆಬೇಡಿ ಆತನ ಸೇವೆಯನ್ನು ಅಂಗೀಕರಿಸುವಾಗಲೂ, ರಜಪೂತಕುಲಾಭಿಮಾನಿಯಾದ ಚಂದ್ರಾವತಿಯು ಗಂಡನನ್ನು ಎಚ್ಚರಗೊಳಿಸಲು ಯತ್ನಿಸಿದಳು; ಆದರೆ ಕಡೆಗೆ ಅದೆಲ್ಲ ವ್ಯರ್ಥವಾಗಿ, ಗೆದ್ದ ಎತ್ತಿನ ಬಾಲ ಹಿಡಿಯುವ ಸ್ವಭಾವದ ಆ ಜಸವಂತಸಿಂಗನು ಬಾಲಗುಂಡಾಡಿಸುವ ವ್ರತವನ್ನು ಕೈಕೊಂಡು, ಕಡೆಗೆ ನಮ್ಮ ಅಬಚಿಗೆ ಉಣ್ಣಲಾಗದ ಈ ದುಃಖದ ಎಡೆ

ಯನ್ನು ಬಡಿಸಿದನು! ಇಂಥ ತೇಜೋಹೀನ ಪತಿಯಲ್ಲಿ ಆಕೆಯ ನಿಷ್ಠೆಯೆಷ್ಟು! ಆ ಪತಿವ್ರತೆಯು ಒಂದು ಕ್ಷಣವಾದರೂ ಪತಿಯನ್ನು ಅಗಲಿ ಇರುತ್ತಿದ್ದಿಲ್ಲ; ಆದರೆ ಮಾಡುವದೇನು? ಆಕೆಯು ತನಗೆ ತಕ್ಕವನಲ್ಲದ ಗಂಡನ ಕೈಹಿಡಿದು ಕೆಟ್ಟಳು. ಈಗಾದರೂ ಜಸವಂತಸಿಂಗನು ಜಾಗರೂಕನಾದರೆ ನೆಟ್ಟಗೆ. ಇಲ್ಲದಿದ್ದರೆ ಆಕೆಯ ಬವಣೆಯನ್ನು ದೇವರ ಮುಂದೆಯೇ ಹೇಳಬೇಕು? ಇನ್ನು ಮೇಲೆ ಆಕೆಯು ಭೂಮಿಯಲ್ಲಿ ಜೀವಿಸಲಾರಳು. ಏನಾದರೂ ಜೀವಕ್ಕೆ ಅಪಾಯಮಾಡಿಕೊಳ್ಳದೆ ಬಿಡುವದಿಲ್ಲ. ಬಾಪ್ಪಾಜಿ, ಔರಂಗಜೇಬನ ಮನಸ್ಸಿನೊಳಗಿನ ದುಷ್ಟ ವಿಚಾರಗಳು ನಿಮಗೆ ಗೊತ್ತೇ ಇರುವವು. ಆ ನೀಚನು ಉದೇಪುರದ ರಾಜಪುತ್ರಿಯಾದ ಚಂದ್ರಾವತಿಯನ್ನು ಹ್ಯಾಗಾದರೂ ಮಾಡಿ ತನ್ನ ಜನಾನಖಾನೆಯಲ್ಲಿ ಸೇರಿಸಿಕೊಳ್ಳಬೇಕೆಂದು ಹೊಂಚು ಹಾಕಿರುವನು. ತನ್ನ ತಂದೆಯಾದ ಶಹಾಜಹಾನನು ತನ್ನ ಸಲುವಾಗಿ ಚಂದ್ರಾವತಿಯನ್ನು ಕೇಳಲು, ಆಕೆಯ ತಂದೆಯು ಅದನ್ನು ಧಿಕ್ಕರಿಸಿ, ದೊಡ್ಡ ಮನೆತನಕ್ಕೆ ಮಗಳನ್ನು ಕೊಡುವದರಿಂದ ತನಗೆ ಅನುಕೂಲವಾದೀತೆಂದು ಚಂದ್ರಾವತಿಯನ್ನು ಜಸವಂತಸಿಂಗನಿಗೆ ಕೊಟ್ಟನು. ಈ ಅಪಮಾನವು ಔರಂಗಜೇಬನಿಗೆ ಸಹನವಾಗದೆ, ಹ್ಯಾಗಾದರೂ ಒಬ್ಬ ಉದೇಪುರದ ರಾಜಕನ್ಯೆಯನ್ನು ಮದುವೆಯಾಗಬೇಕೆಂದು ಹೆಣಗಿ, ಉದೇಪುರದ ಮನೆತನಕ್ಕೆ ಸಂಬಂಧಿಸದೆ ಇದ್ದ ಒಬ್ಬ ರಜಪೂತ ಸುಂದರಿಯನ್ನು ಮದುವೆಯಾಗಿ, ಆಕೆಯನ್ನೇ ಉದೇಪುರದ ಬೇಗಮಳೆಂದು ಕರೆದುಕೊಂಡು ಸಮಾಧಾನಪಟ್ಟನು. ಈ ದುಷ್ಟನು, ಏನಾದರೂ ಉಪಾಯಮಾಡಿ ಮಹಾ ಪತಿವ್ರತೆಯಾದ ಚಂದ್ರಾವತಿಯ ಮಾನವನ್ನು ಹಾನಿಗೊಳಿಸದೆ ಬಿಡನು! ಈ ದುಷ್ಟ-ಬುದ್ಧಿಯಿಂದಲೇ ಆಕೆಯ ಇದ್ದ ಒಬ್ಬ ಮಗನನ್ನು ಬಾದಶಹನು ಈಗ ಕೊಲ್ಲಿಸಿರುವನು. ಇಂಥ ಅಧಮನಾದ ಆಲಮಗೀರನ ಶಾಸನವನ್ನು ಅಪ್ಪಾ, ಯಾರೂ ಮಾಡುವಹಾಗಿಲ್ಲವೆ? ರಜಪೂತವೀರರೆಲ್ಲರೂ ಬಳೆಯಿಟ್ಟರೆ? ರಜಪೂತರೆಲ್ಲರೂ ಸತ್ತರೆ! ಅಪ್ಪಾ ಸತ್ತುಹೋದರೇನು?

ರೂಪವತಿಯು ಬಹಳ ಸಂತಾಪಗೊಂಡಳು. ತನ್ನ ಅಬಚಿಯ ಮೇಲೆ ಆಕೆಯ ಭಕ್ತಿಯು ವಿಶೇಷ. ಚಂದ್ರಾವತಿಯನ್ನು ಆಕೆಯು—ಅಹಲ್ಯಾ, ದ್ರೌಪದೀ, ಸೀತಾ, ತಾರಾ, ಮಂಡೋದರೀ ಎಂಬ ಪಂಚಕನ್ಯೆಯರಲ್ಲಿ

ಎಣಿಸುತ್ತಿದ್ದಳು. ಯುದ್ಧಭೂಮಿಯಿಂದ ಓಡಿಬಂದ ಪ್ರತ್ಯಕ್ಷ ಪತಿಯನ್ನು ನೈತಿಕಧೈರ್ಯದಿಂದ ಕೋಟೆಯ ಹೊರಗೆ ನಿಲ್ಲಿಸಿದಂದಿನಿಂದಂತು, ರೂಪಮತಿಗೆ ಚಂದ್ರಾವತಿಯು ಪೂಜ್ಯದೇವತೆಯಂತೆ ಆಗಿದ್ದಳು! ಆಕೆಯ ಮಾತು ಹೊರಟಾಗೆಲ್ಲ ರೂಪಮತಿಯ ಅಂತಃಕರಣವು ಉಕ್ಕಿಬರುತ್ತಿತ್ತು. ತಾನಾದರೂ, ಆಕೆಯನ್ನು ಅನುಕರಿಸಿ, ರಜಪೂತರ ಒಗರನ್ನೂ ಅವರ ಕ್ಷಾತ್ರತೇಜಸ್ಸಿನ ಮಹಿಮೆಯನ್ನೂ ಕಾಯ್ದುಕೊಳ್ಳಬೇಕೆಂದು ನಿಶ್ಚಯಿಸಿದ್ದಳು; ತನ್ನ ಪತಿಯು ಶೌರ್ಯ–ಪರಾಕ್ರಮಗಳನ್ನು ತೋರಿಸುವಾಗ ತಾನು ಸಹಾಯ ಮಾಡಬೇಕೆಂದು ಗೊತ್ತುಮಾಡಿಕೊಂಡಿದ್ದಳು; ತನ್ನ ಹೊಟ್ಟೆಯಿಂದ ಮಕ್ಕಳಾದರೆ ಅವರನ್ನು ಸತ್ವಶೀಲರನ್ನಾಗಿ ಮಾಡಬೇಕೆಂದು ಮನಸ್ಸಿನಲ್ಲಿ ಗಂಟುಹೊಡಕೊಂಡಿದ್ದಳು. ಅಂದಬಳಿಕ ತನಗೆ ಪೂಜ್ಯಗುರುವಿನಂತೆ ಇದ್ದ ಚಂದ್ರಾವತಿಯು ದುರ್ಧರವಾದ ವಿಪತ್ತಿಗೆ ಗುರಿಯಾದದ್ದರಿಂದ ರೂಪಮತಿಗೆ ವ್ಯಸನವಾದದ್ದೇನಾಶ್ಚರ್ಯವು ? ರೂಪಮತಿಯ ಈ ಸಂತಾಪವನ್ನೂ, ವ್ಯಸನವನ್ನೂ ನೋಡಿ ವಿಜಯಸಿಂಹನಿಗೆ ಒಂದು ಬಗೆಯಿಂದ ನಿಜವಾಗಿಯೇ ಸಮಾಧಾನವಾಯಿತು. ಆ ಸಮಾಧಾನದ ಭರದಲ್ಲಿ ಆತನು ಮಗಳ ಮುಖವನ್ನು ಮುಗುಳುನಗೆಯಿಂದ ಸುಮ್ಮನೆ ನೋಡುತ್ತ ಕುಳಿತುಕೊಂಡಿದ್ದನು. ಚಂದ್ರಾವತಿಯ ವೃತ್ತಾಂತವೆಲ್ಲ ಆತನಿಗೆ ಗೊತ್ತಿದ್ದಿಲ್ಲವೆಂತಲ್ಲ. ಆಕೆಯ ಸತೀತ್ವದ ವಿಷಯವಾಗಿ ಆತನು ಆದರಬುದ್ಧಿಯುಳ್ಳವನಾಗಿದ್ದನು. ಜಸವಂತಸಿಂಗನೊಡನೆ ಆಕೆಯ ಲಗ್ನವಾದದ್ದು ಆತನ ಮನಸ್ಸಿಗೆ ಎಷ್ಟು ಮಾತ್ರವೂ ಬಂದಿದ್ದಿಲ್ಲ. ಜೋಧಪುರದ ಮನೆತನವು ಮುಸಲ್ಮಾನರಿಗೆ ಹೆಣ್ಣು ಕೊಟ್ಟು ಕುಲಗೆಟ್ಟ ಹಾಗೆ ಆದದ್ದರಿಂದ, ಆ ಮನೆತನಕ್ಕೆ ಚಂದ್ರಾವತಿಯನ್ನು ಕೊಡುವದರಿಂದ, ಪವಿತ್ರವಾಗಿದ್ದ ಉದೇಪುರದ ಮನೆತನವು ಅಪ್ರತ್ಯಕ್ಷವಾಗಿ ಮುಸಲ್ಮಾನರೊಡನೆ ಸಂಬಂಧ ಮಾಡಿದ ಹಾಗೆ ಆಗುತ್ತದೆಂದು ವಿಜಯಸಿಂಹನು ತಿಳಿದಿದ್ದನು. ಅಷ್ಟು ಸಂಬಂಧವಾಗುವದೂ ಆ ವೃದ್ಧರಜಪೂತವೀರನ ಮನಸ್ಸಿಗೆ ಬರಲಿಲ್ಲ. ತನ್ನ ಹೆಂಡತಿಯು, ಅಂದರೆ ರೂಪಮತಿಯ ತಾಯಿಯು ಉದೇಪುರದ ಅರಸುಮನೆತನದವಳೇ ಆದದ್ದರಿಂದ, ಈಗ ಚಂದ್ರಾವತಿಯನ್ನು ಜಸವಂತಸಿಂಗನಿಗೆ ಕೊಟ್ಟರೆ, ತನಗೂ ಮುಸಲ್ಮಾನರ ಅಪ್ರತ್ಯಕ್ಷಸಂಬಂಧವಾಗುವ

ದೆಂದು, ಆತನು ಜೋಧಪುರದ ಬೀಗತನಕ್ಕೆ ಹೇಸಿದನು; ಆದರೆ ವಿಜಯಸಿಂಗನು ವಯಸ್ಸಿನಿಂದ ಎಷ್ಟು ಹಿರಿಯನಿದ್ದರೂ, ಆತನ ವಿಷಯವಾಗಿ ಉಳಿದ ರಜಪೂತ ಮನೆತನಗಳ ಮುಖ್ಯ ಪುರುಷರ ಮನಸ್ಸಿನಲ್ಲಿ ಎಷ್ಟು ಪೂಜ್ಯಬುದ್ಧಿಯಿದ್ದರೂ ಆತನು ಮರ್ಯಾದೆಯಿಂದ ಸಣ್ಣವನಾಗಿದ್ದನು. ಆತನು ಉದೇಪುರದ ಮಾಂಡಲಿಕರಲ್ಲಿ ಒಬ್ಬನು. ಅಂದಬಳಿಕ, ಆತನ ಈ ಮನೋದಯವು ತಪ್ಪದೆ ಹ್ಯಾಗೆ ಪೂರ್ಣವಾಗಬೇಕು? ಆಗಲಿಲ್ಲ. ಜಸವಂತಸಿಂಗನ ಶೌರ್ಯವೂ, ದೊಡ್ಡಸ್ತಿಕೆಯೂ ತನಗೆ ಹಿತಕರವಾದಾವೆಂಬ ಆಶೆಯಿಂದ ಚಂದ್ರಾವತಿಯ ತಂದೆಯು ಮಗಳನ್ನು ಜಸವಂತಸಿಂಗನಿಗೆ ಕೊಟ್ಟನೆಂದು ಹಿಂದೆ ಹೇಳಿದೆ. ಈ ಸಂಗತಿಯು ವಿಜಯಸಿಂಗನ ಮನಸ್ಸಿಗೆ ಬಾರದಿದ್ದರೂ, ಅದಕ್ಕೆ ಬೇರೆ ಯತ್ನವಿದ್ದಿಲ್ಲ. ಇದರಿಂದ ಚಂದ್ರಾವತಿಯ ವಿಷಯವಾಗಿ ವಿಜಯಸಿಂಗನು ಅನಾದರಪಡಲಿಲ್ಲ; ಆದರೆ ಮರುಗಿದನು. ಮುಂದೆ ಚಂದ್ರಾವತಿಯು ಗಂಡನಿಗೆ ರಜಪೂತರ ಕರ್ತವ್ಯವನ್ನು ತಿಳಿಸುವ ವಿಷಯವಾಗಿ, ರಜಪೂತ ವೀರಪತ್ನಿಯರಿಗೆ ಯೋಗ್ಯವಾಗುವಂತೆ ನಡಕೊಂಡದ್ದು ಪ್ರಸಿದ್ಧವಾದಾಗ, ಆಕೆಯ ವಿಷಯವಾಗಿ ವಿಜಯಸಿಂಗನಲ್ಲಿ ಆದರವೂ, ಪ್ರೇಮವೂ ಉತ್ಪನ್ನವಾದವು. ಜಸವಂತಸಿಂಗನು ಕಾಯ್ದುಕೊಳ್ಳದಿದ್ದರೂ, ಚಂದ್ರಾವತಿಯಾದರೂ ರಜಪೂತರ ತೇಜಸ್ಸನ್ನು ಕಾಯ್ದುಕೊಂಡಳೆಂದು ವಿಜಯಸಿಂಹನಿಗೆ ಸಮಾಧಾನವಾಯಿತು. ಅಂಥವಳಿಗೆ ಈಗ ಇಂಥ ದುರ್ಧರ ದುಃಖದ ಪ್ರಸಂಗವು ಒದಗಿದ್ದರಿಂದ, ಆತನ ಮನಸ್ಸಿಗೂ ಬಹಳ ಅಸಮಾಧಾನವಾಗಿತ್ತು. ಇರಲಿ. ಮಗಳನ್ನು ಅತ್ಯಂತವಾಗಿ ಪ್ರೀತಿಸುವ ವಿಜಯಸಿಂಗನು, ಆಕೆಯ ಕ್ಷಾತ್ರತೇಜಸ್ಸನ್ನು ನೋಡಿ ಕೌತುಕಪಟ್ಟು, ತನಗಾಗಿದ್ದ ಅಸಮಾಧಾನವನ್ನು ಮರೆತು ಮುಗುಳುನಗೆಯಿಂದ ನಗುತ್ತ ಮೇಲೆ ಹೇಳಿದಂತೆ ಮಗಳನ್ನು ನೋಡುತ್ತ ಕುಳಿತುಕೊಂಡಿದ್ದನು. ಆಗ ರೂಪಮತಿಯು ಅತ್ಯಾತುರದಿಂದ ತಂದೆಯನ್ನು ಕುರಿತು—

ರೂಪಮತಿ—ಬಾಪ್ಪಾಜೀ, ಚಂದ್ರಾವತೀ ಅಬಚಿಗೆ ನಾನೊಂದು ಸಮಾಧಾನದ ಪತ್ರ ಬರೆದು ಕಳಿಸಬೇಕೆಂದು ಮಾಡಿದ್ದೇನೆ, ಆ ಪತ್ರವನ್ನು ಯಾರ ಕೈಯಿಂದಾದರೂ ಆಕೆಗೆ ಮುಟ್ಟಿಸುವಿರೋ ?

ವಿಜಯಸಿಂಗ(ನಕ್ಕು)–ಓಹೋ, ಪತ್ರಕಳಿಸಲಿಕ್ಕೆ ತೊಂದರೆಯೇನಿದೆ? ಹ್ಯಾಗಾದರೂ ಮಾಡಿ ಪತ್ರವನ್ನು ಮುಟ್ಟಿಸುವೆನು; ಆದರೆ ರೂಪೇ, ನೀನು ಅಂಥದೇನು ಪತ್ರದಲ್ಲಿ ಬರೆಯುವೆಯಮ್ಮಾ ?

ರೂಪಮತಿ—ಎರಡನೆಯದೇನು ಬರೆಯುವದು ? ಕೈನೆರೆಗೆ ಬಂದ ಎದೆಯುದ್ದ ಮಗನು ಹೋದದ್ದರಿಂದ, ಅಬಚಿಗೆ ಎರಡು ಸಮಾಧಾನದ ಮಾತುಗಳನ್ನು ಬರೆಯತಕ್ಕದ್ದು. ಅಪ್ಪಾ, ಪೃಥ್ವೀಸಿಂಗನು ತನ್ನ ತಂದೆಯ ಹಾಗೆ ಇದ್ದಿಲ್ಲ. ಆತನಿಗೆ ಬಾಲಬಡಿಯುವ ಸ್ವಭಾವವು ಸೇರುತ್ತಿದ್ದಿಲ್ಲೆಂದು ನಾನು ಬಹುಜನರ ಬಾಯಿಂದ ಕೇಳಿದ್ದೇನೆ. ಆತನು ತನ್ನ ತಾಯಿಯ ಶಿಕ್ಷಣದಿಂದ ಬೆಳೆದವನು. ಇಂಥವನ ಘಾತಮಾಡಿದ್ದರಿಂದ ಚಂದ್ರಾವತೀ ಅಬಚಿಗೆ ಬಹಳ ವ್ಯಸನವಾಗಿದ್ದೀತು. ನನಗೆ ರೆಕ್ಕೆಗಳಿದ್ದರೆ ಹಾರಿಹೋಗಿ ಅಬಚಿಯನ್ನು ಈಗಲೇ ಸಮಾಧಾನಗೊಳಿಸುತ್ತಿದ್ದೆನು. ಔರಂಗಜೇಬನ ಗುಪ್ತಚಾರರು ಅಲ್ಲಲ್ಲಿ ಸಂಚರಿಸುತ್ತಿದ್ದು, ಸಂಶಯಬಂದರೆ ಹೋಗಬರುವ ವರನ್ನು ಶೋಧಿಸುತ್ತಲಿರುವರಂತೆ. ಅವರ ಕೈಯಲ್ಲಿ ಸಿಗದಂತೆ ಯುಕ್ತಿ ಯಿಂದ ಈ ಪತ್ರವನ್ನು ಕಳಿಸತಕ್ಕದ್ದು. ಬಾದಶಹನ ಕೈಗೆ ನನ್ನ ಪತ್ರ ಸಿಕ್ಕರೆ ನಿಮಗೂ ಚಂದ್ರಾವತೀ ಅಬಚಿಗೂ ತ್ರಾಸವಾದೀತಾದದ್ದರಿಂದ ಹೇಳುತ್ತೇನೆ.

ವಿಜಯಸಿಂಗ— ತಂಗೀ, ಇಬ್ಬರಿಗೂ ತ್ರಾಸವಾಗುವಹಾಗೆ ನೀನು ಬರೆಯುವದಾದರೂ ಏನಮ್ಮಾ ? ಆಗಲಿ, ಬಾದಶಹನಿಂದ ಆದಷ್ಟು ನನಗೆ ತ್ರಾಸವಾಗಲಿ. ಒಮ್ಮೆ ಆ ನೀಚನಸಂಗಡ ನಾನು ಯುದ್ಧಮಾಡಬೇಕೆಂದು ಮಾಡಿರುವೆನು. ಯಾರಾದರೂ ಶೂರರು ನನಗೆ ಸಹಾಯ ಮಾಡಿದರೆ ಒಳ್ಳೆಯದಾಯಿತು; ಇಲ್ಲದಿದ್ದರೆ ನಾನೊಬ್ಬನೇ ಔರಂಗಜೇಬನ ಸಂಗಡ ಯುದ್ಧಮಾಡಿ ಹೊಡೆಯುವೆನು, ಇಲ್ಲವೆ ಮಡಿಯುವೆನು; ಆದರೆ ಜಸವಂತ ಸಿಂಗನ ಹಾಗೆ ಬೆನ್ನು ತೋರಿಸಿ ಓಡಿ ಮಾತ್ರ ಬರಲಿಕ್ಕಿಲ್ಲ. ರಜಪೂತರ ಕ್ಷಾತ್ರತೇಜಸ್ಸು ಇನ್ನೂ ಪೂರ್ಣ ನಷ್ಟವಾಗಿರುವದಿಲ್ಲ. ತರುಣರಿಲ್ಲ ದಿದ್ದರೂ ನನ್ನಂಥ ನಾಲ್ಕು ಜನ ವೃದ್ಧರು ನನಗೆ ಸಹಾಯಕರಾಗಿ ಇರು ತ್ತಾರೆ . ಅವರಲ್ಲಿ ಕ್ಷಾತ್ರತೇಜಸ್ಸು ಇನ್ನೂ ನಿಶ್ಚಯವಾಗಿ ಇರುತ್ತದೆಂಬದನ್ನು ಜಗತ್ತಿನ ಅನುಭವಕ್ಕೆ ತಂದುಕೊಡುವೆನು. ಬರಿ ನೀನು ಪತ್ರವನ್ನು, ಅದು

ಮುಗಿದಕೂಡಲೆ ಒಬ್ಬ ನಂಬಿಗೆಯ ಸೇವಕನ ಸಂಗಡ ಅದನ್ನು ನಿಮ್ಮ ಅಬಚಿಯ ಕಡೆಗೆ ಕಳಿಸಿಕೊಡುವೆನು. ನೀನು ಬೆದರಬೇಡ, ಬಾದಶಹನ ಚಾರರು ಏನು ಮಾಡುತ್ತಾರೆ ನೋಡೋಣ.

ಮುದುಕರಲ್ಲಿ ಒಂದು ಬಗೆಯ ಹಟಮಾರಿತನವು ಹೆಚ್ಚಾಗುತ್ತ ಹೋಗುತ್ತದೆಂದು ಹಿಂದೆಯೊಮ್ಮೆ ಹೇಳಿರುತ್ತದಷ್ಟೆ ? ಆದರಂತೆ ವಿಜಯ ಸಿಂಗನು ಪತ್ರವನ್ನು ಕಳಿಸಿಯೇ ತೀರುವೆನೆಂದು ಹಟಹಿಡಿದನು. ರೂಪ ಮತಿಯು ಔರಂಗಜೇಬನಚಾರರ ಭಯವನ್ನು ತೋರಿಸದಿದ್ದರೆ, ಅವನು ಒಂದು ಪಕ್ಷದಲ್ಲಿ ಮಗಳಿಗೆ ಪತ್ರ ಬರೆಯಬೇಡವೆಂದು ಹೇಳಿದರೂ ಹೇಳ ಬಹುದಾಗಿತ್ತು; ಆದರೆ ಯಃಕಶ್ಚಿತ ಚಾರರ ಭಯಕ್ಕಾಗಿ ಪತ್ರ ಕಳಿಸುವ ದನ್ನು ಬಿಡುವದು ಹೇಡಿತನದ ಲಕ್ಷಣವೆಂದು ಆತನು ತಿಳಿದನು. ಬರೇ ಒಂದು ಪತ್ರದಿಂದಲೇ ಭಯಂಕರ ಪ್ರಸಂಗವು ಒದಗುವದಾಗಿದ್ದರೆ, ಅದನ್ನು ಆದಷ್ಟು ಬೇಗನೆ ಒದಗಿಸಿಕೊಳ್ಳಬೇಕೆಂದು ಆತನು ಆತುರಪಟ್ಟನು. ರೂಪಮತಿಯು ಒಂದು ಪತ್ರದಿಂದ ಔರಂಗಜೇಬನನ್ನು ರೇಗಿಗೆಬ್ಬಿಸುವದು ಆಗಲಿಕ್ಕಿಲ್ಲೆಂದು, ತಾನು ಸ್ವತಃ ಜಸವಂತಸಿಂಗನಿಗೆ ಒಂದು ಪತ್ರವನ್ನು ಬರೆದನು. ಎರಡೂ ಪತ್ರಗಳು ಚಾರನ ಮುಖದಿಂದ ಕಾಬೂಲಕ್ಕೆ ಕಳಿಸ ಲ್ಪಟ್ಟವು; ಆದರೆ ಪ್ರಿಯವಾಚಕರೇ, ಈ ಎರಡೂ ಪತ್ರಗಳು ಔರಂಗಜೇಬನ ಕೈಸೇರಿದ್ದರಿಂದ ಪರಿಣಾಮವೇನಾಯಿತೆಂಬದನ್ನು ಹೇಳುವ ಮೊದಲು, ನಾವು ರೂಪನಗರವನ್ನು ಬಿಟ್ಟು ಎರಡನೆಯ ಕಡೆಗೆ ಹೋಗಿ ಬೇರೆ ವ್ಯಕ್ತಿ ಗಳ ಗುರುತುಮಾಡಿಕೊಳ್ಳುವದು ಅವಶ್ಯವಾಗಿದೆ.

## ೪ನೇಯ ಪ್ರಕರಣ

# ರಾಜಾ ಜಸವಂತಸಿಂಗ

ರಜಪೂತರ ಬಖರುಗಳನ್ನು ಬರೆದವರು, ತಮ್ಮ ಬಖರುಗಳಲ್ಲಿ ಹಲವು ರಜಪೂತವೀರರ ಚರಿತ್ರಗಳನ್ನು ಬರೆದಿರುವರು. ಅವುಗಳಲ್ಲಿ ಶೌರ್ಯ, ಧೈರ್ಯ, ಸ್ವಾಮಿಭಕ್ತಿ, ದೇಶಭಕ್ತಿ, ಜಾತ್ಯಭಿಮಾನ, ಕುಲಾಭಿಮಾನ ಮೊದಲಾದ ಸದ್ಗುಣಗಳಿಂದ ಸ್ಫುರಿತರಾಗಿ ಹಲವು ಪರಾಕ್ರಮದ ಕೆಲಸಗಳನ್ನು ಮಾಡಿದ ಉದಾಹರಣೆಗಳು ಎಷ್ಟೋ ಇರುವವು; ಆದರೆ ರಾಜಾಜಸವಂತಸಿಂಗನ ಚರಿತ್ರದಂಥ ವಿಲಕ್ಷಣ ಚರಿತ್ರವು ಯಾರದೂ ಇರಲಿಕ್ಕಿಲ್ಲ. ಒಬ್ಬ ಸುಪ್ರಸಿದ್ಧ ಇತಿಹಾಸಕಾರನು ಈತನನ್ನು ಕುರಿತು ಅನ್ನುವದೇನೆಂದರೆ— "ಈ ರಜಪೂತ ವೀರನಲ್ಲಿರುವ ಶೌರ್ಯ, ಧೈರ್ಯ, ಮಹತ್ವ, ಮಾನ್ಯತೆ ಮೊದಲಾದ ಸದ್ಗುಣಗಳ ಪ್ರಮಾಣದಿಂದ ಆತನಲ್ಲಿ ಧೋರಣವೂ-ಜಾಣತನವೂ ಇದ್ದರೆ, ಆತನು ಯಾವಾಗೋ ಮೊಗಲರಾಜ್ಯದ ಬುಡಮೇಲು ಮಾಡಿಬಿಡುತ್ತಿದ್ದನು." ನರ್ಮದಾ ನದಿಯ ದಂಡೆಯಲ್ಲಿ ಔರಂಗಜೇಬನೊಡನೆ ಯುದ್ಧಮಾಡಿ ಸೋತಂದಿನಿಂದ ಸರಾಸರಿ ನಾಲ್ವತ್ತೆರಡು ವರ್ಷಗಳವರೆಗೆ, ಅಂದರೆ ಔರಂಗಜೇಬನ ಅಪ್ಪಣೆಯಂತೆ ಕಾಬೂಲದ ಹಿಮಮಯ ಪ್ರದೇಶದಲ್ಲಿಯ ಕಾಡುಜನರನ್ನು ಹಣ್ಣು ಮಾಡುವವರೆಗೆ, ಜಸವಂತಸಿಂಗನ ಚರಿತ್ರದಲ್ಲಾದ ರೂಪಾಂತರವು ಬಹು ವಿಲಕ್ಷಣವಾದದ್ದೆಂಬದರಲ್ಲಿ ಸಂಶಯವಿಲ್ಲ. ಶಹಾಜಹಾನನ ನಾಲ್ವರು ಮಕ್ಕಳಲ್ಲಿ, ಅಂದರೆ

ದಾರಾ, ಸುಜಾ, ಔರಂಗಜೇಬ, ಮುರಾದ ಎಂಬವರಲ್ಲಿ, ಹಿರಿಯ ಮಗನಾದ ದಾರಾನು ಘನವಂತನಾಗಿದ್ದು, ಸ್ವಭಾವದಲ್ಲಿ ಕೆಲಮಟ್ಟಿಗೆ ಅಕಬರ ಬಾದಶಹನನ್ನು ಹೋಲುತ್ತಿದ್ದನು. ಜಸವಂತಸಿಂಗನು ಮೊದಲಿಗೆ ದಾರಾನ ಪಕ್ಷವನ್ನು ವಹಿಸಿ ಔರಂಗಜೇಬನನ್ನು ಬಹಳವಾಗಿ ದ್ವೇಷಿಸುತ್ತಿದ್ದದ್ದು ನಿಜವು; ಆದರೆ ಒಟ್ಟಿನ ಮೇಲೆ ಮುಸಲ್ಮಾನರನ್ನು ಕಂಡರೆ ಜಸವಂತಸಿಂಗನು ಸೇರುತ್ತಿದ್ದಿಲ್ಲ. ಮುಸಲ್ಮಾನರು ತಮ್ಮ ಧರ್ಮದ, ಹಾಗು ಜಾತಿಯ ಶತ್ರುಗಳಿದ್ದು, ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ದುಷ್ಟರಿರುವದರಿಂದ, ಅವರನ್ನು ನಾಶ ಗೊಳಿಸುವದು ನನ್ನ ಕರ್ತವ್ಯವೆಂದು ತಿಳಿದು ಆತನು ನಡೆಯುತ್ತಿದ್ದನು. ಶಹಾಜಹಾನನ ಒಬ್ಬ ಮಗನ ಪಕ್ಷವನ್ನು ವಹಿಸಿ ಉಳಿದ ಮೂವರನ್ನು ನಾಶಗೊಳಿಸಿ, ಆ ಮೇಲೆ ತನ್ನ ಪಕ್ಷದವನನ್ನು ನಾಶಗೊಳಿಸಬೇಕೆಂದು ಹೊಂಚು ಹಾಕಿದ್ದಕ್ಕೆ ಆತನ ಹಲವು ಕೃತಿಗಳು ಸಾಕ್ಷಿಗಳಾಗಿರುವವು; ಆದರೆ ಆತನಲ್ಲಿ ಧೋರಣವೂ, ಜಾಣತನವೂ ಇದ್ದಿಲ್ಲ. ಔರಂಗಜೇಬನೊಡನೆ ನರ್ಮದಾ ನದಿಯ ದಂಡೆಯಲ್ಲಾದ ಯುದ್ಧದಲ್ಲಿ ಆತನು ಸೋಲಲಿಕ್ಕೆ ಆತನ ಗರ್ವಿಷ್ಠತನವೂ, ಗೆಲವಿನ ಬಗ್ಗೆ ಆತನು ವಹಿಸಿದ್ದ ಅಯೋಗ್ಯ ನಂಬಿಗೆಯೂ ಕಾರಣಗಳಾದವು. ಇದಲ್ಲದೆ, ಆತನು ಹಿಡಿದ ಕೆಲಸಗಳಲ್ಲಿ ಒಂದನ್ನೂ ಮಜಲಿಗೆ ಮುಟ್ಟಿಸುತ್ತಿದ್ದಿಲ್ಲ. ಶಿವಾಜಿಯ ಪಾರಪತ್ಯಕ್ಕಾಗಿ ಔರಂಗಜೇಬನು ಈತನನ್ನು ದಕ್ಷಿಣಕ್ಕೆ ಕಳಿಸಿದಾಗ, ಕುಟಿಲ ಹೃದಯದ ಈ ರಜಪೂತನು ಶಿವಾಜಿಗೆ ಅನುಕೂಲನಾಗಿ ಶಾಹಿಸ್ತೇಖಾನನನ್ನು ಯಮಸದನಕ್ಕೆ ಅಟ್ಟಲಿಕ್ಕೆ ಆ ತರುಣ ಮರಾಟನಿಗೆ ಅನುವು ಮಾಡಿಕೊಟ್ಟನು. ಶಿವಾಜಿಯು ಸ್ವರಾಜ್ಯವನ್ನು ಸ್ಥಾಪಿಸಿ ಮೊಗಲರ ದವಡೆಯೊಳಗಿಂದ ದೇಶವನ್ನು ಬಿಡಿಸಬಹುದೆಂದು ತಿಳಿದೇ,ಆತನಿಗೆ ಜಸವಂತಸಿಂಗನು ಅನುಕೂಲವಾದನು. ಔರಂಗಜೇಬನನ್ನು ಕಂಡರಂತೂ ಜಸವಂತಸಿಂಗನು ಎಳ್ಳಷ್ಟು ಸೇರುತ್ತಿದ್ದಿಲ್ಲ. ಯಾವಾಗ ಆತನ ಸೇಡು ತೀರಿಸಿಕೊಂಡೇನೆಂದು ಎದುರು ನೋಡುತ್ತಿದ್ದನು. ಬಾದಶಹನ ಮಗನಾದ ಮೊಯಾವಝು ಎಂಬವನಿಗೆ ತಂದೆಯ ವಿರುದ್ಧ ಬಂಡು ಮಾಡಲಿಕ್ಕೆ ಉತ್ತೇಜನ ಕೊಟ್ಟವನು ಜಸವಂತಸಿಂಗನೇ; ಆದರೆ ಧೋರಣ ಜಾಣತನಗಳು ಇಲ್ಲದ್ದರಿಂದ ಒಂದು ಕೆಲಸವೂ ಈತನಿಂದ ಕಡೆಗಾಣಲಿಲ್ಲ.

ಔರಂಗಜೇಬನು ಜಸವಂತವಂತಸಿಂಗನ ಈ ಘಾತಕತನವನ್ನೂ, ಯುಕ್ತಿಗಳನ್ನೂ, ಒಳಸಂಚುಗಳನ್ನೂ ಪೂರ್ಣವಾಗಿ ಅರಿತಿದ್ದನು. ಔರಂಗ ಜೇಬನ ನಾಶಕ್ಕಾಗಿ ಜಸವಂತಸಿಂಗನು ಹೊಂಚುಹಾಕಿದ್ದಂತೆ, ಜಸವಂತ ಸಿಂಗನ ನಾಶಕ್ಕಾಗಿ ಔರಂಗಜೇಬನಾದರೂ ಹೊಂಚು ಹಾಕಿದ್ದನು. ಸೇರಿಗೆ ಸವ್ವಾಸೇರು ಗಂಟು ಬಿದ್ದಂತಾದುದರಿಂದಲೇ ಕಡೆಗೆ ಔರಂಗಜೇಬನ ಘಾತಕ ತನಕ್ಕೆ, ಇದ್ದ ಒಬ್ಬ ಮಗನನ್ನು ಬಲಿಕೊಟ್ಟು ಜಸವಂತಸಿಂಗನು ದುಃಖ ದಿಂದ ಕೊರಗಬೇಕಾಯಿತು. ಔರಂಗಜೇಬನು ಪ್ರಸಿದ್ಧರೀತಿಯಿಂದ ಜಸವಂತಸಿಂಗನ ಕೇಡು ಬಗೆಯುವಂತೆ ಇದ್ದಿಲ್ಲ; ಯಾಕಂದರೆ, ಜಸವಂತ ಸಿಂಗನು ಆ ಕಾಲದ ಪ್ರಸಿದ್ಧ ರಜಪೂತ ವೀರರಲ್ಲಿ ಒಬ್ಬನಾಗಿದ್ದನಲ್ಲದೆ, ಅತ್ಯಂತ ಬಲಾಢ್ಯರಾಜನಾಗಿದ್ದನು; ಮತ್ತು ತನ್ನ ಜಾತಿಬಾಂಧವರ ಮೇಲೆ ಆತನ ವರ್ಚಸ್ಸು ವಿಶೇಷವಾಗಿತ್ತು. ಆದರಿಂದಲೇ ತನ್ನೊಡನೆ ಜಸವಂತ ಸಿಂಗನು ಪ್ರಸಿದ್ಧ ರೀತಿಯಿಂದ ಎಷ್ಟು ದ್ವೇಷ ಬೆಳಿಸಿದರೂ, ತನ್ನ ದ್ರೋಹ ವನ್ನು ಎಷ್ಟು ಚಿಂತಿಸಿದರೂ ಔರಂಗಜೇಬನು ಆತನೊಡನೆ ಬಹಿರಂಗದಲ್ಲಿ ಸ್ನೇಹದಿಂದ ನಡಕೊಳ್ಳುತ್ತಿದ್ದನು; ಮತ್ತು ಮೇಲೆ ಮೇಲೆ ಆತನನ್ನು ಮಹತ್ವದ ಕೆಲಸಗಳಿಗಾಗಿ ದೂರದೂರದ ಪ್ರಾಂತಗಳಿಗೆ ಕಳಿಸುತ್ತಿದ್ದನು. ಒಂದು ಕಡೆಯಲ್ಲಾದರೂ ಜಸವಂತಸಿಂಗನು ವಿಶ್ವಾಸದಿಂದ ನಡಕೊಂಡು ಬಾದಶಹನ ಹಿತವನ್ನು ಸಾಧಿಸಲಿಲ್ಲ. ಕಡೆಗೆ ಔರಂಗಜೇಬನು ಬೇಸತ್ತು ಹೊರಗಿನ ಪೀಡೆ ಹೊರಗೇ ಹೋಗಲೆಂದು ಗುಡ್ಡಗಾಡ ಜನರ ಸದ್ದು ಅಡ ಗಿಸಲಿಕ್ಕೆಂದು ಜಸವಂತಸಿಂಗನನ್ನು ಕಾಬೂಲ ಪ್ರಾಂತದ ಮೇಲೆ ಕಳಿಸಿದನು. ಆ ಗುಡ್ಡಗಾಡ ಜನರು ಜಸವಂತಸಿಂಗನನ್ನು ಗೊತ್ತಿಗೆ ಹಚ್ಚುವರೆಂದು ಔರಂಗಜೇಬನು ತಿಳಿದಿದ್ದನು; ಇದರಿಂದ ಜಸವಂತಸಿಂಗನ ಪರಾಕ್ರಮ ವನ್ನು ಔರಂಗಜೇಬನು ಪೂರ್ಣವಾಗಿ ಅರಿತಿದ್ದಿಲ್ಲೆಂದು ತೋರುತ್ತದೆ; ಯಾಕಂದರೆ, ಕಾಬೂಲಕ್ಕೆ ಹೋದ ಸ್ವಲ್ಪ ದಿವಸಗಳಲ್ಲಿಯೇ ಜಸವಂತ ಸಿಂಗನು ಅಲ್ಲಿಯ ಗುಡ್ಡಗಾಡ ಜನರನ್ನು ಮೆತ್ತಗೆ ಮಾಡಿ ಅಲ್ಲಿ ತನ್ನ ಅಧಿ ಕಾರವನ್ನು ಕೂಡ್ರಿಸಿದನು. ಇನ್ನು ಸ್ವಲ್ಪ ದಿವಸಗಳಲ್ಲಿಯೇ ಆತನು ತಿರುಗಿ ಬರತಕ್ಕವನು; ಅಷ್ಟರಲ್ಲಿ ಔರಂಗಜೇಬನು ಆತನ ಮಗನಾದ ಪೃಥ್ವೀಸಿಂಗ ನನ್ನು ಜೋಧಪುರದಿಂದ ಕರಿಸಿಕೊಂಡು, ಹಿಂದೆ ಹೇಳಿದಂತೆ ವಿಷಲೇಪಿತ

ಪೋಷಾಕನ್ನು ತೊಡಿಸಿಕೊಂಡು, ಆದರ ದುಃಖದಾಯಕ ವರ್ತಮಾನವನ್ನು ನಿರ್ಲಜ್ಜತನದಿಂದ ಕಾಬೂಲಕ್ಕೆ ಕಳಿಸಿಕೊಟ್ಟನು.

ಪೃಥ್ವೀಸಿಂಗನು ಜಸವಂತಸಿಂಗನ ಪ್ರೀತಿಯ ಮಗನಾಗಿದ್ದನು. ರಜಪೂತರ ಅತ್ಯಂತ ಶ್ರೇಷ್ಠಕುಲದ ವೀರರಿಗೆ ಯೋಗ್ಯವಾದ ಸದ್ಗುಣಗಳೆಲ್ಲ ಆತನಲ್ಲಿ ಪೂರ್ಣವಾಗಿ ತುಂಬಿದ್ದವು. ಆತನು ಬದುಕಿದ್ದರೆ, ಔರಂಗಜೇಬನ ಪ್ಯೆ ಮೆತ್ತಗೆ ಮಾಡಿ, ತನ್ನ ತಂದೆಯ ವಿಶ್ವಾಸಘಾತ ಮಾಡಿದ ಸೇಡನ್ನು ತೀರಿಸಿಕೊಳ್ಳುತ್ತಿದ್ದನೆಂಬದರಲ್ಲಿ ಸಂಶಯವಿಲ್ಲ; ಆದರೆ ಸದ್ಯಕ್ಕೆ ತಾನು ಔರಂಗಜೇಬನ ಸೇಡು ತೀರಿಸಿಕೊಂಡು ಆತನ ಪಾರಪತ್ಯ ಮಾಡುವದೊತ್ತಟ್ಟಿಗುಳಿದು, ಔರಂಗಜೇಬನೇ ತನ್ನ ಇದ್ದ ಒಬ್ಬ ಮಗನನ್ನು ಕೊಂದದ್ದರಿಂದ ಜಸವಂತಸಿಂಗನಿಗೆ ಬಹಳ ದುಃಖವಾಯಿತು. ಕ್ರೋಧಾಗ್ನಿಯಿಂದ ಆತನು ಸಂತಪ್ತನಾದನು; ಆದರೆ ಕ್ರೋಧದಿಂದ ಪ್ರಯೋಜನವೇನೂ ಆಗುವಂತೆ ತೋರಿದ್ದರಿಂದ, ಆ ರಜಪೂತವೀರನು ನಿರಾಶೆಪಟ್ಟು, ಉಸುರ್ಗಳೆದನು. " ಪೃಥ್ವೀಸಿಂಗನು ಸತ್ತನೆ"ಂಬ ಅಕ್ಷರಗಳನ್ನು ಓದಿದ ಕೂಡಲೆ ಆತನ ಹೃದಯಕ್ಕೆ ವಜ್ರಾಘಾತವಾದಂತಾಯಿತು. ಆತನು ಭ್ರಾಂತಿಷ್ಟನಂತೆ ಆಗಿ, ಮೋರೆ ತಗ್ಗಿಸಿಕೊಂಡು ಎಷ್ಟೊಂದು ಹೊತ್ತು ಸುಮ್ಮನೆ ಕುಳಿತು ಬಿಟ್ಟಿದ್ದನು. ಆತನು ತಿರುಗಿ ತಿರುಗಿ ಔರಂಗಜೇಬನ ಪತ್ರವನ್ನು ಓದಿ ನೋಡಿದನು; ಆದರೆ ಮಗನ ಮರಣದವಾರ್ತೆಯ ಹೊರತು ಹೆಚ್ಚಿನ ಯಾವ ಸಂಗತಿಯೂ ಆ ಪತ್ರದಿಂದ ಗೊತ್ತಾಗಲಿಲ್ಲ. ಮಗನು ಏನಾಗಿ ಸತ್ತನು, ಆತನನ್ನು ಯಾರು ಕೊಂದರು ಎಂಬ ಸಂಗತಿಗಳಾವವೂ ಅದರಿಂದ ತಿಳಿಯುವ ಹಾಗಿದ್ದಿಲ್ಲ. ಔರಂಗಜೇಬನ ಕಪಟ ಸ್ವಭಾವವನ್ನು ಪೂರಾ ಬಲ್ಲವನಾದ ಆ ಶೂರ ರಜಪೂತನು, ತನ್ನ ಮಗನನ್ನು ಔರಂಗಜೇಬನೇ ಕೊಲ್ಲಿಸಿರಬೇಕೆಂದು ನಿಶ್ಚಯಿಸಿದನು. ದಿನ ದಿನಕ್ಕೆ ಆತನ ಈ ನಿಶ್ಚಯವು ದೃಢತರವಾಗಹತ್ತಿತು. ಯಾಕಂದರೆ, ದಿಲ್ಲಿಯಿಂದ ಬೇರೆ ಯಾರ ಪತ್ರಗಳೂ ಆತನಿಗೆ ಬರಲಿಲ್ಲ. ತನ್ನ ಕಪಟ ಕೃತಿಯು ನನಗೆ ತಿಳಿಯಬಾರದೆಂದು ಆಲಮಗೀರನು ಬೇರೆ ಯಾರ ಪತ್ರಗಳೂ ನನಗೆ ಮುಟ್ಟದಂತೆ ವ್ಯವಸ್ಥೆ ಮಾಡಿರುವನೆಂದು ಜಸವಂತಸಿಂಗನು ತರ್ಕಿಸಿದನು. ಮಗನ ಈ ಅಕಾಲಿಕ ಮರಣದಿಂದ ಆತನ ಪ್ರಕೃತಿಯು ಬಹಳ ಕೆಟ್ಟಿತು. ಈತನು ಇನ್ನು ನಾಲ್ಕೆಂಟು

ದಿವಸಗಳಾದರೂ ಬದುಕುವನೋ ಇಲ್ಲವೋ ಎಂಬ ಬಗ್ಗೆ ಎಲ್ಲರಿಗೂ ಸಂಶಯ ಬರಹತ್ತಿತು. ಆತನು ತೀರ ಹಣ್ಣಾಗುತ್ತ ನಡೆದನು. ತಾನು ಇನ್ನು ಬದಕುವದರಲ್ಲಿ ಅರ್ಥವಿಲ್ಲವೆಂಬ ವಿಚಾರವು ಆತನ ಹೃದಯದಲ್ಲಿ ಮನೆಮಾಡಿಕೊಂಡದ್ದರಿಂದ, ಮರಣದ ಮಾರ್ಗ ಪ್ರತೀಕ್ಷೆಮಾಡುತ್ತ ಆತನು ಕುಳಿತಂತೆ ಆಗಿತ್ತು. ತನಗೆ ಸಾವು ಬೇಗನೆ ಬಂದಷ್ಟು ನೆಟ್ಟಗೆಂದು ಆತನು ತಿಳಿದಿದ್ದನು. ಇತ್ತ ಚಂದ್ರಾವತಿಯ ಸ್ಥಿತಿಯಾದರೂ ಹೀಗೆಯೇ ಆಗುತ್ತ ನಡೆದಿತ್ತು. ಸತ್ಪುತ್ರನ ಮರಣದ ವಾರ್ತೆಯಿಂದ ಆಕೆಗೆ ಎಷ್ಟು ದುಃಖವಾಗಿರುವದೆಂಬದನ್ನು ವಾಚಕರೇ ತರ್ಕಿಸಬೇಕು. ಆಕೆಯು ಅನ್ನ ನೀರು ಬಿಟ್ಟುಬಿಟ್ಟಳು. ಅದರಲ್ಲಿ ಆಕೆಯು ಗರ್ಭವತಿಯಿದ್ದದ್ದರಿಂದ ಎಲ್ಲರೂ ಚಿಂತೆಗೊಳಗಾದರು. ಪತಿಯು ಪುತ್ರ ಶೋಕದಿಂದ ತೀರ ನೆಲ ಹಿಡಿದದ್ದನ್ನು ನೋಡಿಯಂತು ಚಂದ್ರಾವತಿಯ ದುಃಖದ ಮೇರೆಯು ತಪ್ಪಿತು. ಆ ಪತಿವ್ರತೆಯು ಪತಿಯ ಹಾಸಿಗೆಯ ಬಳಿಯಿಂದ ಅತ್ತಿತ್ತ ಉಲು ಕದಾದಳು; ಆದರೆ ದಾಸಿಯರು ಪರಿಪರಿಯಾಗಿ ಆಕೆಯನ್ನು ಸಮಾಧಾನ ಗೊಳಿಸುತ್ತಲಿದ್ದದ್ದರಿಂದಲೂ, ಪೃಥ್ವೀಸಿಂಗನು ಹೋದರೂ, ನೀನು ಗರ್ಭ ವತಿಯಿರುವದರಿಂದ ಮತ್ತೊಬ್ಬ ರಾಜಪುತ್ರನು ಜನಿಸಿ ಜೋಧಪುರದ ಮನೆ ತನವು ನಿಲ್ಲಬಹುದೆಂದು ಅವರು ಆಶೆ ತೋರಿಸುತ್ತ ಬಂದದ್ದರಿಂದಲೂ, ಆಕೆಯು ಸ್ವತಃ ಧೀರಳೂ-ವಿಚಾರಶೀಲಳೂ ಆದದ್ದರಿಂದಲೂ ಕೈಲಾದ ಮಟ್ಟಿಗೆ ಸಮಾಧಾನ ತಾಳುತ್ತ ಬಂದಳು. ಆ ಧರ್ಮಭೀರುವಾದ ರಾಣಿ ಯು, ಭ್ರೂಣಹತ್ಯದೋಷಕ್ಕೂ ಅಂಜಹತ್ತಿದಳು. ಈ ಕಾರಣಗಳಿಂದ ಆಕೆಯ ಪ್ರಕೃತಿಯು ಕೆಲಮಟ್ಟಿಗೆ ಸಮಾಧಾನಕಾರಕವಾಗಿತ್ತೆಂದು ಹೇಳ ಬಹುದು.

ಬರಬರುತ್ತ ಜಸವಂತಸಿಂಗನ ಸ್ಥಿತಿಯು ಮಾತ್ರ ತೀರ ಶೋಚನೀಯ ವಾಯಿತು. ದಿನಕ್ಕೆ ಮೂರು ನಾಲ್ಕು ಬಾರಿಯಾದರೂ ಆತನು—" ಪೃಥ್ವೀ ಸಿಂಗನ ಮರಣದ ನಿಜವಾದ ಸಂಗತಿಯು ತಿಳಿಯಿತೋ ? ಬೇರೆ ಯಾರ ಪತ್ರಗಳಾದರೂ ಬಂದಿರುವವೋ " ಎಂದು ಕೇಳುತ್ತಿದ್ದನು; ಆದರೆ ಪತ್ರ ಗಳೇ ಬಾರದ್ದರಿಂದ ಆತನನ್ನು ಸಮಾಧಾನಗೊಳಿಸಲಿಕ್ಕೆ ಯಾರಿಗೂ ಮಾರ್ಗ ವಿಲ್ಲದಾಯಿತು. ದುರ್ಗಾದಾಸನೇ ಮೊದಲಾದ ಸ್ವಾಮಿನಿಷ್ಠ ಸೇವಕರು

ಬಹಳ ಚಿಂತೆಗೊಳಗಾದರು. ಹೀಗಿರಲು, ಒಂದಾನೊಂದು ದಿನ ದಿಲ್ಲಿಯಿಂದ ಒಬ್ಬ ಮುಸಲ್ಮಾನನು ಒಂದು ಪತ್ರವನ್ನು ತಂದು ದುರ್ಗಾದಾಸನ ಕೈಯಲ್ಲಿ ಕೊಟ್ಟನು. ದುರ್ಗಾದಾಸನು ಆ ಪತ್ರವನ್ನು ಓದಿ ಮುಸಲ್ಮಾನನು ಅದನ್ನು ತಂದು ಕೊಟ್ಟದ್ದಕ್ಕಾಗಿ ಪರಮಾಶ್ಚರ್ಯಪಟ್ಟನು. ಈ ಪತ್ರವನ್ನು ಮುಸಲ್ಮಾನನಾದ ನೀನು ಹ್ಯಾಗೆ ತಂದೆ, ಎಂದು ಪ್ರಶ್ನೆಮಾಡಿ, ಸೂಕ್ಷ್ಮ ದೃಷ್ಟಿಯಿಂದ ಆತನನ್ನು ನೋಡಹತ್ತಿದನು. ಆಗ ಪತ್ರತಂದವನು ದುರ್ಗಾದಾಸನಿಗೆ—ವಿಚಾರದಲ್ಲಿ ಹೊತ್ತುಗಳೆಯುವದಕ್ಕೆ ಇದು ಸಮಯವಲ್ಲವು. ನೀವು ಬೇಗನೆ ಜಸವಂತಸಿಂಗ ಮಹಾರಾಜರಿಗೆ ಈ ಪತ್ರವನ್ನು ಓದಿ ತೋರಿಸಿರೆಂದು ಸೂಚಿಸಿದನು. ಈ ಸೂಚನೆಯು ಯೋಗ್ಯವಿದ್ದದ್ದರಿಂದ ದುರ್ಗಾದಾಸನು ಪತ್ರದ ಸಂಗತಿಯನ್ನು ಹೇಳುವದಕ್ಕಾಗಿ ತನ್ನ ಸ್ವಾಮಿಯ ಬಳಿಗೆ ಹೋದನು. ಆ ಪತ್ರದೊಳಗಿನ ಸಂಗತಿಯಿಂದ ಜಸವಂತಸಿಂಗನಿಗೆ ಸಮಾಧಾನವಾಗುವಂತೆಯಿದ್ದಿಲ್ಲ; ಮತ್ತು ಹೇಳುವ ಸುದ್ದಿಯನ್ನು ಕೇಳಿ ತಿಳಕೊಳ್ಳುವಷ್ಟು ಶಕ್ತಿಯೂ, ಪ್ರಜ್ಞೆಯೂ ಜಸವಂತಸಿಂಗನಿಗೆ ಇದ್ದಿಲ್ಲ. ಔರಂಗಜೇಬನ ಯೋಗ್ಯತೆಯನ್ನೂ, ಶೀಲವನ್ನೂ ತಿಳಿದವನಾವನಾದರೂ ಇದ್ದರೆ ಆತನು ಜಸವಂತಸಿಂಗನೇ ಎಂದು ಹೇಳಬಹುದು. ಅಂತೇ ಆತನು ಔರಂಗಜೇಬನ ಪತ್ರವನ್ನು ಓದಿದ ಕೂಡಲೆ ತನ್ನ ಮಗನನ್ನು ಔರಂಗಜೇಬನೇ ಕೊಲ್ಲಿಸಿದನೆಂದು ಹೇಳಿದನು. ಇತ್ತ ದುರ್ಗಾದಾಸನು, ಮರಣೋನ್ಮುಖನಾಗಿ ಮಲಗಿಕೊಂಡಿದ್ದ ಜಸವಂತಸಿಂಗನ ಬಳಿಯಲ್ಲಿ ಕುಳಿತುಕೊಂಡು ಒಳ್ಳೇ ಯುಕ್ತಿಯಿಂದ ಆತನಿಗೆ–"ಮಹಾರಾಜರೇ, ಔರಂಗಜೇಬನು ಬೆಲೆಯುಳ್ಳ ಉಡುಪು ತೊಡಪುಗಳನ್ನು ಕೊಡುವ ನೆವದಿಂದ ವಿಷತುಂಬಿದ ಪೋಷಾಕನ್ನು ಪೃಥ್ವೀಸಿಂಗನಿಗೆ ಕೊಟ್ಟು ಆತನ ಪ್ರಾಣಹರಣಮಾಡಿದನು." ಎಂದು ಹೇಳಿದನು; ಆದರೆ ತೀರ ಕ್ಷೀಣನಾದ ಜಸವಂತಸಿಂಗನು ದುರ್ಗಾದಾಸನ ಗುರುತನ್ನು ಕೂಡ ಹಿಡಿಯದೆ, ಅತ್ಯಂತ ಕ್ಷೀಣವಾದ ಸ್ವರದಿಂದ—ಪೃಥ್ವೀಸಿಂಗಾ, ತಮ್ಮಾ, ಬಂದೆಯಾ ಬಾ, ಇಷ್ಟುಹೊತ್ತು ಎಲ್ಲಿಗೆ ಹೋಗಿದ್ದೆ? ಆ ದುಷ್ಟನು ನಿನ್ನ ಪ್ರಾಣಹರಣ ಮಾಡಿದ್ದನಲ್ಲವೇ? ನೀನು ಪಾರಾಗಿ ಬಂದೆಯಂಬಂತೆ ಕಾಣುತ್ತದೆ! ಒಳ್ಳೆಯದಾಯಿತು, ನೆಟ್ಟಗಾಯಿತು. ಇನ್ನು ಮೇಲೆ ನಾವಿಬ್ಬರೂ ಕೂಡಿ ಆತನ ಸೇಡನ್ನು ಪೂರ್ಣವಾಗಿ ತೀರಿಸಿಕೊಳ್ಳೋಣವಂತೆ.

ದುರ್ಗಾದಾಸನು ಜಸವಂತಸಿಂಗನ ಮುಖದ ತೀರ ಸನಿಯಕ್ಕೆ ತನ್ನ ಕಿವಿಯನ್ನು ಒಯ್ದದ್ದರಿಂದಲೇ ಮೇಲಿನ ಶಬ್ದಗಳು ಆತನ ಕಿವಿಗೆ ಕೇಳಿಸಿದವು. ಅದನ್ನು ನೋಡಿ, ರಾಣಾನು ಇನ್ನು ಬಹಳ ಹೊತ್ತು ಬದುಕಲಾರನೆಂದು ದುರ್ಗಾದಾಸನು ನಿಶ್ಚಯಿಸಿ, ಪತ್ರದ ಸಂಗತಿಯನ್ನು ರಾಣಾನಿಗೆ ಹೇಳುವ ಉಸಾಬರಿಯನ್ನು ಬಿಟ್ಟನು. ರಾಜ ವೈದ್ಯರ ಉಪಾಚಾರಗಳು ನಡದೇ ಇದ್ದವು; ಆದರೆ ಕ್ಷೀಣತೆಯು ಬರಬರುತ್ತ ಹೆಚ್ಚುತ್ತ ಹೋಯಿತು. ಶಾಂತವಾಗುವಾಗ ದೀಪವು ದೊಡ್ಡದಾಗುವಂತೆ, ಅಂದು ಮಧ್ಯರಾತ್ರಿಯ ಸುಮಾರಕ್ಕೆ ರಾಣಾನು ಒಮ್ಮಿಂದೊಮ್ಮೆ ಎದ್ದು ಕುಳಿತು—"ದುರ್ಗಾದಾಸಾ, ದುರ್ಗಾದಾಸಾ," ಎಂದು ಗಟ್ಟಿಯಾಗಿ ಕೂಗಿ, ಅಲ್ಲಿ ಇದ್ದ ಬೇರೆ ಜನರೆಲ್ಲರು ಹೊರಟು ಹೋಗುವಂತೆ ಸನ್ನೆ ಮಾಡಿದನು. ಅದರಂತೆ ಜನರೆಲ್ಲರು ಹೋದರು. ಚಂದ್ರಾವತೀರಾಣಿಯು ಮಾತ್ರ ಇದ್ದ ಸ್ಥಳದಲ್ಲಿಯೇ ಇದ್ದಳು. ರಾಣಾನು ಆಕೆಯ ಕಡೆಗೆ ನೋಡದೆ, ದುರ್ಗಾದಾಸನನ್ನು ಕುರಿತು—ಇನ್ನು ನಾನು ಪರಲೋಕಕ್ಕೆ ತೆರಳಿದೆನು. ಸದ್ಯಕ್ಕಂತು ನಾನು ನಿರ್ವಂಶನಾಗಿದ್ದೇನೆ; ಆದರೆ ಈಗ ನನಗಾಗಿದ್ದ ದೃಷ್ಟಾಂತವು ನಿಜವಾಗಬೇಕಾಗಿದ್ದರೆ, ಈಕೆಯ ಹೊಟ್ಟೆಯಲ್ಲಿ ಇನ್ನು ನಾಲ್ಕಾರು ದಿವಸಗಳಲ್ಲಿ ಗಂಡುಮಗನು ಹುಟ್ಟಬೇಕು; ಆತನಿಂದ ನನ್ನ ಹೇತುವು ಪೂರ್ಣವಾಗಬೇಕು. ಇವರಿಬ್ಬರನ್ನು ನಿನಗೆ ಒಪ್ಪಿಸಿ ನಾನು ಹೊರಟನು." ಎಂದು ನುಡಿದವನೇ ಹಿಂದಕ್ಕೆ ಬಿದ್ದನು. ಮನೋವ್ಯಥೆಯಿಂದ ಅತ್ಯಂತ ಕ್ಷೀಣಳಾಗಿ ಪತಿಯ ಹಾಸಿಗೆಯ ಬಳಿಯಲ್ಲಿ ಮಲಗಿದ್ದ ಚಂದ್ರಾವತಿಯು, ಆವೇಶಗೊಂಡು ಎದ್ದು ಪತಿಯನ್ನು ಹಿಡಿಯುತ್ತಿರಲು, ಜಸವಂತಸಿಂಗನ ಪ್ರಾಣೋತ್ಕ್ರಮಣವಾಯಿತು. ಆಗ ಆ ಪತಿವ್ರತೆಯು ಪಟ್ಟ ದುಃಖವನ್ನೇನು ವರ್ಣಿಸುವದದೆ? ಆಕೆಯ ದುಃಖವನ್ನು ನೋಡಿ ದುರ್ಗಾದಾಸನೇ ಮೊದಲಾದ ಸ್ವಾಮಿಭಕ್ತರ ಹೃದಯಗಳು ಕರಗಿ ನೀರಾದದ್ದರಲ್ಲಿ ಆಶ್ಚರ್ಯವಿಲ್ಲ. ಚಂದ್ರಾವತಿಯೆಂದರೆ ಸರ್ವಸಾಧಾರಣ ಮನುಷ್ಯಳಲ್ಲ. ಆಗಿನ ಕಾಲದಲ್ಲಿ ಯಾವತ್ತು ರಜಪೂತಸ್ಥಾನದೊಳಗಿನ ಎಲ್ಲ ರಜಪೂತ ವೀರರ ವಿಲಕ್ಷಣವಾದ ಅಭಿಮಾನಕ್ಕೂ, ಪೂಜ್ಯಭಾವಕ್ಕೂ ಪಾತ್ರಳಾದವಳು ಯಾವಳಾದರೂ ಇದ್ದರೆ, ಆ ಮಹಾಸಾಧ್ವಿಯು ಚಂದ್ರಾವತಿಯೇ ಆಗಿದ್ದಳೆಂದು ನಿರ್ಭಾಧವಾಗಿ ಹೇಳಬಹುದು. ಹೆಚ್ಚಿಗೆ ಹೇಳುವ

ದೇನು ? ಚಂದ್ರಾವತಿಯನ್ನು ರಜಪೂತರು ತಮ್ಮ ಕುಲದೇವತೆಯೆಂದು ಭಾವಿಸುತ್ತಿದ್ದರು. ಕೇವಲ ಉದೇಪುರದ ರಾಜಪುತ್ರಿಯೆಂಬದಿಷ್ಟೇ ಕಾರಣ ದಿಂದ ರಜಪೂತರು ಚಂದ್ರಾವತಿಯನ್ನು ಇಷ್ಟು ಮನ್ನಿಸುತ್ತಿದ್ದಿಲ್ಲ; ಆ ವೀರ ಪತ್ನಿಯು ಪ್ರಸಂಗದಲ್ಲಿ ತನ್ನ ಅಂಥ ಉಜ್ವಲ ಗುಣಗಳನ್ನು ವ್ಯಕ್ತಪಡಿಸಿದ್ದ ರಿಂದಲೇ ಆಕೆಯನ್ನು ತಮ್ಮ ಕುಲದೇವತೆಯೆಂದು ರಜಪೂತರು ಭಾವಿಸು ತ್ತಿದ್ದರು. ಕೆಳಗಿನ ಪ್ರಸಂಗವೊಂದನ್ನೇ ಓದಿದರೂ ನಮ್ಮ ಬರಹದ ಸತ್ಯ ತೆಯು ವಾಚಕರಿಗೆ ತೋರಬಹುದು.

## ೫ನೆಯ ಪ್ರಕರಣ

# ವೀರಪತ್ನಿಯು

ತಂದೆಯಾದ ಶಹಾಜಹಾನನ ಮೇಲೆ ತಿರುಗಿ ಬಿದ್ದು, ರಾಜ್ಯವನ್ನು ಸಂಪಾದಿಸತೊಡಗಿದ್ದ ಔರಂಗಜೇಬನು, ದಕ್ಷಿಣದಿಂದ ದಂಡನ್ನು ತಕ್ಕೊಂಡು ದಿಲ್ಲಿಯ ಮೇಲೆ ಸಾಗಿ ಹೋಗುತ್ತಿರುವಾಗ, ಜಸವಂತಸಿಂಗನು ಶಹಾಜಹಾನನ ಪಕ್ಷವನ್ನು ವಹಿಸಿ, ತನ್ನ ವೀರ ಸೇನೆಯೊಡನೆ ಔರಂಗಜೇಬನಿಗೆ ಮಾರ್ಗದಲ್ಲಿ ಎದುರಾದನು. ಅವರಿಬ್ಬರ ಯುದ್ಧವು ನರ್ಮದೆಯ ದಂಡೆಯ ಮೇಲೆ ಆಯಿತು. ಆ ಯುದ್ಧದಲ್ಲಿ ಜಸವಂತಸಿಂಗನ ದಂಡಿನಲ್ಲಿ ಪೂರಾ ೫೦ ಜನರು ಸಹ ಉಳಿದಿದ್ದಿಲ್ಲ, ಅಲ್ಲಿಯ ವರೆಗೆ ಒಳ್ಳೇ ಶೌರ್ಯದಿಂದ ಆತನು ಕಾದಿದರೂ, ಜಯಲಕ್ಷ್ಮಿಯು ಔರಂಗಜೇಬನ ಕೊರಳಲ್ಲಿಯೇ ಮಾಲೆ ಹಾಕಿದಳು. ಆಗ ಜಸವಂತಸಿಂಗನು ಜೀವ ಬದುಕಿಸಿಕೊಂಡು ರಣಭೂಮಿಯಿಂದ ಓಡಿ ಹೋಗಬೇಕಾಯಿತು. ಆತನು ಹಲವು ಪ್ರಕಾರದ ಸೋಗುಗಳನ್ನು ಹಾಕಿಕೊಂಡು ಹ್ಯಾಗಾದರೂ ಮಾಡಿ ಜೋಧಪುರಕ್ಕೆ ಬಂದು ಬಿದ್ದನು. ಯುದ್ಧದಲ್ಲಿ ಎದುರಾದ ವೀರರನ್ನು ಸೋಲಿಸುವದು, ಇಲ್ಲವೆ ಸಾಯುುವುದು ಭಾರತೀಯ ವೀರರ, ವಿಶೇಷವಾಗಿ ರಜಪೂತವೀರರ ಧರ್ಮವಿದ್ದು, ಜೋಧಪುರದಂಥ ಪ್ರಸಿದ್ಧ ಮನೆತನದ ಅರಸನು ಹೀಗೆ ಸಮರಭೂಮಿಯಿಂದ ಜೀವಗಳ್ಳನಾಗಿ ಓಡಿ ಬಂದದ್ದು ಪರಮಲಾಂಛನವೆಂದು ಎಲ್ಲಗೂ ತಿಳಕೊಂಡರು. ಪ್ರಸಿದ್ಧ ಉದೇಪುರದ ರಾಜಕನ್ನಿಕೆಯಾದ ಚಂದ್ರಾವತೀ ರಾಣಿಯಂತು ಇದನ್ನು ಕೇಳಿ ಅಸಮಾಧಾನ ಪಟ್ಟು, ಸಂತಾಪದಿಂದ

ಜೋಧಪುರದ ಸುತ್ತಲು ಕಾವಲಿಡಿಸಿ ಕೋಟೆಯ ಬಾಗಿಲುಗಳನ್ನೆಲ್ಲ ಇಕ್ಕಿಸಿದಳು. ರಜಪೂತರ ಕೀರ್ತಿಗೆ ಕಲಂಕವನ್ನುಂಟು ಮಾಡುವ ಕೆಲಸ ಮಾಡಿದ್ದರಿಂದ ಪತಿಯನ್ನು ತಿರುಗಿ ಜೋಧಪುರದೊಳಗೆ ಕರಕೊಳ್ಳಲಿಕ್ಕಿಲ್ಲೆಂದು ಆಕೆಯು ನಿಶ್ಚಯಿಸಿದ್ದಳು. ಚಂದ್ರಾವತಿಯು ನಿಶ್ಚಯವನ್ನು ಸರ್ವಥಾ ತಪ್ಪತಕ್ಕವಳಿದ್ದಿಲ್ಲ. ಆಕೆಯು ಮಹಾ ಪತಿವ್ರತೆಯು; ಗಂಡನನ್ನು ನಿಜವಾಗಿ ದೇವರೆಂದು ತಿಳಿಯುವವಳು ಇದ್ದಳು; ಆದರೆ ಪಾತಿವ್ರತ್ಯದ ನೆರೆಯಲ್ಲಿ ವೀರಜನನೀತ್ವವೂ, ವೀರಪತ್ನೀತ್ವವೂ ಮೂರ್ತಿವಂತವಾಗಿ ಆಕೆಯಲ್ಲಿ ವಾಸಿಸುತ್ತಿದ್ದವು. ತಾನು ಹೀಗೆ ನಡೆದರೆ ಪತಿಯ ಅವಮಾನವಾದೀತೆಂಬ ಕಲ್ಪನೆಯು ಕೂಡ ಆಕೆಯ ಮನಸ್ಸಿನಲ್ಲಿ ಬರಲಿಲ್ಲ. ರಣಭೂಮಿಯಿಂದ ಓಡಿ ಬಂದವನು ನನ್ನ ಪತಿಯೇ ಅಲ್ಲೆಂದು ಅನ್ನಲಿಕ್ಕೂ ಆಕೆಯು ಸಂಕೋಚಪಡಲಿಲ್ಲ. ಇತ್ತ ಜಸವಂತಸಿಂಗನು, ಯುದ್ಧದಲ್ಲಿ ಬದುಕಿ ಉಳಿದ ಸ್ವಲ್ಪ ಜನರೊಡನೆ ಬಂದು ಪಟ್ಟಣವನ್ನು ಪ್ರವೇಶಿಸಲಿಕ್ಕೆ ಹೋಗಲು, ಪಟ್ಟಣದ ದ್ವಾರಗಳೆಲ್ಲ ಇಕ್ಕಿದ್ದು, ಕಾವಲುಗಾರರು ಒಳಗೆ ಬರಗೊಡದಾದರು. ಇದನ್ನು ನೋಡಿ ಜಸವಂತಸಿಂಗನು ಆಶ್ಚರ್ಯ ಮಗ್ನನಾದನು. ತಾನು ಜೋಧಪುರದ ಪ್ರತ್ಯಕ್ಷ ಒಡೆಯನಿದ್ದು, ತನ್ನ ಪುರಪ್ರವೇಶಕ್ಕೆ ಪ್ರತಿಬಂಧವಾಗುವದರ ಅರ್ಥವೇನೆಂಬದೇ ಆತನಿಗೆ ತಿಳಿಯದಾಯಿತು. ಕಾವಲುಗಾರರಿಗೆ ತಾನು ಯಾರೆಂಬದನ್ನು ಮೊದಲು ತಿಳಿಸಿ ಹೇಳದ್ದರಿಂದ ಹೀಗಾಗಿರಬಹುದೆಂದು ಆತನು ಸಮಾಧಾನ ಮಾಡಿಕೊಂಡು, ತಾನು ಯಾರೆಂಬದನ್ನು ಸ್ಪಷ್ಟವಾಗಿ ತಿಳಿಸಿ, ಪುರವನ್ನು ಪ್ರವೇಶಿಸಲಿಕ್ಕೆ ಯತ್ನಿಸಿದನು; ಆದರೆ ವ್ಯರ್ಥವು. ನೀವು ಯಾರೇ ಇರಲಿ, ಅದರಲ್ಲಿ ಜಸವಂತಸಿಂಗಮಹಾರಾಜರಿದ್ದರಂತೂ ಅವರನ್ನು ಒಳಗೆ ಬಿಡಲೇ ಬಾರದೆಂದು ಮಹಾರಾಣಿ ಚಂದ್ರಾವತೀ ಸಾಹೇಬರವರ ಕಟ್ಟಪ್ಪಣೆಯಾಗಿರುವದು; ಎಂದು ಕಾವಲುಗಾರರಿಂದ ಸ್ಪಷ್ಟವಾಗಿ ಉತ್ತರವು ದೊರೆಯಿತು. ಪಟ್ಟಣವನ್ನು ಸುತ್ತುತ್ತ ಸುತ್ತುತ್ತ, ಈ ಪಲಾಯನ ಸೂಕ್ತವನ್ನು ಪಠಿಸಿದ ಮಂದಿಯು ಚಂದ್ರಾವತೀರಾಣಿಯು ಕುಳಿತಿರುವ ಕೊತ್ತಳದ ಬಳಿಗೆ ಬಂದಿತು. ಅವರಲ್ಲಿ ಜಸವಂತಸಿಂಗನೂ ಇದ್ದನು. ರಾಣಿಯ ಬಳಿಯಲ್ಲಿ ಚಿಕ್ಕವನಾದ ಪೃಥ್ವೀಸಿಂಗನ ಹೊರತು ಉಳಿದವರಾರೂ ಇದ್ದಿಲ್ಲ. ಈಕೆಯು ರಾಣಿಯೇ ಇರುವಳೆಂದು ಜಸವಂತಸಿಂಗನ ಸರದಾರರಲ್ಲಿ

ಒಬ್ಬನು ಗೊತ್ತು ಹಿಡಿದನು. ಈಕೆಯನ್ನು ಪ್ರತ್ಯಕ್ಷ ಪ್ರಾರ್ಥಿಸಿದರೆ, ಒಳಗೆ ಹೋಗಲಿಕ್ಕೆ ಹಾದಿ ಸಿಗಬಹುದೆಂದು ತಿಳಿದು ಆತನು ರಾಣಿಯನ್ನು ಕುರಿತು— ನಮ್ಮ ಒಡೆಯನೂ, ನಿಮ್ಮ ಪತಿಯೂ ಆದ ಮಹಾರಾಣಾ ಜಸವಂತಸಿಂಗ ರವರು ಬಂದಿರುವರು. ಅವರನ್ನು ಒಳಗೆ ಬಿಡುವದಕ್ಕಾಗಿ ಕಾವಲುಗಾರ ರನ್ನು ಆಜ್ಞಾಪಿಸಿ ಒಳಗೆ ಕರಕೊಳ್ಳಿರಿ, ಎಂದು ಬೇಡಿಕೊಂಡನು. ಅದಕ್ಕೆ ರಾಣಿಯು ಕೊತ್ತಳದ ಮೇಲಿಂದಲೇ ಸಮಾಧಾನದಿಂದ— ಜೋಧಪುರದ ಮನೆತನದ ವೀರಜನನಿಯ ವೀರಪುತ್ರನು ಸಂಗ್ರಾಮದಲ್ಲಿ ಜಯವನ್ನು ಪಡೆಯುವನು, ಇಲ್ಲವೆ ಸಾಯುವನು; ಹಾಗೆ ಮಾಡದೆ ಸೋತಮೇಲೆ ಮೋರೆ ತಗ್ಗಿಸಿಕೊಂಡು ತಿರುಗಿ ಬಂದಿರುವನೆ ? ಎಂದಿಗೂ ಬಂದಿರಲಿಕ್ಕಿಲ್ಲ. ನಿಮ್ಮಂಥ ನಿರ್ಲಜ್ಜ ಜನರು ರಜಪೂತರ ಹೆಸರಿಗೆ ಕುಂದನ್ನುಂಟು ಮಾಡ ಲಿಕ್ಕೆ ಹುಟ್ಟಿರುತ್ತೀರಿ. ನೀವು ನನ್ನ ಪತಿಯೊಡನೆ ಯುದ್ಧ ಭೂಮಿಯಲ್ಲಿ ಯಾಕೆ ಮರಣ ಹೊಂದಲಿಲ್ಲ ? ಬಂದ ದಾರಿಯಿಂದ ತಿರುಗಿ ಹೋಗಿರಿ. ಸುಳ್ಳೊಂದು ಸೊಟ್ಟೊಂದು ಹೇಳಿ ನನ್ನನ್ನು ಮೋಸಗೊಳಿಸಬೇಡಿರಿ. ನನ್ನ ಪತಿ ಮಹಾರಾಜರು ಸೋತ ಬಳಿಕ ಹೀಗೆ ಎಂದಿಗೂ ತಿರುಗಿ ಬರಲಾರರು. ನಿಮ್ಮಂಥ ಅಂಜುಬುರುಕ ಹೇಡಿ ಜನರನ್ನು ಒಂದು ಕ್ಷಣವಾದರೂ ನಾನು ಜೋಧಪುರದಲ್ಲಿ ನಿಲ್ಲಗೊಡಲಿಕ್ಕಿಲ್ಲ.

ಕೋಟೆಯ ಕೆಳಗೆ ಒತ್ತಟ್ಟಿಗೆ ಮರೆಗೆ ನಿಂತಿದ್ದ ರಾಣಾ ಜಸವಂತಸಿಂಗನು ಈ ಮಾತುಗಳನ್ನು ಕೇಳುತ್ತಿದ್ದನು. ಆಗ ಆತನ ಅವಸ್ಥೆಯು ಏನಾಗಿರ ಬಹುವೆಂಬದನ್ನು ಆತನೆ ಬಲ್ಲನು! ಮಹಾರಾಣಿಯು ಕೋಟೆಯ ಮೇಲಿ ನಿಂದ ಹೀಗೆ ಮಾತಾಡುತ್ತಿರುವಾಗ ಉಳಿದ ಸರದಾರರು, ಜಸವಂತಸಿಂಗನು ಇನ್ನು ಏನು ಮಾಡುವನೆಂದು ಮನಸಿನಲ್ಲಿ ತರ್ಕಿಸುತ್ತ ಆತನ ಕಡೆಗೆ ನೋಡುತ್ತಲಿದ್ದರು. ಎಷ್ಟು ಹೊತ್ತಾದರೂ ಏನು ಮಾತಾಡಬೇಕೆಂಬದು ರಾಣಾನಿಗೆ ತಿಳಿಯಲೊಲ್ಲದು. ಕಡೆಗೆ ಆತನು ನಿರುಪಾಯನಾಗಿ ಉಚ್ಚ ಸ್ವರದಿಂದ ತನ್ನ ಹೆಂಡತಿಗೆ— ನಾನು ಜಸವಂತಸಿಂಗನು ನಿಜವಾಗಿಯೇ ಬಂದಿರುತ್ತೇನೆ. ನಿನ್ನ ಮತದಂತೆ ನಾನು ಮಾಡತಕ್ಕವನು; ಆದರೆ ಹಾಗೆ ಮಾಡದಿರುವದಕ್ಕೆ ಅನೇಕ ಕಾರಣಗಳಿರುವವು. ಅವನ್ನು ಇಲ್ಲಿಂದ ಹೇಳ ಲಿಕ್ಕೆ ಬರುವಹಾಗಿಲ್ಲ. ಈಗ ಬಾಗಿಲು ತೆಗಿಸಿ ನನಗೆ ಒಳಗೆ ಬರಗೊಡಿಸು.

ಈಗ ಆಗಿರುವ ಶೋಭೆಯು ಸಾಕಷ್ಟು ಆಯಿತು, ಎಂದು ಹೇಳಿದನು. ಅದನ್ನು ಕೇಳಿ ರಾಣಿಯು ಗಟ್ಟಿಯಾಗಿ ನಕ್ಕಳು. ಆ ಮೇಲೆ ಒಮ್ಮೆಲೆ ಹುಬ್ಬು ಏರಿಸಿ ತಿರಸ್ಕಾರದಿಂದ ಕೆಳಗೆ ನೋಡುತ್ತ–ಇಂಥ ಮೋಸದ ಮಾತು ಗಳಿಂದ ನಾನು ಎಂದಿಗೂ ಮೋಸಹೋಗುವವಳಲ್ಲ. ನನ್ನ ಪತಿಯು ಹೀಗೆ ಎಂದಿಗೂ ಓಡಿ ಬರಲಾರನು. ತಾವು ಓಡಿ ಬಂದದ್ದನ್ನು ನೋಡಿ ಚಿಕ್ಕ ಮಗುವಾದ ಈ ಪೃಥ್ವೀಸಿಂಗನು ಏನು ಕಲಿತಾನೆಂಬದರ ಎಚ್ಚರವು ಅವರಿಗೆ ಇರಲಿಕ್ಕಿಲ್ಲವೋ? ಅಂದ ಬಳಿಕ ಇನ್ನೂ ಅವರು ಯುದ್ಧ ಮಾಡುತ್ತ ಸಮರ ಭೂಮಿಯಲ್ಲಿಯೇ ಇರುವರೆಂಬ ನಂಬಿಗೆಯು ನನಗಿರುವದು. ಆದ್ದರಿಂದ ಅವರೊಬ್ಬರನ್ನೇ ಸಮರ ಭೂಮಿಯಲ್ಲಿ ಬಿಟ್ಟು ಓಡಿ ಬಂದಿರುವ ನೀವು, ಒಳ್ಳೆಯ ಮಾತಿನಿಂದ ತಿರುಗಿ ಹೋಗಿರಿ; ಇಲ್ಲದಿದ್ದರೆ ಈಗಲೇ ದಂಡನ್ನು ನಿಮ್ಮ ಬೆನ್ನ ಹಿಂದೆ ಕಳಿಸಿ, ನಿಮ್ಮನ್ನು ಹಿಡತರಿಸಿ ಆಗಸಿಗೊಬ್ಬೊಬ್ಬರಂತೆ ಗಲ್ಲಿಗೆ ಹಾಕಿಸುವೆನು; ಅಂದರೆ, ಸ್ವಾಮಿಯನ್ನು ಬಿಟ್ಟು ಯುದ್ಧ ಭೂಮಿ ಯಿಂದ ಓಡಿ ಬರುವವರ ಗತಿಯು ಏನಾಗುವದೆಂಬದನ್ನು ಜಗತ್ತಿಗೆ ತೋರಿಸಿ ದಂತಾಗುವದು, ಅನ್ನಲು, ಜಸವಂತಸಿಂಗನಿಗೆ ಒಳ್ಳೇ ಬಿಗಿ ಬಂದಿತು. ಆತನು ಯುಕ್ತಿ ಪ್ರಯುಕ್ತಿಯಿಂದ ಮಾತಾಡಿದ್ದರ ಪ್ರಯೋಜನವು ಏನೂ ಆಗ ದಾಯಿತು. ಕಡೆಗೆ ರಾಣಾನು ಹೆಂಡತಿಯನ್ನು ಬೆದರಿಸಿ ನೋಡಿದನು. ಬೆದರಿಕೆ ಹಾಕಿದ್ದರಿಂದಂತು ಸಂತಾಪದಿಂದ ರಾಣಿಯ ಮೈಮೇಲಿನ ಎಚ್ಚರವು ತಪ್ಪಿತು. ಹಿಂದುಮುಂದಿನ ವಿಚಾರವಿಲ್ಲದೆ ಆಕೆಯು ಗಂಡನನ್ನು ಕುರಿತು–ರಣಾಂಗಣದಿಂದ ಓಡಿ ಬಂದವರಿಗೆ ಹೆಂಗಸರಾದರೂ ಹೆದರುವರೋ ಇಲ್ಲವೋ ಎಂಬದಿಷ್ಟೂ ಗೊತ್ತಿಲ್ಲದ ಬಳಿಕ ಏನು ಹೇಳಬೇಕು? ಹೆಂಗಸರನ್ನು ಬೆದರಿಸುವದಷ್ಟೇ ಈಗ ಕೈಯಲ್ಲಿ ಉಳಿದಿರುತ್ತದೆ. ಎಂದು ಸ್ಪಷ್ಟವಾಗಿ ಉತ್ತರಕೊಟ್ಟಳು !

ಇದನ್ನು ಕೇಳಿ ಜಸವಂತಸಿಂಗನು ಅತ್ಯಂತ ವ್ಯಸನಪಟ್ಟನು. ಇನ್ನು ಜೋಧಪುರವನ್ನು ಪ್ರವೇಶಿಸುವ ಆಶೆಯು ಆತನಿಗುಳಿಯಲಿಲ್ಲ. ಆತನು ನಿರುಪಾಯನಾಗಿ ಅಲ್ಲಿಂದ ಐದಾರು ಹರದಾರಿಯ ಮೇಲಿರುವ ಒಂದು ಶಿವ ಮಂದಿರದಲ್ಲಿ ಇರಹತ್ತಿದನು. ತೀರಾ ಕೈಮೀರುವವರೆಗೆ ಯುದ್ಧ ಮಾಡಿದ್ದ ರಿಂದ ಆತನ ಮೈಮೇಲೆ ಹಲವು ಗಾಯಗಳಾಗಿದ್ದವು; ಆದರೆ ಹಾದಿಯಲ್ಲಿ

ಶತ್ರುಗಳು ಹಿಡಿದಾರೆಂಬ ಭಯದಿಂದ ಆತನು ತನಗಾದ ಘಾಯಗಳನ್ನು ನೋಡದೆ ಬಗೆಬಗೆಯ ಸೋಗುಗಳನ್ನು ಹಾಕಿಕೊಂಡು ಬಹು ಶ್ರಮಪಟ್ಟು ಜೋಧಪುರಕ್ಕೆ ಬಂದಿದ್ದನು. ಮೇಲೆ ಹೇಳಿದಂತೆ ನಿರಾಶೆಯಾದದ್ದರಿಂದ ಆತನು ಕೈಕಾಲುಗೆಟ್ಟನು. ಆತನು ಶಿವಮಂದಿರದಲ್ಲಿ ಕುಳಿತು ಇನ್ನು ಮುಂದೆ ಏನು ಮಾಡಬೇಕೆಂದು ವಿಚಾರ ಮಾಡುತ್ತಿರಲು, ಆತನಿಗೆ ಗುಡ್ಡದಂಥ ಚಳಿ ಬಂದು ಉಗ್ರ ಜ್ವರಗಳು ದೇಹವನ್ನು ಆವರಿಸಿದವು. ಆತನ ಬೇನೆ ಹೆಚ್ಚಾಗುತ್ತ ಹೋಯಿತು. ಮುಂದೆ ಒಂಬತ್ತು ದಿನಗಳವರೆಗೆ ರಾಣಿಯು ಅದನ್ನು ನಿಜವೆಂದು ತಿಳಿಯಲೇ ಇಲ್ಲ; ಆದರೆ ದಿನದಿನಕ್ಕೆ ಮೇಲಿಂದ ಮೇಲೆ ಜನರು ಬಂದು ಸುದ್ದಿಯನ್ನು ಹೇಳಹತ್ತಿದ್ದರಿಂದ, ಏನದೆ ನೋಡಬೇಕೆಂದು ಯೋಚಿಸಿ, ದಾಸಿಯ ವೇಷದಿಂದ ರಾತ್ರಿ ಆಕೆಯು ಶಿವ ಮಂದಿರಕ್ಕೆ ಹೋದಳು. ಆಗ ನಿಜವಾಗಿ ತನ್ನ ಪತಿಯು ವ್ಯಾಧಿ ಪೀಡಿತನಾಗಿದ್ದು, ಆತನ ಅಸ್ಥಿ ಚರ್ಮಗಳು ಮಾತ್ರ ಉಳಿದಿದ್ದವು. ಮೊದಲಿನ ತೇಜಸ್ಸು ಆತನಲ್ಲಿ ಲೇಶವಾದರೂ ಉಳಿದಿದ್ದಿಲ್ಲ. ಜನರ ಸಹಾಯದ ಹೊರತು ಮಲಗಿದ ಸ್ಥಳದಿಂದ ಆತನು ಉಲುಕಲಾರದವನಾಗಿದ್ದನು. ಆತನ ಆ ಸ್ಥಿತಿಯನ್ನು ನೋಡಿದ ಕೂಡಲೆ, ತನ್ನ ನಿಷ್ಠುರತನದ ಬಗ್ಗೆ ರಾಣಿಗೆ ಬಹಳ ಪಶ್ಚಾತ್ತಾಪವಾಯಿತು. ಆಕೆಯು ಆತುರದಿಂದ ಪತಿಯ ಬಳಿಗೆ ಹೋಗಿ ಆತನ ಚರಣಗಳನ್ನು ಗಟ್ಟಿಯಾಗಿ ಹಿಡಕೊಂಡು ಬಿಕ್ಕಿ ಬಿಕ್ಕಿ ಅಳುತ್ತ ಅನ್ನ ಅಪರಾಧವನ್ನು ಕ್ಷಮಿಸಬೇಕೆಂದು ಆತನನ್ನು ಪ್ರಾರ್ಥಿಸಿದಳು. ಮಹಾರಾಜನು ರಾಣಿಯ ಮೇಲೆ ಬಹಳ ಸಿಟ್ಟಾಗಿದ್ದನು; ಆದರೆ ತನ್ನ ಮೇಲಿದ್ದ ಆಕೆಯ ನಿಷ್ಠೆಯ ಬಗ್ಗೆ ಆತನಿಗೆ ತಿಲಮಾತ್ರವಾದರೂ ಸಂಶಯವಿದ್ದಿಲ್ಲ. ಆಕೆಯ ಉದ್ವೇಗದ, ಹಾಗು ಸಂತಾಪದ ಭರದಲ್ಲಿ ಹೀಗೆ ಮಾಡಿದಳೆಂದು ಮನಸ್ಸಿನಲ್ಲಿ ತಂದುಕೊಂಡು, ಆತನು ತನ್ನ ಕ್ಷೀಣಸ್ವರದಿಂದ ಆಕೆಗೆ "ಶೋಕಮಾಡಬೇಡೆ"ಂದು ಹೇಳಿದನು. ಚಂದ್ರಾವತಿಯು ಆ ಕ್ಷಣದಿಂದ ಅಲ್ಲಿಯೇ ಪತಿಯ ಬಳಿಯಲ್ಲಿದ್ದು ಮನಃಪೂರ್ವಕವಾಗಿ ಆತನ ಸೇವೆಯನ್ನು ಮಾಡಿ ಆ ಬೇನೆಯಿಂದ ಆತನನ್ನು ಉಳಿಸಿಕೊಂಡಳು. ಮಹಾರಾಣಿಯ ಮೊದಲಿನ, ಹಾಗು ಎರಡನೆಯ ಈ ಕೃತಿಗಳಿಂದ ಆಕೆಯ ವೀರಪತ್ನಿತ್ವವೂ, ಪಾತಿವ್ರತ್ಯವೂ ಜಗತ್ತಿನಲ್ಲಿ ಚನ್ನಾಗಿ ಪ್ರಕಟವಾದವು. ಅಂದಿನಿಂದ ಆಕೆಯ ವಿಷಯವಾಗಿ ರಜಪೂತ

ಸ್ಥಾನದಲ್ಲೆಲ್ಲ ವಿಲಕ್ಷಣ ಆದರವೂ, ಅಭಿಮಾನವೂ ಪಸರಿಸಿದವು. ಔರಂಗಜೇಬನ ದುಷ್ಕೃತನದ ಮೂಲಕ ಜಸವಂತಸಿಂಗನು ಸೋಸಬೇಕಾದ ಸಂಕಟದಲ್ಲಿ ಚಂದ್ರಾವತಿಯು ನಿಜವಾದ ತನ್ನ ಅರ್ಧಾಂಗಿಯ ಧರ್ಮವನ್ನು ಪತಿಯ ಅನುಭವಕ್ಕೆ ತಂದುಕೊಟ್ಟಳು. ಮುಂದೆ ಜಸವಂತಸಿಂಗನು ಔರಂಗಜೇಬನ ಅಪ್ಪಣೆಯಿಂದ ಪೃಥ್ವೀಸಿಂಗನಿಗೆ ಜೋಧಪುರದ ರಾಜ್ಯಕಾರಭಾರವನ್ನು ಒಪ್ಪಿಸಿ, ತಾನು ಕಾಬೂಲಕ್ಕೆ ಹೋಗಬೇಕಾಯಿತು. ಆಗ ರಾಣಾನು ಹೆಂಡತಿಗೆ—ನೀನು ಜೋಧಪುರದಲ್ಲಿದ್ದು ಮಗನಿಗೆ ರಾಜ್ಯಕಾರಭಾರದಲ್ಲಿ ಸಹಾಯ ಮಾಡೆಂದು ಆದರದಿಂದ ಹೇಳಿದನು; ಆದರೆ ಪತಿವ್ರತೆಯಾದ ಚಂದ್ರಾವತಿಯು ಪುತ್ರ ಮೋಹಕ್ಕೆ ಸಿಲುಕದೆ "ನೀವಿದ್ದಲ್ಲಿ ನಾನು" ಎಂದು ಹೇಳಿ ಪತಿಯೊಡನೆ ಕಾಬೂಲಕ್ಕೆ ಹೋಗಿದ್ದಳು. ಮುಂದೆ ಸ್ವಲ್ಪದಿನಗಳಲ್ಲಿಯೇ ಆಕೆಯು ಮೇಲೆ ಹೇಳಿದಂತೆ ಅಲ್ಲಿ ಪುತ್ರವಿಯೋಗ ದುಃಖವನ್ನಲ್ಲದೆ, ಪತಿವಿಯೋಗ ದುಃಖವನ್ನೂ ಅನುಭವಿಸಬೇಕಾಯಿತು.

ಪತಿಯ ಮರಣದಿಂದ ಚಂದ್ರಾವತಿಯು ದುಃಖಪೀಡಿತಳಾಗಿ ಸಹಗಮನ ಮಾಡುವದನ್ನು ನಿಶ್ಚಯಿಸಿದಳು. ಗರ್ಭವತಿಗೆ ಸಹಗಮನವು ನಿಷೇಧವೆಂದು ಎಷ್ಟು ಹೇಳಿದರೂ ಆಕೆಯು ಕೇಳದಾದಳು. ಆಕೆಯು ತನ್ನ ಹಟವನ್ನು ನಡಿಸುವ ಹಾದಿಯನ್ನೇ ಹಿಡಿದಳು. ಇಂಥ ಪ್ರಸಂಗದಲ್ಲಿ ಮಹಾಸ್ವಾಮಿಭಕ್ತನಾದ ದುರ್ಗಾದಾಸನ ಹೊರತು ಆಕೆಗೆ ಸಮಾಧಾನ ಹೇಳಲಿಕ್ಕೆ ಯಾರೂ ಸಮರ್ಥರಿದ್ದಿಲ್ಲ. ಆತನು ಆಕೆಯ ಸಮಾಧಾನವನ್ನು ಮಾಡಿಯೇ ತೀರೇನೆಂದು ಆಕೆಯಂತೆಯೇ ಹಟ ಹಿಡಿದು, ಮನಸ್ಸಿಗೆ ಸ್ವಲ್ಪ ತ್ರಾಸ ಮಾಡಿಕೊಂಡು ಆಕೆಯನ್ನು ಕುರಿತು— ಮಹಾರಾಣೀಸಾಹೇಬರೇ, ನಿಮ್ಮ ಮನಸ್ಸಿನಲ್ಲಿ ಜೋಧಪುರದ ಶೂರ ಮನೆತನದ ವಂಶಕ್ಷಯ ಮಾಡುವದಿರುತ್ತದೇನು ? ಯಾವನ ಮನೆತನಕ್ಕೆ ಸಿಂಹಾಸನವು ಹೋಗಬಾರದೆಂದು ಮಹಾರಾಣಾನವರು ಇಷ್ಟು ಪ್ರಯತ್ನ ಮಾಡಿದರೋ, ಯಾವನನ್ನು ಅವರು ರಾಜ್ಯದ ಗಡಿಬಿಡಿಸಿ ಹೊರಗೆ ಹಾಕಿದರೋ ಆ ನಿಮ್ಮ ವೈದುನನ ವಂಶಕ್ಕೆ ಜೋಧಪುರದ ಸಿಂಹಾಸನವು ಹೋಗಿ, ಆ ಸಿಂಹಾಸನದ ದುರ್ದೆಸೆಯಾಗುವದು ನಿಮ್ಮ ಮನಸ್ಸಿನಲ್ಲಿದ್ದರೆ, ನಿರ್ಬಾಧವಾಗಿ ಸಹಗಮನ ಮಾಡಿರಿ; ಆದರೆ ಪ್ರಾಣವನ್ನು ಬಿಡುವಾಗ ಹೇಳಿದ ಮಹಾರಾಣಾನವರ ಮಾತುಗಳನ್ನು

ಅವರಿಗಾದ ದೃಷ್ಟಾಂತವನ್ನೂ ಮನಸ್ಸಿನಲ್ಲಿ ತಂದು ಅವರ ಇಚ್ಛೆಯನ್ನು ಪೂರ್ಣಮಾಡುವದಿದ್ದರೆ, ಸಹಗಮನವನ್ನು ರಹಿತಮಾಡಿರಿ. ನೀವು ತಿಳಿದವರಿರುತ್ತೀರಿ. ಜೋಧಪುರದ ರಾಜವಂಶಕ್ಷಯದ ಪಾಪವನ್ನು ಹೇಳಿ ಕೇಳಿ ಉಡಿಯಲ್ಲಿ ಕಟ್ಟಿಕೊಳ್ಳಲಿಕ್ಕೆ ನೀವು ಎಂದಿಗೂ ಒಪ್ಪಲಿಕ್ಕಿಲ್ಲ. ನಾನು ತಮ್ಮ ದಾಸನು, ಹೀಗೆ ಒತ್ತಾಯದಿಂದ ತಮಗೆ ಹೇಳಲಿಕ್ಕೆ ಸಮರ್ಥನಲ್ಲ; ಆದರೆ ಅಂಥ ಹೊತ್ತು ಬಂದದ್ದರಿಂದ ಮಾತಾಡದಿದ್ದರೆ ನಿರ್ವಾಹವಿಲ್ಲದಾಯಿತು. ಇದಕ್ಕೂ ಹೆಚ್ಚು ನಾನೇನು ಮಾಡುವಹಾಗಿದ್ದೇನೆ ?

ದುರ್ಗಾದಾಸನು ಮಹಾಸ್ವಾಮಿಭಕ್ತನು. ಆತನ ಬೆಲೆಯನ್ನು ಚಂದ್ರಾವತಿಯು ಪೂರ್ಣವಾಗಿ ಅರಿತಿದ್ದಳು. ಆತನು ಯಾವ ಉದ್ದೇಶದಿಂದ ಇಷ್ಟು ಝುಳ ಝುಳ ಮಾತಾಡುತ್ತಾನೆಂಬದು ಆಕೆಯ ಮನಸ್ಸಿಗೆ ಹೊಳೆದಿತ್ತು. ಆದ್ದರಿಂದ ಆತನ ಮಾತಿನ ಪರಿಣಾಮವು ಮಹಾರಾಣಿಯ ಮನಸ್ಸಿನ ಮೇಲೆ ಆಗಿ, ಆಕೆಯು ವಿಚಾರಮಾಡುತ್ತ ಸುಮ್ಮನೆ ಕುಳಿತುಕೊಂಡಳು. ಈ ಸಂಧಿಯನ್ನು ಸಾಧಿಸಿ ದುರ್ಗಾದಾಸನು ಮತ್ತೆ ನಾಲ್ಕು ಮಾತುಗಳನ್ನು ಉಪದೇಶಿಸಲು, ಚಂದ್ರಾವತಿಯು ಪೂರ್ಣವಾಗ ಎಚ್ಚತ್ತು ತನ್ನ ದುಃಖವನ್ನು ನುಂಗಿಕೊಂಡಳು. ತನ್ನ ಪತಿಯ ಭವಿಷ್ಯದಂತೆ ನಿಜವಾಗಿಯೇ ತನಗೆ ಪುತ್ರನು ಜನಿಸುವದರಿಂದ ಆತನ ಕೈಯಿಂದ ಜೋಧಪುರದ ಹೆಸರನ್ನು ಕಾಯಬೇಕೆಂದು ಆಕೆಯು ನಿಶ್ಚಯಿಸಿದಳು. ಕೂಡಲೆ ಪತಿಯ ಉತ್ತರ ಕ್ರಿಯೆಗಳನ್ನು ಯಥಾಸ್ಥಿತವಾಗಿ ಸಮಾಧಾನದಿಂದ ನಡೆಯಗೊಟ್ಟಳು. ಮಹಾರಾಣಾನಿಗೆ ಅಗ್ನಿಸಂಸ್ಕಾರವನ್ನು ಮಾಡುವ ಮೊದಲು, ದುರ್ಗಾದಾಸನು ತನ್ನ ಸಂಗಡ ತನ್ನ ಅತ್ಯಂತ ವಿಶ್ವಾಸದ ಐದು ಜನರನ್ನು ಕರಕೊಂಡು ಮಹಾರಾಣಿಯಬಳಿಗೆ ಹೋಗಿ,ತಾವು ಸ್ವಾಮಿನಿಷ್ಠರಾಗಿರುವೆವೆಂದು ಆಣೆ ಮಾಡಿದನು. ರಾಣಾನ ಉತ್ತರಕ್ರಿಯೆಗಳು ಯಥಾಪ್ರಕಾರವಾಗಿ ಸಾಗಹತ್ತಿದವು. ತನ್ನ ಮಗನನ್ನು ಔರಂಗಜೇಬನೇ ಕೊಲ್ಲಿಸಿದನೆಂಬ ಸಂಶಯವು ಜಸವಂತಸಿಂಗನ ಮನಸ್ಸಿನಲ್ಲಿ ಬಂದಂತೆ, ಚಂದ್ರಾವತೀರಾಣಿಯ ಮನಸಿನಲ್ಲಿಯೂ, ದುರ್ಗಾದಾಸನ ಮನಸ್ಸಿನಲ್ಲಿಯೂ ಬಂದಿತ್ತು. ಒಬ್ಬ ಮುಸಲ್ಮಾನನು ತಂದು ಕೊಟ್ಟ ಪತ್ರದ ಹೊರತು ಬೇರೆ ಯಾವ ಪತ್ರಗಳೂ ಬಾರದ್ದರಿಂದ, ಅವರ ಸಂಶಯವು ನಿಶ್ಚಯದ ಸ್ವರೂಪವನ್ನು ಹೊಂದಿತು. ಆ ದುಷ್ಟ ಬಾದಶಹನ

ಇನ್ನೂ ಏನೇನು ಮಾಡುತ್ತಾನೋ, ಎಂದು ಅವರು ವಿಚಾರಮಗ್ನರಾಗಿದ್ದರು. ಜಸವಂತಸಿಂಗನು ಸತ್ತು ಇನ್ನೂ ಹತ್ತುದಿವಸ ಪೂರ್ಣವಾಗಿದ್ದಿಲ್ಲ, ಅಷ್ಟರಲ್ಲಿ ಔರಂಗಜೇಬನು ಮತ್ತೊಂದು ಪತ್ರವನ್ನು ಬರೆದನು. ಅದರಲ್ಲಿ ಜಸವಂತಸಿಂಗನಿಗೆ ಕಾಬೂಲದಿಂದ ಹೊರಟು ದಿಲ್ಲಿಗೆ ಬರಬೇಕೆಂದು ಬರೆದಿತ್ತು. ಅದನ್ನು ಓದಿ ದುರ್ಗಾದಾಸನು—ಬಾದಶಹನ ಸೇಡು ತೀರಿಸಿಕೊಳ್ಳುವ ಇಚ್ಛೆಯು ಇಷ್ಟಕ್ಕೇ ಮುಗಿದಂತೆ ತೋರುವದಿಲ್ಲ. ಮಹಾರಾಜರನ್ನು ದಿಲ್ಲಿಗೆ ಕರಿಸಿಕೊಂಡು ಏನು ಮಾಡಬೇಕೆಂದು ಯೋಚಿಸಿದ್ದನೋ ಎನೋ ? ಮಹಾರಾಜರಂತು ಪುತ್ರಶೋಕದಿಂದ ದೇಹವಿಟ್ಟರು. ಮಹಾರಾಣಿಯವರ ಪ್ರಸೂತಿಕಾಲವು ತೀರ ಸಮೀಪಿಸಿದೆ. ಇಂಥ ಸ್ಥಿತಿಯಲ್ಲಿ ನಾನು ದಿಲ್ಲಿಗೆ ಹೋದರೂ ಕಷ್ಟ, ಬಿಟ್ಟರೂ ಕಷ್ಟ. ಮಹಾರಾಜರ ಮರಣದ ಸುದ್ದಿಯು ತಿಳಿದರೆ ಬಾದಶಹನು ಏನು ಮಾಡುವನೋ ಏನೋ, ಎಂದು ಆ ಮಹಾ ಸ್ವಾಮಿ ಭಕ್ತನು ಪರಿಪರಿಯಾಗಿ ಚಿಂತಿಸುತ್ತಿರಲು, ಒಂದು ಪ್ರಹರದ ಮೇಲೆ ಆತನದೊಂದು ಚಿಂತಿಯು ಕಡಿದು, ಮಹಾರಾಣಿಯು ಗಂಡುಮಗುವನ್ನು ಹೆತ್ತಳು.

## ೬ನೆಯ ಪ್ರಕರಣ

# ಸಾಹಸೋಪಕ್ರಮ.

ಚಂದ್ರಾವತೀ ರಾಣಿಗೆ ಪುತ್ರೋತ್ಸವವಾದದ್ದರಿಂದ ಯಾವತ್ತು ಸ್ವಾಮಿ ಭಕ್ತ ಮಂಡಲಿಗೆ ವಿಲಕ್ಷಣ ಆನಂದವಾಯಿತು. ಪೃಥ್ವೀಸಿಂಗನೂ, ಜಸ ವಂತಸಿಂಗನೂ ಇನ್ನೂ ಮೊನ್ನೆ ಮೊನ್ನೆ ಸತ್ತಿರಲು, ಪುತ್ರೋತ್ಸವದಿಂದ ಆನಂದವಾಯಿತೆಂದು ಹೇಳುವದು ವಿಚಿತ್ರವಾಗಿ ತೋರಬಹುದು; ಆದರೆ ಆಗಿನ ಪ್ರಸಂಗ, ಸ್ಥಳ, ಕಾಲಗಳನ್ನು ವಿಚಾರಿಸಿದರೆ, ಅಂಥ ದುಃಖದ ಪ್ರಸಂಗದಲ್ಲಿಯೂ ಪುತ್ರೋತ್ಸವದಿಂದ ಆನಂದವಾಗುವ ಸಂಭವವಿತ್ತು. ಕರ್ಮಧರ್ಮ ಸಂಯೋಗದಿಂದ ಗಂಡುಮಗನು ಹುಟ್ಟಿದರೆ, ಆತನನ್ನು ಮುಂದೆ ಮಾಡಿ ಜೋಧಪುರದ ಸಿಂಹಾಸನವನ್ನು ಸ್ಥಿರಪಡಿಸಬೇಕೆಂತಲೂ, ಇಷ್ಟು ದಿನ ಪರಿಪರಿಯಾಗಿ ಪೀಡಿಸಿದ ಔರಂಗಜೇಬನ ಸೇಡನ್ನು ತೀರಿಸಿ ಕೊಂಡು, ತಮ್ಮ ಕುಲಾಭಿಮಾನ-ಧರ್ಮಾಭಿಮಾನಗಳನ್ನು ಕಾಯ್ದುಕೊಳ್ಳ ಬೇಕೆಂತಲೂ ಚಂದ್ರಾವತೀ ರಾಣಿಯೂ, ದುರ್ಗಾದಾಸನೂ ತಮ್ಮ ತಮ್ಮ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿದ್ದರು. ಈ ನಿಶ್ಚಯಕ್ಕೆ ಮೂಲಾಧಾರವಾಗಿ ಮಗನು ಹುಟ್ಟಿದ್ದರಿಂದ ಅವರಿಬ್ಬರ ಮನಸ್ಸು ಕೆಲಮಟ್ಟಿಗೆ ಸಮಾಧಾನ ಹೊಂದಿದ್ದು ಆಶ್ಚರ್ಯವಲ್ಲ; ಆದರೆ ಈ ಸಮಾಧಾನವು ಬಹಳ ಹೊತ್ತು ಉಳಿಯಲಿಲ್ಲ. ಈ ಸುದ್ದಿಯು ಔರಂಗಜೇಬನಿಗೆ ಗೊತ್ತಾದರೆ, ಅವನು ಏನು ಅಪ್ಪಣೆ ಮಾಡುವನೋ ಎಂಬ ಚಿಂತೆಯು ಅವರನ್ನು ಪೀಡಿಸಹತ್ತಿತು. ಜಸವಂತಸಿಂಗನ ಬೀಜವು ಉಳಿಯಬಾರದೆಂದು ಔರಂಗಜೇಬನು ತುಂಬಾ

ಇಚ್ಛಿಸುತ್ತಿದ್ದನು. ಈ ಇಚ್ಛೆಯ ಮೂಲಕವಾಗಿಯೇ ಅವನು, ಒಬ್ಬನೇ ಮಗನಾಗಿದ್ದ ಪೃಥ್ವೀಸಿಂಗನನ್ನು ಕೊಲ್ಲಿಸಿದ್ದನು; ಈ ಇಚ್ಛೆಯ ಮೂಲಕವಾಗಿಯೇ ಅವನು, ದಿಲ್ಲಿಗೆ ಹೊರಟು ಬರಬೇಕೆಂದು ಜಸವಂತಸಿಂಗನಿಗೆ ಪತ್ರವನ್ನು ಬರೆದಿದ್ದನು; ಆದರಿಂದ ಬಾದಶಹನು ತಮಗೆ ತೊಂದರೆ ಪಡಿಸದೆ ಇರನೆಂದು ತಿಳಿದು, ದುರ್ಗಾದಾಸನು ತಾವು ಮೊದಲಿನಿಂದಲೇ ಜಾಗರೂಕವಾಗಿರತಕ್ಕದ್ದೆಂದು ಮನಸ್ಸಿನಲ್ಲಿ ಗಂಟುಹಾಕಿಕೊಂಡಿದ್ದನು. ರಾಣಿಗೆ ಹತ್ತು ದಿನಗಳಾದರೂ ಪೂರ್ಣವಾಗದೆ ಸ್ಥಳಬಿಟ್ಟು ಕದಲುವಂತೆ ಇದ್ದಿಲ್ಲ. ಮೇಲಾಗಿ ಆಕೆಯು, ಪತಿಯ, ಹಾಗು ಪುತ್ರನ ಶೋಕದಿಂದ ಬಹುಕ್ಷೀಣವಾಗಿದ್ದಳು. ಆಕೆಯ ಸೇವೆಗೆ ಹೆಂಗಸರ ಕೊರತೆಯು ವಿಶೇಷವಾಗಿತ್ತು. ಆಕೆಯು ತನ್ನ ಮರ್ಯಾದೆಗೆ ತಕ್ಕಂತೆ ದಾಸಿಯರನ್ನು ಸಂಗಡ ಕರಕೊಳ್ಳದೆ, ಎದ್ದು ಹೋಗುವವಳಂತೆ ಪತಿಯ ಸಂಗಡ ಬಂದಿದ್ದಳು; ಆದರೂ ಆಕೆಯು ಒಮ್ಮೆ ದುಃಖವನ್ನು ನುಂಗಿಕೊಂಡು ಧೈರ್ಯತಾಳಿದ ಬಳಿಕ ಯಾವದಕ್ಕೂ ಸೊಪ್ಪು ಹಾಕುವವಳಿದ್ದಿಲ್ಲ; ಆದರಿಂದ ದುರ್ಗಾದಾಸನು ಆಕೆಯ ವಿಷಯವಾಗಿ ನಿಶ್ಚಿಂತನಾಗಿದ್ದನು.

ರಾಣಿಯು ಹಡೆದು ಒಂಬತ್ತು ದಿನಗಳಾದವು; ದಿಲ್ಲಿಗೆ ಹೊರಟು ಬರಬೇಕೆಂದು ಜಸವಂತಸಿಂಗನ ಹೆಸರಿನಿಂದ ಪತ್ರ ಬಂದಬಳಿಕ ಬಾದಶಹನು ಮತ್ತೆ ಪತ್ರ ಬರೆದಿದ್ದಿಲ್ಲ. ಜಸವಂತಸಿಂಗನ ಬೆನ್ನಮೇಲೆ ಔರಂಗಜೇಬನ ಗುಪ್ತಚಾರರು ಇರುವದರಿಂದ, ಇಲ್ಲಿ ಪ್ರತಿದಿನ ನಡೆಯುವ ಸಂಗತಿಗಳು ಬಾದಶಹನ ಕಿವಿಗೆ ಮುಟ್ಟುತ್ತವೆಂಬದು ದುರ್ಗಾದಾಸನಿಗೆ ಗೊತ್ತಿತ್ತು; ಆದರಿಂದ, ಜಸವಂತಸಿಂಗನು ಸತ್ತ ಸುದ್ದಿಯನ್ನು ಕೇಳಿದ ಬಳಿಕ ಬಾದಶಹನು ಏನು ಅಪ್ಪಣೆ ಮಾಡುವನೋ, ಎಂದು ಆ ಸ್ವಾಮಿಭಕ್ತನು ಹಾದಿಯನ್ನು ನೋಡುತ್ತಿದ್ದನು. ಔರಂಗಜೇಬನ ಅಪ್ಪಣೆಯ ಹೊರತು ,ಯಾವ ಕೆಲಸ ಮಾಡಲಿಕ್ಕೂ ಆತನಿಗೆ ಸಂಕೋಚವಾಗಹತ್ತಿತು. ಬಾದಶಹನು ಅಂತರಂಗದಲ್ಲಿ ಜಸವಂತಸಿಂಗನನ್ನು ಎಷ್ಟು ದ್ವೇಷಿಸುತ್ತಿದ್ದರೂ, ಆ ಧೂರ್ತನು ಬಹಿರಂಗದಲ್ಲಿ ಸ್ನೇಹ ಭಾವದಿಂದಲೇ ನಡಕೊಳ್ಳುತ್ತಿದ್ದನು. ಇಂಥ ಪ್ರಸಂಗದಲ್ಲಿ ತಾನು ಸ್ವಲ್ಪ ತಪ್ಪಿನಡೆದರೂ ಅದನ್ನೇ ಗುಡ್ಡ ಮಾಡಿ ಬಾದಶಹನು ಪ್ರಸಿದ್ಧ ರೀತಿಯಿಂದ ತಮಗೆ ಕೇಡು ಬಗೆಯಲಿಕ್ಕೆ ಹೇಸುವವನಲ್ಲೆಂದು ಆ ಸ್ವಾಮಿ

ಭಕ್ತ ದುರ್ಗಾದಾಸನು ತಿಳಿದಿದ್ದನು. ಇನ್ನೂ ಪೂರಾ ಹತ್ತು ದಿನ ತುಂಬದ ಕೂಸಿನ ಆಶೆಯಿಂದ, ರಾಜ್ಯರೂಪವಾದ ಪ್ರಚಂಡ ಮಂದಿರವನ್ನು ನಿಲ್ಲಿಸ ಹೋಗುವದು ಸಾಮಾನ್ಯ ಸಾಹಸವಲ್ಲ. ಆ ಕೂಸನ್ನೂ, ಚಂದ್ರಾವತೀರಾಣಿ ಯನ್ನೂ ಸಾವಿರಾರು ಸಂಕಟಗಳಿಂದ ಸುರಕ್ಷಿತವಾಗಿ ಜೋಧಪುರಕ್ಕೆ ಕರ ಕೊಂಡು ಹೋಗುವದೂ, ಕರಕೊಂಡು ಹೋದಬಳಿಕ ರಾಜಪುತ್ರನು ದೊಡ್ಡ ವನಾಗುವವರೆಗೆ ಆತನನ್ನು ಸುರಕ್ಷಿತ ರಕ್ಷಿಸುವದೂ ಸುಲಭ ಕೆಲಸಗಳಲ್ಲ. ಇಂಥ ದುಸ್ಸಾಧ್ಯ ಕಾರ್ಯಗಳನ್ನು ಕೊನೆಗಾಣಿಸುವೆನೆಂದು ಜಸವಂತಸಿಂಗನ ಚರಣಸ್ಪರ್ಶಮಾಡಿ ಪ್ರತಿಜ್ಞೆಯಿಂದ ಹೇಳಿದ ಸ್ವಾಮಿಭಕ್ತ ದುರ್ಗಾದಾಸನು, ಹಗಲು ರಾತ್ರಿ ಎಷ್ಟು ವಿಚಾರಮಗ್ನನಾಗಿರಬಹುದೆಂಬದನ್ನು ವಾಚಕರೇ ತರ್ಕಿಸತಕ್ಕದ್ದು. ದುರ್ಗಾದಾಸನು ಹೀಗೆ ವಿಚಾರಮಗ್ನನಾಗಿರುವಾಗ ದಿಲ್ಲಿ ಯಿಂದ ಪತ್ರವು ಬಂದಿತು. ಜಸವಂತಸಿಂಗನು ಸತ್ತ ಸುದ್ದಿಯನ್ನು ಕೇಳಿ ಬಾದಶಹನು ಆ ಪತ್ರವನ್ನು ದುರ್ಗಾದಾಸನ ಹೆಸರಿನಿಂದ ಬರೆದಿದ್ದನು. ಅದ ರಲ್ಲಿ ಬಾದಶಹನು ದುರ್ಗಾದಾಸನನ್ನು ಒಳಿತಾಗಿ ಗೌರವಿಸಿದ್ದನು. ಜಸ ವಂತಸಿಂಗನ ಮರಣದಿಂದ ತನ್ನ ಸಿಂಹಾಸನದ ದೊಡ್ಡ ಆಧಾರಸ್ತಂಭವು ಮುರಿದಹಾಗಾಯಿತು. ಆತನು ಮೊದಲು ನಮ್ಮ ತಂದೆಯ ಅಪ್ಪಣೆ ಯಿಂದಲೂ, ಆಮೇಲೆ ನಮ್ಮ ಅಣ್ಣನ ಪಕ್ಷದಿಂದಲೂ ನನಗೆ ವಿರೋಧಿ ಯಾಗಿ ನಡಕೊಂಡರೂ, ನನ್ನ ಚಾಕರಿಗೆ ಬಂದಬಳಿಕ ಆತನು ಆ ವಿರೋಧ ವನ್ನೆಲ್ಲ ಮರೆತು ನನ್ನ ಸಂಗಡ ಬಹು ಪ್ರೇಮದಿಂದಲೂ, ನಿಷ್ಠೆಯಿಂದಲೂ, ಸರಳತನದಿಂದಲೂ ನಡಕೊಂಡನು. ಜಸವಂತಸಿಂಗನಂಥ ಸರದಾರನೂ, ವೀರನೂ, ಸ್ವಾಮಿಭಕ್ತನೂ, ಮತ್ಸದ್ದಿಯೂ ಮತ್ತೊಬ್ಬನು ದೊರೆಯುವದು ದುರ್ಲಭವು. ಇಂಥವನ ಪರಿಪಾಲದ ಸಮಾಚಾರವನ್ನು ನಾನು ವಿಚಾ ರಿಸುವದು ಅವಶ್ಯವಾಗಿರುವದು. ಅದು ನನ್ನ ಕರ್ತವ್ಯವೆಂತಲೇ ತಿಳಿದು ನಾನು ಈ ಪತ್ರವನ್ನು ಬರೆದಿರುತ್ತೇನೆ. ಈಗ ಕಳಿಸಿರುವ ನಮ್ಮ ಜನರ ಸಂಗಡ ರಾಣಿಯನ್ನು ಎಚ್ಚರದಿಂದ ದಿಲ್ಲಿಗೆ ಕರಕೊಂಡು ಬರಬೇಕು. ಆಕೆಯು ಈಗ ಯಾವ ಸ್ಥಿತಿಯಲ್ಲಿರುವಳೆಂಬದನ್ನು ನಾನು ಬಲ್ಲೆನು. ಅಂತೇ ಆಕೆಯ ಮುಂದಿನ ಯಾವತ್ತು ಕೆಲಸಗಳ ಸಂಬಂಧದಿಂದ ಉತ್ತಮ ವ್ಯವಸ್ಥೆಯನ್ನು ಮಾಡುವೆನು. ಉಮೇಪುರೀಬೇಗಮೆಯು ತನ್ನ ಮಹಾಲಿನಲ್ಲಿ ಬೇಕಾದ

ಅನುಕೂಲತೆಗಳನ್ನು ಮಾಡಿಕೊಡುವೆನೆಂದು ಒಡಂಬಟ್ಟಿರುವಳು. ಬೇಗ ಮೆಯು ರಾಣಿಗೆ ತಂಗಿಯಾಗಬೇಕಾದದ್ದರಿಂದ, ಆಕೆಯು ರಾಣಿಯನ್ನು ಬೇಗನೆ ಕರಿಸಿಕೊಳ್ಳಬೇಕೆಂದು ದುಂಬಾಲು ಬಿದ್ದಿರುತ್ತಾಳೆ! ನಿಮ್ಮ ಸ್ವಾಮಿ ನಿಷ್ಠೆಯನ್ನಾದರೂ ನಾವು ಬಲ್ಲೆವು. ಅದರಿಂದಲೇ ದರ್ಬಾರದಲ್ಲಿ ನಾವು ನಿಮಗೆ ಸರದಾರಿಕೆಯನ್ನು ಕೊಡಬೇಕೆಂದು ನಿಶ್ಚಯಿಸಿರುವೆವು, ಎಂದು ಪತ್ರ ದಲ್ಲಿ ಬರೆದಿತ್ತು.

ದುರ್ಗಾದಾಸನು ಬಹು ಚತುರನೂ, ಅತ್ಯಂತ ಬುದ್ಧಿಶಾಲಿಯೂ, ಧೈರ್ಯಶೀಲನೂ, ಧೋರಣವುಳ್ಳವನೂ ಆಗಿದ್ದನು. ಆತನು ಔರಂಗಜೇಬನ ಈ ಸವಿಯಾದ ಪತ್ರಕ್ಕೆ ಮರುಳಾಗಲಿಲ್ಲ. ಇದು ಔರಂಗಜೇಬನ ಶುದ್ಧ ಕಪಟವೆಂದು ಆತನು ಭಾವಿಸಿದನು. ಚಂದ್ರಾವತೀರಾಣಿಯನ್ನು ಕರೆದು ಕೊಂಡು ಹೋಗಲಿಕ್ಕೆ ಶಸ್ತ್ರಪಾಣಿಗಳಾದ ೫೦೦ ಜನ ದಂಡಾಳುಗಳು ಬಂದಿ ರುವರೆಂಬದನ್ನು ಕೇಳಿಯಂತು ಆತನು ಚಿಂತೆಗೊಳಗಾದನು. ದಂಡಿನ ಮುಖ್ಯಸ್ಥನಾದ ನಯನಪಾಲನ ಮುಖವನ್ನು ನೋಡಿದ ಕೂಡಲೆ ದುರ್ಗಾ ದಾಸನ ಎದೆಯು ದಸಕ್ಕೆಂದಿತು. ಚಂದ್ರಾವತಿಯ ಮೈದುನನಾದ ಅಮರ ಸಿಂಹನು ನಿಪುತ್ರಿಕನೆಂದು ತಿಳಿದಿದ್ದರು. ಆದರೆ ಆತನಿಗೆ ನಯನಪಾಲನೆಂಬ ಮಗನಿದ್ದು, ಆತನು ಭಿಲ್ಲಜನರ ಮನೆಯಲ್ಲಿ ದೊಡ್ಡವನಾಗಿ ತನ್ನ ತಂದೆಯ ಜೋಧಪುರದ ರಾಜ್ಯವನ್ನು ತಿರುಗಿ ಸಂಪಾದಿಸುವದಕ್ಕಾಗಿ ಔರಂಗಜೇಬನ ಆಶ್ರಯವನ್ನು ಪಡೆದಿದ್ದನು. ನಯನಪಾಲನು ಹೆಸರಿಗೆ ಮಾತ್ರ ರಜಪೂತ ನೆನಿಸುಕೊಳ್ಳುತ್ತಿದ್ದನು. ಆತನು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದ್ದ ನೆಂದು ಹೇಳಬಹುದು. ಎಲ್ಲ ರಜಪೂತರ ನಾಶವಾಗಿ ತನ್ನ ಉತ್ಕರ್ಷ ವಾಗುವ ಹಾಗಿದ್ದರೆ, ಅದಕ್ಕೆ ಆತನು ಹಿಂದೆ ಮುಂದೆ ನೋಡುವಹಾಗಿದ್ದಿಲ್ಲ. ಔರಂಗಜೇಬನು ಜಸವಂತಸಿಂಗನ ನಾಶವನ್ನೂ, ಅವನ ಸಂತತಿಯ ನಾಶ ವನ್ನೂ ಯುಕ್ತಿಯಿಂದ ಮಾಡಿ, ಜೋಧಪುರದ ಸಿಂಹಾಸನದ ಮೇಲೆ ತನ್ನ ಹಸ್ತಕನಾದ, ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದ ನಯನಪಾಲನನ್ನು ಕೂಡ್ರಿಸಬೇಕೆಂದು ಮಾಡಿದ್ದನು. ಇದೇ ಉದ್ದೇಶದಿಂದಲೇ ಔರಂಗಜೇಬನು ಪೃಥ್ವೀಸಿಂಗನನ್ನು ಕೊಲ್ಲಿಸಿದನು; ಜಸವಂತಸಿಂಗನು ಪುತ್ರಶೋಕದಿಂದ ಅನಾಯಾಸವಾಗಿ ಮರಣಹೊಂದಿದನು; ಇನ್ನು ಚಂದ್ರಾವತಿಯು ಗಂಡು

ಹಡೆದರೆ, ಆ ಶಿಶುವನ್ನು ನಾಶಗೊಳಿಸಿ ಚಂದ್ರಾವತಿಯನ್ನು ತನ್ನ ರಾಣೀ ವಾಸದಲ್ಲಿ ಸೇರಿಸಿಕೊಂಡರೆ ಬಾದಶಹನ ಬಯಕೆಯು ಪೂರ್ಣವಾದಂತಾಗು ತ್ತಿತ್ತು. ಸಿಲಕು ಉಳಿದ ಈ ಸ್ವಲ್ಪ ಕೆಲಸವನ್ನು ಪೂರ್ಣಮಾಡಿ, ಜೋಧ ಪುರದ ಸಿಂಹಾಸನಕ್ಕೆ ಪಾತ್ರನಾಗಬೇಕೆಂತಲೇ ಔರಂಗಜೇಬನು ಈಗ ನಯನಪಾಲನನ್ನು ೫೦೦ ದಂಡಾಳುಗಳ ಮುಖ್ಯನನ್ನಾಗಿ ಮಾಡಿ ಕಳಿಸಿದ್ದನು. ನಯನಪಾಲನ ಮುಖವನ್ನು ನೋಡಿದ ಕೂಡಲೆ ಈ ಸಂಗತಿಯೆಲ್ಲ ದುರ್ಗಾ ದಾಸನ ಮನಸ್ಸಿಗೆ ಹೊಳೆದು, ಆತನು ಒಳಗಿಂದೊಳಗೆ ನಯನಪಾಲನ ಮೇಲೆ ಹಲ್ಲು ಕಡಿಯಹತ್ತಿದನು. ಈ ನೀಚನು ಮುಖ್ಯನಾಗಿ ಚಂದ್ರಾ ವತೀರಾಣಿಯನ್ನು ಕರೆಯಬಂದದ್ದರ ಲಕ್ಷಣವು ಒಳ್ಳೆಯದಲ್ಲೆಂದು ಆ ಸ್ವಾಮಿ ನಿಷ್ಠನು ತಿಳಕೊಂಡನು.

ನಯನಪಾಲನು ಪ್ರಥಮದರ್ಶನದಲ್ಲಿಯೇ ದುರ್ಗಾದಾಸನನ್ನು ಕುರಿತು---ನೀವು ಚಂದ್ರಾವತೀ ರಾಣಿಯನ್ನು ಇಷ್ಟೇ ದಿವಸಗಳಲ್ಲಿ ಕರ ಕೊಂಡು ಬರಬೇಕೆಂದು ಬಾದಶಹರು ಆಗ್ರಹ ಮಾಡಿರುವದಿಲ್ಲ; ಆದರೆ ಬಹಳ ದಿವಸ ನಿಲ್ಲುವದರಲ್ಲಿ ಅರ್ಥವಿಲ್ಲೆಂದು ಮಾತ್ರ ಸೂಚಿಸಿರುವರು. ಇನ್ನು ಸಮೀಪಕ್ಕೆ ಬಂದಿರುವ ಚಳಿಗಾಲದಲ್ಲಿ ಇಲ್ಲಿ ಇರುವದರಿಂದ ಹಿತ ವಾಗದು. ರಾಣಿಯವರು ಹಡೆದು ಹತ್ತು ದಿವಸಗಳಾಗಿ ಹೋದವು. ಇನ್ನು ಹೊರಡಲಿಕ್ಕೆ ತೊಂದರೆಯಿಲ್ಲ. ನೋಡಿರಿ, ಅವರ ಮನಸಿನಲ್ಲಿದ್ದರೆ ನನ್ನ ಅವಸರವು. ಬಾದಶಹರ ಆಗ್ರಹವಂತೂ ಇರುವದೇ ಇಲ್ಲ. ತಿರುಗಿ ಕೇಳಿ ದರೆ, ಅವರು ರಾಣಿಯ ಮೇಲೆ ಯಾವ ಪ್ರಕಾರದ ಒತ್ತಾಯವು ಆಗಲಾರ ದೆಂತಲೂ, ಅವರ ಮನಸ್ಸಿಗೆ ಯಾವ ಪ್ರಕಾರದ ತ್ರಾಸವು ಸೋಂಕಲಾಗ ದೆಂತಲೂ, ಅವರ ಇಚ್ಛೆಯ ಹೊರತು ಏನೂ ಮಾಡಲಾಗದೆಂತಲೂ, ಹಾದಿಯಲ್ಲಿ ಇಳಿಯಬೇಕೆಂದಲ್ಲಿ ಇಳಿಸಬೇಕೆಂತಲೂ, ಬೇಕೆಂದಪದಾರ್ಥ ಗಳನ್ನು ಕೊಡಬೇಕೆಂತಲೂ ಕಟ್ಟಪ್ಪಣೆ ಮಾಡಿದ್ದಾರೆ. ಒಟ್ಟಿಗೆ ಹೇಳುವ ದೆಂದರೆ, ಜಸವಂತಸಿಂಗಮಹಾರಾಜರ ಪಟ್ಟರಾಣಿಗೆ ಯೋಗ್ಯವಾಗುವಂತೆ ಅನುಕೂಲರಾಗಿ ಅವರನ್ನು ಕರಕೊಂಡು ಬರಬೇಕೆಂದು ಬಾದಶಹರು ಹೇಳಿ ರುವರು; ಯಾಕಂದರೆ, ಚಂದ್ರಾವತೀ ರಾಣಿಯು ಇನ್ನು ಬೇಗನೆ ಬಾದ ಶಹರ ಜನಾನಖಾನೆಯ.... ಎಂದು ನಯನಪಾಲನು ಮುಂದೆ ಏನೋ ನುಡಿ

ಯುತ್ತಿದ್ದನು; ಆದರೆ, ಆತನ ಮಾತನ್ನು ಕೇಳುತ್ತಿದ್ದ ದುರ್ಗಾದಾಸನ ಮುಖದಲ್ಲಿ ವ್ಯಕ್ತವಾಗಿದ್ದ ಚಿಂತೆಯ ಮುದ್ರೆಯು, ಕಡೆಯ ಸಬ್ದವು ಕಿವಿಗೆ ಬಿದ್ದಕೂಡಲೆ ತಟ್ಟನೆ ಅಳಿದು, ಮುಖವು ಉಗ್ರವಾಯಿತು. ಆತನ ನೇತ್ರಗಳು ಕಿಂಚಿತ್ ವಿಸ್ತೀರ್ಣವಾದವು. ಅವುಗಳಲ್ಲಿ ರಕ್ತಿಮೆಯು ತೋರಹತ್ತಿತು. ಮೇಲಿನ ಹಲ್ಲುಗಳು ಕೆಳದುಟಿಯನ್ನು ಕಸುವಿನಿಂದ ಕಚ್ಚಿದವು. ಟೊಂಕದಲ್ಲಿ ಅಲೆದಾಡುತ್ತಿದ್ದ ಖಡ್ಗದ ಕಡೆಗೆ ಆತನ ಕೈಗಳು ಹೋದವು. ಧೂರ್ತನಾದ ನಯನಪಾಲನು ಇದನ್ನರಿತು ತನ್ನ ನಾಲಿಗೆ ಕಚ್ಚಿಕೊಂಡು ಆ ಮಾತನ್ನು ಅಷ್ಟಕ್ಕೆ ಬಿಟ್ಟುಬಿಟ್ಟನು. ಜಸವಂತಸಿಂಗನೊಡನೆ ಚಂದ್ರಾವತಿಯ ಲಗ್ನವಾದಂದಿನಿಂದ ಆಕೆಯ ಮೇಲೆ ಬಾದಶಹನ ಕಣ್ಣು ಇರುತ್ತದೆಂದು ದುರ್ಗಾದಾಸನು ಕೇಳುತ್ತಿದ್ದನು. ಆ ಮಾತಿನ ನಿಜತ್ವವು ಈಗ ಆತನ ಅನುಭವಕ್ಕೆ ಬಂದಂತಾಯಿತು. ಇದಲ್ಲದೆ, ಗರ್ಭವತಿಯಿರುವಾಗ ಚಂದ್ರಾವತಿಯನ್ನು ಜನಾನಖಾನೆಯಲ್ಲಿ ಸೇರಿಸುವದರಿಂದ, ಹುಟ್ಟುತ್ತಲೆ ಆಕೆಯ ಮಗನನ್ನು ಕೊಲ್ಲಲಿಕ್ಕೆ, ಇಲ್ಲವೆ ಆ ಕೂಸಿಗೆ ಜನ್ಮತಃ ಮುಸಲ್ಮಾನ ಧರ್ಮದ ದೀಕ್ಷೆಯನ್ನು ಕೊಡಲಿಕ್ಕೆ ಎಷ್ಟು ಮಾತ್ರವೂ ತೊಂದರೆಯಾಗುವ ಹಾಗಿದ್ದಿಲ್ಲ; ಹೀಗೆ ಆಲಮಗೀರನು ಎರಡು ಮೂರು ದುರಾಲೋಚನೆಗಳನ್ನು ಸಾಧಿಸಿಕೊಳ್ಳಲಿಕ್ಕೆ ಹೊಂಚುಹಾಕಿರುವನೆಂದು ದುರ್ಗಾದಾಸನು ತಿಳಿದನು. ಈ ಪ್ರಸಂಗದಿಂದ ಹ್ಯಾಗೆ ಪಾರಾಗಬೇಕೆಂದು ಆತನು ಆಲೋಚಿಸತೊಡಗಿದ್ದು ಆಶ್ಚರ್ಯವಲ್ಲ. ಮೊದಲಿಗೆ ಆತನು ಚಂದ್ರಾವತಿಯನ್ನೂ, ಆಕೆಯ ಮಗನನ್ನೂ, ಔರಂಗಜೇಬನ ಬಲಿಯೊಳಗಿಂದ ಬಿಡಿಸಿಕೊಂಡು ಅವರನ್ನು ಸುರಕ್ಷಿತ ಸ್ಥಳದಲ್ಲಿರಿಸಬೇಕಾಗಿತ್ತು. ಅದೇ ತನ್ನ ಪ್ರಥಮ ಕರ್ತವ್ಯವೆಂದು ಆತನು ಭಾವಿಸಿದನು.

ಚಂದ್ರಾವತಿಯ ಬಳಿಯಲ್ಲಿ ಸ್ತ್ರೀಯರಕೊರತೆಯಿತ್ತೆಂದು ಹಿಂದೆಯೊಮ್ಮೆ ಹೇಳಿದೆಯಷ್ಟೆ ? ದುರ್ಗಾದಾಸನ ಬೆನ್ನಿನಲ್ಲಿ ಬಿದ್ದ ತಂಗಿಯಾದ ಇಂದಿರೆಯು ಚಂದ್ರಾವತಿಗೆ ಅರ್ಧಗೆಳತಿಯಾಗಿಯೂ, ಅರ್ಧದಾಸಿಯಾ–ಗಿಯೂ ಇದ್ದಳು. ಜಸವಂತಸಿಂಗನ ಮೇಲೆ ದುರ್ಗಾದಾಸನ ಭಕ್ತಿಯಿದ್ದಂತೆ, ಚಂದ್ರಾವತೀರಾಣಿಯ ಮೇಲೆ ಇಂದಿರೆಯ ಭಕ್ತಿಯು ಅತ್ಯಂತವಾಗಿ ಇತ್ತು. ಇಂದಿರೆಯು ಬಾಲವಿಧವೆಯಾದದ್ದರಿಂದ, ಅಣ್ಣನ ಬಳಿಯಲ್ಲಿಯೇ ಇರುತ್ತಿ

ದ್ದಳು. ಅದರಲ್ಲಿ ದುರ್ಗಾದಾಸನು ಪತ್ನಿಹೀನನಾಗಿದ್ದನು. ಆತನ ಹೊಟ್ಟೆ ನೆತ್ತಿಗಳನ್ನು ಇಂದಿರೆಯೇ ನೋಡುತ್ತಿದ್ದಳು. ಕಾಬೂಲದಲ್ಲಿ ಬಂದಬಳಿಕ ಜಸವಂತಸಿಂಗನ ಪಂಕ್ತಿಯಲ್ಲಿ ದುರ್ಗಾದಾಸನ ಊಟಉಪಚಾರಗಳು ಆಗ ಹತ್ತಿದ್ದರಿಂದ, ಇಂದಿರೆಯು ಚಂದ್ರಾವತಿಯ ಅಂತಃಪುರದಲ್ಲಿ ಉಳಿದಳು. ಇದೆಲ್ಲವನ್ನು ಮನಸ್ಸಿನಲ್ಲಿ ತಂದು, ದುರ್ಗಾದಾಸನು ತನ್ನ ಸ್ವಾಮಿ ಕಾರ್ಯ ದಲ್ಲಿ ಇಂದಿರೆಯು ತನಗೆ ಸಹಾಯ ಮಾಡಬಹುದೆಂದು ಭಾವಿಸಿದನು. ನಯನಪಾಲನೊಡನೆ ವಿರೋಧ ಬಳಿಸುವ ಗೊಡವಿಗೆ ಹೋಗದೆ, ಆ ಸ್ವಾಮಿ ಭಕ್ತನು ಆತನಿಗೆ ಅನುಕೂಲವಾಗಿರುವಂತೆ ತೋರಿಸಿ, ಒಳಗಿನಿಂದೊಳಗೆ ಕಾರ್ಯ ಸಾಧಿಸುವ ಹವಣಿಕೆಯಲ್ಲಿದ್ದನು. ಮತ್ತೂ ಒಂದು ದಿನವು ಕಳೆದು ಹೋಯಿತು. ಹನ್ನೆರಡನೆಯ ದಿವಸ ಬೆಳಗಿನಲ್ಲಿ ನಯನಪಾಲನು ಚಂದ್ರಾ ವತೀರಾಣಿಯ ಅಂತರ್ಗೃಹದ ಸುತ್ತಲು ತನ್ನ ದಂಡಾಳುಗಳ ಕಾವಲು ಇಟ್ಟಿ ರುವನೆಂತಲೂ, ಹೋಗಬರುವವರನ್ನು ಶೋಧಿಸದೆ ಮುಂದಕ್ಕೆ ಬಿಡುವ ದಿಲ್ಲೆಂತಲೂ ದುರ್ಗಾದಾಸನು ಕೇಳಿ ಸಂತಾಪಗೊಂಡನು. ಹೀಗೆ ಮಾಡ ಲಿಕ್ಕೆ ಕಾರಣವೇನೆಂದು ಆತನು ನಯಪಾಲನನ್ನು ಕೇಳಲು, ಆತನು ಸಮಾ ಧಾನದಿಂದ ದುರ್ಗಾದಾಸನನ್ನು ಕುರಿತು—ಬಾದಶಹನ ಅಪ್ಪಣೆಯಂತೆ ನಡೆ ಯುವದು ನನ್ನ ಕರ್ತವ್ಯವಾದದ್ದರಿಂದ ಹೀಗೆ ಮಾಡಬೇಕಾಯಿತು. ಚಂದ್ರಾ ವತೀರಾಣಿಯು ಗರ್ಭವತೀಯಾಗಿರುವದರಿಂದ, ಜಸವಂತಸಿಂಗನ ಶತ್ರು ಗಳು ಆಕೆಗೆ ಯಾವಕಾಲದಲ್ಲಿ ಏನು ಮಾಡ್ಯಾರೆಂಬದನ್ನು ಹೇಳಲಿಕ್ಕಾಗುವ ದಿಲ್ಲ; ಆದ್ದರಿಂದ ಆಕೆಯ ಸಂರಕ್ಷಣವನ್ನು ಬಹುದಕ್ಷತೆಯಿಂದ ಮಾಡ ತಕ್ಕದ್ದೆಂದು ಬಾದಶಹರು ಹೇಳಿರುತ್ತಾರೆ. ರಾಣಿಯ ಮೈದುನನಾದ ಅಮರ ಸಿಂಹನು ಜನರ ತಿಳುವಳಿಕೆಯಂತೆ ನಿಪುತ್ರಿಕನಾಗಿರುವದಿಲ್ಲ; ಆತನಿಗೆ ಮಕ್ಕ ಳಿರುವರು. ತಮ್ಮ ತಂದೆಯನ್ನು ಗಡಿಬಿಡಿಸಿ ಓಡಿಸಿ ಜೋಧಪುರದ ಸಿಂಹಾ ಸನವನ್ನು ಕಸುಗೊಂಡದ್ದಕ್ಕಾಗಿ ಈಗ ಅವರು ಜಸವಂತಸಿಂಗನ ಸೇಡು ತೀರಿಸಿಕೊಳ್ಳಲಿಕ್ಕೆ ಯತ್ನಿಸಬಹುದು. ಜಸವಂತಸಿಂಗನು ನಿಪುತ್ರಿಕನಾಗಿ ಮರಣಹೊಂದಿರುವನೆಂಬ ಸುದ್ದಿಯು ಈಗ ನಾಲ್ಕೂಕಡೆಗೆ ಹಬ್ಬಿರುತ್ತದೆ. ಇಂಥ ಸ್ಥಿತಿಯಲ್ಲಿ ಚಂದ್ರಾವತೀರಾಣಿಯು ಗರ್ಭವತಿಯಿರುವದರಿಂದ ಆಕೆಯ ಹೊಟ್ಟೆಯಲ್ಲಿ ಗಂಡುಮಗನು ಹುಟ್ಟಿದರೆ, ತಮ್ಮ ಕಾರ್ಯಕ್ಕೆ ವಿಘ್ನ

ವಾಗಬಹುದೆಂದು ತಿಳಿದು, ಅವರು ಚಂದ್ರಾವತಿಯ ಗರ್ಭವನ್ನು ನಾಶಗೊಳಿಸದೆ ಎಂದೂ ಬಿಡಲಿಕ್ಕಿಲ್ಲ. ಜಸವಂತಸಿಂಗನು ನಿಪುತ್ರಿಕನಾಗಿ ಸತ್ತದ್ದರಿಂದ ಬಾದಶಹರಿಗೆ ಬಹಳ ದುಃಖವಾಗಿದೆ. ಅವರು ಅಖಂಡ ಒಂದು ದಿನ ಅನ್ನೋದಕ ಗ್ರಹಣಮಾಡಲಿಲ್ಲ. ಇಲ್ಲಿಯ ವರೆಗೆ ತಾವು ಜಸವಂತಸಿಂಗನ ಸಂಗಡ ನಿಷ್ಠುರತನದಿಂದ ನಡಕೊಂಡದ್ದಕ್ಕಾಗಿ ಅವರಿಗೆ ಬಹಳ ಚಡಪಡಿಕೆಯಾಗಿರುತ್ತದೆ. ಇನ್ನು ಮೇಲೆ, ಗರ್ಭವತಿಯಾಗಿರುವ ಚಂದ್ರಾವತಿಯ, ಹಾಗು ಆಕೆಯ ಹೊಟ್ಟೆಯಲ್ಲಿ ಹುಟ್ಟುವ ಶಿಶುವಿನ ಸಂಗೋಪನವನ್ನು ಉತ್ತಮರೀತಿಯಿಂದ ಮಾಡಿ, ತಮಗಾಗಿರುವ ಪಶ್ಚಾತ್ತಾಪವನ್ನು ಶಾಂತಗೊಳಿಸಿಕೊಳ್ಳಬೇಕೆಂದು ಬಾದಶಹರು ಮಾಡಿರುತ್ತಾರೆ. ಚಂದ್ರಾವತಿಗೆ ಗಂಡುಮಗುವು ಹುಟ್ಟಿದ್ದರಿಂದಂತು ಬಾದಶಹರ ಆನಂದವು ಅವರ ಹೊಟ್ಟೆಯಲ್ಲಿ ಹಿಡಿಸುವಹಾಗಿರುವದಿಲ್ಲ. ಗಂಡು ಹುಟ್ಟಿದರೆ ಹೊಟ್ಟೆಯ ಮಗನಂತೆ ಲಾಲನ-ಪಾಲನಗಳನ್ನು ಮಾಡಿ, ಆತನನ್ನು ಜೋಧಪುರದ ಸಿಂಹಾಸನದ ಮೇಲೆ ಕೂಡ್ರಿಸಬೇಕೆಂದು ನಿಶ್ಚಯಿಸಿ, ಬಹು ಜೋಕೆಯಿಂದ ರಾಣಿಯನ್ನು ಕರಕೊಂಡು ಬರಬೇಕೆಂದು ಹೇಳಿ ನನ್ನನ್ನು ಈಗ ಕಳಿಸಿಕೊಟ್ಟಿದ್ದಾರೆ. ಅಂದಬಳಿಕ ನಾನು ಎಚ್ಚರದಿಂದ ನಡೆಯದಿದ್ದರೆ ಹ್ಯಾಗೆ ? ಎಂದು ಕೇಳಿದನು.

ನಯನಪಾಲನ ಈ ಮಾತುಗಳನ್ನು ದುರ್ಗಾದಾಸನು ಎಳ್ಳಷ್ಟು ನಿಜವೆಂದು ನಂಬಲಿಲ್ಲ. ಬಾದಶಹನೂ, ಈ ನಯನಪಾಲನೂ ಇಬ್ಬರೂ ಮೋಸಗಾರರೇ ಎಂದು ಆತನು ನಿರ್ಧರಿಸಿದನು. ಈ ಬಣ್ಣದ ಮಾತಿಗೆ ಮರುಳಾಗದೆ ಬಹು ಜಾಗ್ರತೆಯಿಂದ ನಡೆದು, ಯುಕ್ತಿಪ್ರಯುಕ್ತಿಗಳಿಂದ ರಾಣಿಯನ್ನೂ, ಶಿಶುವಾದ ಅಜಿತಸಿಂಗನನ್ನೂ ಇಲ್ಲಿಂದ ದಾಟಿಸಿಕೊಂಡು ಹೋಗಿ, ಇವರ ಮೂಗಿಗೆ ಮಸಿ ಹಚ್ಚಬೇಕೆಂದು ಆತನು ನಿಶ್ಚಯಿಸಿದನು. ರಾಣಿಯ ಬಳಿಗೆ ಹೋಗಲಿಕ್ಕೆ ಬರಲಿಕ್ಕೆ ದುರ್ಗಾದಾಸನ ಮಟ್ಟಿಗೆ ಇನ್ನೂ ಪ್ರತಿಬಂಧವಾಗಿದ್ದಿಲ್ಲ. ಅಷ್ಟರಲ್ಲಿ ತಾನು ಮಾಡತಕ್ಕ ಕಾರ್ಯವನ್ನು ಮಾಡಿ ಬಿಡುವದು ನೆಟ್ಟಗೆಂದು ಆತನು ನಿರ್ಧರಿಸಿದ್ದನು. ಆತನು ಮರುದಿವಸ ತನ್ನ ತಂಗಿಯಾದ ಇಂದಿರೆಯ ಬಳಿಗೆ ಹೋಗಿ—

ದುರ್ಗಾದಾಸ—ತಂಗೀ, ಇಂದಿರೆ, ನಮ್ಮೆಲ್ಲರ ಮೇಲೆ ಎಂಥ ಕಠಿಣ

ಪ್ರಸಂಗವು ಬಂದೊದಗಿದೆಯೆಂಬದು ನಿನಗೆ ಗೊತ್ತೇ ಇರುತ್ತದೆ. ಈ ಪೊತ್ತಿನ ವರೆಗೆ ಉಂಡಿರುವ ಜಸವಂತಸಿಂಗಮಹಾರಾಜರ ಅನ್ನವನ್ನು ಸಾರ್ಥಕ ಮಾಡುವ ಪ್ರಸಂಗವು ಈಗ ಬಂದೊದಗಿರುತ್ತದೆ. ಮಹಾರಾಜರು ಪ್ರಾಣ ಬಿಡುವಾಗ ಆಡಿದಂತೆ ನಾವೆಲ್ಲರು ನಡೆಯತಕ್ಕದ್ದೆಂದು, ನಿನಗೆ ಹೇಳಬೇಕ ನ್ನುವಹಾಗಿಲ್ಲ; ಆದರೆ ತಂಗೀ, ಈಗ ನೀನು ಹ್ಯಾಗೆ ಮಾಡುತ್ತೀ ?

ಇಂದಿರೆ—ಅಣ್ಣಾ, ಇದೇನು ನಿನ್ನ ಕೇಳೋಣವು ? ಸ್ವಾಮಿಕಾರ್ಯ ಕ್ಕಾಗಿ ಪ್ರಾಣವನ್ನು ಕೊಡಲು ಸಿದ್ಧಳಾಗಿರುವ ನನಗೆ ಏನು ಮಾಡುತ್ತೀ ಯೆಂದು ಕೇಳುವೆಯಲ್ಲ ? ಏನು ಮಾಡಬೇಕು ಹೇಳು; ಚಂದ್ರಾವತೀ ರಾಣಿಯವರಂಥವರ ಸಲುವಾಗಿ ನನ್ನಂಥ ಹತಭಾಗ್ಯ ಸ್ತ್ರೀಯ ದೇಹದ ಉಪ ಯೋಗವಾಗುತ್ತಿದ್ದರೆ, ಅದಕ್ಕೂ ಹೆಚ್ಚಿನದು ಮತ್ತೇನು ಬೇಕಾಗಿರುವದು ? ಎಂಥ ಕಠಿಣ ಕಾರ್ಯವಿದ್ದರೂ ಅದನ್ನು ಮಾಡುವೆನು. ಪ್ರತ್ಯಕ್ಷ ಪ್ರಾಣ ದಾನಕ್ಕಿಂತ ಹೆಚ್ಚಿನ ಕೆಲಸವಿಲ್ಲವಷ್ಟೆ ? ಪ್ರಾಣವನ್ನರ್ಪಿಸಲಿಕ್ಕೂ ನಾನು ಸಿದ್ಧಳಿರುತ್ತೇನೆ.

ತಂಗಿಯ ಈ ಮಾತುಗಳನ್ನು ಕೇಳಿ, ದುರ್ಗಾದಾಸನ ಕಂಠವು ಸದ್ಗ ದಿತವಾಗಿ ಕಣ್ಣುಗಳಲ್ಲಿ ಅಶ್ರುಗಳು ತುಂಬಿಬಂದವು. ಇಂದಿರೆಯು ಸ್ವಾಮಿ ಕಾರ್ಯದಲ್ಲಿ ಇಷ್ಟು ದಕ್ಷಳಾಗಿದ್ದ ಬಳಿಕ ತನ್ನ ಕಾರ್ಯವನ್ನು ಸಾಧಿಸಲಿಕ್ಕೆ ಎಷ್ಟು ಮಾತ್ರವೂ ತೊಂದರೆಯಾಗದೆಂದು ಆತನು ಭಾವಿಸಿ, ಕ್ಷಣಮಾತ್ರ ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ಅಶ್ರುಗಳನ್ನು ತನ್ನ ಉತ್ತರೀಯದಿಂದ ಒತ್ತಿಕೊಂಡನು. ಆ ಮೇಲೆ ಸ್ವಲ್ಪ ಹೊತ್ತು ಸುಮ್ಮನೆ ಕುಳಿತುಕೊಂಡು ಮತ್ತಿಷ್ಟು ಭಯಪ್ರದ ಸಂಗತಿಯು ಮನಸ್ಸಿನಲ್ಲಿ ಬಂದದ್ದರಿಂದ, ತಂಗಿ ಯನ್ನು ಕುರಿತು—

ದುರ್ಗಾದಾಸ—ತಂಗೀ, ನೀನು ಚನ್ನಾಗಿ ವಿಚಾರಮಾಡಿ ಮಾತಾಡಿದೆ ಯಲ್ಲವೆ ? ಇಲ್ಲದಿದ್ದರೆ ಒಮ್ಮೆ ಕೆಲಸಕ್ಕೆ ಕೈ ಹಾಕಿದಬಳಿಕ ನಡುವೆ ಕುಗ್ಗಿ ದರೆ, ಎಲ್ಲರ ನಾಶವಾದೀತು. ಇನ್ನೊಮ್ಮೆ ವಿಚಾರಮಾಡಿ ಮಾತಾ..........

ಆದರೆ ಇಂದಿರೆಯು ಮುಂದೆ ಮಾತಾಡಗೊಡದೆ ನಡುವೇ ಬಾಯಿ ಹಾಕಿ--ಅಣ್ಣಾ, ನಾನು ಯಾರು ಮಗಳು ? ಯಾರ ತಂಗಿಯು ? ಇಂಥ ಮಾತು ನನ್ನನ್ನು ಯಾಕೆ ಕೇಳುತ್ತೀ ? ಎಂದು ವಿಚಿತ್ರ ಸ್ವಾಭಿಮಾನ

ದಿಂದ ಪ್ರಶ್ನೆ ಮಾಡಿದಕೂಡಲೆ ದುರ್ಗಾದಾಸನು ಬಹು ಸಮಾಧಾನ ಪಟ್ಟು,

ದುರ್ಗಾದಾಸ— ತಂಗೀ, ಪ್ರಸಂಗವು ಬಹು ಭಯಂಕರವಾದದ್ದು. ಪ್ರಾಣಕೊಡುವದರಿಂದ ಕೆಲಸವಾಗುವ ಹಾಗಿದ್ದರೆ, ಅದಕ್ಕೆ ಇಷ್ಟೊಂದು ಚಿಂತೆಯಿದ್ದಿಲ್ಲ. ಬರಿಯ ಪ್ರಾಣವನ್ನು ಕೊಟ್ಟರೆ ಕೆಲಸವಾಗುವಹಾಗಿಲ್ಲ. ರಜಪೂತರಿಗೆ ಪ್ರಾಣಕ್ಕಿಂತ ಪ್ರಿಯವಾಗಿದ್ದ ಪಾತಿವ್ರತ್ಯದ ತನಕ ಪ್ರಸಂಗವು ಬರಬಹುದು! ಅದಕ್ಕೂ ನೀನು ಅಂಜುವದಿಲ್ಲೆಂದು ಹೇಳಿದರೆ, ಸ್ವಾಮಿ ಕಾರ್ಯಕ್ಕೆ ಕಸುವು ಬಂದಂತಾಗುವದು. ನಿನ್ನ ಹೊರತು ಬೇರೆಯವರಿಂದ ಈ ಕೆಲಸವಾಗುವ ಹಾಗಿದ್ದರೆ ನಿನ್ನ ಮುಂದೆ ಈ ಮಾತನ್ನು ತೆಗೆಯುತ್ತಲೇ ಇದ್ದಿಲ್ಲ. ಆದರೆ ನಿನ್ನ ಕೈಯಿಂದಲೇ ಈ ಕಾರ್ಯವಾಗಬೇಕಾಗಿದೆ.

ಇಂದಿರೆ— ಅಣ್ಣಾ, ಅದೇನು ಹೇಳು; ನಾನು ಎಲ್ಲಕ್ಕೂ ಸಿದ್ಧಳಾಗಿದ್ದೇನೆ. ನೀನು ಹೇಳಿದಹಾಗೆ ಕೇಳುವೆನೆಂದಬಳಿಕ ತಿರುಗಿ ಮಾತೇಕೆ ? ಮಾತಿನಲ್ಲಿ ಹೊತ್ತುಗಳೆಯುವ ಸಮಯವೇ ಇದು ?

ದುರ್ಗಾದಾಸ—ತಂಗೀ, ಅಜಿತಸಿಂಗಕುಮಾರನನ್ನೂ, ಚಂದ್ರಾವತೀ ರಾಣಿಯನ್ನೂ ಅಂತರ್ಗೃಹದಿಂದ ಹೊರಹೊರಡಿಸಿ, ನೀನು ಚಂದ್ರಾವತೀ ರಾಣಿಯ ಸ್ಥಳದಲ್ಲಿ ಇರಬೇಕಾಗುವದು. ರಾಣಿಯೂ ರಾಜಪುತ್ರನೂ ಒಮ್ಮೆ ಸುರಕ್ಷಿತ ಹೊರಬಿದ್ದು ಬಂದರೆಂದರೆ ಕೆಲಸವಾಯಿತು. ನಾನು ಹ್ಯಾಗಾದರೂ ಮಾಡಿ ಅವರನ್ನು ರಜಪೂತಸ್ಥಾನಕ್ಕೆ ಕರಕೊಂಡು ಹೋಗುತ್ತೇನೆ.

ಇಂದಿರೆ— ಇಷ್ಟೇ ಅಹುದಲ್ಲವೆ ? ಇದು ನನ್ನ ಕೈಗೂಡಿತು. ನಾನು ಅಂತರ್ಗೃಹದಲ್ಲಿ ಉಳಿದರೆ ಚಂತ್ರಾವತೀರಾಣಿಯವರು ಹೊರಟು ಬರಬಹುದು; ಆದರೆ ಕೂಸನ್ನು ಹೊರಹೊರಡಿಸುವ ಬಗೆಹ್ಯಾಗೆ ?

ದುರ್ಗಾದಾಸ—ಅದನ್ನು ಕುರಿತು ನಾನು ಆಲೋಚಿಸಿರುತ್ತೇನೆ. ಹೇಳುವೆನು ಚಿತ್ತಗೊಟ್ಟು ಕೇಳು. ನಾವು ಮಾಡತಕ್ಕದ್ದನ್ನು ಇಂದು ಇಲ್ಲವೆ ನಾಳೆಯಾದರೂ ಮಾಡಲೇಬೇಕು. ನೀನು ಈಗ ಚಂದ್ರಾವತೀರಾಣೀಸಾಹೇಬರವರ ಬಳಿಗೆ ಹೋಗಿ ಇಲ್ಲಿ ನಡೆದಿರುವ ಸಂಗತಿಯನ್ನೆಲ್ಲ ಹೇಳು. ಅವರು ಜಾಣಾಕ್ಷರಿರುವರು, ಸೂಜ್ಞರೂ ಇರುವರು. ನಿನ್ನ ಮಾತುಗಳಿಗೆ ಅವರು ಒಪ್ಪಿಕೊಂಡೇ ಒಪ್ಪಿಕೊಳ್ಳುವರು. ಈಗ ನಯನಪಾಲನು ಅಂತರ್ಗೃಹಕ್ಕೆ

ಕಾವಲಿಟ್ಟಿರುವದನ್ನು ನೀನು ಬಲ್ಲೆಯಷ್ಟೇ? ನೀನು ನಿನ್ನ ಗೋಷೆಯನ್ನು ಹೊದ್ದುಕೊಂಡು ಇಂದಿನಿಂದ ನಾಳಿನ ವರೆಗೆ ಏನಿಲ್ಲೆಂದರೂ ಹತ್ತು ಹದಿನೈದುಸಾರೆಯಾದರೂ ಒಳಗಿನಿಂದ ಹೊರಗೆ–ಹೊರಗಿನಿಂದ ಒಳಗೆ ಹೋಗಿ ಬಂದು ಮಾಡು; ಅಂದರೆ ಗೋಷೆಯ ಮೇಲಿಂದ ನೀನು ನನ್ನ ತಂಗಿಯೆಂದು ತಿಳಿದು ನಿನ್ನನ್ನು ಯಾರೂ ತಡವಲಿಕ್ಕಿಲ್ಲ. ಮುಂದೆ ಅದೇ ಗೋಷೆಯನ್ನು ಹೊದ್ದುಕೊಂಡು ಚಂದ್ರಾವತೀರಾಣೀಸಾಹೇಬರು ಅಂತರ್ಗೃಹದಿಂದ ಹೊರಟು ಬರಲಿ. ಇನ್ನು, ಅಜಿತಸಿಂಗಕುಮಾರನನ್ನು ಕರಕೊಂಡು ಬರುವ ಒಂದು ಸಾಹಸದ ಕಾರ್ಯವನ್ನು ನಿನ್ನ ಮುಂದೆ ಹೇಳುವದು ಉಳಿಯಿತು. ನೀನು ನಾಳೆ ನಸುಕಿನಲ್ಲಿ—ಇಂದಿರೆ ತೀರ ನಸುಕಿನಲ್ಲಿ ಕಂಡೆಯಾ? ಆಗ ಮನೆಯಿಂದ ಹೊರಟು ಊರಹೊರಗೆ ದೂರಇರುವ ನಮ್ಮ ಗೌಳಿಗನೊಬ್ಬನ ಮನೆಗೆ ಹೋಗಬೇಕು. ಆತನು ನಿನಗೆ ಕಾಶ್ಮೀರದ ಗೌಳಿಗರ ಹೆಣ್ಣುಮಕ್ಕಳ ಪೋಷಾಕನ್ನು ಹಾಕಿಕೊಳ್ಳಲಿಕ್ಕೆ ಕೊಡುವನು. ನೀನು ಆ ಪೋಷಾಕನ್ನು ಹಾಕಿಕೊಂಡು, ಆ ಗೌಳಿಗರ ಉದ್ದನ್ನ ದೊಡ್ಡ ಬುಟ್ಟಿಯಲ್ಲಿ ಹಾಲಿನ ಪಾತ್ರೆಗಳನ್ನು ಇಟ್ಟುಕೋ. ಪಾತ್ರೆಗಳ ನಡುವೆ ಒಂದು ಕೂಸನ್ನು ಮಲಗಿಸಿದಂತೆ ಹುಲ್ಲನ್ನು ಇಟ್ಟು, ಮೇಲೆ ಹೊಚ್ಚಿಕೊಂಡು ಬುಟ್ಟಿಹೊತ್ತುಕೊಂಡು ಚಂದ್ರಾವತೀರಾಣಿಯವರ ಬಳಿಗೆ ಹೋಗು. ನಿತ್ಯದಲ್ಲಿ ಬರುವ ಗೌಳಿಗರೆಂದು ನಿನ್ನನ್ನು ಯಾರೂ ಪ್ರತಿಬಂಧಿಸಲಿಕ್ಕಿಲ್ಲ. ಅಂತರ್ಗೃಹದಿಂದ ತಿರುಗಿ ಬರುವಾಗ ಆ ಹುಲ್ಲಮೇಲೆ ಅಜಿತಸಿಂಗ ರಾಜಕುಮಾರರನ್ನು ಮಲಗಿಸಿಕೊಂಡು ಮೇಲೆ ಹೊಚ್ಚಿಕೊಂಡು ಬಾ. ಹೀಗೆ ಮಾಡಿ ಮೊದಲು ರಾಜಕುಮಾರರನ್ನು ಗೌಳಿಗರ ಮನೆಯಲ್ಲಿ ಇಟ್ಟು, ಆ ಮೇಲೆ ನಿನ್ನ ಗೋಷೆಯನ್ನು ಚಂದ್ರಾವತೀರಾಣಿಯವರಿಗೆ ಕೊಟ್ಟು ಅವರನ್ನು ಹೊರಗೆ ಕಳಿಸಿ, ನೀನು ಅವರ ಸ್ಥಳದಲ್ಲಿ ಇರತಕ್ಕದ್ದು. ಇದು ಕೇಳಲಿಕ್ಕೆ ವಿಚಿತ್ರವಾಗಿಯೂ ಮಾಡಲಿಕ್ಕೆ ಕಠಿಣವಾಗಿಯೂ ತೋರಬಹುದು; ಆದರೆ ಸ್ವಾಮಿನಿಷ್ಠೆಯಿಂದಲೂ, ಜಾಗ್ರತೆಯಿಂದಲೂ ಮಾಡಿದರೆ ಕಾರ್ಯವು ನಿಶ್ಚಯವಾಗಿ ಸಾಧಿಸುವದು. ನಾನು ಇಂದು ನಯನಪಾಲನ ಮನಸ್ಸಿಗೆ ಸಂತೋಷವಾಗುವಂತೆ ಅವನೊಡನೆ ಮಾತಾಡುತ್ತಲಿರುವೆನು; ಅಂದರೆ ಆತನ ಲಕ್ಷವು ಅಂತರ್ಗೃಹದ ಕಡೆಗೆ ಹೋಗಲಿಕ್ಕಿಲ್ಲ. ರಾಜಪುತ್ರರೂ, ರಾಣೀಸಾಹೇಬರವರೂ ನಿನ್ನ ಸಾಹಸ

ದಿಂದ ಹೊರಬಿದ್ದು ಬಂದರೆಂದರೆ, ಡೋಲಿಯಲ್ಲಿ ಅವರಿಬ್ಬರನ್ನು ಕುಳ್ಳಿರಿಸಿ, ರಜಪೂತಸ್ಥಾನಕ್ಕೆ ಕಳಿಸುವ ಕೆಲಸವು ನನ್ನನ್ನು ಕೂಡಿತು. ಅವರನ್ನು ದಾಟಹಾಕಿದ ಬಳಿಕ ನಾನು ಎರಡುದಿನ ಇಲ್ಲಿಯೇ ಇರುವೆನು; ಯಾಕಂದರೆ ನಯನಪಾಲನಿಗೆ ನಮ್ಮ ಸಾಹಸದ ಗಂಧವು ಕೂಡ ತಗಲಿದರೆ ಕೆಲಸವು ಘಾತವಾಗುವಹಾಗಿದೆ. ಇಂದಿರೇ, ಯಾಕೆ, ಮಾತಾಡಲೊಲ್ಲೆ ? ಸುಮ್ಮನೆ ಕುಳಿತುಕೊಂಡೆ ? ಬೆದರಿದೆಯೇನು ?

ಇಂದಿರೆ—ಅಣ್ಣಾ, ನಾನು ಮಾತಾಡದಿರುವದಕ್ಕೆ ಬೆದರಿಕೆಯು ಕಾರಣ ವಲ್ಲ. ನಿನ್ನ ಯಾವತ್ತು ಹಂಚಿಕೆಯನ್ನೂ, ಹೊಂದಿಕೆಯನ್ನೂ ನೋಡಿ ಬೆರಗಾಗಿ ಕುಳಿತುಕೊಂಡಿದ್ದೇನೆ. ಈ ಕಾರ್ಯವು ನನ್ನಿಂದ ನಿರ್ವಿಘ್ನವಾಗಿ ಹ್ಯಾಗೆ ಸಾಧಿಸೀತೆಂಬ ಚಿಂತೆಯು ನನ್ನನ್ನು ಬಾಧಿಸುತ್ತದೆ; ಆದರೆ ಚಂದ್ರಾ ವತೀರಾಣೀ ಸಾಹೇಬರವರ ಮೇಲೆ ನನ್ನ ಅಂಥ ಉತ್ಕಟ ಭಕ್ತಿಯೇ ಇರು ತ್ತಿದ್ದರೆ, ಚಿಂತೆಯನ್ನಾದರೂ ನಾನು ಯಾಕೆ ಮಾಡಬೇಕು? ಅಣ್ಣಾ, ಇನ್ನು ಬೇರೆವಿಚಾರವಿಲ್ಲ. ನೀನು ಹೇಳಿದ ಎರಡೂ ಕೆಲಸಗಳನ್ನು ಸದ್ದಿಲ್ಲದೆ ಹ್ಯಾಗೆ ಕೊನೆಗಾಣಿಸುತ್ತೇನೆಂಬದನ್ನು ನೋಡಿಯಾದರೂ ನೋಡು.

ತಂಗಿಯ ಈ ಧೈರ್ಯದ ಮಾತುಗಳನ್ನು ಕೇಳಿ ದುರ್ಗಾದಾಸನಿಗೆ ಪರಮಾನಂದವಾಯಿತು. ಆ ಆನಂದದ ಭರದಲ್ಲಿ ಆತನು ಕ್ಷಣಮಾತ್ರ ಸುಮ್ಮನೆ ಕುಳಿತು, ಸ್ಮಿತಪೂರ್ಣವೂ-ಸಾದರವೂ-ಪ್ರೇಮಯುಕ್ತವೂ ಆದ ದೃಷ್ಟಿಗಳಿಂದ ತಂಗಿಯನ್ನು ನೋಡಹತ್ತಿದನು. ಆದರೆ ಸ್ವಲ್ಪ ಹೊತ್ತಿನಲ್ಲಿ ಆತನ ಮನಸ್ಸಿನಲ್ಲಿ ದುಃಖದ ವಿಚಾರವು ಹೊಳೆಯಲು, ಕೂಡಲೆ ನಗೆಹೋಗಿ ಒಂದು ನಿಟ್ಟುಸುರು ಆತನಮುಖದಿಂದ ಹೊರಬಿದ್ದಿತು. ಅದನ್ನುನೋಡಿ ಇಂದಿ ರೆಯು ತನ್ನ ಅಣ್ಣನನ್ನು ಕುರಿತು—ಅಣ್ಣಾ, ಹೀಗೆ ಒಮ್ಮೆಲೆ ನಿಟ್ಟುಸುರು ಬಿಟ್ಟ ಕಾರಣವೇನು ? ಎಂದು ಕೇಳಲು, ದುರ್ಗಾದಾಸನ ಮುಖದಿಂದ ಅಕ್ಷರಗಳೇ ಹೊರಡದಾದವು. ಆತನ ಕಣ್ಣುಗಳು ಅಶ್ರುಪೂರ್ಣವಾದವು. ಇಂದಿರೆಯು ಮತ್ತೆ ಅಣ್ಣನನ್ನು ಕುರಿತು ಮೊದಲಿನಂತೆ ಪ್ರಶ್ನಮಾಡಲು, ದುರ್ಗಾದಾಸನು—ತಂಗೀ, ಇಷ್ಟೆಲ್ಲ ಮಾಡಿದರೆ ಸ್ವಾಮಿಭಕ್ತಳಾದ ನೀನು, ಮಹಾರಾಣಿಯವರ ಋಣದಿಂದ ಮುಕ್ತಳಾಗುವೆಯೆಂದು ಬೇರೆ ಹೇಳ ಬೇಕಾಗಿರುವದಿಲ್ಲ; ಆದರೆ ನಿನ್ನ ಗತಿಯೇನಾದೀತೆಂಬದರ ವಿಚಾರವನ್ನು

ನೀನು ಮಾಡಿರುವೆಯೋ ? ಆ ವಿಚಾರವು ನನ್ನ ಮನಸ್ಸಿನಲ್ಲಿ ಉತ್ಪನ್ನವಾದ ಕೂಡಲೆ ನನಗೆ ಹ್ಯಾಗೆ ಹ್ಯಾಗೋ ಆಗುತ್ತದೆ. ಆದರಿಂದಲೇ ನನ್ನ ಮುಖದಿಂದ ನಿಟ್ಟುಸುರು ಹೊರಬಿದ್ದಿತು, ಎಂದು ನುಡಿದನು. ಆಗಿನ ಕಠಿಣ ಪ್ರಸಂಗದಲ್ಲಿ ಯಾರಿಗೂ ನಗೆ ಬರುವಹಾಗಿದ್ದಿಲ್ಲ; ಆದರೆ ಅಂಥ ಪ್ರಸಂಗದಲ್ಲಿಯೂ ಇಂದಿರೆಯು ನಕ್ಕು ಅಣ್ಣನನ್ನು ಕುರಿತು—ಅಣ್ಣಾ, ಜೋಧಪುರದ ಮನೆತನದ ಸಂರಕ್ಷಣದ ಕಾರ್ಯವನ್ನು ಸಾಧಿಸುವ ಅವಶ್ಯದ ಪ್ರಸಂಗದಲ್ಲಿ, ನನ್ನ ಗತಿಯು ಏನಾದೀತೆಂದು ಆಲೋಚಿಸುವದು ಯೋಗ್ಯವಾಗಬಹುದೇ ? ನೀನೇ ಹೇಳು. ಆಲೋಚಿಸುತ್ತ ಕುಳಿತುಕೊಳ್ಳುವ ಹೊತ್ತೇ ಇದು ? ಕಾರ್ಯಸಾಧಕನು ಮುಂದೆ ನನ್ನಗತಿಯೇನಾದೀತೆಂದು ಆಲೋಚಿಸಹತ್ತಿದರೆ, ಕಾರ್ಯವು ಸಾಧಿಸಬಹುದೆ ? ಅಣ್ಣಾ, ಏಳು ಗೊತ್ತಾದಂತೆ ಇನ್ನು ಬಡಬಡ ಕೆಲಸಮಾಡೋಣ. ಮುಂದೆ ನಮ್ಮ ಮೇಲೆ ಸಂಕಟಬಂದಾಗ ನೋಡಿಕೊಳ್ಳಲಿಕ್ಕೆ ಬಂದೀತು. ಇಲ್ಲದ ಸಂಕಟಗಳನ್ನು ಈಗ ಕಲ್ಪಿಸುತ್ತ ಕುಳಿತುಕೊಳ್ಳುವದೇಕೆ ? ನನಗೆ ಬರತಕ್ಕ ಸಂಕಟಗಳು ನನ್ನ ಕಣ್ಣಮುಂದೆಯೇ ಇರುತ್ತವೆ. ಅವುಗಳ ಆಲೋಚನೆಯು ಈಗ ಬೇಡ. ಹೋಗಲೋ ಹಾಗಾದರೆ ನಾನು ? ಈಗಲೇ ಚಂದ್ರಾವತೀರಾಣೀಸಾಹೇಬರನ್ನು ಕಂಡು, ಅವರಿಗೆ ಎಲ್ಲ ಸಂಗತಿಯನ್ನು ಹೇಳುವೆನು; ಅಂದರೆ ನಾಳೆ ಕಾರ್ಯಸಾಧಿಸಲಿಕ್ಕೆ ತೊಂದರೆ ಯಾಗಲಿಕ್ಕಿಲ್ಲ.

## ೭ನೇಯ ಪ್ರಕರಣ

# ಬಂಧವಿಮೋಚನ

ತಂಗಿಯ ಮಾತಿಗೆ ದುರ್ಗಾದಾಸನು ಉತ್ತರಕೊಡಲಿಲ್ಲ. ಸಮ್ಮತಿಯನ್ನು ವ್ಯಕ್ತಪಡಿಸುವದಕ್ಕಾಗಿ ತಲೆಯನ್ನುಮಾತ್ರ ಹಾಕಿದನು. ಇಂದಿರೆಯು ರಾಣಿಯ ಬಳಿಗೆ ಹೋಗಿ ನಡೆದ ವೃತ್ತಾಂತವನ್ನೆಲ್ಲ ಹೇಳಿದಳು. ಅಂತರ್ಗೃಹದಲ್ಲಿರುವ ಚಂದ್ರಾವತಿಗೆ ಯಾವ ಸಂಗತಿಯೂ ಗೊತ್ತಿದ್ದಿಲ್ಲ. ಇಂದಿರೆಯನ್ನು ಸಂಕಟಕ್ಕೆ ಗುರಿಮಾಡಿ ತಾನು ಪಾರಾಗಿ ಹೋಗಲಿಕ್ಕೆ ಆ ಉದಾರಾಂತಃಕರಣದ ಸಾಧ್ವಿಯು ಒಪ್ಪಿಕೊಳ್ಳಲಿಲ್ಲ. ಆಕೆಯು ಇಂದಿರೆಯನ್ನು ಕುರಿತು—ಇಂದಿರೇ, ನಿನ್ನ ಈ ವಿಚಾರಗಳಿಗೆ ನಾನು ಒಪ್ಪಿಕೊಳ್ಳುವೆನೆಂದಾದರೂ ನೀನು ಹ್ಯಾಗೆ ಕಲ್ಪಿಸಿದೆ ? ನಿನ್ನನ್ನು ಸಂಕಟಕ್ಕೆ ಗುರಿಮಾಡಿ ನಾನು ಪಾರಾಗಿ ಹೋಗಲಾ ? ಇಂದಿರೇ, ನನ್ನಿಂದ ಇನ್ನು ಏನು ಆಗಬೇಕಾಗಿದೆ ಹೇಳು ? ಹೋಗು, ಅಜಿತಸಿಂಗನನ್ನು ಕರಕೊಂಡು ಹೋಗು. ನಾನು ಆತನ ಹಡೆದ ತಾಯಿಯು, ನೀನು ಇನ್ನು ಆತನ ಪಾಲನ ಮಾಡುವ ತಾಯಿಯಾಗು. ನನ್ನ ಗತಿಯನ್ನು ನಾನು ಕಂಡುಕೊಳ್ಳುವೆನು. ಅಜಿತಸಿಂಗನನ್ನು ಕರಕೊಂಡು ಹೋಗು. ನಾನು ಇನ್ನು ಆತನನ್ನು ನಿಮ್ಮಿಬ್ಬರ ಉಡಿಯಲ್ಲಿ ಹಾಕಿಬಿಟ್ಟೆನೆಂದು ತಿಳಿ. ನಾನು ಆತನ ತಾಯಿಯಲ್ಲ, ನೀನು ಆತನ ತಾಯಿಯು; ಅನ್ನಲು, ಇಂದಿರೆಯು ಅದಕ್ಕೆ ಒಪ್ಪಿಕೊಳ್ಳಲಿಲ್ಲ. ಆಕೆಯು ತನ್ನ ಉತ್ಕಟವಾದ ಸ್ವಾಮಿಭಕ್ತಿಯ ಯೋಗದಿಂದಲೂ, ತನ್ನ ಬಾಲವೈಧವ್ಯದ ಸಾರ್ಥಕತೆಯ ಮಾರ್ಗದ ಸಮರ್ಥನದಿಂದಲೂ ರಾಣಿಯ ಮನಸ್ಸನ್ನು ಒಲಿಸಿ

ಕೊಂಡು, ತಾನು ಹೇಳಿದಂತೆ ಕೇಳಲು ಆಕೆಯನ್ನು ಒಡಂಬಡಿಸಿದಳು. ಆ ಮೇಲೆ ತನ್ನ ಅಣ್ಣನು ಹೇಳಿದಂತೆ ಗೋಷೆಯನ್ನು ಧರಿಸಿ ಹಲವುಸಾರೆ ಅಂತ ಗೃಹಕ್ಕೆ ಓಡಾಡಿ ಕಾವಲುಗಾರರಿಗೆ ತನ್ನ ಗೋಷೆಯ ಗುರತನ್ನು ಚೆನ್ನಾಗಿ ಮಾಡಿಕೊಟ್ಟಳು. ಇದರಿಂದ ಮರುದಿನ ಆಕೆಯ ಕೆಲಸಕ್ಕೆ ಪ್ರತಿಬಂಧವಾಗುವ ಸಂಭವವಿಲ್ಲದಾಯಿತು.

ಇಷ್ಟೆಲ್ಲ ಕೆಲಸವಾದ ಮೇಲೆ ಇಂದಿರೆಯು ಮರುದಿನ ನಸಿಕಿನಲ್ಲಿ ಹೊರಟು ಗೌಳಿಗನ ಮನೆಗೆ ಹೋದಳು. ಆಕೆಯು ಮೊದಲೇ ಗೊತ್ತಾದಂತೆ ಗೌಳಿಗಗಿತ್ತಿಯ ಉಡಿಗೆತೊಡಿಗೆಗಳನ್ನು ಧರಿಸಿ, ಬುಟ್ಟಿಯನ್ನು ಹೊತ್ತು ಕೊಂಡು, ಸಾವಕಾಶವಾಗಿ ಚಂದ್ರಾವತಿಯ ಮಂದಿರದ ಕಡೆಗೆ ನಡೆದಳು. ಗೌಳಿಗರಾಕೆಯೆಂದು ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತಿದ್ದದ್ದರಿಂದ, ಆಕೆಯನ್ನು ಯಾರೂ ಪ್ರತಿಬಂಧಿಸಲಿಲ್ಲ. ಕಾವಲುಗಾರರಲ್ಲಿ ಒಬ್ಬಿಬ್ಬರು ಮಾತ್ರ ಆಕೆಯ ರೂಪಕ್ಕೆ ಮೋಹಿತರಾಗಿ ತಮ್ಮೊಳಗೆ ಚೇಷ್ಟೆ ಮಾಡುತ್ತ ನಿಂತುಕೊಂಡರು. ಗೌಳಿಗರಾಕೆಯು ಒಳಗೆ ಹೋಗಿ ಹಾಲುಕೊಟ್ಟು ಸ್ವಾಭಾವಿಕವಾಗಿ ತಿರುಗಿ ಬರುವಂತೆ ಬುಟ್ಟಿಹೊತ್ತುಕೊಂಡು ಬಂದಳು. ಯಾವ ತೊಂದರೆಯೂ ತಟ್ಟದೆ ಹೊರಬಿದ್ದದ್ದರಿಂದ, ಆನಂದಭರಿತಳಾಗಿ ಮುಗುಳುನಗೆ ನಗುತ್ತ ಆಕೆಯು ಸಾಗಿದ್ದಳು. ಸ್ವಾಮಿಕಾರ್ಯವು ನಿರ್ವಿಘ್ನವಾಗಿ ಕೊನೆಗಾಣುವದನ್ನು ನೋಡಿ, ಆಕೆಗೆ ಪರಮಾವಧಿ ಆನಂದವಾದದ್ದರಲ್ಲಿ ವಿಶೇಷವೇನು ? ಆದರೆ, ಇಂದಿರೆಯು ಆನಂದದ ಭರದಲ್ಲಿ ಹಿಂದಕ್ಕೆ ಹೊರಳಿ ನೋಡಲು, ಅವರಿಬ್ಬರು ಮೋಹಬತಖಾನರು ತನ್ನ ರೂಪಕ್ಕೆ ಮೋಹಿತರಾಗಿ, ತಮ್ಮ ತಮ್ಮೊಳಗೆ ಚೇಷ್ಟೆಮಾಡುತ್ತ, ನಗುತ್ತ, ಕೆಲೆಯುತ್ತ, ತನ್ನ ಬೆನ್ನಹತ್ತಿ ಬರುತ್ತಿದ್ದರು. ಇದನ್ನು ನೋಡಿದ ಕೂಡಲೆ ಇಂದಿರೆಯ ಸೊಂಡೆಯು ಒಣಗಿತು. ತಾನೊಬ್ಬಳೇ ಇದ್ದು, ಇಂಥ ಕ್ಷುದ್ರರು ತನ್ನನ್ನು ಬೆನ್ನಟ್ಟಿ ಬಂದಿದ್ದರೆ ಆಕೆಯೇನು ಹೆದರುತ್ತಿದ್ದಿಲ್ಲ; ಆದರೆ ತಲೆಯ ಮೇಲೆ ಬುಟ್ಟಿ, ಅದರಲ್ಲಿ ಕೂಸು ಮಲಗಿದೆ ! ಕೂಸು ಅತ್ತರೆ, ಇಲ್ಲವೆ ಈ ಕ್ಷುದ್ರರು ತಮ್ಮತಮ್ಮೊಳಗೆ ಚೇಷ್ಟೆ ಮಾಡುತ್ತ ತನ್ನನ್ನು ತಡಹಾಯ್ದರೆ, ಕಾರ್ಯಘಾತವಾದೀತೆಂದು ಆಕೆಯು ಚಿಂತಾಮಗ್ನಳಾದಳು; ಆದರೆ ಇಂದಿರೆಯು ಸರ್ವಸಾಧಾರಣ ಸ್ತ್ರೀಯಿದ್ದಿಲ್ಲ, ಅಚ್ಚ ರಜಪೂತನ ಉಜ್ವಲ ರಕ್ತದಿಂದ ಜನಿಸಿದವಳಾಗಿದ್ದು, ದುರ್ಗಾದಾಸ

ನಂಥ ಧೀರಗಂಭೀರ ಸ್ವಾಮಿಭಕ್ತನ ನೆರಳಲ್ಲಿ ಬೆಳೆದಿದ್ದಳು. ಆಕೆಯು ಅಂಥ ಕಠಿಣ ಪ್ರಸಂಗದಲ್ಲಿಯೂ ಧೈರ್ಯವನ್ನು ತಾಳಿ, ಅಂಜಿದವಳಂತೆ ನಟಿಸಿ, ಲಗುಲಗು ಹೆಜ್ಜೆ ಹಾಕಹತ್ತಿದಳು. ಅದನ್ನು ನೋಡಿ ಅವರಿಬ್ಬರು ಮೋಹಬತಖಾನರಿಗೆ ಬಹಳ ಆನಂದವಾಯಿತು. ಅವರು ಆಕೆಯ ಚೇಷ್ಟೆಯನ್ನು ಮಾಡುತ್ತ ಹಾಗೆಯೇ ಬೆನ್ನಹತ್ತಿ ಬರಹತ್ತಿದರು.

ಇನ್ನು ಭಗವಾನ್ ಕನ್ಹಯ್ಯನು ಏನು ಮಾಡುವನೋ, ಎಂದು ಇಂದಿರೆಯು ಕ್ಷಣಶಃ ಚಿಂತಿಸಹತ್ತಿದಳು. ಈ ಪ್ರಸಂಗದಿಂದ ತಾನು ಪಾರಾಗುವ ಬಗೆಯು ಆಕೆಗೆ ತೋರದಾಯಿತು; ಆದರೆ ವಿಪತ್ತಿನಲ್ಲಿ ಭಗವಂತನು ಸಜ್ಜನರ ರಕ್ಷಣಮಾಡುವನೆಂಬ ದೃಢವಿಶ್ವಾಸವಿದ್ದದ್ದರಿಂದ, ಆಕೆಯು ಒಳ್ಳೇ ಧೈರ್ಯದಿಂದ ಮುಂದಕ್ಕೆ ಸಾಗಿದ್ದಳು. ಇಂದಿರೆಯ ದೃಢವಿಶ್ವಾಸದ ಉತ್ತಮ ಫಲವು ಆಗ ಆಕೆಗೆ ದೊರೆಯಿತು. ಅವರಿಬ್ಬರು ತಮ್ಮತಮ್ಮೊಳಗೆ ಚೇಷ್ಟೆ ಮಾಡುತ್ತ ಬರುತ್ತಿರುವಾಗ ಅವರಲ್ಲಿ ಒಬ್ಬನು ಸಿಟ್ಟಿಗೆದ್ದನು; ಅಷ್ಟರಲ್ಲಿ ಇಂದಿರೆಯು ಹಿಂದಿರುಗಿ ಅವರನ್ನು ಕಡೆಗಣ್ಣಿನಿಂದ ಒಮ್ಮೆ ನೋಡಿದಳು. ಈ ನೋಟವೇ ಇಂದಿರೆಯ ಅರಿಷ್ಟನಿವಾರಣಕ್ಕೆ ಕಾರಣವಾಯಿತು. ನನ್ನನ್ನು ನೋಡಿದಳೆಂದು ಒಬ್ಬನು, ನಿನ್ನಂಥ ಹಲಿಗೆ ಮೋರೆಯುವನನ್ನೇನು ನೋಡುತ್ತಾಳೆ, ನನ್ನನ್ನು ನೋಡಿದಳೆಂದು ಮತ್ತೊಬ್ಬನು. ಹೀಗೆ ತಮ್ಮತಮ್ಮೊಳಗೆ ವಾದಿಸತೊಡಗಿದರು. ಬರಬರುತ್ತ ಅವರ ಕೈಗೆ ಕೈಹತ್ತಿತು. ಈ ಸಂಧಿಯನ್ನು ಸಾಧಿಸಿ, ಇಂದಿರೆಯು ಬಡಬಡ ನಡೆದು ಗೌಳಿಗರ ಮನೆಯನ್ನು ಸುರಕ್ಷಿತವಾಗಿ ಮುಟ್ಟಿದಳು. ಆಮೇಲೆ ಆಕೆಯು ಆ ಗೌಳಿಗರ ಸೋಗುಬಿಟ್ಟು, ತನ್ನ ಉಡಿಗೆ ತೊಡಿಗೆಗಳನ್ನು ಧರಿಸಿ, ಎಲ್ಲರ ಗುರುತಿನ ಆ ಗೋಷೆಯನ್ನು ಹೊತ್ತುಕೊಂಡು, ಬೇಗನೆ ಚಂದ್ರಾವತಿಯ ಮಂದಿರದ ಕಡೆಗೆ ನಡೆದಳು; ಯಾಕಂದರೆ, ತಾಯಿ ಮಕ್ಕಳನ್ನು ಬಹಳ ಹೊತ್ತು ಅಗಲಿಸುವದು ಆಕೆಯ ಮನಸ್ಸಿಗೆ ಬರಲಿಲ್ಲ. ತನ್ನ ಸಲುವಾಗಿ ತಮ್ಮತಮ್ಮೊಳಗೆ ಗುದ್ದಾಡುತ್ತಿದ್ದ ಅವರಿಬ್ಬರು ಮೋಹಬತ್‌ಖಾನರು ಗಾಯಪಟ್ಟು, ನೆಲಕ್ಕೆ ಉರುಳಿರಲು, ಇಂದಿರೆಯು ನಿರ್ಬಾಧವಾಗಿ ಚಂದ್ರಾವತಿಯ ಮಂದಿರವನ್ನು ಪ್ರವೇಶಿಸಿದಳು. ಆಕೆಯು ತನ್ನ ಗೋಷೆಯನ್ನು ಚಂದ್ರಾವತೀರಾಣಿಗೆ ಹೊದ್ದುಕೊಳ್ಳಲಿಕ್ಕೆ ಕೊಟ್ಟು, ಬೇಗನೆ ಇಲ್ಲಿಂದ ಹೊರಡಬೇಕೆಂದು ದುಂಬಾಲಬಿದ್ದಳು, ಹಾಗೆ

ಮಾಡುವದು ಚಂದ್ರಾವತಿಯ ಮನಸ್ಸಿಗೆ ಬಾರದಿದ್ದರೂ, ಪ್ರಸಂಗವನ್ನು ನೋಡಿ ಬಹು ಕಷ್ಟದಿಂದ ಆ ದುರ್ದೈವಿಯಾದ ರಾಣಿಯು, ಅಂತರ್ಗೃಹ ದಿಂದ ಹೊರಬಿದ್ದಳು. ಇತ್ತ ಸ್ವಾಮಿಭಕ್ತಳಾದ ಇಂದಿರೆಯು, ಇನ್ನು ಬಂದದ್ದನ್ನು ನೋಡಿಕೊಳ್ಳುವೆನೆಂಬ ನಿಶ್ಚಯದಿಂದ ರಾಣಿಯ ಸ್ಥಳವನ್ನು ಆಕ್ರಮಿಸಿದಳು.

ಚಂದ್ರಾವತಿಯು ಹೊರಬಿದ್ದು ಬಂದರೂ ಆಕೆಗೆ ಸಮಾಧಾನವಾಗ ಲಿಲ್ಲ. ಇಂದಿರೆಯ, ಹಾಗು ಆಕೆಯ ಅಣ್ಣನಾದ ದುರ್ಗಾದಾಸನ ಅವಸ್ಥೆಯು ಏನಾಗುವದೋ, ಎಂಬ ಚಿಂತೆಯಿಂದ ಆಕೆಯ ಚಿತ್ತವು ಅಸ್ವಸ್ಥವಾಯಿತು. ಅದನ್ನು ಕುರಿತು ಆಕೆಯು ದುರ್ಗಾದಾಸನ ಮುಂದೆ ಪ್ರಸ್ತಾಪಿಸಲು, ಆತನು --ಇನ್ನು ಇಂಥ ವಿಚಾರಗಳನ್ನು ನೀವು ಮನಸ್ಸಿನಲ್ಲಿಕೂಡ ತರಲಾಗ ದೆಂದು ನಿರ್ಧಾರದಿಂದ ಹೇಳಿದನು; ಮತ್ತು ಸಂಜೆಯ ವರೆಗೆ ಗೌಳಿಗನ ಮನೆಯಲ್ಲಿದ್ದು, ಸಂಜೆಯಾದಬಳಿಕ ಡೋಲಿಯಲ್ಲಿ ಕುಳಿತು ಪ್ರಯಾಣ ಮಾಡಬೇಕೆಂದು ಹೇಳಿ, ಆಕೆಯನ್ನು ಗೌಳಿಗನ ಮನೆಗೆ ಕಳಿಸಿದನು. ಇನ್ನು ಎರಡು ಘಳಿಗೆ ತಡವಾಗಿದ್ದರೆ ದುರ್ಗಾದಾಸನ ಕಾರ್ಯವಾಗುವದು ಒತ್ತಟ್ಟಿ ಗುಳಿದು, ಆತನು ಪ್ರಾಣಸಂಕಟಕ್ಕೆ ಗುರಿಯಾಗಬೇಕಾಗುತ್ತಿತ್ತು; ಯಾಕಂ ದರೆ, ಸಯನಪಾಲನು ಚಂದ್ರಾವತಿಯ ಮಂದಿರದ ತನ್ನ ಕಾವಲುಗಾರರನ್ನು ಕರೆಸಿ--ನನ್ನ ಅಪ್ಪಣೆಯ ಹೊರತು ರಾಣೀಸಾಹೇಬರ ಬಳಿಗೆ ಯಾರನ್ನೂ ಬಿಡಬಾರದು. ದುರ್ಗಾದಾಸರನ್ನೂ, ಅವರ ತಂಗಿಯಾದ ಇಂದಿರಾಬಾ ಯಿಯವರನ್ನೂ ಮಾತ್ರ ಪ್ರತಿಬಂಧಿಸಲಾಗದು; ಆದರೆ ಅವರು ಒಳಗೆ ಹೋದ ಸುದ್ದಿಯನ್ನು ನನಗೆ ತಿಳಿಸಬೇಕು, ಎಂದು ದುರ್ಗಾದಾಸನ ಸಮಕ್ಷ ಅಪ್ಪಣೆ ಮಾಡಿದನು. ಆ ಮೇಲೆ ದುರ್ಗಾದಾಸನ ಕಡೆಗೆ ಹೊರಳಿ— ದುರ್ಗಾದಾಸರೇ, ನನ್ನ ಅಪ್ಪಣೆಯನ್ನು ಕೇಳಿ, ನಿಮಗೆ ಬಹಳ ಆಶ್ಚರ್ಯ ವಾಗಿರಬಹುದು. ಜಸವಂತಸಿಂಗಮಹಾರಾಜರಿಗೆ ಶತ್ರುಗಳು ಬಹಳ. ಅವರ ದಾಯಾದಿಗಳಂತು ಸದ್ಯಕ್ಕೆ ಬಾದಶಹನ ದರ್ಬಾರದಲ್ಲಿ ಮುಂದಾಳು ಗಳಾಗಿದ್ದಾರೆ; ಆದ್ದರಿಂದ ಯಾರು ಯಾವ ಕಾಲಕ್ಕೆ ತಿರುಗಿಬಿದ್ದು ಆ ಕೂಸಿನ ಪ್ರಾಣಕ್ಕೆ ಎರವಾದಾರೆಂಬದರ ನಿಯಮವನ್ನು ಹೇಳಲಿಕ್ಕೆ ಬರುವ ಹಾಗಿಲ್ಲ. ಒಳಗೆ ಯಾರು ಹೋಗುತ್ತಾರೆ, ಏನು ಮಾಡುತ್ತಾರೆ, ಎಂಬ

ದಿಷ್ಟಾದರೂ ನನಗೆ ಸ್ಪಷ್ಟವಾಗಿ ತಿಳಿದರೆ, ಮನಸ್ಸಿನ ಚಡಪಡಿಕೆಯಾದರೂ ತಪ್ಪೀತು. ಯಾಕೆ ? ನಾನನ್ನುವದು ನಿಜವೋ–ಸುಳ್ಳೋ ಹೇಳಿರಿ, ಅನ್ನಲು, ದುರ್ಗಾದಾಸನು ನಯನಪಾಲನ ಮೋರೆಯ ಇಚ್ಛೆಗೆ—ಅಹುದು, ಹುಡುಗನ ಸುರಕ್ಷಿತತೆಯ ವಿಷಯವಾಗಿ ಎಷ್ಟು ಎಚ್ಚರಪಟ್ಟರೂ ಸ್ವಲ್ಪವೇ ಇರುತ್ತದೆ, ಎಂದು ಉತ್ತರಕೊಟ್ಟು, ಮನಸ್ಸಿನಲ್ಲಿ— ರಾಣಿಯೂ ರಾಜಪುತ್ರನೂ ಗೌಳಿಗರ ಮನೆಯನ್ನು ಸೇರಿದ ಬಳಿಕ ಕಾವಲನ್ನು ಭದ್ರಪಡಿಸುವ ಹಂಚಿಕೆಗಳು ಈತನಿಗೆ ಸೂಚಿಸಹತ್ತಿವೆ. ಎಂದು ನಕ್ಕನು.

ನಯನಪಾಲನಿಗೆ ದುರ್ಗಾದಾಸನ ಈ ಒಳಸಂಚಿನ ಗಂಧವು ಕೂಡ ತಗಲಿದ್ದಿಲ್ಲ. ದುರ್ಗಾದಾಸನ ಸವಿಮಾತುಗಳಿಗೆ ಆತನು ಬಹುಮಟ್ಟಿಗೆ ಮರುಳಾಗಿದ್ದನೆಂದು ಹೇಳಬಹುದು. "ಬಾದಶಹನ ಬಳಿಯಲ್ಲಿ ನನಗೊಂದು ನೌಕರಿಯನ್ನು ಕೊಡಿಸುವಿರಾ " ಎಂದು ದುರ್ಗಾದಾಸನು ಕೇಳಿದ್ದನ್ನು ನಿಜವೆಂದು ತಿಳಿದು, ನಯನಪಾಲನು— ದುರ್ಗಾದಾಸಾ, ಬಾದಶಹನ ಚಾಕರಿಯೇಕೆ ? ಬೇಕಾದರೆ ನಾನು ನಿನ್ನನ್ನು ಚಾಕರಿಗೆ ಇಟ್ಟುಕೊಳ್ಳುವೆನು, ಅನ್ನಲು, ಕೂಡಲೆ ದುರ್ಗಾದಾಸನು—ಓಹೋ ! ನಿಮ್ಮ ಚಾಕರಿಯನ್ನಂತು ನಾನು ಸಂತೋಷದಿಂದ ಮಾಡುವೆನು. ಜಸವಂತಸಿಂಗಮಹಾರಾಜರ ಸೇವೆಯನ್ನು ಏಕನಿಷ್ಠೆಯಿಂದ ಮಾಡಿದಂತೆ, ಬೇರೆ ಯಾರಾದರೊಬ್ಬರ ಸೇವೆಯನ್ನು ಈಗ ಮಾಡಬೇಕಾಗಿರುವದು. ಆ ಸೇವೆಯನ್ನು ನೀವೇ ಕೈಕೊಂಡರೆ ಬಹಳ ನೆಟ್ಟಗಾಯಿತಲ್ಲ, ಎಂದನು. ಅದನ್ನುಕೇಳಿ ನಯನಪಾಲನು ಸಂತೋಷಮಗ್ನನಾದನು. ಆತನು ಸಂತೋಷದಭರದಲ್ಲಿ ದುರ್ಗಾದಾಸನನ್ನು ಕುರಿತು—"ನಿನ್ನಂಥ ಸೇವಕನು ನನಗೆ ಸಿಕ್ಕರೆ, ಜಸವಂತಸಿಂಗನ ಪದವಿಯೂ, ಬೇರೆ ಯಾವತ್ತೂ ಕಾರ್ಯಗಳೂ ನನ್ನ ಕೈಸೇರಲಿಕ್ಕೆ ತೊಂದರೆಯೇನು ಉಳಿಯುವದು ? ನನ್ನ ತಂದೆಯನ್ನು ಹದ್ದುಪಾಗುಮಾಡಿದ್ದ ಸೇಡನ್ನು ಚ...."ಆದರೆ ಅಷ್ಟರಲ್ಲಿ ನಯನಪಾಲನ ಮನಸ್ಸಿನಲ್ಲಿ ಯಾವ ವಿಚಾರವು ಹೊಳೆಯಿತೋ ಯಾರಿಗೆಗೊತ್ತು! ಆತನು ತನ್ನ ನಾಲಿಗೆ ಕಚ್ಚಿಕೊಂಡು ದುರ್ಗಾದಾಸನನ್ನು ಕುರಿತು— ನಾನು ಈ ಅಫುವಿನ ಅಮಲಿನಲ್ಲಿ ಎಚ್ಚರಿಲ್ಲದೆ ಏನೇನು ಹರಟುವೆನೋ ಯಾರಿಗೆ ಗೊತ್ತು ! ಯಾರವರು, ಅಲ್ಲಿ ಯಾರಿದ್ದೀರಿ ? ನಾಳೆ ಇಲ್ಲಿಂದ ತಳಕಿತ್ತಬೇಕೆಂದು ಮಾಡಿರುತ್ತದೆ. ದುರ್ಗಾ

ದಾಸರೇ, ನೀವು ರಾಣಿಯವರ ವಿಚಾರವನ್ನು ತಿಳಕೊಂಡರೆ ನೆಟ್ಟಗಾಗುವದು. ಅವರ ಪ್ರಕೃತಿಯು ನೆಟ್ಟಗಿದ್ದರೆ, ನಾಳೆಗೇ ನಾವು ಇಲ್ಲಿಂದ ಹೊರಡೋಣ, ಅನ್ನಲು, ಈ ಮಾತುಗಳನ್ನು ಕೇಳಿ ದುರ್ಗಾದಾಸನ ಮನಸ್ಸಿಗೆ ಕ್ಷಣಹೊತ್ತು ಹ್ಯಾಗೆಹ್ಯಾಗೋ ಆಯಿತು. ರಾಣಿಯೂ, ರಾಜಪುತ್ರನೂ ಇನ್ನೂ ಗೌಳಿಗರ ಮನೆಯನ್ನು ಬಿಟ್ಟು ಸಹ ಹೋಗದಿರುವಾಗ, ಈತನು ನಾಳೆಗೇ ಹೊರಡಬೇಕೆನ್ನುತ್ತಾನಲ್ಲ! ಮೂರುದಿವಸದ ಹಾದಿಯನ್ನಾದರೂ ಅವರು ಮುಂದಕ್ಕೆ ಕ್ರಮಿಸಿಹೋಗದ್ದರೆ ನೆಟ್ಟಗಾಗುತ್ತಿತ್ತು. ಮೂರದಿನ ಸಿಗದಿದ್ದರೂ ಒಂದು ಇಡಿಯ ರಾತ್ರಿಯಾದರೂ ತನ್ನ ಜನರ ಮಾರ್ಗಕ್ರಮಣಕ್ಕೆ ಅವಕಾಶವು ದೊರೆಯುವದು ಅವಶ್ಯವಾಗಿತ್ತು, ಎಂದು ಯೋಚಿಸಿ, ಆತನು ಬಹು ವಿನಯದಿಂದ ನಯನಪಾಲನನ್ನು ಕುರಿತು— ರಾಜೇಸಾಹೇಬರೇ, ತಮ್ಮ ಅಪ್ಪಣೆಯು ಎಲ್ಲರಿಗೂ ಶಿರಸಾಮಾನ್ಯವಾಗಿರುತ್ತದೆ. ನಾನು ತಮ್ಮ ಸಮ್ಮತಿಯಿಂದ ರಾಣಿಯವರಿಗೆ ತಮ್ಮ ಅಪ್ಪಣೆಯನ್ನು 'ತಿಳಿಸುತ್ತೇನೆ; ಆದರೆ ಅವರ ಪ್ರಕೃತಿಯು ನೆಟ್ಟಗಿಲ್ಲದಿದ್ದರೆ ತಾವು ಅವಸರ ಮಾಡಬಾರದು. ಹಾದಿಯಲ್ಲಿ ಏನಾದರೂ ಆಗಲಿ—ಬಿಡಲಿ, ಕೂಸಿಗೆ ಬೇನೆ ಬರಲಿ-ಬೆಸರಿಕೆ ಬರಲಿ, ಸುಮ್ಮನೆ ನೀವು ಅಪಕೀರ್ತಿಗೆ ಗುರಿಯಾಗಬೇಕಾದೀತು. ನಾನು ಜಸವಂತಸಿಂಗಮಹಾರಾಜರ ಬಳಿಯಲ್ಲಿ ಸ್ಪಷ್ಟಮಾತಾಡುತ್ತಿದ್ದಂತೆ, ಈಗ ನಿಮ್ಮ ಮುಂದಾದರೂ ಸ್ಪಷ್ಟ ಮಾತಾಡುವೆನು; ಯಾಕಂದರೆ, ತಾವು ನನ್ನನ್ನು ಸೇವಕನೆಂದು ಸ್ವೀಕರಿಸಿರುತ್ತೀರಿ. ರಾಣೀಸಾಹೇಬರ ಇಚ್ಛೆಯಂತೆ ನಡಕೊಳ್ಳುವದಿದ್ದರೆ, ಇನ್ನು ಎರಡುದಿನ ತಡೆಯಬೇಕೆಂದು ತಮಗೆ ಹೇಳಿಕೊಳ್ಳುವೆನು. ಅಷ್ಟರಲ್ಲಿ ಅವರ ಮನಸ್ಸಿನಲ್ಲಿ ಏನಿರುತ್ತದೆಂಬದನ್ನು ನಾನು ತಮಗೆ ತಿಳಿಸುವೆನು.

ದುರ್ಗಾದಾಸನ ಈ ಮಾತುಗಳನ್ನು ಕೇಳಿ ನಯನಪಾಲನು—ಆಗಲಿ, ಹಾಗೇ ಆಗಲಿ. ತಿಳಿಸಿರಿ ಹಾಗಾದರೆ, ಇನ್ನು ಅವರು ಬೇಗನೆ ನಮ್ಮ 'ಮಲಿಕಾ ಮಾ ಆಝುಮಾ' ಆಗುವರು. ಬಾದಶಹನ ಆ ಸುಳ್ಳು ಉದೇಪುರದ ಬೇಗಮೆಯು ಹೋಗಿ, ಈ ನಿಜವಾದ ಉದೇಪುರದ ಬೇಗಮೆಯು ಆತನಿಗೆ ದೊರೆಯುವಳು, ಎಂದು ನುಡಿದು, ಮೂರ್ಖತನದಿಂದ ಗಹಗಹಿಸಿ ನಕ್ಕನು. ಅದನ್ನು ಕೇಳಿ ದುರ್ಗಾದಾಸನು ಸಂತಾಪಗೊಂಡು, ಈಗಲೇ ಈ

ದುಷ್ಟನ ನಾಲಿಗೆಯನ್ನು ಕೊಯ್ದು ಬಿಡಬೇಕೆಂದು ಮಾಡಿದನು. ಆತನ ಕೈಯು ಟೊಂಕದಲ್ಲಿದ್ದ ಖಡ್ಗದ ಕಡೆಗೆ ಹೋಯಿತು; ಆದರೆ ಈಗಿನ ಪ್ರಸಂಗ ದಲ್ಲಿ ಸೋತು ಹೋಗುವದೇ ಹಿತಕರವೆಂದು ತಿಳಿದು ಆ ಸ್ವಾಮಿಭಕ್ತನು ಸಂತಾಪವನ್ನು ನುಂಗಿಕೊಂಡು ಸುಮ್ಮನೆ ಅಲ್ಲಿಂದ ಹೊರಟುಹೋದನು. ನಯನಪಾಲನಿಗೆ ಯಾವ ಪ್ರಕಾರದ ಸಂಶಯವೂ ಬರಬಾರವೆಂದು ಆತನು ಚಂದ್ರಾವತಿಯ ಮಂದಿರವನ್ನು ಪ್ರವೇಶಿಸಿ, ತನ್ನ ತಂಗಿಯನ್ನುಕಂಡು, ಅಲ್ಲಿ ಇದ್ದ ದೇವಳ ಎಂಬ ಹೆಸರಿನ ಅತ್ಯಂತ ವಿಶ್ವಾಸದ ದಾಸಿಗೆ ಹೇಳತಕ್ಕ ಕೆಲವು ಮಾತುಗಳನ್ನು ಹೇಳಿ ಹೊರಗೆ ಬಂದನು. ಆತನು ನಯನಪಾಲನ ಬಳಿಗೆ ಬಂದು— ನಿಮ್ಮ ಅಪ್ಪಣೆಯು ರಾಣೀಸಾಹೇಬರಿಗೆ ಪೂರ್ಣ ಸಮ್ಮತವಾಗಿ ರುತ್ತದೆ; ಆದರೆ ಕೂಸಿಗೆ ಈಗೆರಡು ದಿನಗಳಿಂದ ಸ್ವಲ್ಪ ನೆಗಡೆಯಾದಹಾಗೆ ಆಗಿರುವದರಿಂದ, ನಾಳೆ ಸಂಜೆಗೆ ಹೊರಡೋಣವೆಂದು ಅವರು ಹೇಳಿರು ವರು, ಅನ್ನಲು, ನಯನಪಾಲನು ಅದಕ್ಕೆ ಒಪ್ಪಿಕೊಂಡು—ದುರ್ಗಾದಾಸಾ, ರಾಣಿಯವರು ಇನ್ನೂ ಎಂಟುದಿನಗಳ ಮೇಲೆ ಹೊರಡೋಣವೆಂದರೂ ನಾನು ಅದರಂತೆ ನಡಕೊಳ್ಳತಕ್ಕವನೇ ಸರಿ; ಆದರೆ ಬಾದಶಹರ ಇಚ್ಛೆಯು ಹ್ಯಾಗಿರುತ್ತದೆಂಬದನ್ನೂ ಸ್ವಲ್ಪ ನೋಡಬೇಕಾಗುವದು, ಎಂದು ಹೇಳಿ ದನು. ಅದಕ್ಕೆ ದುರ್ಗಾದಾಸನು— ಹೋ ಹೋ, ಎಂದು ಸಮ್ಮತಿಸಿ, ಆತನ ಅಪ್ಪಣೆ ಪಡೆದು ಹೊರಟು ಹೋದನು. ಹೊತ್ತು ಮುಳುಗಿ ಕತ್ತ ಲಾಗುವವರೆಗೆ ಹಾಗು ಹೀಗು ಹೊತ್ತುಗಳೆದು, ಕತ್ತಲಾದ ಕೂಡಲೆ ಆತನು ಗೌಳಿಗರ ಮನೆಗೆ ಹೊರಟನು. ಅಲ್ಲಿ ಎಲ್ಲ ಸಿದ್ಧವಾಗಿತ್ತು. ರಾಣಿಯು ರಾಜ ಪುತ್ರನೊಡನೆ ಡೋಲಿಯಲ್ಲಿ ಕುಳಿತು ಪ್ರಯಾಣ ಬೆಳಸಿದಳು. ಆಕೆಯ ಸಂಗಡ ಹದಿನೈದು ಹದಿನಾರು ಜನರು ಇದ್ದರು. ಇಂದಿರೆಯ ವಿಷಯವಾಗಿ ರಾಣಿಯು ಬಹಳ ವ್ಯಸನಪಡುತ್ತಿದ್ದಳು. ಆಕೆಯ ಸುರಕ್ಷಿತತೆಯ ಬಗ್ಗೆ ರಾಣಿಯು ದುರ್ಗಾದಾಸನ ಮುಂದೆ ಪರಿಪರಿಯಾಗಿ ಹೇಳಿ ನಿರ್ವಾಹವಿಲ್ಲ ದಾಗಲು, ಬಹುಕಷ್ಟದಿಂದ ಮುಂದಕ್ಕೆ ಸಾಗಿದಳು. ತನ್ನ ಜನರು ಅರ್ಧ ಮೈಲಿನ ಮೇಲೆ ಹೋದದ್ದನ್ನು ನೋಡಿ ದುರ್ಗಾದಾಸನ ಮನಸ್ಸಿಗೆ ಸ್ವಲ್ಪ ಸಮಾಧಾನವಾಯಿತು. ಇನ್ನು ಮೂರು ನಾಲ್ಕು ದಿವಸಗಳಲ್ಲಿ ಇಂದಿರೆಯನ್ನು ಕರಕೊಂಡು ನಿಮ್ಮನ್ನುಕೂಡುವೆನೆಂದು ಹೇಳಿ, ಅರ್ಧಸಂತುಷ್ಟತೆಯಿಂದಲೂ

ಮುಂದೆ ಏನಾಗುವದೋ ಎಂಬ ಚಿಂತೆಯು ಬಾಧಿಸಲು ಅರ್ಧ ಅಸಂತುಷ್ಟತೆಯಿಂದಲೂ ದುರ್ಗಾದಾಸನು ಹಿಂದಿರುಗಿದನು.

ಮಧ್ಯರಾತ್ರಿಯಾಯಿತು. ಎಲ್ಲ ಕಡೆಯಲ್ಲಿ ಶಾಂತತೆಯ ಸಾಮ್ರಾಜ್ಯವು ಪ್ರಸ್ಥಾಪಿತವಾಗಿತ್ತು. ನಯನಪಾಲನ ದಂಡಾಳುಗಳು ಅದೇ ಗಾಯನವಾದನಗಳನ್ನು ನಿಲ್ಲಿಸಿ ತಮ್ಮ ತಮ್ಮ ಹಾಸಿಗೆಗಳನ್ನು ಹಾಸಿಕೊಂಡು ಸ್ವಸ್ಥವಾಗಿ ಮಲಗಿಕೊಂಡಿದ್ದರು. ತೊಗಲಬಾವಿಲಿಗಳು ನಡನಡುವೆ ಫರಫರ ಸಪ್ಪಳ ಮಾಡಿ ಶಾಂತತೆಯನ್ನು ಸ್ವಲ್ಪ ಭಂಗಗೊಳಿಸುತ್ತಿದ್ದವು. ಹೀಗಿರುವಾಗ ಒಮ್ಮಿಂದೊಮ್ಮೆ ಅಂತರ್ಗೃಹದಲ್ಲಿ ರೋದನ ಧ್ವನಿಯು ಕೇಳಿಸಹತ್ತಿತು. ಅವಶ್ಯದ ಆಪ್ತರು ತೀರಿಕೊಂಡಾಗ ಆಕ್ರೋಶಮಾಡಿ ಅಳುವಂತೆ ಮೂವರು ನಾಲ್ವರು ಹೆಂಗಸರು ಅಳುತ್ತಿದ್ದರು. ಈ ಸುದ್ದಿಯನ್ನು ಕಾವಲುಗಾರರು ನಯನಪಾಲನಿಗೆ ತಿಳಿಸಲು, ಆತನು ದುರ್ಗಾದಾಸನನ್ನು ಕರಿಸಿಕೊಂಡು ಅಂತರ್ಗೃಹದಲ್ಲಿ ಯಾಕೆ ಅಳುತ್ತಿರುವರು, ನೋಡಬೇಕೆಂದು ಹೇಳಿದನು. ಅದಕ್ಕೆ ದುರ್ಗಾದಾಸನು— ಮಹಾರಾಜರೇ, ವಿಶೇಷವೇನೂ ಇರಲಿಕ್ಕಿಲ್ಲ. ರಾಣೀಸಾಹೇಬರಿಗೆ ಮಹಾರಾಣಾನವರ ಸ್ಮರಣವಾಗಿ, ಅವರು ಅಳುತ್ತಿರಬಹುದು, ಎಂದು ಸೂಚಿಸಿ, ಆದರೂ ಅಪ್ಪಣೆಯಂತೆ ಹೋಗಿ ಬರುತ್ತೇನೆ, ಎಂದು ಹೊರಟುಹೋದನು. ಬಹಳ ಹೊತ್ತಿನಮೇಲೆ ತಿರುಗಿ ಬಂದವನು ಬಿಕ್ಕಿ ಬಿಕ್ಕಿ ಅಳುತ್ತಲೇ ಬಂದನು. ಆಗ ನಯನಪಾಲನು–ಯಾಕೆ ? ಏನಾಯಿತು. ಎಂದು ದುರ್ಗಾದಾಸನನ್ನು ಪರಿಪರಿಯಿಂದ ಕೇಳಲು, ಆತನು ಕಣ್ಣು ಒರಿಸಿಕೊಳ್ಳುತ್ತ ಸದ್ಗದಿತ ಕಂಠದಿಂದ— ಮಹಾರಾಜರೇ, ಏನು ಹೇಳಲಿ ? ಸರ್ವಸ್ವ ಘಾತವಾಗಿ ಹೋಯಿತು. ಜಸವಂತಸಿಂಗ ಮಹಾರಾಜರ ವಂಶವು ಇಂದಿಗೆ ಮುಣುಗಿತು ! ಅವರ ಶತ್ರುಗಳ ಮನಸ್ಸಿನಂತೆ ಅನಾಯಾಸವಾಗಿ ಆಯಿತು, ಎಂದು ನುಡಿದು, ದೊಡ್ಡ ದನಿಯಿಂದ ಅಳಹತ್ತಿದನು. ಅದಕ್ಕೆ ನಯನಪಾಲನು— ಅಂಥ ಘಾತದ ಪ್ರಸಂಗವೇನಾಯಿತು, ಸ್ಪಷ್ಟವಾಗಿ ಹೇಳಬೇಕೆಂದು ದುಂಬಾಲು ಬಿದ್ದು ಕೇಳಲು, ದುರ್ಗಾದಾಸನು ಕಡೆಗೆ— ಮಹಾರಾಜರೇ, ಕೂಸಿಗೆ ಎರಡು ದಿನ ನೆಗಡಿಯಾದ ಹಾಗೆ ಆಗಿತ್ತೆಂದು ನಿನ್ನೆ ಹೇಳಿದ್ದೆನಲ್ಲ, ಆ ನೆಗಡಿಯಲ್ಲಿ ಬಾಲಗೃಹವಿಕಾರವಾಗಿ ಕೂಸು ಅಕಸ್ಮಾತ್ ಮಧ್ಯರಾತ್ರಿಗೆ ತೀರಿಕೊಂಡಿತು; ಅದರಿಂದಲೇ ರಾಣೀಸಾಹೇಬರು ಆಕ್ರೋಶ ಮಾಡತೊಡಗಿದ್ದಾರೆ. ಅವರಿಗೆ ಸಮಾಧಾನ

ಹೇಳುವದು ಯಾರಿಂದಲೂ ಆಗದು. ಮೊದಲೇ ಅವರು ಪುತ್ರಶೋಕ ದಿಂದಲೂ, ಪತಿಶೋಕದಿಂದಲೂ ಪೀಡಿತರಾಗಿರಲು, ಹೊಸ ಪುತ್ರಶೋಕವು ಅವರಿಗೆ ಪ್ರಾಪ್ತವಾದಂತಾಯಿತು. ಹೀಗೇ ಬಿಟ್ಟರೆ ಅವರು ಶೋಕಮಾಡಿ ಮಾಡಿ ನಿರ್ವೀರ್ಣ್ಯರಾಗಬಹುದು. ಮೊದಲು ಶವಕ್ಕೆ ಹಿಡಿಮಣ್ಣು ಕೊಟ್ಟು ಬಿಡಬೇಕು. ಶವವು ಕಣ್ಣೆದುರಿಗಿರುವತನಕ ದುಃಖವು ಕಡಿಮೆಯಾಗುವ ಹಾಗಿಲ್ಲ, ಎಂದು ನುಡಿದು, ದುರ್ಗಾದಾಸನು ನಯನಪಾಲನ ಸಮ್ಮತಿಯಿಂದ ಮತ್ತೆ ಅಂತರ್ಗೃಹಕ್ಕೆ ಹೋದನು. ಕೂಡಲೆ ಭಯಂಕರವಾದ ರೋದನ ಧ್ವನಿಯು ಕೇಳಿಸಹತ್ತಿತು. ಸ್ವಲ್ಪ ಹೊತ್ತಿನ ಮೇಲೆ ಆತನು ತಿರುಗಿ ಬಂದು ನಯನಪಾಲನಿಗೆ— ಮಹಾರಾಜರೇ, ರಾಣೀಸಾಹೇಬರವರು ಶವಕ್ಕೆ ತಾವೇ ಕೈಮುಟ್ಟಿ ಮಣ್ಣು ಕೊಡುತ್ತೇವಲ್ಲದೆ, ಒಬ್ಬರನ್ನೂ ಮುಟ್ಟಗೊಡಲಿಕ್ಕಿಲ್ಲೆಂದು ಹಟವನ್ನೇ ಹಿಡಿದಿರುತ್ತಾರೆ. ಈ ಪ್ರಸಂಗದಲ್ಲಿ ಅವರ ಮಾತಿನಂತೆಯೇ ಹೋಗುವದು ನೆಟ್ಟಗೆ. ಹೆಂಗಸರ ಹೊರತು ನಿಮ್ಮ ಯಾವತ್ತೂ ಕಾವಲು ಗಾರರನ್ನೂ ಕರೆಸಿಕೊಂಡರೆ, ಹಿಂದಿನ ಬೈಲಿನಲ್ಲಿ ತಗ್ಗು ತೋಡಿಸಿ ಶವಕ್ಕೆ ಅವರು ಕೈಮುಟ್ಟಿ ಮಣ್ಣು ಕೊಡುವಂತೆ ಮಾಡುತ್ತೇನೆ.

ರಾಜಪುತ್ರನ ಮರಣದ ವಾರ್ತೆಯನ್ನು ಕೇಳಿ ನಯನಪಾಲನಿಗೆ ಸಮಾಧಾನವಾಯಿತೋ ಅಸಮಾಧಾನವಾಯಿತೋ ಎಂಬದನ್ನು ಸ್ಪಷ್ಟವಾಗಿ ಹೇಳುವದು ಕಠಿಣವೇ ಸರಿ; ಗರ್ಭವತಿಯನ್ನು ಸುರಕ್ಷಿತವಾಗಿ ಕರಕೊಂಡು ಬರಬೇಕೆಂದು ಬಾದಶಹನ ಅಪ್ಪಣೆಯಾಗಿರಲು, ಈ ಸುದ್ದಿಯನ್ನು ಯಾವ ಮೋರೆಯಿಂದ ಬಾದಶಹನ ಮುಂದೆ ಹೇಳಬೇಕೆಂದು ಆತನು ಅಸಮಾಧಾನ ಪಟ್ಟನು. ಜಸವಂತಸಿಂಗನಿಗೆ ಗಂಡುಮಗವು ಹುಟ್ಟಿದರೆ, ತನ್ನ ಮನೆಯಲ್ಲಿ ಅದರ ರಕ್ಷಣಮಾಡಿ, ಜೋಧಪುರದ ರಾಜನನ್ನು ಕೇವಲ ಹಸ್ತಕನನ್ನಾಗಿ ಮಾಡಿಕೊಳ್ಳಬೇಕೆಂದು ಅಲಮಗೀರನು ಯೋಚಿಸುತ್ತಿರುವಾಗ, ಇದೇನು ಅನರ್ಥವಾಯಿತೆಂದು ಯೋಚಿಸಿ, ನಯನಪಾಲನು ದುರ್ಗಾದಾಸನಿಗೆ—ಹೋಗಿರಿ, ನೀವಂದಂತೆಯೇ ಶವಕ್ಕೆ ಮಣ್ಣು ಕೊಡಿಸಿರಿ. ಕಾವಲು ಗಾರರನ್ನು ಕರೆಸಿಕೊಳ್ಳುತ್ತೇನೆ; ಎಂದು ಹೇಳಿ, ಕೂಡಲೆ ಕಾವಲುಗಾರರನ್ನು ಕರೆಸಿಕೊಂಡನು. ದುರ್ಗಾದಾಸನು ಅಂತರ್ಗೃಹದಲ್ಲಿ ಹೋದಕೂಡಲೆ ಮತ್ತೆ ಶೋಕಧ್ವನಿಯು ಹೆಚ್ಚಿತು. ಆಗ ತಂಪು ಹೊತ್ತು ಇದ್ದು, ಗಾಳಿಯು

ಸುಳಿಯದ್ದರಿಂದ ಶೋಕಧ್ವನಿಯು ನಯಪಾಲನಿಗೆ ಸ್ಪಷ್ಟವಾಗಿಕೇಳಿಸುತ್ತಿತ್ತು. ದುರ್ಗಾದಾಸನು ರಾಣಿಗೆ ಸಮಾಧಾನವನ್ನು ಹೇಳಿ, ಶವವನ್ನು ತಕ್ಕೊಂಡು ಬರಬೇಕೆಂದು ಹೇಳಲು, ರಾಣಿಯು ಮಿತಿಮೀರಿ ಅಕ್ರೋಶಮಾಡಿ— ಹಾ ? ಮಗನೇ, ನಿನ್ನನ್ನು ಈಗ ಮಣ್ಣಲ್ಲಿ ಇಟ್ಟು ಬರಲಾ ? ಅವರು ಸತ್ತಮೇಲೆ ಹುಟ್ಟಿದೆ; ಆದರೆ ಯಾಕೆ ಬದುಕಲಿಲ್ಲಪ್ಪಾ ? ಬಾಳಾ ಮುಂಜಾವಿನಿಂದ ನೀನು ಅಳಲಿಲ್ಲ. ಈಗ ನಾನು ಹ್ಯಾಗೆ ಮಾಡಲಿ ? ಎಲ್ಲಿಗೆ ಹೋಗಲಿ ? ನನ್ನ ಕೂಸನ್ನು ಯಾರು ತಂದು ಕೊಟ್ಟಾರು ? ಇನ್ನು ನಿನ್ನನ್ನು ನಾನು ಎಲ್ಲಿ ನೋಡೇನು ? ನಿನ್ನ ಸಲುವಾಗಿಯೇ ದುರ್ಗಾದಾಸನೂ ದಾಸಿಯರೂ ನನಗೆ ಸಹಗಮನ ಮಾಡಬೇಡೆಂದು ಹೇಳಿದ್ದರಲ್ಲ ? ಇನ್ನೇನು ಗತಿಯು ಪೃಥ್ವಿಯು ಹೋದರೂ, ಅವರು ಹೋದರೂ ನಿನ್ನನ್ನುನೋಡಿ ಕಾಲಕಳೆಯು ಬೇಕೆಂದಿದ್ದರೆ, ನೀನೂ ಕೈಬಿಟ್ಟು ಹೋದೆಯಾ ? ಇನ್ನು ಪತಿಯ ಪಾದುಕೆ ಗಳೊಡನೆ ಸಹಗಮನ ಮಾಡುವದೊಂದೇ ಮಾರ್ಗವು ನನಗೆ ಉಳಿದಂತಾ ಯಿತು. ಈಗ ಕೈಮುಟ್ಟ ನಿನ್ನನ್ನು ಮಣ್ಣಲ್ಲಿಟ್ಟು ನಾಳಿಗೆ ಸಹಗಮನ ಮಾಡು ವೆನು, ಎಂದು ಶೋಕಮಾಡುತ್ತಿರಲು, ದುರ್ಗಾದಾಸನು ಸಮಾಧಾನ ಮಾಡುತ್ತಲಿದ್ದನು. ದಾಸಿಯರು ಶವವನ್ನು ತಕ್ಕೊಳ್ಳಲಿಕ್ಕೆ ಯತ್ನಿಸುವಾಗ ರಾಣಿಯು ತಕ್ಕೊಳ್ಳಗೊಡದೆ, ತಾನೇ ಶವವನ್ನು ತಕ್ಕೊಂಡು ಎದ್ದು— ದುರ್ಗಾದಾಸರೇ, ಆ ತಗ್ಗು ಎಲ್ಲಿ ಅದೆ, ನನಗೆ ತೋರಿಸಿರಿ, ಎಂದು ಅರಿವೆ ಯಲ್ಲಿ ಏನನ್ನೋ ಹ್ಯಾಗಾದರೂ ಸುತ್ತಿದ್ದನ್ನು ತಕ್ಕೊಂಡು ಹೋಗಿ, ಮತ್ತೊಮ್ಮೆ ಭಯಂಕರವಾಗಿ ಶೋಕಮಾಡಿ ಅದನ್ನು ತಗ್ಗಿನಲ್ಲಿ ಚಲ್ಲಿಕೊಟ್ಟು ರಾಣಿಯು ಒಳಗೆ ಬಂದಳು. ದುರ್ಗಾದಾಸನು ಮೇಲೆ ಮಣ್ಣುದೂಡಿ ಶೋಕ ಗ್ರಸ್ತನಾಗಿ ಅತ್ಯಂತ ಮ್ಲಾನವದನದಿಂದ ಹೊರಗೆ ಬಂದನು. ಅತ್ತ ರಾಣಿಯು ಅಕ್ರೋಶವು ಕೆಲಮಟ್ಟಿಗೆ ಕಡಿಮೆಯಾದರೂ ಅದು ಪೂರ್ಣ ಶಾಂತ- ವಾಗಿದ್ದಿಲ್ಲ.

ಮರುದಿನ ರಾಣಿಯು ಸಹಗಮನ ಮಾಡುವೆನೆಂದು ಹಟಹಿಡಿದಳು. ಅದಕ್ಕೆ ನಯನಪಾಲನು ಸಮ್ಮತಿಸಲಿಲ್ಲ. ರಾಣಿಯ ಮೇಲೆ ಬಲವಾದ ಕಾವಲಿಟ್ಟು, ನಾಳಿಗೆ ಇಲ್ಲಿಂದ ಹೊರಡತಕದ್ದೆಂದು ಆತನು ನಿರ್ಧರಿಸಿದನು. ಕಡೆಗೆ ಇನ್ನು ಮೂರುದಿನಗಳ ಅವಕಾಶವನ್ನಾದರೂ ಕೊಡಬೇಕೆಂದು

ರಾಣಿಯು ನಯನಪಾಲನನ್ನು ಆಗ್ರಹದಿಂದ ಬೇಡಿಕೊಳ್ಳಲು, ಅದನ್ನಿಷ್ಟು ಆತನು ನಡಿಸಿದನು. ಈ ಮೂರುದಿನಗಳಲ್ಲಿ ರಾಣಿಯ ದುಃಖವು ಕಡಿಮೆ ಯಾದಂತೆ ತೋರಿಸಲಾಯಿತು. ದುರ್ಗಾದಾಸನು ದಿನಾಲು ಒಂದೆರಡು ಸಾರೆ ರಾಣಿಯ ಬಳಿಗೆ ಹೋಗುತ್ತಿದ್ದನು. ಮೂರನೆಯ ದಿವಸ ದುರ್ಗಾ ದಾಸನು ರಾಣಿಯ ಬಳಿಗೆ ಹೋಗಿರಲು, ಒಂದು ಚಮತ್ಕಾರದ ಸಂಗತಿಯು ಒದಗಿತು. ನಯನಪಾಲನ ಕಾವಲುಗಾರನೊಬ್ಬನು ನಯನಪಾಲನ ಬಳಿಗೆ ಬಂದು— ಮಹಾರಾಜರೇ, ಏನೋ ಮೋಸವಾಗುವಂತೆ ತೋರುತ್ತದೆ. ನೀವು ಚಂದ್ರಾವತೀರಾಣಿಯವರನ್ನೂ, ದುರ್ಗಾದಾಸನನ್ನೂ ದಿಲ್ಲಿಗೆ ಕರ ಕೊಂಡು ಹೋಗಬೇಕೆಂದು ಮಾಡಿರುವಿರಷ್ಟೇ ? ಆದರೆ ರಾಣಿಯೂ, ದುರ್ಗಾದಾಸನೂ ನಿಮಗೆ ಮಂಕುಬೂದಿ ಹಚ್ಚಿ ಇಲ್ಲಿಂದ ಓಡಿ ಹೋಗುವ ಯೋಚನೆಯಲ್ಲಿದ್ದ ಹಾಗೆ ತೋರುತ್ತದೆ. ಒಬ್ಬ ದಾಸಿಗೆ ಲಂಚದ ಆಶೆ ಹಚ್ಚಿದ್ದರಿಂದ ಈ ಸುದ್ದಿಯು ನನಗೆ ಗೊತ್ತಾಯಿತು. ಈ ಮಾತು ನಿಜವೆಂಬ ನಂಬಿಗೆಯು ನನಗಿರುತ್ತದೆ. ಸೇವಕ ಧರ್ಮದಂತೆ, ನಾನು ಇದ್ದ ಸಂಗತಿ ಯನ್ನು ಸನ್ನಿಧಿಗೆ ತಿಳಿಸಿದ್ದೇನೆ. ಚಿತ್ತಕ್ಕೆ ಬಂದಂತೆ ವ್ಯವಸ್ಥೆಯಾಗಬೇಕು, ಎಂದು ಹೇಳಲು, ನಯನಪಾಲನು ಆ ಸೇವಕನಿಗೆ ಕೆಲವು ಪ್ರಶ್ನೆಗಳನ್ನು ಮಾಡಿದನು. ಬಳಿಕ ತಾನು ಏನು ಮಾಡುತ್ತೇನೆಂಬದರ ಎಚ್ಚರವಿಲ್ಲದೆ ಆತನು ಒಮ್ಮೆಲೆ ದುರ್ಗಾದಾಸನನ್ನು ಕರೆಸಿ—ದುರ್ಗಾದಾಸಾ, ಇನ್ನು ನೀನು ರಾಣೀ ಸಾಹೇಬರ ಭೆಟ್ಟಿಗೆ ಹೋಗಬೇಡ, ಎಂದು ಕಟ್ಟಪ್ಪಣೆ ಮಾಡಿದನು. ಅದಕ್ಕೆ ದುರ್ಗಾದಾಶನು—ಹೀಗೇಕೆ? ಹೀಗೇಕೆ ?· ಎಂದು ಕೇಳಲು, ಅದಕ್ಕೆ ನಯನ ಪಾಲನಿಂದ ಸರಳವಾದ ಉತ್ತರವು ದೊರೆಯಲಿಲ್ಲ. ಆಗ ದುರ್ಗಾದಾಸನು— ಮಹಾರಾಜರೇ, ನಾನು ಈಗ ನಿಮ್ಮ ಅಜ್ಞಾಂಕಿತನಾಗಿರುವದರಿಂದ ತಮ್ಮ ಆಜ್ಞೆಯಂತೆ ನಡೆದುಕೊಳ್ಳುವದು ಅವಶ್ಯವಾಗಿರುವದು. ಆದರೆ ನನ್ನ ಒಡತಿಯು ನನ್ನ ಬಳಿಯಲ್ಲಿರುವ ತನಕ ಆಕೆಯ ಸೇವೆಗಾದರೂ ನನಗೆ ಆಸ್ಪದವಿರಬೇಕು. ಹಾಗಿಲ್ಲದ ಬಳಿಕ ನಾನು ತಮ್ಮಸೇವೆಯನ್ನು ಕೈಕೊಳ್ಳು ವದರಲ್ಲಿ ಲಾಭವೇನಿರುವದು ? ನನಗೆ ನನ್ನ ದೇಶಕ್ಕೆ ಹೋಗಲಪ್ಪಣೆಕೊಟ್ಟು ಬಿಟ್ಟರೆ, ನನ್ನ ಮಾರವಾಡ ದೇಶದಲ್ಲಿ ನಾನು ಸ್ವಸ್ಥವಾಗಿ ಇದ್ದು ಬಿಡುವೆನು. ಇನ್ನು ಮೇಲೆ ಯಾರ ಸೇವೆಮಾಡುವ ಇಚ್ಛೆಯೂ ನನಗಿರುವದಿಲ್ಲ, ಎಂದು

ಹೇಳಿದನು. ಆದನ್ನು ಕೇಳಿ ನಯನಪಾಲನ ಮನಸ್ಸಿನಲ್ಲಿ ಯಾವ ವಿಚಾರವು ಉತ್ಪನ್ನವಾಯಿತೋ ದೇವರೇ ಬಲ್ಲ, ಆತನು ಒಮ್ಮೆಲೆ ದುರ್ಗಾದಾಸನನ್ನು ಕುರಿತು— ದುರ್ಗಾದಾಸರೇ, ನಿಮ್ಮ ಮನಸ್ಸಿಗೆ ಬಂದತ್ತ ನೀವು ಸಂತೋಷದಿಂದ ಹೋಗಬಹುದು. ನಾವು ಚಂದ್ರಾವತೀರಾಣಿಯನ್ನು ಕರಕೊಂಡುಇದೇ ಕ್ಷಣ ದಿಲ್ಲಿಯ ಹಾದಿಯನ್ನು ಹಿಡಿಯುವೆವು, ಎಂದು ಹೇಳಿ, ಕೂಡಲೆ ಪಾಳಯವನ್ನೆಬ್ಬಿಸಲಿಕ್ಕೆ ದಂಡಿಗೆ ಅಪ್ಪಣೆ ಮಾಡಿದನು.

೮ನೆಯ ಪ್ರಕರಣ

# ಪದ್ಮೆಯ ಸಾಹಸ

ಪ್ರಿಯ ಪಾಠಕರೇ, ಸ್ವಾಮಿಭಕ್ತರಾದ ದುರ್ಗಾದಾಸನನ್ನೂ, ಇಂದಿರೆಯನ್ನೂ ನಯನಪಾಲನ ಬಳಿಯಲ್ಲಿ ಬಿಟ್ಟು, ನಾವು ಚಂದ್ರಾವತೀರಾಣಿಯ ಸಮಾಚಾರವನ್ನು ತಕ್ಕೊಳ್ಳುವಾ ನಡೆಯಿರಿ. ಚಂದ್ರಾವತಿಯ ಸಂಗಡ ಹದಿನೈದು-ಹದಿನಾರು ಜನರು ಇದ್ದರೆಂದು ಹೇಳಿದೆಯಷ್ಟೆ? ಅವರಲ್ಲಿ ಗಿಯಾಸುದ್ದೀನನೆಂಬ ವೃದ್ಧ ಮುಸಲ್ಮಾನನು ಒಬ್ಬನಾಗಿದ್ದನು. ಗಿಯಾಸುದ್ದೀನನು ಜಸವಂತಸಿಂಗನ ಪೂರ್ಣವಿಶ್ವಾಸಕ್ಕೆ ಪಾತ್ರನಾಗಿದ್ದನು. ಒಂದು ಪ್ರಸಂಗದಲ್ಲಿ ಜಸವಂತಸಿಂಗನು ಗಿಯಾಸುದ್ದೀನನ ಪ್ರಾಣರಕ್ಷಣ ಮಾಡಿದ್ದರಿಂದ, ಆ ಮುಸಲ್ಮಾನನು ಕೃತಜ್ಞತೆಯಿಂದ ಜಸವಂತಸಿಂಗನ ಚಾಕರಿಗೆ ನಿಂತುಕೊಂಡಿದ್ದನು. ಅಫಗಾಣಿಸ್ಥಾನದ ಗುಡ್ಡಗಾಡಜನರು ಒಮ್ಮೆ ಒಬ್ಬನನ್ನು ತಮ್ಮ ಸ್ವಾಮಿಯೆಂದು ಒಪ್ಪಿಕೊಂಡ ಬಳಿಕ, ತಮ್ಮ ಸ್ವಾಮಿಕಾರ್ಯಕ್ಕಾಗಿ ಬೇಕಾದಂಥ ಕಷ್ಟಸೋಸಲಿಕ್ಕೆ ಅವರು ಹಿಂಜರಿಯತಕ್ಕವರಲ್ಲೆಂದು ಪ್ರಸಿದ್ಧಿ ಇರುವದು. ಅಫಗಾಣಿಸ್ತಾನದಲ್ಲಾದ ಜಸವಂತಸಿಂಗನ ಜಯಕ್ಕೆ

ಗಿಯಾಸುದ್ದೀನನೇ ಕಾರಣನಾಗಿದ್ದನು. ಗಿಯಾಸುದ್ದೀನನು ಗುಡ್ಡದೊಳಗಿನ ಕಠಿಣಮಾರ್ಗಗಳನ್ನು ತೋರಿಸದಿದ್ದರೆ, ಜಸವಂತಸಿಂಗನಿಗೆ ಇಷ್ಟು ಬೇಗನೆ ಜಯಪ್ರಾಪ್ತಿಯಾಗುತ್ತಿದ್ದಿಲ್ಲ; ಅಫಗಾಣಿಸ್ತಾನದ ಜಯದ ಕೀರ್ತಿಯಲ್ಲಿಯ ಮೂರುಪಾಲು ಕೀರ್ತಿಗೆ ಗಿಯಾಸುದ್ದೀನನೇ ಕಾರಣನೆಂದು ಒಪ್ಪಿಕೊಳ್ಳಬಹುದು. ಇರಲಿ, ಈತನ ಹೊರತು ಬೇರೆ ನಾಲ್ವರು ರಜಪೂತ ವೀರರು ಚಂದ್ರಾವತಿಯ ಮುಖ್ಯ ಸಹಾಯಕರ್ತೃಗಳಾಗಿದ್ದರು. ಅವರಲ್ಲಿ ಶಿವಸಿಂಗನ ಪರಿಚಯವು ವಾಚಕರಿಗೆ ಇರಬಹುದು. ಈತನು ರೂಪಮತಿಯ ಅಣ್ಣನು. ತಂದೆಯಾದ ವಿಜಯಸಿಂಗನ ಮಾತು ಕೇಳದೆ, ಈತನು ಜಸವಂತಸಿಂಗನ ಸಂಗಡ ಅಫಗಾಣಿಸ್ಥಾನಕ್ಕೆ ಬಂದಿದ್ದನೆಂದು ಹೇಳಿದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಇವರಿಬ್ಬರ ಹೊರತು ರಾಮಸಿಂಗ, ಜಗತ್ ಸಿಂಗ, ಹರಪಾಲ ಎಂಬ ಮೂವರು ರಜಪೂತರು ಇದ್ದರು. ಈ ಐವರೂ ದುರ್ಗಾದಾಸನೂ ಕೂಡಿ ತಾವು ಸ್ವಾಮಿನಿಷ್ಠರಾಗಿರುವೆವೆಂತಲೂ, ಜಸವಂತಸಿಂಗನ ವಂಶವನ್ನು ಕಾಯುವೆವೆಂತಲೂ ಚಂದ್ರಾವತೀರಾಣಿಯ ಸಮಕ್ಷ ಪ್ರತಿಜ್ಞೆಮಾಡಿದ್ದರು.

ಚಂದ್ರಾವತೀರಾಣಿಯನ್ನು ದೊಡ್ಡಹಾದಿಯಿಂದ ಕರಕೊಂಡು ಹೋಗಲಿಕ್ಕೆ ಬರುವ ಹಾಗಿದ್ದಿಲ್ಲ. ಹಾದಿಯಲ್ಲಿ ಯಾವ ಕಾಲಕ್ಕೆ ಯಾರು ಭೆಟ್ಟಿಯಾದಾರು? ಯಾವ ಕಾಲಕ್ಕೆ ಎಂಥ ಪ್ರಸಂಗವು ಒದಗೀತು, ಎಂಬ ಭಯವಿದ್ದದ್ದರಿಂದ, ಗಿಯಾಸುದ್ದೀನನು ಅಡವಿಯ ಸೀಳಹಾದಿಯಿಂದ ಆಕೆಯನ್ನು ಕರಕೊಂಡು ನಡೆದಿದ್ದನು. ಮೊದಲೇ ಅಫಗಾಣಿಸ್ಥಾನದೊಳಗಿನ ಗುಡ್ಡಗಾಡದಾರಿಯು, ಅದರಲ್ಲಿ ಬಹುತರ ಎಂದೂ ಮನುಷ್ಯರ ಸಂಚಾರವಿಲ್ಲದ ಸ್ಥಳದೊಳಗಿಂದ ಗಿಯಾಸುದ್ದೀನನು ರಾಣಿಯನ್ನು ಕರಕೊಂಡು ಹೊರಟಿದ್ದನು. ಮಾರ್ಗದ ಭಯಂಕರತೆಯನ್ನು ವರ್ಣಿಸುವ ಹಾಗಿದ್ದಿಲ್ಲ. ಕೆಲಕೆಲವು ಕಡೆಯಲ್ಲಿ ಕಾಲುಜಾರಿದರೆ ಸಾಕು, ಪಾತಾಳಲೋಕಕ್ಕಿಳಿದರೆಂತಲೇ ತಿಳಿಯಬೇಕಾಗುತ್ತಿತ್ತು. ಇಂಥ ಬಿಗಿಯಾದ ಮಾರ್ಗದೊಳಗಿಂದ ಹೋಗುತ್ತಿರುವಾಗ ಚಂದ್ರಾವತೀರಾಣಿಯ ಚಿತ್ತವು ಚಿಂತಾಮಗ್ನವಾಗುತ್ತಿತ್ತು. ತನ್ನ ಈ ಕೂಸು, ಇಂಥ ಸಂಕಟಗಳನ್ನು ನೀಗಿ, ದೊಡ್ಡದಾಗಿ ಜೋಧಪುರದ ಸಿಂಹಾಸನಾರೂಢವಾದೀತೆಂಬ ಮಾತು ಆಕೆಗೆ ಅಶಕ್ಯವಾಗಿ ತೋರುತ್ತಿತ್ತು.

ಪೃಥ್ವೀಸಿಂಗನು ಮರಣಹೊಂದಿದ ದಿವಸವೇ ತನ್ನ ಅಪಕರ್ಷಕ್ಕೆ ಆರಂಭ ವಾಯಿತೆಂತಲೂ, ಇನ್ನು ಕಷ್ಟಪಡುತ್ತ ಒಂದು ದಿನ ಬಿದ್ದು ಹೋಗುವ ದಷ್ಟೇ ತನ್ನ ಪಾಲಿಗೆ ಉಳಿದಿರುತ್ತದೆಂತಲೂ ಆಕೆಯು ಮನಸ್ಸಿನಲ್ಲಿ ಅಂದು ಕೊಳ್ಳುತ್ತಿದ್ದಳು. ಹೀಗೆ ಎಲ್ಲವೂ ಪ್ರತಿಕೂಲವಾಗುತ್ತಿರುವಾಗ, ಈ ಗಿಯಾ ಸುದ್ದೀನನಾದರೂ ನಂಬಿಗೆಯಿಂದ ಹಾದಿಯನ್ನು ತೋರಿಸುತ್ತಾನೆಂದು ಹ್ಯಾಗೆ ತಿಳಿಯಬೇಕೆಂದು ಆಕೆಯು ಶಂಕಿಸಹತ್ತಿದಳು. ಮನುಷ್ಯನ ಮನಸ್ಸು ಚಿಂತೆಯಿಂದ ಒಮ್ಮೆ ದುರ್ಬಲವಾಯಿತೆಂದರೆ, ಅದು ಇಲ್ಲದ ಕಲ್ಪನೆಗಳಿಂದ ಮತ್ತಿಷ್ಟು ಚಿಂತಿಗೊಳಗಾಗುತ್ತದೆ. ಚಂದ್ರಾವತಿಯ ಸ್ಥಿತಿಯು ಹೀಗೆಯೇ ಆಗಿತ್ತು. ಆಕೆಯು ಕೇವಲ ಉದಾಸೀನಳಾಗಿ ಡೋಲಿಯಲ್ಲಿ ಕುಳಿತುಕೊಂಡಿ ರುತ್ತಿದ್ದಳು. ಡೋಲಿಯ ಹೊತ್ತವರು ಬಹು ಸ್ವಲ್ಪಮಟ್ಟಿಗೆ ವಿಶ್ರಾಂತಿಯನ್ನು ಹೊಂದಿ, ಆದಷ್ಟು ಬೇಗನೆ ನಡೆಯುತ್ತಿದ್ದರು. ಈ ಮೇರೆಗೆ ನಾಲ್ಕನೆಯ ದಿವಸ ಬೆಳಗಾಗುವವರೆಗೆ ಅವರು ವೇಗದಿಂದ ಹಾದಿಯ ನಡೆದರು. ಆಗ ಗಿಯಾಸುದ್ದೀನನು ಆನಂದದಿಂದ ತನ್ನ ಸಂಗಡಿಗರನ್ನು ಕುರಿತು— ತಮ್ಮ ಗಳಿರಾ, ನಾವು ಇನ್ನು ಹಾದಿಗೆ ಹತ್ತಿದೆವು. ಸಂಕಟದಿಂದ ಪಾರಾದೆವೆಂದು ಹೇಳಲಿಕ್ಕೆ ಪ್ರತಿಬಂಧವಿಲ್ಲ. ಇನ್ನು ಅಡ್ಡದಾರಿಗಳೂ, ಗುಡ್ಡಗಳೂ ಮುಗಿ ದವು. ಕಠಿಣವಾದ ಹಾದಿಗಳುಕೂಡ ತೀರಿದವು. ಇನ್ನು ಒಂದು ಬಿಕ್ಕಟ್ಟಿನ ಗುಡ್ಡವು ಮಾತ್ರ ಉಳಿದಿರುತ್ತದೆ; ಅದನ್ನಷ್ಟು ದಾಟಿಬಿಟ್ಟರೆ ನಿರ್ಭಯರಾದೆವು ಎಂದನು.

ಗಿಯಾಸುದ್ದೀನನ ಈ ಮಾತುಗಳನ್ನು ಕೇಳಿ, ಚಂದ್ರಾವತಿಗೆ ಬಹಳ ಆನಂದವಾಯಿತು. ಆಕೆಯು ಗಿಯಾಸುದ್ದೀನನನ್ನು ಕುರಿತು ಏನೋ ಮಾತಾಡಬೇಕೆನ್ನುತ್ತಿರುವಷ್ಟರೊಳಗೆ, ಆ ಅರಣ್ಯದಲ್ಲಿ ಆರ್ತಧ್ವನಿಯು ಕೇಳಿಸಹತ್ತಿತು. ಯಾವಳೋ ಹೆಣ್ಣುಮಗಳು ದುಃಖಪೀಡಿತಳಾಗಿ ಅಳು ತ್ತಿದ್ದಳು; ಯಾರಾದರೂ ನನ್ನನ್ನು ರಕ್ಷಿಸಿರೆಂದು ದೊಡ್ಡ ಧ್ವನಿಯಿಂದ ಕೂಗುತ್ತಿದ್ದಳು. ಇದನ್ನು ಚಂದ್ರಾವತೀರಾಣಿಯು ಕೇಳಿದಳು. ಉಳಿದ ಜನರ ಕಿವಿಗಾದರೂ ಆ ಆರ್ತಧ್ವನಿಯು ಕೇಳಿಸಿತು. ಎಲ್ಲರೂ ಅತ್ತಿತ್ತ ನೋಡಹತ್ತಿದರು; ಆದರೆ, ಆ ಗುಡ್ಡಗಳೊಳಗಿನ ಪ್ರತಿಧ್ವನಿಗಳಿಂದ ಮೂಲ ಧ್ವನಿಯು ಎತ್ತ ಕಡೆಯಿಂದ ಬರುತ್ತದೆಂಬವೇ ತಿಳಿಯದಾಯಿತು. ಎಲ್ಲರೂ

ಲಕ್ಷಪೂರ್ವಕವಾಗಿ ಕೇಳಹತ್ತಿದರು. ಶಿವಸಿಂಗನಿಗೆ ಮಾತ್ರ ಆ ಧ್ವನಿಯು ಗುರುತು ಹತ್ತಿದಹಾಗೆ ಆದದ್ದರಿಂದ, ಆತನು ಹೆಚ್ಚು ಆಶಕ್ತಿಯಿಂದ ಕೇಳು ತ್ತಿದ್ದನು. ಆತನು ತನ್ನ ಸಂಗಡಿಗರನ್ನು ಕುರಿತು— ಯಾರೋ ಹಾದಿಕಾ ರರು ಈ ಗುಡ್ಡದಲ್ಲಿ ಕಳ್ಳರಕೈಯಲ್ಲಿ ಸಿಕ್ಕಂತೆ ತೋರುತ್ತದೆ. ಕಳ್ಳರು ನಮಗೂ ತ್ರಾಸಕೊಡಬಹುದು; ಆದ್ದರಿಂದ ನಾವು ಮುಂಗಡವಾಗಿ ಎಚ್ಚತ್ತಿರುವದು ಜಾಣತನವು. ನಾನು ಹೋಗಿ ನೋಡಿಬರುತ್ತೇನೆ, ಸಾಧಿಸಿದರೆ ಸಂಕಟ ದಲ್ಲಿ ಸಿಕ್ಕವರನ್ನು ಬಿಡಿಸಿಕೊಂಡು ಬರುತ್ತೇನೆ, ಎಂದು ನುಡಿಯುತ್ತಿರಲು, ಚಂದ್ರಾವತೀರಾಣಿಯು—ನನ್ನಂಥವಳಾವಳೋ ಒಬ್ಬ ಅನಾಥ ಸ್ತ್ರೀಯು ಸಂಕಟಕ್ಕೆ ಗುರಿಯಾದಂತೆ ಕಾಣುತ್ತದೆ. ಆಕೆಯನ್ನು ಬಿಡಿಸಿಕೊಂಡು ಬಂದ ಹೊರತು ಇಲ್ಲಿಂದ ಉಲುಕಲಿಕ್ಕಿಲ್ಲೆಂದು ನಾನು ನಿಶ್ಚಯಿಸಿದ್ದೇನೆ. ದುಃಖ ದಿಂದ ಪೀಡಿತರಾದವರ ಆರ್ತಧ್ವನಿಯನ್ನು ಕೇಳಿ, ಅವರ ಪ್ರಾಣವನ್ನು ರಕ್ಷಿ ಸದೆ ಹಾದಿಯು ಹಿಡಿದು ಹೋಗುವದು ರಜಪೂತರಿಗೆ ಎಷ್ಟು ಮಾತ್ರವೂ ಯೋಗ್ಯವಲ್ಲ, ಎಂದು ನುಡಿದಳು. ಇದನ್ನು ಕೇಳದಕೂಡಲೆ ಗಿಯಾಸುದ್ದೀ ನನು—ಬಾಯಿಸಾಹೇಬರೇ, ತಾವಾಡುವ ಮಾತು ಅಕ್ಷರಶಃ ನಿಜವಾದದ್ದು; ಆದರೆ ತಮ್ಮ ಮೇಲೆ ಬಂದಿರುವ ಪ್ರಸಂಗವನ್ನು ನೋಡಿದರೆ, ಒಂದು ಕ್ಷಣ ವಾದರೂ ತಾವು ಹಾದಿಯಲ್ಲಿ ನಿಂತುಕೊಳ್ಳುವದು ಹಿತಕರವಲ್ಲ. ಕಾಬೂಲ ದಲ್ಲಿ ಏನಾಗಿರುವದೋ ಯಾರಿಗೆ ಗೊತ್ತು ? ನಮ್ಮ ಕಪಟಜಾಲವೆಲ್ಲ ಗೊತ್ತಾಗಿ, ನಯನಪಾಲನು ನಮ್ಮನ್ನು ಬೆನ್ನಟ್ಟಿ ಬರಲಿಕ್ಕೆ ದಂಡು ಕಳಿಸಿ ದ್ದರೆ ನಾವು ಏನು ಮಾಡಬೇಕು ? ಇಂಥ ಪ್ರಸಂಗದಲ್ಲಿ ನಾವು ಸುಮ್ಮನೆ ತಡಮಾಡಿದರೆ ಪಶ್ಚಾತ್ತಾಪಕ್ಕೆ ಗುರಿಯಾಗಬೇಕಾದೀತು. ನಾವು ಇಷ್ಟು ಹೊತ್ತಿನ ತನಕ ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಗಿ, ಈ ಚಿಕ್ಕಮಹಾ ರಾಜರು ಶತ್ರುಗಳ ಕೈಸೇರಿದರೆ, ಏನು ಉಳಿದಹಾಗಾಯಿತು ? ತಾವು ಸುರ ಕ್ಷಿತವಾಗಿ ಜೋಧಪುರಕ್ಕೆ ಹೋಗಿ ಮುಟ್ಟಿದರೆ, ಬಹುಜನರ ಕಷ್ಟನಿವಾರ ಣಕ್ಕೆ ತಾವು ಕಾರಣವಾಗಬಹುದು. ಈಗ ಇಲ್ಲಿ ಸುಮ್ಮನೆ ತಡಮಾಡಿದರೆ, ನೀವೇ ಸಂಕಟಕ್ಕೆ ಗುರಿಯಾಗುವ ಸಂಭವವಿರುತ್ತದೆ.

ಗಿಯಾಸುದ್ದೀನನ ಈ ಮಾತುಗಳನ್ನು ಚಂದ್ರಾವತಿಯು ಸಮಾಧಾನ ದಿಂದ ಕೇಳಿಕೊಂಡು, ಮಾತುಮುಗಿದ ಮೇಲೆ ಅವನನ್ನು ಕುರಿತು—

ಗಿಯಾಸುದ್ದೀನ, ನೀನಾಡುವ ಮಾತು ಸುಳ್ಳಲ್ಲ; ಆದರೆ, ಅಪ್ಪಾ, ರಾಜ್ಯಕ್ಕೆ ಹೋಗಿ ಈತನನ್ನು ದೊಡ್ಡವನನ್ನು ಮಾಡುವದು ಯಾತಕ್ಕೆ? ದುಃಖಿತರ ರಕ್ಷಣಕ್ಕಾಗಿಯೇ ಅಲ್ಲವೆ? ಈಗ ಪ್ರತ್ಯಕ್ಷ ಪ್ರಸಂವು ಒದಗಿರಲು, ಔದಾಸೀನ್ಯವೇಕೆ? ಹೋಗಿರಿ, ಆ ಅನಾಥಪ್ರಾಣಿಯನ್ನು ಬಿಡಿಸಿಕೊಂಡು ಬರ್ರಿ. ಮಾತಿನಲ್ಲಿ ವ್ಯರ್ಥಕಾಲಹರಣ ಮಾಡಬೇಡಿರಿ. ಪಾಪ, ಆ ಬಡಪ್ರಾಣಿಯು ಎಲ್ಲಿಯಾದರೂ ಜೀವಕ್ಕೆ ಎರವಾದಾಳು. ಇಳಿಸಿರಿ, ನನ್ನ ಡೋಲಿಯನ್ನು ಇಲ್ಲಿಯೇ ಇಳಿಸಿರಿ. ಬಹಳವಾದರೆ ಒಬ್ಬಿಬ್ಬರು ನನ್ನ ಸಂರಕ್ಷಣಕ್ಕಾಗಿ ಉಳಿದು, ಮಿಕ್ಕವರೆಲ್ಲ ಆ ಬಡಪ್ರಾಣಿಯನ್ನು ಬಿಡಸಿಕೊಂಡು ಬರಲಿಕ್ಕೆ ಹೋಗಿರಿ. ಬಿಡಿಸಿಕೊಂಡು ಬಂದಹೊರತು ನಾನು ಈ ಸ್ಥಳದಿಂದ ಕದಲುವ ಹಾಗಿಲ್ಲ. ಎಂದು ನುಡಿದಳು. ಅದನ್ನು ಕೇಳಿ ಶಿವಸಿಂಗನು ಮುಂದಾಗಿ— ಬಾಯಿಸಾಹೇಬರೇ, ನಾನು ತಮ್ಮ ಅಪ್ಪಣೆಯಂತೆ ಕಾರ್ಯಮಾಡಿಕೊಂಡು ಬರಲು ಸಿದ್ಧನಿದ್ದೇನೆ. ಆ ದುಃಖಪೀಡಿತ ಸ್ತ್ರೀಯನ್ನು ಬಿಡಿಸಿಕೊಂಡು ಬಂದು ತಮ್ಮೆದುರಿಗೆ ನಿಲ್ಲಿಸದೆ, ತಮಗೆ ಮೋರೆಯನ್ನು ತೋರಿಸಲಿಕ್ಕಿಲ್ಲ; ಆದರೆ ತಾವು ಚಂಡಿತನದಿಂದ ಇಲ್ಲಿ ಕುಳಿತುಕೊಳ್ಳಬೇಡಿರಿ; ಹಾದಿಯನ್ನು ಹಿಡಿಯಿರಿ. ನೀವು ಒಂದು ವಸ್ತಿಯನ್ನು ಮಾಡುವದರೊಳಗೆ ನಾನು ಆ ಸ್ತ್ರೀಯನ್ನು ಬಿಡಿಸಿಕೊಂಡು ಬಂದು ನಿಮ್ಮ ಮುಂದೆ ನಿಲ್ಲಿಸುವೆನು. ಈ ಮಾತಿನ ವಿಷಯವಾಗಿ ಎಳ್ಳಷ್ಟು ಸಂಶಯಪಡಬಾರದು. ಶಿವಸಿಂಗನ ಇದೊಂದು ಮಾತನ್ನು ಪರೀಕ್ಷಿಸಿಬಿಡಬೇಕು, ಎಂದು ಹೇಳಿದನು. ಶಿವಸಿಂಗನ ಈ ಪ್ರತಿಜ್ಞೆಯನ್ನು ಕೇಳಿ ಚಂದ್ರಾವತಿಯು ತನ್ನ ಹಟವನ್ನು ಬಿಟ್ಟು ಡೋಲಿಯನ್ನು ಮುಂದಕ್ಕೆ ಸಾಗಿಸಲಿಕ್ಕೆ ಅನುಮೋದಿಸಿದಳು. ತನ್ನ ಸಹಾಯಕ್ಕಾಗಿ ಹೊರಟಿದ್ದ ರಾಮಸಿಂಗ, ಹರಪಾಲ ಮೊದಲಾದವರನ್ನು ತಡೆದು, "ರಾಣಿಯ ಸಂರಕ್ಷಣಕ್ಕೆ ನೀವು ಇರಲೇಬೇಕು, ನನ್ನ ಚಿಂತೆಯನ್ನು ಬಿಡಿರಿ," ಎಂದು ಹೇಳಿ ಶಿವಸಿಂಗನೊಬ್ಬನೇ ಆ ಅನಾಥಸ್ತ್ರೀಯ ಸಂಕಟವನ್ನು ದೂರ ಮಾಡಲಿಕ್ಕೆ ಹೊರಟುಹೋದನು. ಆತನು ಸಾಧಾರಣವಾಗಿ ಧ್ವನಿಯು ಕೇಳಬರುವ ದಿಕ್ಕಿಗೆ ಹೋಗುತ್ತಿರಲು, ಒಂದು ದೊಡ್ಡ ಬಸರಿಯಮರದ ಬುಡದಲ್ಲಿ ಒಬ್ಬ ತರುಣಿಯು ಅಳುತ್ತ— " ಬರ್ರಿ, ಬೇಗನೆ ಬರ್ರಿ, ಬಿಡಿಸಿಕೊಳ್ಳಿರಿ, " ಎಂದು ಕೂಗುತ್ತ ನಿಂತಿದ್ದು, ಆಕೆಯ ಮುಂದೆ ಒಬ್ಬ ಭಿಲ್ಲನು

ಇಬ್ಬರು ಮೊಗಲರೊಡನೆ ಕಾದುತ್ತಿದ್ದನು. ಭಿಲ್ಲನ ಮೈತುಂಬ ಗಾಯ ಗಳಾಗಿದ್ದವು. ಇನ್ನು ಆತನು ಬಹಳ ಹೊತ್ತು ತಡೆಯುವ ಹಾಗಿದ್ದಿಲ್ಲ. ತರುಣಿಯ ಮುಖವನ್ನು ನೋಡಿದಕೂಡಲೆ ಶಿವಸಿಂಗನಿಗೆ ಗುರುತು ಹತ್ತಿ ದಂತಾಯಿತು. ಕೂಡಲೆ ಆತನು ತನ್ನ ಖಡ್ಗವನ್ನು ಹಿರಿದು, ಮೊಗಲರ ಮೇಲೆ ಸಾಗಿಹೋಗಿ, ಒಬ್ಬನಮೇಲೆ ಕಸುವಿನಿಂದ ಖಡ್ಗವನ್ನು ಪ್ರಯೋಗಿ ಸಿದನು. ಕೂಡಲೆ ಆ ಮೊಗಲನು ದೊಪ್ಪನೆ ನೆಲಕ್ಕೆ ಬಿದ್ದನು. ಕಾದುವ ಭರದಲ್ಲಿ ಮೊಗಲರು ಶಿವಸಿಂಗನನ್ನು ನೋಡಿದ್ದೇ ಇಲ್ಲ. ಹೀಗೆ ಆಕಸ್ಮಿಕ ವಾಗಿ, ಒಬ್ಬನು ನೆಲಕ್ಕೆಬಿದ್ದದ್ದನ್ನುನೋಡಿ ಇನ್ನೊಬ್ಬನು ಶಿವಸಿಂಗನ ಮೇಲೆ ಏರಿಬರುತ್ತಿರಲು, ಶಿವಶಿಂಗನ ಖಡ್ಗದ ಕಡತದಿಂದ ಅವನೂ ನೆಲಕ್ಕುರುಳಿ ದನು. ಇಷ್ಟೆಲ್ಲ ಕಾರ್ಯವು ಬಹು ಸ್ವಲ್ಪಕಾಲದಲ್ಲಿ ಆಯಿತು. ಶಿವಸಿಂಗನು ಭಿಲ್ಲನ ಬಳಿಗೆ ಹೋಗಿ—" ಬಲೀ, ಶಾಬಾಸ, ಶಾಬಾಸ; ಆದರೆ ನೀವಿಬ್ಬರು ಇತ್ತ ಯಾವ ಕಡೆಗೆ ಹೊರಟಿರಿ ?" ಎಂದು ಕೇಳಿದನು. ಇಷ್ಟು ಸಲಿಗೆ ಯಿಂದ ತನ್ನನ್ನು ಕೇಳುವ ಶಿವಸಿಂಗನಿಗೆ ಉತ್ತರಕೊಡುವಷ್ಟು ಪ್ರಜ್ಞೆಯು ಬಲಿಗೆ ಇದ್ದಿಲ್ಲ. ಆತನಿಗೆ ಬಲವಾದ ಗಾಯಗಳಾಗಿ ಮಿತಿಮೀರಿ ರಕ್ತಸ್ರಾವ ವಾದದ್ದರಿಂದ, ಆತನು ಬೋಳಿಬಂದವನ ಹಾಗೆ ಬಿದ್ದುಕೊಂಡಿದ್ದನು. ಶಿವಸಿಂಗನ ಈ ಪ್ರಶ್ನಕ್ಕೆ ಉತ್ತರಕೊಡಲಿಕ್ಕೆ ತರುಣಿಯೊಬ್ಬಳು ಜಾಗರೂಕ ಳಾಗಿದ್ದಳು; ಆದರೆ ಶಿವಸಿಂಗನನ್ನು ನೋಡಿದ ಕೂಡಲೆ ಆಕೆಯು ನಾಚಿಕೆ ಯಿಂದ, ತಲೆಬಾಗಿಸಿ, ನೆಲವನ್ನು ನೋಡುತ್ತ ನಿಂತುಕೊಂಡಳು. ಆಕೆಯ ಮುಖಮುದ್ರೆಯಲ್ಲಿ ವಿಲಕ್ಷಣವಾದ ಸಂತೋಷವು ವ್ಯಕ್ತವಾಗುತ್ತಿತ್ತು. ಆಕೆಯು ನಡುನಡುವೆ ಕದ್ದು, ಶಿವಸಿಂಗನ ಮುಖವನ್ನು ಓರೆಗಣ್ಣಿನಿಂದ ನೋಡುತ್ತಿದ್ದಳು. ಶಿವಸಿಂಗನಿಗೆ ಆಕೆಯ ಗುರುತು ಸಿಕ್ಕದ್ದರಿಂದಲೋ ಏನೋ, ಆತನು ಹೆಚ್ಚಿಗೆ ಪ್ರಶ್ನಮಾಡದೆ, ಆಕೆಯನ್ನು ನೋಡುತ್ತ ಕೆಲವು ಹೊತ್ತು ಸುಮ್ಮನೆ ನಿಂತುಕೊಂಡನು. ಆ ಮೇಲೆ ಆತನು ಆ ಸ್ತ್ರೀಯನ್ನು ಕುರಿತು—ಇಂಥ ಭಯಂಕರ ಸ್ಥಳದಲ್ಲಿ ಬಲಿಭಿಲ್ಲನ ಸಂಗಡ ಯಾವಕಡೆಗೆ ಹೋಗುವದು ? ಮನೆಯಲ್ಲಿ ಎಲ್ಲರೂ ನೆಟ್ಟಗಿದ್ದಾರಷ್ಟೆ ? ಇಲ್ಲದಿದ್ದರೆ ಏನಾ ದರೂ ಅನರ್ಥದ ಪ್ರಸಂಗ ಒದಗಿದ್ದರಿಂದ ಹೀಗೆ ಓಡಿಬರಬೇಕಾಯಿತೋ ?

ಶಿವಸಿಂಗನ ಈ ಪ್ರಶ್ನಕ್ಕೆ ಉತ್ತರಕೊಡಬೇಕೆಂದರೆ, ಆ ತರುಣಿಯ

ಮುಖದಿಂದ ಅಕ್ಷರಗಳೇ ಹೊರಡದಾದವು. ಆಕೆಯು ಶಿವಸಿಂಗನ ದರ್ಶನ ದಿಂದ ತಾನು ಸಂಕಟದಲ್ಲಿ ಮುಳುಗಿದ್ದನ್ನು ಮರೆತು, ಆನಂದಪರವಶಳಾಗಿದ್ದ ಳೆಂದು ಹೇಳಬಹುದು. ಶಿವಸಿಂಗನು ಅದೇ ಪ್ರಶ್ನವನ್ನು ಆತುರದಿಂದ ಮತ್ತೊಮ್ಮೆ ಮಾಡಲು, ಆ ತರುಣಿಯು ಮೆಲ್ಲನೆ— ಹೌದು ನೆಟ್ಟಗಿದ್ದಾರೆ; ನಾನು ಹೊರಟುಬರುವವರೆಗೆ ಎಲ್ಲರೂ ನೆಟ್ಟಗಿದ್ದರು. ನಾನು ಇತ್ತ ಬಂದ ಬಳಿಕ ಏನಾಗಿರುವದೋ ಯಾರಿಗೆ ಗೊತ್ತು ! ಎಂದು ಉತ್ತರ ಕೊಟ್ಟಳು. ಆಗ ಶಿವಸಿಂಗನು—ನೀನು ಯಾಕೆ ಹೊರಟು ಬಂದೆ ? ನೀನು ಬಂದಬಳಿಕ ಏನಾಗಿರಬಹುದೆಂದು ಭಾವಿಸುತ್ತೀ ? ಎಂದು ಮತ್ತೆ ಪ್ರಶ್ನಮಾಡಲು, ಆ ತರುಣಿಯು "ಅದೆಲ್ಲ ಸಂಗತಿಯನ್ನು ನಾನು ಹಿಂದುಗಡೆ ನಿಮಗೆ ಹೇಳು ತ್ತೇನೆ; ಆದರೆ ಮೊದಲು ಈ ಬಡಪ್ರಾಣಿಯಾದ ಬಲಿಭಿಲ್ಲನ ಸಮಾಚಾರ ವನ್ನು ತಕ್ಕೊಳ್ಳಬಾರದೇನು ? ನನ್ನ ಸಲುವಾಗಿ ಆತನು ಪ್ರಾಣವನ್ನು ಕೊಟ್ಟನೋ ಏನೋ, ಎಂದು ಆತನಬಳಿಗೆ ಹೋಗಿ ಉಪಚರಿಸಿ, ಆ ಭಿಲ್ಲನು ಹೇಳಿದ ವನಸ್ಪತಿಯ ರಸವನ್ನು ಆತನ ಗಾಯುಗಳಿಗೆ ಹಚ್ಚಿದಳು. ಆಗ ಭಿಲ್ಲನು ಆ ತರುಣಿಗೆ—"ಅಮ್ಮಾ, ಆ ತರುಣವೀರನು ಬಾರದಿದ್ದರೆ ನಮ್ಮ ಅವ ಸ್ಥೆಯು ಏನಾಗಿ ಹೋಗುತ್ತಿತ್ತಲ್ಲ ! ನನ್ನಿಂದ ಏನೂ ಉಪಯೋಗ ವಾಗುತ್ತಿದ್ದಿಲ್ಲ. ಶಂಕರ ! ಶಂಕರ ! ಮಹಾಕಾಲ" ಎಂದು ದೇವರನ್ನು ಸ್ಮರಿಸಿದನು. ಮುಂದೆ ಮಾತಾಡಲಿಕ್ಕೆ ಆತನಿಗೆ ಅವಸಾನವುಳಿಯ ಲಿಲ್ಲ. ಅಷ್ಟರಲ್ಲಿ ಶಿವಸಿಂಗನು ಮುಂದಕ್ಕೆ ಬಂದು— ಎಲಾ, ಇನ್ನೆಷ್ಟು ನಿನ್ನಿಂದ ಉಪಯೋಗವಾಗಬೇಕಾಗಿತ್ತು ? ನಿನ್ನ ಮೈಯು ಗಾಯಗಳಿಂದ ಜರಡಿಯ ಹಾಗೆ ಆಗಿಹೋಗಿದೆಯಲ್ಲ ! ಎಷ್ಟು ರಕ್ತ ಸೋರುತ್ತದೆ ಇದು ! ಬಲೀ, ನಿನಗೆ ಏನಾದರೂ ವನಸ್ಪತಿ ಗೊತ್ತಿದ್ದರೆ ಹೇಳು, ತಂದು ಹಚ್ಚು ತ್ತೇನೆ, ಎಂದನು. ಆಗ ಬಲಿಯು ಅಲ್ಲಿಯೇ ಸಮೀಪದಲ್ಲಿದ್ದ ಗಿಡಮೂಲಿಕೆ ಯನ್ನು ತೋರಿಸಲು, ಆ ತರುಣಿಯು ಅದನ್ನು ಅರೆದು, ಗಾಯಗಳಿಗೆ ಮತ್ತೆ ಹಚ್ಚಿದಳು. ಆಗ ಆ ಭಿಲ್ಲನಿಗೆ ಸ್ವಲ್ಪ ವಿಶ್ರಾಂತಿಯಾದ ಹಾಗೆ ಆಗಲು, ಆತನು ತನ್ನ ಎರಡು ಕೈಬೆರಳುಗಳನ್ನು ಬಾಯಲ್ಲಿಟ್ಟುಕೊಂಡು ಗಟ್ಟಿಯಾಗಿ ಸಿಳ್ಳು ಹಾಕಿದನು. ಆ ಸಿಳ್ಳಿನ ಧ್ವನಿಯು ಅರಣ್ಯವನ್ನೆಲ್ಲ ವ್ಯಾಪಿಸಿದಂತೆ ಪ್ರತಿಧ್ವನಿ ಗೊಂಡಿತು. ಮುಂದೆ ಹದಿನೈದು— ಇಪ್ಪತ್ತು ಮಿನಿಟುಗಳಮೇಲೆ ಹತ್ತು

ಜನ ಭಿಲ್ಲರು ನಾಲ್ಕೂಕಡೆಯಿಂದ ಅಲ್ಲಿಗೆ ಬಂದರು. ಬಲಿಯು ತಮ್ಮ ಮಾತಿನಿಂದ ಅವರಿಗೆ ಏನೋ ಹೇಳಲು, ಅವರು ಶಿವಸಿಂಗನನ್ನು ಕುರಿತು— ಮಹಾರಾಜರೇ, ಡೋಲಿಯನ್ನು ಹೊತ್ತುಕೊಂಡು ಬಂದಿದ್ದ ಬೋಯಿಗಳು, ಬಡಿದಾಟಹತ್ತಿದ ಕೂಡಲೆ ಎತ್ತಹೋದರೋ ಏನೋ ? ಸಿಕ್ಕರೆ ಅವರನ್ನು ಹಿಡಕೊಂಡು ಬರುತ್ತೇವೆ. ಸಿಗದಿದ್ದರೆ ನಾವೇ ಡೋಲಿಯನ್ನು ಹೊತ್ತು ಕೊಂಡು ಬರುತ್ತೇವೆ, ಎಂದು ಹೇಳಿದರು. ಅದಕ್ಕೆ ಶಿವಸಿಂಗನು—ಬೋಯಿ ಗಳನ್ನು ಹುಡುಕಿರಿ, ಬೇಡೆನ್ನುವದಿಲ್ಲ; ಆದರೆ ನಾನು ರಾಣೀಸಾಹೇಬರವರಿಗೆ ಈ ತರುಣಿಯನ್ನು ಬೇಗನೆ ಕರಕೊಂಡು ಬರುವೆನೆಂದು ಪ್ರತಿಜ್ಞೆಮಾಡಿ ಬಂದಿರುವದರಿಂದ, ನಾವು ಆದಷ್ಟು ಬೇಗನೆ ಹೋಗಬೇಕಾಗಿದೆ; ಅದ್ದರಿಂದ ನೀವೇ ಡೋಲಿಯನ್ನು ಹೊತ್ತುಕೊಂಡು ವೇಗವಾಗಿ ನನ್ನನ್ನು ಹಿಂಬಾಲಿಸಿ ದರೆ ಬಹಳ ನೆಟ್ಟಗಾಗುವದು, ಅನ್ನಲು, ಆ ತರುಣಿಯು ಶಿವಸಿಂಗನಿಗೆ— ಏನಂದಿರಿ ? ರಾಣೀಸಾಹೇಬರೇನು ? ರಾಣೀ ಚಂದ್ರಾವತೀಸಾಹೇಬರೇ ? ಅವರು ಕಾಬೂಲವನ್ನು ಬಿಟ್ಟು ಇಲ್ಲಿಯವರೆಗೆ ಬಂದಿರುತ್ತಾರೇನು? ಶಿವಶಿವ! ಅವ್ವಯ್ಯಾ, ನಾನು ಅವರ ಬಳಿಗೇ ಹೊರಟಿದ್ದೆನು. ಎಲ್ಲಿ ಇದ್ದಾರೆ ಅವರು ? ನಡೆಯಿರೋ, ನಡಿಯಿರಿ ನನ್ನನ್ನು ಕರಕೊಂಡು.

ತರುಣಿಯ ಈ ಮಾತುಗಳನ್ನು ಕೇಳಿ ಶಿವಸಿಂಗನು ಆಕೆಯನ್ನು ಕುರಿತು—ರಾಣಿಯವರು ಬಹಳ ದೂರ ಹೋಗಿರಲಿಕ್ಕಿಲ್ಲ. ಇಲ್ಲಿಯೇ ಸಮೀ ಪದಲ್ಲಿ ಹೋಗುತ್ತಿರಬಹುದು. ನೀನು ಈ ಭಿಲ್ಲರೊಡನೆ ಈ ಮಾರ್ಗದಿಂದ ಮುಂದಕ್ಕೆಸಾಗು. ನಾನು ಈಗ ಈ ಬಲಿಭಿಲ್ಲನ ಉಪಚಾರಮಾಡಿ ನಿಮ್ಮಬೆನ್ನ ಹಿಂದೆಯೇ ಬರುವೆನು, ಅನ್ನಲು, ಬಲಿಭಿಲ್ಲನು— ಮಹಾರಾಜರೇ, ತಾವು ನಿಲ್ಲುವ ಅವಶ್ಯವಿಲ್ಲ. ಇನ್ನು ನನ್ನ ಚಿಂತೆಬಿಡಿರಿ. ನಾನು ಒಂದೆರಡು ದಿನ ಗಳಲ್ಲಿ ನಿಮ್ಮನ್ನು ಬಂದು ಕೂಡುವೆನು. ನೀವು ಹೋಗಿರಿ, ಎಂದು ಹೇಳಿ ದನು. ಉಳಿದ ಭಿಲ್ಲರೂ ಹಾಗೆಯೇ ಹೇಳಿದರು. ಆಗ ತರುಣಿಯು ಡೋಲಿ ಯಲ್ಲಿ ಕುಳಿತುಕೊಳ್ಳಲು, ಭಿಲ್ಲರು ಅದನ್ನು ಹೊತ್ತುಕೊಂಡು ಸಾಗಿದರು. ಶಿವಸಿಂಗನು ಡೋಲಿಯನ್ನು ಹಿಡಕೊಂಡು ಒಂದು ಮಗ್ಗಲಿನಿಂದ ಸಾಗಿರು ವಾಗ ತರುಣಿಯು ಆತನನ್ನುಕುರಿತು— ಮಹಾರಾಜರೇ, ರೂಪವತಿಬಾಯಿ ಯವರು ತಮ್ಮ ಅಬಚಿಯಾದ ಚಂದ್ರಾವತೀರಾಣಿಯರಿಗೆ ಎರಡುನೂರು

ಪತ್ರಗಳನ್ನು ಬರೆದರು, ಅವುಗಳಲ್ಲಿ ಒಂದಕ್ಕೂ ಉತ್ತರವಿಲ್ಲ. ಕಳಿಸಿದ ಭಿಲ್ಲರೂ ತಿರುಗಿ ಬರಲಿಲ್ಲ. ಕಾಬೂಲದಿಂದಂತು ದಿನದಿನಕ್ಕೆ ಹೊಸಹೊಸ ಸುದ್ದಿಗಳು ಬರಹತ್ತಿದವು. ಚಂದ್ರಾವತೀರಾಣೀಸಾಹೇಬರು ಏಳೆಂಟುತಿಂಗಳು ಗರ್ಭಿಣಿಯಿರುವದರಿಂದ, ಆವರು ಇಷ್ಟು ಬೇಗನೆ ಸ್ವದೇಶಕ್ಕೆ ಬರುವದಿಲ್ಲೆಂಬ ಸುದ್ದಿಯು ಮೊದಲು ಬಂದಿತು. ಆಮೇಲೆ ಏಳೆಂಟುದಿನಗಳೊಳಗಾಗಿಯೇ ಮತ್ತೊಂದು ಸುದ್ದಿಯು ಬಂದಿತು. ಚಂದ್ರಾವತೀರಾಣೀಸಾಹೇಬರನ್ನು ಪರಸ್ಪರ ದಿಲ್ಲಿಗೆ ಹಿಡಕೊಂಡುಹೋಗುವರೆಂದು ಜನರು ಅನ್ನಹತ್ತಿದರು; ಅದಕ್ಕಾಗಿ ಬಾದಶಹನು ಕೆಲವು ದಂಡಾಳುಗಳನ್ನು ಕಳಿಸಿರುವನೆಂತಲೂ ಜನರು ಹೇಳಹತ್ತಿದರು. ಅದನ್ನು ಕೇಳಿದಕೂಡಲೆ ರೂಪಮತಿಬಾಯಿಸಾಹೇಬರು ನನ್ನನ್ನು ಕುರಿತು–ಪದ್ಮೇ, ಎಂಥ ಪ್ರಸಂಗವಿದು! ಚಂದ್ರಾವತೀಅಬಚಿಯ ಬಳಿಯಲ್ಲಿ ನನ್ನವರೆನ್ನುವವರು ಒಬ್ಬರಾದರೂ ಇಲ್ಲ. ನಾನು ಸ್ವತಃ ಹೋಗುತ್ತಿದ್ದೆನು; ಆದರೆ ಅಪ್ಪನು ಎಂದೂ ಹೋಗಗೊಡಲಿಕ್ಕಿಲ್ಲ. ನನಗೂ ನಿನಗೂ ಭೇದವಿಲ್ಲ. ನೀನು ಹೋಗುವಹಾಗಿದ್ದರೆ ನೋಡು. ಅಬಚಿಗೆ ನಿನ್ನಿಂದ ಬಹಳ ಉಪಯೋಗವಾದೀತು. ನಿನ್ನ ಉಪಕಾರವನ್ನು ಎಂದಿಗೂ ಮರೆಯುಲಿಕ್ಕಿಲ್ಲ. ಹೊತ್ತಿಗಾಗದಿದ್ದ ಆಪ್ತರನ್ನೂ, ಅಂತಃಕರಣದವರನ್ನೂ ತಕ್ಕೊಂಡು ಮಾಡುವದೇನು ? ಎಂದು ಹೇಳಿದಕೂಡಲೆ ನಾನು ಬಲಿಭಿಲ್ಲನನ್ನು ಸಂಗಡ ಕರಕೊಂಡು ಹೊರಟೆನು, ಎಂದು ಹೇಳಿದಳು. ಅದಕ್ಕೆ ಶಿವಸಿಂಗನು ಮುಗುಳುನಗೆ ನಗುತ್ತ-- ಕಾಬೂಲಕ್ಕೆ ಇಷ್ಟು ಆತುರದಿಂದ ಬರಲಿಕ್ಕೆ ಬೇರೆ ಕಾರಣವಿಲ್ಲವಷ್ಟೆ, ಅನ್ನಲು, ತರುಣಿಯು ಒಮ್ಮೆ ಆತನ ಮುಖವನ್ನು ನೋಡಿ ನಕ್ಕು ಕ್ಷಣದಲ್ಲಿ ಖಿನ್ನಳಾಗಿ ನಿಟ್ಟುಸಿರುಬಿಟ್ಟಳು.

ಪದ್ಮೆಯು ರೂಪಮತಿಯ ದಾಸಿಯೆಂಬದನ್ನು ವಾಚಕರು ಕಂಡುಹಿಡಿದಿರಬಹುದು. ಪದ್ಮೆಯು ಅಷ್ಟು ದೊಡ್ಡ ಮನೆತನದವಳಲ್ಲದಿದ್ದರೂ, ಅಪ್ರತಿಮ ಸುಂದರೆಯಾಗಿದ್ದಳು. ರೂಪಮತಿಯ ಅಣ್ಣನಾದ ಶಿವಸಿಂಗನು ಆಕೆಯನ್ನು ಮನಮುಟ್ಟಿ ಪ್ರೀತಿಸುತ್ತಿದ್ದನು. ಮುಂದೆ ಶಿವಸಿಂಗನು ತಂದೆಯ ಅಪ್ಪಣೆಯನ್ನು ಮೀರಿ ಜಸವಂತಸಿಂಗನ ಸಂಗಡ ಕಾಬೂಲಕ್ಕೆ ಹೋದನು. ಆದರೂ ಪರಸ್ಪರರಲ್ಲಿಯ ಪ್ರೇಮವು ನಷ್ಟವಾಗಿದ್ದಿಲ್ಲೆಂಬದನ್ನು ವಾಚಕರು ಈಗ ಮನಗಂಡಿರಬಹುದು. ತಾನು ದೊಡ್ಡಮನೆತನದವಳಲ್ಲದ್ದರಿಂದ ವಿಜಯ

ಸಿಂಹನು ತನ್ನ ಮಗನಾದ ಶಿವಸಿಂಗನೊಡನೆ ತನ್ನ ಲಗ್ನಮಾಡಲಿಕ್ಕೆ ಒಪ್ಪಲಿಕ್ಕಿಲ್ಲೆಂದು ಆಕೆಗೆ ಆಗಾಗ್ಗೆ ಅಸಮಾಧಾನವಾಗುತ್ತಿತ್ತು. ಅದೇ ಅಸಮಾಧಾನದಿಂದಲೇ ಪದ್ಮೆಯು ಮೇಲೆ ಹೇಳಿದಂತೆ ಶಿವಸಿಂಗನನ್ನು ನೋಡಿ, ನಕ್ಕು, ಕೂಡಲೆ ಖಿನ್ನಳಾಗಿ ಉಸುರ್ಗರೆದಳು. ನಯನಪಾಲನ ವೃತ್ತಾಂತವನ್ನೂ ಪುತ್ರಸಮೇತವಾಗಿ ಚಂದ್ರಾವತೀ ರಾಣಿಯನ್ನು ಕಾಬೂಲದಿಂದ ಹೊರಡಿಸಿಕೊಂಡು ಬಂದದ್ದನ್ನೂ, ರಾಣಿಯವರು ದುಃಖಧ್ವನಿಯನ್ನು ಕೇಳಿ ತನ್ನನ್ನು ಕಳಿಸಿಕೊಟ್ಟದ್ದನ್ನೂ ಶಿವಸಿಂಗನು ಒಂದುಳಿಯದಂತೆ ಪದ್ಮೆಯ ಮುಂದೆ ಹೇಳಿದನು. ಅದನ್ನು ಕೇಳಿ ಪದ್ಮೆಯು— ಶಾಬಾಸ! ಶಾಬಾಸ! ಇಂದಿರೆಯು ನಿಜವಾಗಿ ತನ್ನ ದೇಹದ ಸಾರ್ಥಕ ಮಾಡಿದಳು! ಭಲಾಮಗಳೇ ಇಂದಿರೆ ನಿಜವಾಗಿ ನೀನು ಸ್ತೋತ್ರಾರ್ಹಳಿರುತ್ತೀ, ಎಂದು ಅಂತಃಕರಣಪೂರ್ವಕವಾಗಿ ಅಭಿನಂದಿಸಿದಳು. ಆದರೆ ಮುಂದೆ ಇಂದಿರೆಯ ಗತಿಯು ಏನಾಗುವದೋ, ಎಂಬ ಚಿಂತೆಯು ಆಕೆಯನ್ನು ಬಾಧಿಸಹತ್ತಿ, ಆ ಬಗ್ಗೆ ಶಿವಸಿಂಗನನ್ನು ಕೇಳಲು, ಆತನು— ಪದ್ಮೇ, ಇಂದಿರೆಯ ಅಣ್ಣನಾದ ದುರ್ಗಾದಾಸನು ತಂಗಿಯ ಬಂಧವಿಮೋಚನಕ್ಕಾಗಿಯೇ ಹಿಂದೆ ಉಳಿದಿರುವನು. ಏನಾದರೂ ಹಂಚಿಕೆಮಾಡಿ ಆತನು ತಂಗಿಯನ್ನು ಬಿಡಿಸಿಕೊಂಡು ಬರುವನು. ಇದಲ್ಲದೆ, ಇಂದಿರೆಯು ಸಾಧಾರಣ ಬುದ್ಧಿಶಾಲಿಯಲ್ಲ, ತಿರುಗಿ ಕೇಳಿದರೆ ಯಾರ ಸಹಾಯವೂ ಇಲ್ಲದೆ ಆಕೆಯು ತಾನೊಬ್ಬಳೇ ಪಾರಾಗಿ ಹೊರಟು ಬರಬಹುದು.

ಈ ಮೇರೆಗೆ ಮಾತಾಡುತ್ತಾಡುತ್ತ ಅವರು ರಾಣಿಯನ್ನು ಮುಟ್ಟಿದರು. ಶಿವಸಿಂಗನು ಬರಲೆಂದು ಬುದ್ಧಿಪೂರ್ವಕವಾಗಿಯೇ ಚಂದ್ರಾವತಿಯು ಸಾವಕಾಶವಾಗಿ ಸಾಗಿದ್ದಳು. ಪದ್ಮೆಯು ರಾಣಿಯವರನ್ನು ನೋಡಿದ ಕೂಡಲೆ ಮೊದಲು ಗಟ್ಟಿಯಾಗಿ ಅವರ ಪಾದಗಳನ್ನು ಹಿಡಕೊಂಡಳು. ರಾಣಿಯವರಾದರೂ ಆಕೆಯನ್ನು ಎಬ್ಬಿಸಿ ಎದೆಗವಚಿಕೊಂಡರು. ಇಬ್ಬರ ಕಣ್ಣುಗಳೊಳಗಿಂದಲೂ ಅಶ್ರುಗಳು ಧಾರೆಯಿಟ್ಟು ಸುರಿಯುತ್ತಿದ್ದವು. ಆ ಮೇಲೆ ಪದ್ಮೆಯು ಅಜಿತಸಿಂಗನನ್ನು ಎತ್ತಿಕೊಂಡು ಮುದ್ದಾಡಿ, ಇತ್ತಿಂದತ್ತ ಅತ್ತಿಂದಿತ್ತ ಹಲವು ಸಾರೆ ಓಡಾಡಿದಳು. ಆಕೆಯ ಆನಂದವು ಹೊಟ್ಟೆಯಲ್ಲಿ ಹಿಡಿಸದಾಯಿತು. ರೂಪಮತಿಯ ಒಂದೂ ಪತ್ರವು ಮುಟ್ಟದ್ದನ್ನು ಕೇಳಿ ಪದ್ಮೆಗೆ ಬಹಳ ಆಶ್ಚರ್ಯ

ವಾಯಿತು. ಆ ಮೇಲೆ ಅವರು ಆ ಪತ್ರಗಳು ಎಲ್ಲಿ ಹೋಗಿರಬಹುದೆಂದು ತರ್ಕಿಸುತ್ತಿರಲು, ಔರಂಗಜೇಬನ ಚಾರರು ಭಿಲ್ಲರನ್ನು ಕೊಂದು ಆ ಪತ್ರಗಳನ್ನು ಕಸಗೊಂಡಿರಬಹುದೆಂದು ನಿರ್ಣಯವಾಯಿತು. ಆಗ ಪದ್ಮೆಯು— ಹೋಗಲಿಬಿಡಿರಿ. ಬೀಳಲೊಲ್ಲವೇಕೆ ಬಾದಶಹನ ಕಣ್ಣಿಗೆ ಆ ಪತ್ರಗಳು. ಆತನ ಅಂಜಿಕೆಯಾದರೂ ಏತಕ್ಕಿಷ್ಟು ! ಅವುಗಳಲ್ಲಿ ಬಾದಶಹನ ವಷಟ್ಕಾರಗಳೇ ತುಂಬಿರುವವು, ಎಂದು ಹೇಳಿದಳು. ಈ ಮೇರೆಗೆ ಮಾತು ಕಥೆಗಳಾದ ಬಳಿಕ ಅವರು ಮುಂದಕ್ಕೆ ಪ್ರಯಾಣವನ್ನು ಬೆಳಿಸಿದರು. ಮುಂದೆ ಐದಾರು ದಿನ ಯಾವ ವಿಘ್ನಗಳೂ ಇಲ್ಲದೆ ಹಾದಿಯು ಸಾಗಿತು. ರಜಪೂತಸ್ಥಾನದ ಸೀಮೆಯು ಸಮೀಪಿಸಿದ್ದರಿಂದ ಎಲ್ಲರಿಗೂ ಬಹಳ ಸಂತೋಷವಾಯಿತು. ಅವರು ಆನಂದದಿಂದ ಮಾರ್ಗವನ್ನುಕ್ರಮಿಸುತ್ತಿರಲು,ಒಂದುವಿಘ್ನವುಒದಗಿತು. ಔರಂಗಜೇಬನದೊಂದು ಚಿಕ್ಕ ಸೈನ್ಯವು ಬೆನ್ನಟ್ಟಿ ಬರುವದೆಂಬ ಸುದ್ದಿಯನ್ನು ಬಲಿಭಿಲ್ಲನು ತಂದನು. ಅದನ್ನು ಕೇಳಿ ಎಲ್ಲರಿಗೂ ಅಸಮಾಧಾನವಾಯಿತು. ಚಂದ್ರಾವತೀರಾಣಿಯು ತನ್ನ ದುರ್ದೈವವನ್ನು ಹಳಿದುಕೊಳ್ಳಹತ್ತಿದಳು. ಇನ್ನು ಎರಡು ದಿನ ನಡೆದು ಹೋಗಿದ್ದರೆ, ಅವರು ಪ್ರಚಂಡವಾದ ಗುಡ್ಡಗಳನ್ನು ಸೇರಿ, ಮೊಗಲರ ಕಣ್ಣಿಗೆ ಬೀಳದೆ ಎತ್ತೋ ಗಪ್ಪಾಗಿ ಹೋಗುತ್ತಿದ್ದರು; ಆದರೆ ಎರಡು ದಿನ ತಡೆಯುವ ಬಗೆ ಹ್ಯಾಗೆ ? ಇನ್ನು ಐದಾರು ತಾಸುಗಳಲ್ಲಿ ಆ ಸೈನ್ಯವು ಬಂದು ಮುತ್ತಬಹುದೆಂದು ಮತ್ತೊಬ್ಬ ಭಿಲ್ಲನು ಬಂದು ಸುದ್ದಿಯನ್ನು ಹೇಳಿದನು. ಆಗ ರಾಜಪುತ್ರನನ್ನೂ, ರಾಣಿಯನ್ನೂ ಉಳಿಸಿಕೊಳ್ಳುವ ಮಾರ್ಗವು ಯಾರಿಗೂ ತೋಚದಾಯಿತು. ಅಷ್ಟರಲ್ಲಿ ಪದ್ಮೆಯ ಮನಸ್ಸಿನಲ್ಲಿ ಒಂದು ಯುಕ್ತಿಯು ಹೊಳೆಯಿತು. ಚಂದ್ರಾವತೀ ರಾಣಿಯುವರು ಮಗನ ವಿಯೋಗದುಃಖವನ್ನು ಸಹಿಸಲು ಒಡಂಬಟ್ಟರೆ ಕಾರ್ಯವಾಗುವದೆಂದು ಆಕೆಯು ಭಾವಿಸಿ, ಅದನ್ನು ರಾಣಿಯುವರ ಮುಂದೆ ಆಡಿ ತೋರಿಸಲಿಕ್ಕೆ ಧೈರ್ಯಸಾಲದೆ, ಶಿವಶಿಂಗನನ್ನು ಒತ್ತಟ್ಟಿಗೆ ಕರೆದು ಎಲ್ಲ ಹಂಚಿಕೆಯನ್ನು ಹೇಳಿದಳು. ಅದು ಶಿವಸಿಂಗನಿಗೆ ಸಮರ್ಪಕವಾಗಿ ತೋರಿದ್ದರಿಂದ, ಆತನು ಚಂದ್ರಾವತೀರಾಣಿಯುವರ ಮುಂದೆ ಅದನ್ನು ಹೇಳಿದನು. ಆಗ ರಾಣಿಯುವರಿಗೆ ಪುತ್ರವಿಯೋಗ ದುಃಖವು ದುಃಸಹವಾದರೂ ಅವರು ಪದ್ಮೆಯನ್ನು ಕರೆಸಿ— ಪದ್ಮೇ, ನೀನಂದಂತೆ ಮಾಡದಿದ್ದರೆ ರಾಜಪುತ್ರನ,

ಹಾಗು ನನ್ನ ರಕ್ಷಣವಾಗದು. ಇಗೋ ತಡವೇಕೆ, ಹಿಡಿರಾಜಪುತ್ರನನ್ನು. ಈತನನ್ನು ನೀನು ವೈಕುಂಠ ಯೋಗಿಗಳ ವಶಕ್ಕೆ ಒಪ್ಪಿಸಬೇಕೆನ್ನುವೆಯಷ್ಟೆ ? ಒಪ್ಪಿಸು, ಏನೂ ಚಿಂತೆಯಿಲ್ಲ; ಆದರೆ ಆ ಯೋಗಿವರರಿಗೆ ನನ್ನ ಈ ವಿಜ್ಞಾಪನೆಯನ್ನು ತಿಳಿಸದೆಯಿರಬೇಡ. ಆ ಮಹಾತ್ಮರು ನನ್ನ ಕೂಸಿನ ರಕ್ಷಣ ಮಾಡುತ್ತಿರಲು, ನನ್ನಂಥ ಪಾಪಿಯ ದುರ್ದೈವದಿಂದ ಏನಾದರೂ ಶತ್ರುಗಳಿಂದ ಅದಕ್ಕೆ ಸಂಕಟ ಒದಗಿದರೆ, ಅದನ್ನು ಅವರು ಕೈಬಿಟ್ಟು ಯಾವದೊಂದು ತೀರ್ಥದಲ್ಲಿ ಚಲ್ಲಿಕೊಟ್ಟು ಬಿಡಲಿ! ನನ್ನ ಕೂಸು ಶತ್ರುಗಳ ಕೈಸೇರದಿದ್ದರೆ ತೀರಿತು. ಸೆರಗೊಡ್ಡಿ ನಾನು ಬೇಡಿಕೊಳ್ಳುವ ಮಾತು ಇದೇ, ಎಂದು ಆ ಮಹಾತ್ಮರಿಗೆ ಹೇಳು, ಎಂದು ನುಡಿಯುತ್ತ, ಕಣ್ಣೀರುಗಳು ಬಾಲಕನ ಮೇಲೆ ಬೀಳುತ್ತಿರಲು, ಧೀರ ಗಂಭೀರ ಸ್ವಭಾವದ ರಾಣಿಯು ಮಗನನ್ನು ಪದ್ಮೆಯ ಕೈಯಲ್ಲಿ ಕೊಟ್ಟಳು. ಕೂಡಲೆ ರಾಮಸಿಂಗನೂ, ಗಿಯಾಸುದ್ದೀನನೂ ಪದ್ಮೆಯ ಸಂಗಡ ನಡೆದರು. ಶಿವಸಿಂಗನೂ, ಬಲಿಭಿಲ್ಲನೂ ಚಂದ್ರಾವತೀರಾಣಿಯವರನ್ನು ಕರಕೊಂಡು ಬೇರೆ ಕಡೆಗೆ ಸಾಗಿದರು. ಜಗತ್ಸಿಂಗನೇ ಮೊದಲಾದ ಉಳಿದವರು ಔರಂಗಜೇಬನ ದಂಡನ್ನು ಮೋಸಗೊಳಿಸುವದಕ್ಕಾಗಿ ಹಾದಿಯನ್ನು ಹಿಡಿದು ಸಾಗಿದರು. ಇತ್ತ ಪದ್ಮೆಯು ತಾನು ಕೈಕೊಂಡ ಕಾರ್ಯವು ನಿರ್ವಿಘ್ನವಾಗಿ ಹ್ಯಾಗೆ ಕೈಗೂಡೀತೆಂಬ ಚಿಂತೆಯಿಂದ ನಡುವೆ ಎಲ್ಲಿಯೂ ನಿಲ್ಲದೆ ಮಾರ್ಗವನ್ನು ಕ್ರಮಿಸಿ, ಅಬೂ ಪರ್ವತದ ಬುಡವನ್ನು ಸೇರಿದಳು. ವೈಕುಂಠ ಯೋಗಿಗಳು ಆ ಗುಡ್ಡದೊಳಗಿನ ಯಾವದಾದರೊಂದು ಗವಿಯಲ್ಲಿ, ಅಥವಾ ಗುಡ್ಡದ ಮೇಲಿರುವ ಅಚಲೇಶ್ವರನ ದೇವಾಲಯದಲ್ಲಿ ಇರುತ್ತಿದ್ದರು; ಆದರೆ ಅವರು ಗುಡಿಯಲ್ಲಿರುವದಕ್ಕಿಂತ ಗವಿಯಲ್ಲಿರುವದೇ ಬಹಳ. ಯೋಗಿವರ್ಯರು ಎಲ್ಲಿರುವರೋ, ಎಂದು ಪದ್ಮೆಯು ಚಿಂತಿಸುತ್ತ ಸಾಗಿರಲು, ದರಿದ್ರನಿಗೆ ದ್ರವ್ಯದ ನಿಧಿಯ ದರ್ಶನವಾಗುವಂತೆ, ಪದ್ಮೆಗೆ ಅಕಸ್ಮಾತ್ ವೈಕುಂಠಯೋಗಿಗಳ ದರ್ಶನವಾಯಿತು. ಆಗ ಆಕೆಯು ಯೋಗಿಗಳ ಸಮೀಪಕ್ಕೆ ಹೋಗಿ ನಮಸ್ಕರಿಸಿ, ಕೂಸಿಗೆ ಚಳಿ ಗಾಳಿ ಬಡಿದೀತೆಂಬ ವಿಚಾರವನ್ನು ಮಾಡದೆ ಅದರ ಮೈಮೇಲಿನ ಅರಿವೆಯನ್ನು ತೆಗೆದು ಯೋಗಿಗಳನ್ನು ಕುರಿತು ಗಟ್ಟಿಯಾಗಿ— ಯೋಗಿರಾಜರೇ, ಈತನು ಜೋಧಪುರದ ದುರ್ದೈವಿಯಾದ ರಾಜಪುತ್ರನು. ಚಂದ್ರಾವತೀರಾಣೀಸಾಹೇಬರವರು ತಮ್ಮ

ಪಾದಗಳ ಮೇಲೆ ಕೆಡವಲಿಕ್ಕೆಂದು ನನ್ನ ಕೈಯಲ್ಲಿ ಈತನನ್ನು ಕೊಟ್ಟಿದ್ದಾರೆ. ತಾವು ಈತನನ್ನು ಸ್ವೀಕರಿಸಿ ನನಗೆ ಅಪ್ಪಣೆಕೊಡಬೇಕು.

೯ನೆಯ ಪ್ರಕರಣ

# ಪದ್ಮೆಯು ಕೆಚ್ಚೆದೆ.

ಇತ್ತ ನಯನಪಾಲನು ದುರ್ಗಾದಾಸನಿಗೆ ಮನಬಂದತ್ತ ಸಂತೋಷದಿಂದ ಹೋಗಬೇಕೆಂದು ಹೇಳಿ, ರಾಣಿಯನ್ನು ಕರಕೊಂಡು ದಂಡಿನೊಡನೆ ದಿಲ್ಲಿಗೆ ಹೊರಟನು. ಆದರೆ ದಿಕ್ಕಿಲ್ಲದ ತಂಗಿಯನ್ನು ಬಿಟ್ಟುಹೋಗಲಿಕ್ಕೆ ದುರ್ಗಾದಾಸನ ಕಾಲುಗಳೇ ಏಳದಾದವು. ಆತನ ಮನಸ್ಸು ಇತ್ತಂಡವಾಯಿತು. ಒಮ್ಮೆ ಅದು ಸ್ವಾಮಿ ಕಾರ್ಯವನ್ನು ಸಾಧಿಸಬೇಕೆಂದು ಚಂದ್ರಾವತೀ ರಾಣಿಯ ಕಡೆಗೆ ಎಳೆಯುತ್ತಿತ್ತು, ಮತ್ತೊಮ್ಮೆ ತಂಗಿಯ ಪರಿವಿಲ್ಲದೆ ಆಕೆಯನ್ನು ಬಿಟ್ಟುಹೋಗುವದು ಅನ್ಯಾಯವೆಂದು ಇಂದಿರೆಯ ಕಡೆಗೆ ಎಳೆಯುತ್ತಿತ್ತು. ಜೋಧಪುರಕ್ಕೆ ಹೋದಬಳಿಕ ಸ್ವಾಮಿಕಾರ್ಯಕ್ಕಾಗಿ ದೇಹವನ್ನು ಅರ್ಪಿಸುವ ನನ್ನಂಥ ಬಹು ಜನರು ಇರುವದರಿಂದ ತಂಗಿಯ ಬಂಧವಿಮೋಚನಕ್ಕಾಗಿ ಯತ್ನಿಸುವದು ಯೋಗ್ಯವೆಂದು ಆತನು ತಿಳಿದನು. ಸ್ವಾಮಿಕಾರ್ಯದ ಬಹು ಕಠಿಣ ಪ್ರಸಂಗವು ಆ ಅಣ್ಣ-ತಂಗಿಯರಿಂದ ಈಗ ಸಾಧಿಸಲ್ಪಟ್ಟಿತೆಂದು ಹೇಳಬಹುದು; ಯಾಕಂದರೆ, ರಜಪೂತರಿಗೆ ಪ್ರಾಣಕ್ಕಿಂತಲೂ ಪಾತಿವ್ರತ್ಯದ ಯೋಗ್ಯತೆಯು ಹೆಚ್ಚಿನದಿದ್ದು, ಅದನ್ನು ಕೂಡ ಸ್ವಾಮಿಕಾರ್ಯಕ್ಕಾಗಿ ಕಳಕೊಳ್ಳಲಿಕ್ಕೆ ಇಂದಿರೆಯು ಅಣ್ಣನ ಮಾತಿನ ಮೇಲಿಂದ ಸಿದ್ಧಳಾಗಿದ್ದಳು. ದುರ್ಗಾದಾಸನು ನಯನಪಾಲನ ಬಳಿಗೆ ಹೋಗಿ ವಿನಯದಿಂದ—

ಮಹಾರಾಜರೇ, ಮನಬಂದತ್ತ ಹೋಗಬಹುದೆಂದು ನನಗೆ ಅಪ್ಪಣೆ ಕೊಡಿಸೋಣವಾಯಿತು; ಆದರೆ ಸ್ವಾಮಿಯ ಪತ್ನಿಯನ್ನು ಬಿಟ್ಟುಹೋಗಲಿಕ್ಕೆ

ನನ್ನ ಕಾಲುಗಳು ಏಳಲೊಲ್ಲವು; ಆದ್ದರಿಂದ ಸ್ವಾಮಿಪತ್ನಿಯ ಸೇವೆಯು ಘಟಿಸಿದಷ್ಟು ಘಟಿಸಲಿ, ತಮ್ಮ ಸಂಗಡ ಬರಲಿಕ್ಕೆ ನನಗೆ ಅಪ್ಪಣೆ ದೊರೆಯಬೇಕು, ಎಂದು ಹೇಳಿಕೊಂಡನು. ಆಗ ನಯನಪಾಲನು ತುಸು ಹೊತ್ತು ಯೋಚಿಸಿ ಮನಸ್ಸಿಗೆ ಏನು ಹೊಳೆಯಿತೋ ಏನೋ—"ಒಳ್ಳೆಯದು, ನೀನು ನಮ್ಮ ಸಂಗಡ ಆನಂದದಿಂದ ಬರಬಹುದು; ಆದರೆ ರಾಣಿಯವರ ದರ್ಶನಕ್ಕೆ ನಿನಗೆ ಸಂಪೂರ್ಣ ಪ್ರತಿಬಂಧವಿರುವದು" ಎಂದು ಹೇಳಿದನು. ಅದಕ್ಕೆ ಸಮ್ಮತಿಸಿ, ದುರ್ಗಾದಾಸನು ನಯನಪಾಲನ ದಂಡಿನೊಡನೆ ಸಾಗಿದನು. ಎರಡು ವಸ್ತಿಗಳಾದವು. ಮೂರನೆಯ ದಿನ ಸಂಜೆಯ ಮುಂದೆ ಒಂದು ಅರಣ್ಯದಲ್ಲಿ ಸೈನ್ಯದ ಬೀಡು ಬಿಟ್ಟಿರುವಾಗ, ಚಂದ್ರಾವತಿಯನ್ನು ಕಾಣಬೇಕೆಂಬ ವಿಚಾರವು ನಯನಪಾಲನ ಮನಸ್ಸಿನಲ್ಲಿ ಉತ್ಪನ್ನವಾಯಿತು. ದಿಲ್ಲಿಗೆ ಹೋದಬಳಿಕ ದೀರ್ಘಕಾಲ ಪರಿಶ್ರಮಪಟ್ಟರೂ ಆಗದ ಕಾರ್ಯವನ್ನು ತನ್ನ ಕೈಯಲ್ಲಿದ್ದಾಗ ಮಾಡಿಕೊಂಡು ಬಿಡುವದು ಜಾಣತನವೆಂದು ಆತನು ಭಾವಿಸಿದನು. ಚಂದ್ರಾವತಿಯು ಔರಂಗಜೇಬನ ರಾಣೀವಾಸವನ್ನು ಸೇರಿದ ಬಳಿಕ ಅನ್ಯರ ಕಣ್ಣಿಗೆ ಬೀಳುವದು ಪರಮ ದುಸ್ತರವೆಂಬದನ್ನು ಆತನು ಅರಿತಿದ್ದನು. ಅಂತೇ ನಯನಪಾಲನು ಒಮ್ಮೆ ಚಂದ್ರಾವತಿಯನ್ನು ಕಂಡು ಎರಡು ಮಾತುಗಳನ್ನಾಡಿಬಿಡಬೇಕೆಂದು ನಿಶ್ಚಯಿಸಿದನು.

ನಯನಪಾಲನೇ ದಂಡಿನ ಮುಖ್ಯನಾದದ್ದರಿಂದ ಆತನ ಈ ವಿಚಾರಕ್ಕೆ ಅಡ್ಡ ಬಗುವವರು ಯಾರೂ ಇದ್ದಿಲ್ಲ; ಚಂದ್ರಾವತಿಯ ಡೇರೆಯಾದರೂ ನಯನಪಾಲನ ಡೇರೆಯ ಬಳಿಯಲ್ಲಿಯೇ ಇದ್ದದರಿಂದ, ಅಲ್ಲಿಗೆ ಹೋಗಲಿಕ್ಕೆ ಆತನಿಗೆ ತಡವೂ ಆಗುವಹಾಗಿದ್ದಿಲ್ಲ; ಆದರೆ ಆತನ ಕಾಲಗಳು ಒಮ್ಮೆಲೆ ಮುಂದಕ್ಕೆ ಕಿತ್ತಲೊಲ್ಲವು. ಸ್ವಲ್ಪ ಹೊತ್ತಿನಮೇಲೆ ಆತನು ಧೈರ್ಯದಿಂದ ಚಂದ್ರಾವತಿಯ ಡೇರೆಯ ಬಳಿಗೆ ಹೋದನು. ಕಾವಲುಗಾರರು ತನ್ನವರೇ ಇದ್ದದ್ದರಿಂದ ಆತನಿಗೆ ಒಳಗೆ ಹೋಗಲಿಕ್ಕೆ ಪ್ರತಿಬಂಧವಾಗುವ ಹಾಗಿದ್ದಿಲ್ಲ. ನಯನಪಾಲನು ಡೇರೆಯ ಬಳಿಯಲ್ಲಿದ್ದ ಒಬ್ಬ ಕಾವಲುಗಾರನಿಗೆ—ಹೋಗು, ಚಂದ್ರಾವತೀರಾಣಿಯ ಒಬ್ಬದಾಸಿಯನ್ನು ಕರೆಕೊಂಡು ಬಾ, ಎಂದು ಹೇಳಿದನು. ಕೂಡಲೆ ಆ ಕಾವಲುಗಾರನು ಒಳಗೆ ಹೋಗಿ ತನಗೆ ಭೆಟ್ಟಿಯಾದ ಒಬ್ಬ ದಾಸಿಯನ್ನು ಕರಕೊಂಡು ಬಂದನು. ಚಂದ್ರಾವತೀರಾಣಿಯ ಬಳಿಯಲ್ಲಿ

ಹೆಂಗಸರ ಕೊರತೆಯಿತ್ತೆಂಬದನ್ನು ವಾಚಕರು ಬಲ್ಲರು. ಈಗ ಇಂದಿರೆಯ ಬಳಿಯಲ್ಲಿಯಂತು ದಾಸಿಯರ ಕೊರತೆಯು ವಿಶೇಷವಾಗಿತ್ತು. ದಾಸಿಯು ಬಂದದ್ದನ್ನು ನೋಡಿ ನಯನಪಾಲನು— ಹೋಗು, ರಾಣಿಯವರಿಗೆ ನಾನು ಭೆಟ್ಟಿಗೆ ಬರುತ್ತೇನೆಂದು ಹೇಳು. ನಾನು ಅವರನ್ನು ಕಾಣುವದು ಅವಶ್ಯ ವಾಗಿದೆ. ತಿಳಿಸದೆ ಹಾಗೆಯೇ ಬರುತ್ತಿದ್ದೆನು; ಆದರೆ ಹಾಗೆ ಮಾಡುವದು ನಿನ್ನ ಒಡತಿಯ ಮನಸ್ಸಿಗೆ ಬರಲಿಕ್ಕಿಲ್ಲೆಂಗು ಮುಂಗಡ ತಿಳಿಸಿದ್ದೇನೆ, ಎಂದು ಹೇಳಿದನು. ದಾಸಿಯು ಇನ್ನೂ ನಾಲ್ಕು ಹೆಜ್ಜೆ ಹೋಗಿರಲಿಕ್ಕಿಲ್ಲ, ಅಷ್ಟರಲ್ಲಿ ನಯನಪಾಲನೂ ಆಕೆಯ ಬೆನ್ನಮೇಲೆಯೇ ಹೋದನು. ದಾಸಿಯು ಇಂದಿರೆಯ ಬಳಿಗೆ ಹೋಗುವದರೊಳಗಾಗಿಯೇ ನಯನಪಾಲನು ಇಂದಿ ರೆಯ ಮುಂದೆ ಹೋಗಿ ನಿಂತುಕೊಂಡನು. ಚಂದ್ರಾವತಿಯ ಪೋಷಾಕನ್ನು ಧರಿಸಿದ್ದ ಇಂದಿರೆಯು, ಯಾವ ಸುದ್ದಿಯನ್ನೂ ಅರಿಯದ್ದರಿಂದ ಮೈಚಳಿ ಬಿಟ್ಟು ಕುಳಿತುಕೊಂಡಿದ್ದಳು. ಆಕೆಯ ಸುಂದರ ಮುಖವು ನಯನಪಾಲನ ಕಣ್ಣಿಗೆ ಬಿದ್ದು, ಆತನು ಚಕಿತನಾಗಿ ನಿಂತುಕೊಂಡನು. ಇಂದಿರೆಯು ನಯನ ಪಾಲನನ್ನು ನೋಡಿದ ಕೂಡಲೆ ತನ್ನ ಸೀರೆಯ ಸೆರಗನ್ನು ಮುಂದಕ್ಕೆ ಎಳ ಕೊಂಡು ಮೋರೆಯನ್ನು ಮುಚ್ಚಿಕೊಂಡಳು. ನಯನಪಾಲನು ಇಂದಿರೆಯ ರೂಪಾತಿಶಯಕ್ಕೆ ಭ್ರಮಿಷ್ಟನಾಗಿಯೋ, ಬೇರೆ ಯಾವ ಕಾರಣದಿಂದಲೋ ಕೆಲವು ಹೊತ್ತು ಸುಮ್ಮನೆ ನಿಂತುಕೊಂಡು, ಆಮೇಲೆ ಎಚ್ಚತ್ತು ಏನೋ ನೆನಪು ಮಾಡಿಕೊಂಡವನಂತೆ-- "ಏನು? ಇವಳು ಆ ಚಂದ್ರಾವತೀರಾಣಿಯೇ" ಎಂದು ನುಡಿದು, ದಾಸಿಯನ್ನು ಚಮತ್ಕಾರದ ದೃಷ್ಟಿಯಿಂದ ನೋಡಹತ್ತಿ ದನು. ಆಗ ದಾಸಿಯು ಬೆದರಿ, ಹಿಂದುಮುಂದಿನ ವಿಚಾರವಿಲ್ಲದೆ—"ಅಲ್ಲ— ಅಲ್ಲ; ಇವರು ಚಂದ್ರಾವತೀ ರಾಣಿಯವರಲ್ಲ, ಇಂದಿರಾಬಾಯಿಯವರು" ಎಂದು ತಟ್ಟನೆ ನುಡಿದು ಬಿಟ್ಟಳು. ಈ ಶಬ್ದಗಳು ಹೊರಬಿದ್ದ ಬಳಿಕ ತನ್ನ ನಾಲಿಗೆಯನ್ನು ಕೊಯ್ದು ಚಲ್ಲಬೇಕೆಂದು ಆ ದಾಸಿಯು ಮನಸ್ಸಿನಲ್ಲಿ ಅಂದು ಕೊಂಡಿರಬಹುದು; ಆದರೆ ಮಿಂಚಿಹೋದ ಮಾತಿಗೆ ಚಿಂತಿಸಿ ಫಲವೇನು ? ಆಗಬಾರದ ಕೆಲಸವು ಆಗಿಹೋಯಿತು. ಆಗ ನಯನಪಾಲನು ಕೂಡಲೆ ಆ ದಾಸಿಯ ಮೈಮೇಲೆ ಹೋಗಿ— ಇವರು ಚಂದ್ರಾವತೀರಾಣಿಯಲ್ಲವೆ ? ಹಾಗಾದರೆ ಈ ಇಂದಿರಾಬಾಯಿಯು ಯಾರು? ಹೇಳು, ಹೇಳು ಯಾರವರು!

ಎಂದು ಗದ್ದರಿಸಿದನು. ಗದ್ದರಿಸಿ ಗದ್ದರಿಸಿದಂತೆ ದಾಸಿಯು ಹೆಚ್ಚು ಹೆಚ್ಚು ಅಂಜಿ ನಡುಗಹತ್ತಿ—'' ಇಂದಿರಾಬಾಯಿಯು ದುರ್ಗಾದಾಸನ ತಂಗಿಯು. ಚಂದ್ರಾವತೀರಾಣೀಸಾಹೇಬರು ಇವರನ್ನು ಇಲ್ಲಿ ಕೂಡ್ರಿಸಿ ಯಾವಾಗಲೋ ಹೋದರು.'' ಎಂಬ ಶಬ್ದಗಳು ಆ ದಾಸಿಯು ಬಿಕ್ಕಿ ಬಿಕ್ಕಿ ಅಳುವಾಗ ಹೊರಬಿದ್ದವು. ಆ ಮೇಲೆ ಕೇಳುವದೇನು ? ನಯನಪಾಲನು ಸಿಟ್ಟಿನಿಂದ ಹುಚ್ಚನಾಗಿ, ಇಂದಿರೆಯು ಡೇರೆಯು ಬಿಗಿಯಾದ ಕಾವಲಿಟ್ಟು ದುರ್ಗಾದಾಸನನ್ನು ಹಿಡಿಸಿ ಪ್ರತಿಬಂಧದಲ್ಲಿಡಿಸಿದನು. ಚಂದ್ರಾವತೀರಾಣಿಯನ್ನು ನಡಹಾದಿಯಲ್ಲಿ ಹಿಡಕೊಂಡು ಬಂದವರಿಗೆ ಬೇಡಿದ ಇನಾಮು ಕೊಡುವೆನೆಂದು ಸ್ವತಃ ಹೇಳಿದನು. ಕೂಡಲೆ ಇಪ್ಪತ್ತು ಇಪ್ಪತ್ತೈದು ಜನರದೊಂದೊಂದು ಗುಂಪಾಗಿ ಕೆಲವು ಗುಂಪುಗಳು ನಾಲ್ಕೂ ಕಡೆಗೆ ಹರಿಬಿದ್ದು ರಾಣಿಯನ್ನು ಹುಡುಕಲಿಕ್ಕೆ ಹೋದವು.

ಚಂದ್ರಾವತೀ ರಾಣಿಯನ್ನು ಬೆನ್ನಟ್ಟಿ ತಾನೂ ಹೋಗಬೇಕೆಂದು ಯೋಚಿಸಿ, ನಯನಪಾಲನು ತನ್ನ ಸಂಗಡ ಅರವತ್ತು—ಎಪ್ಪತ್ತು ಜನರನ್ನು ಕರಕೊಂಡು ತನಗೆ ವಿಶ್ವಸನೀಯವಾಗಿ ತೋರಿದ ದಾರಿಯಿಂದ ಹೊರಟನು. ಸಿಟ್ಟಿನ ಭರದಲ್ಲಿ ಆತನು ದುರ್ಗಾದಾಸನನ್ನು ಒಂದು ಗಿಡಕ್ಕೆ ಉರಲು ಹಾಕಿಸಿ ಕೊಲ್ಲಿಸಿ ಹೋಗಬೇಕೆಂದು ಮಾಡಿದನು; ಆದರೆ ಹೀಗೆ ಕೊಲ್ಲಿಸುವದಕ್ಕಿಂತ ಆತನನ್ನು ಸಂಗಡ ಕರಕೊಂಡು ಹೋಗಿ ಪರಿಪರಿಯಾಗಿ ಪೀಡಿಸಿದರೆ, ಚಂದ್ರಾವತಿಯ ಗೊತ್ತು ಹತ್ತಬಹುದೆಂದು ಯೋಚಿಸಿ, ಆ ಧೂರ್ತನು ದುರ್ಗಾದಾಸನನ್ನೂ ಇಂದಿರೆಯನ್ನೂ ಸಂಗಡ ಕರಕೊಂಡು ಹೊರಟನು. ಬಹು ಬಿಕ್ಕಟ್ಟಿನ ಹಾದಿಯನ್ನೇ ನೋಡಿ ಆತನು ಹೊರಟಿದ್ದನು. ಕರ್ಮಧರ್ಮ ಸಂಯೋಗದಿಂದ ಆತನು ಹೊರಟದಾರಿಯೂ, ಚಂದ್ರಾವತಿಯು ಹೋದದಾರಿಯೂ ಒಂದೇ ಆಗಿತ್ತು. ಒಂದು ದಿನ ನಯನಪಾಲನು ಮಾರ್ಗದಲ್ಲಿ ದುರ್ಗಾದಾಸನನ್ನು ಕರೆಸಿ— ದುರ್ಗಾದಾಸಾ, ಇನ್ನುಮೇಲೆ ನಿನ್ನ ಅವಸ್ಥೆಯೂ, ನಿನ್ನ ತಂಗಿಯ ಅವಸ್ಥೆಯೂ ಏನಾಗಬಹುದೆಂಬದನ್ನು ಕುರಿತು ನೀನು ಆಲೋಚಿಸು. ಈಗ ನೀನು ಚಂದ್ರಾವತಿಯನ್ನು ಎಲ್ಲಿಗೆ ಕಳಿಸಿರುವೆಯೆಂಬದನ್ನು ಹೇಳಿದರೆ, ಇಲ್ಲವೆ ಚಂದ್ರಾವತಿಯು ಇರುವಸ್ಥಳವನ್ನು ತಿಳಿಸಿದರೆ, ನಿಮ್ಮಿಬ್ಬರ ಪರಿಣಾಮವಾಗುವದು; ಮತ್ತು ಬಾದಶಹನ ದರ್ಬಾರ

ದಲ್ಲಿ ನಿನ್ನ ಗೌರವವೂ ಆಗಬಹುದು. ವಿಚಾರಮಾಡು. ನಾನು ಚಂದ್ರಾವತಿಯನ್ನು ಹುಡುಕದೆ ಹಾಗೇ ಹೋದೇನೆಂದು ನೀನು ತಿಳಿದಿದ್ದೀ; ಆದರೆ ಸೆರಗಿಗೆ ಗಂಟು ಹೊಡೆದುಕೋ. ನಿನ್ನ ಕಣ್ಣೆದುರಿಗೆ ಚಂದ್ರಾವತಿಯನ್ನು ಹಿಡಿದು ದಿಲ್ಲಿಗೆ ಎಳಕೊಂಡು ಹೋಗುತ್ತೇನೆ ನೋಡು. ಇಷ್ಟರಿಂದ ನಾನು ಸಮಾಧಾನ ಪಡತಕ್ಕವನಲ್ಲ. ಜೋಧಪುರದ ರಾಜ್ಯವನ್ನು ಸ್ವಾಧೀನಪಡಿಸಿಕೊಂಡು ಆದರ ಸಿಂಹಾಸನವೇರಿ, ಚಂದ್ರಾವತಿಯನ್ನು ರಾಣಿಯಾಗಿ ಮಾಡಿಕೊಂಡು, ನಿನ್ನನ್ನು ಮೂರುಸಾರೆ ಊರತುಂಬಮೆರೆಸಿ, ಕಡೆಗೆ ಶೂಲಕ್ಕೇರಿಸುವೆನು. ಪಶುವೇ, ಬರಿಯ ಚಂದ್ರಾವತಿಯನ್ನು ಕರಕೊಂಡುಹೋಗಿ ನೀನು ಮಾಡುವದಾದರೂ ಏನು? ಆಕೆಯ ಹೊಟ್ಟೆಯಲ್ಲಿ ಹುಟ್ಟಿದ ಕೂಸೂ ಅಕಸ್ಮಾತ್ತಾಗಿ ಸತ್ತುಹೋಯಿತು, ಎಂದು ನುಡಿಯುತ್ತಿರಲು, ಕಡೆಯ ಸಬ್ದವನ್ನು ಕೇಳಿದ ಕೂಡಲೆ ದುರ್ಗಾದಾಸನು ಗಟ್ಟಿಯಾಗಿ ನಕ್ಕನು. ಅದರಿಂದ ನಯನಪಾಲನ ಕಣ್ಣುಗಳು ಒಮ್ಮೆಲೆ ತೆರೆದಂತಾಗಿ, ಆತನು ಮೇಲಕ್ಕೆ ಮುಖವೆತ್ತಿ ವಿಚಾರ ಮಾಡಿ, ಎದೆಯು ದಸಕ್ಕೆನ್ನಲು— ಹ! ಹ! ಒಟ್ಟಿಗೆ ಚಂದ್ರಾವತಿಯ ಸಂಗಡ ಆಕೆಯ ಮಗನೂ ಹೋಗಿರುವನು! ಆಹಾ! ಎಂಥ ವಿಲಕ್ಷಣ ಮೂರ್ಖನು ನಾನು! ತೀರಾ ಕತ್ತೆಯೆಂಬದರಲ್ಲಿ ಸಂಶಯವಿಲ್ಲ. ಇಷ್ಟು ಮರುಳತನಕ್ಕೆ ಹೋಗಬಹುವೇ, ಎಂದು ಪಶ್ಚಾತ್ತಾಪಪಟ್ಟು, ಇಂದಿರೆಯ ದಾಸಿಯನ್ನು ಕರೆಸಿ ಬೆದರಿಸಿ ಕೇಳಲು, ಎಲ್ಲ ಮೋಸವು ಬೈಲಿಗೆ ಬಿದ್ದಿತು.

ನಯನಪಾಲನಿಗೆ ಇಷ್ಟು ಸಂತಾಪವಾದರೂ, ಚಂದ್ರಾವತಿಯನ್ನು ಹುಡುಕಿದ ಹೊರತು ಯಾವಕೆಲಸ ಮಾಡುವದೂ ಪ್ರಶಸ್ತವಲ್ಲೆಂದು ತಿಳಿದು, ಆತನು ಒತ್ತರದಿಂದ ಮಾರ್ಗವನ್ನು ಕ್ರಮಿಸಹತ್ತಿದನು. ಹಾದಿಯಲ್ಲಿ ಬಲಿ ಭಿಲ್ಲನು ಆತನಿಗೆ ಭೆಟ್ಟಿಯಾಗಿ, ಇದೇ ಹಾದಿಯಿಂದ ಚಂದ್ರಾವತಿಯು ಹೋದಳೆಂದು ಹೇಳಿದನು. ಪಾಪ! ನಯನಪಾಲನು ಚಂದ್ರಾವತಿಯ ಶತ್ರುವೆಂಬದನ್ನು ಆ ಭಿಲ್ಲನೇನು ಬಲ್ಲನು? ಬಲಿಯು ಹಾದಿಯನ್ನು ತೋರಿಸುತ್ತ ನಯನಪಾಲನನ್ನು ಕರಕೊಂಡು ಹೋಗುತ್ತಿರಲು, ದುರ್ಗಾದಾಸನು ಏಕಾಂತದಲ್ಲಿ ಬಲಿಗೆ ಎಲ್ಲ ವರ್ತಮಾನವನ್ನು ಹೇಳಿ, ನಯನಪಾಲನು ಬೆನ್ನಟ್ಟಿ ಬರುವನೆಂಬ ಸುದ್ದಿಯನ್ನು ಬೇಗನೆ ಚಂದ್ರಾವತಿಗೆ ತಿಳಿಸೆಂದು ಹೇಳಿದನು. ಆ ಬಲಿಯು ನಯನಪಾಲನ ಕಣ್ಣು ತಪ್ಪಿಸಿ ಓಡಿ ಹೋಗಿ ಹೇಳಿದ್ದರಿಂದಲೇ

ಹಿಂದೆ ಹೇಳಿದಂತೆ ಪದ್ಮೆಯು ಅಜಿತಸಿಂಗನನ್ನು ಕರಕೊಂಡು ಅಬೂಪರ್ವತದ ಮೇಲಿರುವ ವೈಕುಂಠಯೋಗಿಗಳ ಬಳಿಗೆ ಹೋದಳು. ಇತ್ತ ಚಂದ್ರಾವತಿಯನ್ನು ಪಾರುಮಾಡುವ ಯುಕ್ತಿಯನ್ನು ಕುರಿತು ಎಲ್ಲರು ಆಲೋಚಿಸತೊಡಗಿದರು. ಪ್ರತಿ ಒಂದು ಕ್ಷಣವು ಬಹು ಮಹತ್ವದ್ದಾಗಿ ಕ್ರಮಿಸುತ್ತಿತ್ತು. ಇನ್ನು ಏನು ಮಾಡಬೇಕೆಂದು ಚಿಂತೆಮಾಡುತ್ತಿರುವಾಗ ರಾಮಸಿಂಗನು ಎಲ್ಲರನ್ನು ಕುರಿತು— ನೀವು ಹೀಗೆ ಚಿಂತೆಮಾಡುತ್ತ ನಿಂತುಕೊಂಡರೆ ಇನ್ನು ಎರಡು ತಾಸುಗಳಲ್ಲಿ ರಾಣಿಯವರು ನಯನಪಾಲನ ಕೈಸೇರುವರು. ಈಗ ನಾನು ಹೇಳಿದಂತೆ ಮಾಡಿದರೆ, ಮಹಾರಾಣಿಯವರ ರಕ್ಷಣವಾಗಬಹುದು. ರಾಣಿಯವರು ಡೋಲಿಯಿಂದ ಇಳಿದು ಈ ಬಿಲ್ಲನ ಹೆಗಲಮೇಲೆ ಕೂಡ್ರಬೇಕು. ನಾನೂ ಹರಪಾಲನೂ ಅವರನ್ನು ರಕ್ಷಿಸುವೆವು. ಅವರನ್ನು ಈ ಅರಣ್ಯದೊಳಗಿನ ಯಾವನಾದರೊಬ್ಬ ಭಿಲ್ಲನ ಗುಡಿಸಲಿಗೆ ಕರಕೊಂಡು ಹೋಗಬೇಕು. ಶತ್ರುಗಳನ್ನು ವಂಚಿಸುವದಕ್ಕಾಗಿ ಡೋಲಿಯಲ್ಲಿ ಒಬ್ಬನು ಶಸ್ತ್ರಪಾಣಿಯಾಗಿ ಕುಳಿತುಕೊಂಡು, ವಾಡಿಕೆಯಂತೆ ಡೋಲಿಗೆ ಬುರುಕೆಯನ್ನು ಹಾಕಬೇಕು. ಉಳಿದವರು ನಯನಪಾಲನ ಜನರನ್ನು ಕಂಡು ಅಂಜಿ ಓಡಿ ಹೋಗುವವರಂತೆ, ಡೋಲಿಯನ್ನು ಸುತ್ತುಗಟ್ಟಿ ಸಾಗಬೇಕು. ನಯನಪಾಲನ ಜನರು ನಿಮ್ಮನ್ನು ಮುತ್ತಿದಾಗ ನೀವು ಜೀವದ ಹಂಗು ದೊರೆದು ಕಾದತಕ್ಕದ್ದು. ಅಂದರೆ ಅಷ್ಟರಲ್ಲಿ ರಾಣಿಯವರು ಸುರಕ್ಷಿತವಾಗಿ ಭಿಲ್ಲನ ಗುಡಿಸಿಲನ್ನು ಸೇರುವರು. ಆಗ ಸ್ವಾಮಿಕಾರ್ಯವನ್ನು ಸಾಧಿಸಿದ ಕೀರ್ತಿಗೆ ನೀವು ಪಾಲುಗಾರರಾಗುವಿರಿ, ಎಂದು ಹೇಳಿದನು. ರಾಮಸಿಂಗನ ಈ ಹಂಚಿಕೆಯು ಎಲ್ಲರಿಗೂ ಸಮರ್ಪಕವಾಗಿ ತೋರಿದ್ದರಿಂದ, ಆದರಂತೆ ಎಲ್ಲ ವ್ಯವಸ್ಥೆಯಾಯಿತು. ಚಂದ್ರಾವತಿಯನ್ನು ರಕ್ಷಿಸುವದು ದೇವರ ಮನಸ್ಸಿಗೆ ಬಂದದ್ದರಿಂದಲೇ ಆಕೆಯು ಪಾರಾದಳೆಂದು ಹೇಳಬಹುದು; ಯಾಕಂದರೆ, ರಾಮಸಿಂಗನು ಚಂದ್ರಾವತಿಯನ್ನು ಕರಕೊಂಡು ಅರಣ್ಯವನ್ನು ಸೇರುವದಕ್ಕೂ, ನಯನಪಾಲನ ಜನರು ಚಂದ್ರಾವತಿಯ ಡೋಲಿಯನ್ನು ಮುತ್ತುವದಕ್ಕೂ ಗಂಟಿಬಿದ್ದಿತು. ಚಂದ್ರಾವತಿಯ ಡೋಲಿಯನ್ನು ನೋಡಿ ನಯನಪಾಲನಿಗೆ ಹಿಡಿಸಲಾರದಷ್ಟು ಆನಂದವಾಯಿತು. ಮೊದಲು ಮೋಸಹೋದರೂ ಕಡೆಗೆ ದೇವರು ಕಾಯ್ದನೆಂದು ತಿಳಿದು, ಆತನು ದುರ್ಗಾದಾಸನ

ಮುಂದೆ ಹಂಗಿಸಿದನು. ಮಹಾರಾಣಿಯ ಡೋಲಿಯು ನಯನಪಾಲನ ಕೈಗೆ ಸಿಕ್ಕದ್ದನ್ನು ನೋಡಿ ದುರ್ಗಾದಾಸನಿಗೆ ಬಹಳ ಅಸಮಾಧಾನವಾಯಿತು; ಆದರೆ ರಾಮಸಿಂಗ, ಹರಪಾಲ, ಶಿವಸಿಂಗ, ಗಿಯಾಸುದ್ದೀನರೆಂಬ ಮುಖ್ಯ ಜನರಿಲ್ಲದ್ದನ್ನು ನೋಡಿ, ಈ ನಾಲ್ವರೂ ಕೂಡಿ ಏನಾದರೂ ಹಂಚಿಕೆಯಿಂದ ರಾಜಪುತ್ರನನ್ನೂ, ರಾಣಿಯವರನ್ನೂ ದಾಟಿಸಿರಬಹುದೆಂದು ಆತನು ತರ್ಕಿಸಿದನು; ಆದರೂ ಆತನಿಗೆ ನಂಬಿಗೆಯಾಗಲಿಲ್ಲ. ವಾಡಿಕೆಯಂತೆ ಆತನು ನಯನಪಾಲನಿಗೆ ಉತ್ತರಕೊಡದೆ ಸುಮ್ಮನೆ ನಿಂತುಕೊಂಡಿದ್ದನು.

ನಯನಪಾಲನ ದಂಡಿನವರು ಡೋಲಿಯನ್ನು ಕೆಳಗಿಳಿಸಲಿಕ್ಕೆ ಅಪ್ಪಣೆ ಮಾಡಿದರು; ಆದರೆ ಬೋವಿಗಳು ಕೇಳಲಿಲ್ಲ. ರಾಣಿಯ ಉಳಿದ ಜನರು ಗಾಬರಿಯಾದಂತೆ ತೋರಿಸಿ ಡೋಲಿಯನ್ನು ಸುತ್ತುಗಟ್ಟಿ ಕಾಯಹತ್ತಿದರು. ನಮ್ಮ ಪ್ರಾಣವಿರುವತನಕ ಡೋಲಿಯನ್ನು ಮುಟ್ಟಗೊಡಲಿಕ್ಕಿಲ್ಲೆಂಬ ನಿಶ್ಚಯವು ಪ್ರತಿಯೊಬ್ಬರ ಮುಖದಲ್ಲಿ ವ್ಯಕ್ತವಾಗುತ್ತಿತ್ತು. ಆಗ ನಯನಪಾಲನು ಸಾಮೋಪಚಾರದ ಗೊಡವಿಗೆ ಹೋಗದೆ, ತನ್ನ ದಂಡಾಳುಗಳನ್ನು ಕುರಿತು— ಏನು ನೋಡುತ್ತೀರಿ, ತುಂಡರಿಸಿರಿ, ಎಂದು ಆಜ್ಞಾಪಿಸಿದನು. ಕೂಡಲೆ ಉಭಯ ಪಕ್ಷದವರಲ್ಲಿ ಕಾಳಗವು ಉತ್ಪನ್ನವಾಯಿತು. ರಾಣಿಯ ಪಕ್ಷದ ಪ್ರತಿಯೊಬ್ಬನು ಗಾಯಪಟ್ಟು ನೆಲಕ್ಕುರುಳುವವರೆಗೆ ಕಾದಿದನು. ಈ ಮೇರೆಗೆ ರಾಣಿಯ ಅತ್ಯಲ್ಪ ಜನರು ಪರಾಧೀನರಾಗಿ ನೆಲಕ್ಕುರುಳಿದ್ದರಿಂದ ಬೋವಿಗಳು ಡೋಲಿಯನ್ನು ನೆಲಕ್ಕಿಳಿಸಿ ಓಡಿದರು. ನಯನಪಾಲನು ಕೈಮುಟ್ಟಿ ಡೋಲಿಯ ಪರದೆಯನ್ನು ಓರೆಮಾಡಿ, ರಾಣಿಯನ್ನು ಹಿಡಿದೆಳೆಯಬೇಕೆನ್ನುತ್ತಿರಲು, ಹೊರಗಿನಿಂದ ದುರ್ಗಾದಾಸನ ಖಡ್ಗದ ಕಡತವೂ ಡೋಲಿಯ ಒಳಗಿನಿಂದ ಕಠಾರಿಯ ಇರಿತವೂ ಕೂತು, ನಯನಪಾಲನನ್ನು ಹಿಂದಕ್ಕೆ ಸರಿಸಿದವು. ನಯನಪಾಲನ ದಂಡಾಳುಗಳು ದುರ್ಗಾದಾಸನನ್ನು ಹಿಡಿದು ಹೆಡಮುರಿಗೆ ಕಟ್ಟಿ ಎಳೆದೊಯ್ದರು. ಡೋಲಿಯೊಳಗಿನವನ ಕಠಾರಿಯ ಇರಿತವು ನಯನಪಾಲನ ಮೇರೆಗೆ ಜಾರಿಹೋದದ್ದರಿಂದ ಅಷ್ಟು ಗಾಯವಾಗಲಿಲ್ಲ. ಚಂದ್ರಾವತಿಯ ಬದಲು ಡೋಲಿಯೊಳಗಿಂದ ಸರದಾರನು ಹೊರಬಿದ್ದದ್ದರಿಂದ, ನಯನಪಾಲನ ಸೊಂಡೆಯೊಣಗಿತು. ರಾಣಿಯೂ, ರಾಜಪುತ್ರನೂ ಪಾರಾಗಿರುವರೆಂದು ತಿಳಿದು ದುರ್ಗಾದಾಸನು

ಬಹಳ ಸಮಾಧಾನಪಟ್ಟನು. ನಯನಪಾಲನ ಆಶಾಂಕುರವು ಮತ್ತೆ ಸಂಪೂರ್ಣವಾಗಿ ಕಮರಿಹೋಯಿತು. ಗಾಯುಪಟ್ಟು ನೆಲಕ್ಕುರುಳಿದ ರಾಣಿಯ ಜನರನ್ನು ಪೀಡಿಸಿದರೆ, ಅವರು ಚಂದ್ರಾವತಿಯ ಸುದ್ದಿಯನ್ನು ಹೇಳಬಹುದೆಂದು ತಿಳಿದು, ಅವರನ್ನು ಪೀಡಿಸುವದಕ್ಕಾಗಿ ತನ್ನ ದಂಡಿನವರಿಗೆ ಅಪ್ಪಣೆ ಮಾಡಿದನು. ದಂಡಾಳುಗಳನ್ನು ಎಷ್ಟು ಪೀಡಿಸಿದರೂ ಪ್ರಯೋಜನವೇನು ಆಗಲಿಲ್ಲ; ಆ ಜನರ ಕುತ್ತಿಗೆಯ ಮೇಲೆ ಕತ್ತಿಯನ್ನಿಟ್ಟು ಕೇಳಿದರೂ ಅವರ ರಾಣಿಯ ಸುದ್ದಿಯನ್ನು ಹೇಳಲಿಲ್ಲ! ಆಗ ನಯನಪಾಲನು ಸಿಟ್ಟಿಗೆದ್ದು ದುರ್ಗಾದಾಸನ ಸಮಕ್ಷ ಆ ಪರಾಧೀನ ಪ್ರಾಣಿಗಳ ಶಿರಚ್ಛೇದವನ್ನು ಮಾಡಿಸಿ, ರಜಪೂತಕುಲಕ್ಕೆ ಕಲಂಕವನ್ನುಂಟು ಮಾಡಿದನು. ಆ ಮೇಲೆ ದುರ್ಗಾದಾಸನನ್ನು ಕುರಿತು-- ಎಲಾ ಅಧಮಾ, ನೋಡು, ಹೀಗೆಯೇ ನಿನ್ನ ಸಮಕ್ಷ ನಿನ್ನತಂಗಿಯ ಪ್ರಾಣ ಹರಣಮಾಡಿ, ಆಮೇಲೆ ನಿನ್ನನ್ನು ನುಚ್ಚನುಚ್ಚಾಗಿ ಕಡಿಯುವೆನು; ನರಿ, ನಾಯಿ, ಹದ್ದುಗಳಿಂದ ತಿನಿಸುವೆನು, ಎಂದನು. ಅದನ್ನು ಕೇಳಿ ದುರ್ಗಾದಾಸನು ಗಾಂಭೀರ್ಯದಿಂದ ನಿಂತುಕೊಂಡನು. ಆತನು ಸಿಟ್ಟಿಂದು ಮಾತಾಡಲಿಲ್ಲ. ನಯನಪಾಲನ ಕ್ಷುದ್ರತನವೂ, ನಿರರ್ಥಕತನವೂ ವ್ಯಕ್ತವಾಗುವದಕ್ಕಾಗಿ ಆ ಸ್ವಾಮಿಭಕ್ತನು ತಿರಸ್ಕಾರದಿಂದ ನಕ್ಕನು. ಅದರಿಂದಂತು ನಯನಪಾಲನ ಸರ್ವಾಂಗವು ಉರಿಯು ಹತ್ತಿ, ನುಡಿದಂತೆ ನಡದೇ ತೀರುವೆನೆಂದು ಹೇಳಿ ಇಂದಿರೆಯನ್ನು ತನ್ನೆದುರಿಗೆ ತಂದು ನಿಲ್ಲಿಸಬೇಕೆಂದು ಆತನು ಅಪ್ಪಣೆ ಮಾಡಿದನು.

ಅಪ್ಪಣೆಯಂತೆ ಇಂದಿರೆಯನ್ನು ತಂದು ನಯನಪಾಲನ ಮುಂದೆ ನಿಲ್ಲಿಸಿದರು. ಆಕೆಯು ಸ್ತ್ರೀಸ್ವಭಾವದ ಲಜ್ಜಾಭಯಗಳನ್ನೇನು ತೋರ್ಪಡಿಸದೆ, ಮೀಸೆಹೊತ್ತ ಗಂಡಸರಂತೆ ಗಾಂಭೀರ್ಯದಿಂದ ನಿಂತಕೊಂಡಳು. ಪ್ರತ್ಯಕ್ಷ ಯಮನಿಗೆ— "ಮಾಡು, ನನಗೆ ಏನು ಮಾಡುತ್ತೀಮಾಡು" ಎಂದು ವಿಚಾರಿಸುವ ಭಾವದಿಂದ ಆಕೆಯು ನಿಂತುಕೊಂಡಿದ್ದಳು. ಆಕೆಯ ತೇಜಸ್ಸನ್ನು ನೋಡಲಾರದೆ, ನಯನಪಾಲನೇ ಆಕೆಯ ಎದುರಿಗೆ ತಲೆಬಾಗಿಸಿದ್ದನೆಂದು ಹೇಳಬಹುದು. ಕಾಲುಗಳಿಗೆಯವರೆಗೆ ನಯನಪಾಲನು ಹೀಗೆ ಮೋರೆ ತಗ್ಗಿಸಿಕೊಂಡು ನಿಂತಿದ್ದನು. ಆ ಮೇಲೆ ಆತನು ಚಿತ್ತಸ್ಥೈರ್ಯದಿಂದ ಆಕೆಯನ್ನು ಕುರಿತು—ನೀನೂ, ನಿನ್ನ ಈ ಮೂರ್ಖ ಅಣ್ಣನೂ ಬಾದ

ಶಹನ ಎಂಥ ಅಪರಾಧ ಮಾಡಿರುವಿರೆಂಬದರ ಕಲ್ಪನೆಯಾದರೂ ನಿನಗಿರು ವದೋ ? ಇನ್ನು ನಿಮ್ಮ ಗತಿಯೇನಾಗಬಹುದೆಂಬದನ್ನು ಕುರಿತು ವಿಚಾರಿ ಸಿರುವೆಯಾ ? ........ ಎಂದು ನುಡಿಯುತ್ತಿರಲು, ಇಂದಿರೆಯು ನಡುವೇ ಬಾಯಿ ಹಾಕಿ, ಆತನನ್ನು ಸುಮ್ಮನಿರಿಸಿ, ತಿರಸ್ಕಾರ ಧ್ವನಿಯಿಂದ— ನಯನ ಪಾಲಾ, ನಾವು ಕಾರ್ಯಕ್ಕೆ ಕೈಹಾಕುವ ಮೊದಲೇ ಈ ಮಾತಿನ ವಿಚಾರ ವನ್ನು ಮಾಡಿರುತ್ತೇವೆ. ತಿಳಿಯಿತೇ? ಮಹಾರಾಣಿಯೂ, ಮಹಾರಾಣಾನೂ ಸುರಕ್ಷಿತರಾಗಿರುತ್ತಾರೆಂಬ ಶಬ್ದಗಳಿಷ್ಟು ಕಿವಿಗೆ ಬಿದ್ದಬಳಿಕ. ನಮ್ಮ ಗತಿಯು ಬೇಕಾದ ಹಾಗೆ ಆಗಲಿ. ನಮ್ಮಿಬ್ಬರ ಪ್ರಾಣವನ್ನು ಕೊಡುವದರಿಂದ ಜೋಧ ಪುರದ ಪ್ರತ್ಯಕ್ಷ ದೇವತೆಯಾದ ಚಂದ್ರಾವತಿ ಮಾತೆಯು ಸುರಕ್ಷಿತಳಾಗಿರುತ್ತಿ ದ್ದರೆ, ಮತ್ತು ಔರಂಗಜೇಬನ ರಾಣೀವಾಸವನ್ನು ಸೇರಿ ಪರಿಪರಿಯ ಯಾತನೆಗಳಿಗೆ ಗುರಿಯಾಗುವ ದುರ್ಧರ ಪ್ರಸಂಗವು ಆ ಮಹಾಸತಿಗೆ ತಪ್ಪು ತ್ತಿದ್ದರೆ, ಅದಕ್ಕೂ ಹೆಚ್ಚಿಗೆ ನಮಗೇನುಬೇಕಾಗಿರುವದು ? ಎಂದು ನುಡಿ ಯುತ್ತಿರಲು, ನಯನಪಾಲನು ನಡುವೇ ಬಾಯಿಹಾಕಿ, ಇಂದಿರೆಗೆ—"ಆದರೆ ನಿನ್ನ ಯಾತನೆಯನ್ನು ತಪ್ಪಿಸುವವರು ಯಾರು ? ಬಹಳವಾದರೆ ಮಹಾ ರಾಣಿಯು ಬಾದಶಹನ ಹೆಂಡತಿಯಾಗುತ್ತಿದ್ದಳು; ಆದರೆ ಈಗ ನೀನು ಒಬ್ಬ ಸಿದ್ದೀಮನುಷ್ಯನ ಹೆಂಡತಿಯಾಗಬೇಕಾಯಿತಲ್ಲ" ಎಂದು ಕೇಳಿದನು. ಇದನ್ನು ಕೇಳಿ ಇಂದಿರೆಯು ನಯನಪಾಲನ ಹೊಟ್ಟೆಯಲ್ಲಿ ಬೆಂಕಿಬೀಳು ವಂತೆ ಗಹಗಹಿಸಿ ನಕ್ಕು, ಆತನನ್ನು ಕುರಿತು— ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳುವ ವಿಷಯವಾಗಿ ನಾನು ಸಮರ್ಥಳಿದ್ದೇನೆ. ನನ್ನ ವಿಷಯ ವಾಗಿ ನೀನು ಇಷ್ಟೇಕೆ ಚಿಂತಿಮಾಡುತ್ತೀ ? ನನ್ನ , ಹಾಗು ನನ್ನ ಅಣ್ಣನ ಚಿಂತೆಯು ನಿನಗೆ ಬೇಡ. ನಮ್ಮದನ್ನು ನಾವು ಕಂಡುಕೊಳ್ಳುವೆವು; ಆದರೆ ಬುದ್ಧಿಗೇಡಿಯೇ, ದುಷ್ಟಔರಂಗಜೇಬ ಬಾದಶಹನ ಅಪ್ಪಣೆಯಿಂದ ಮಹಾ ರಾಣೀ ಚಂದ್ರಾವತಿಯಂಥ ಪತಿವ್ರತೆಯನ್ನು— ದೇವತೆಯನ್ನು— ಪ್ರತ್ಯಕ್ಷ ಹಡೆದ ತಾಯಿಯಂತೆ ಪೂಜ್ಯಳಾದ ಸತಿಯನ್ನು ಹಿಡಕೊಂಡು ಹೋಗಲಿಕ್ಕೆ ಬಂದಿರುವ ನಿನ್ನ ಕೈಕಾಲುಗಳು ಯಾಕೆ ಕಡಿದು ಹೋಗಲೊಲ್ಲವು ? ನಮ್ಮಂಥ ಯಃಕಶ್ಚಿತ ಜನರು ಸ್ವಾಮಿಭಕ್ತಿಯಿಂದ ಮಾಡಿರುವ ಸಾಹಸದ ಅಭಿನಂದನ ಮಾಡಿ ದೊಡ್ಡಿಸ್ತನ ತೋರಿಸುವದನ್ನು ಬಿಟ್ಟು, ಆ ತಾಯಿ

ಮಕ್ಕಳನ್ನು ಹಿಡಿಯುವದಕ್ಕಾಗಿ ಬೆನ್ನಟ್ಟಿ ಬಂದು, ನಮ್ಮನ್ನು ಬೆದರಿಸುತ್ತೀಯಾ? ಅಥವಾ, ನಿನ್ನ ಪೌರುಷಕ್ಕೆ ಧಿಕ್ಕಾರವು! ನಿನ್ನ ಬೆದರಿಕೆಗೆ ಬೆದರಿ ನಾವು ಉಂಡುಮನೆ ಗಳ ಎಣಿಸೇವೆಂದು ನೀನು ತಿಳಿದಿರುತ್ತೀಯೇನು? ಮಾಡುವಮಾಡು; ನಿನ್ನ ಕೈಯಲ್ಲಿದ್ದದ್ದನ್ನು ಮಾಡು. ಇಕೋ, ನಮ್ಮ ಅಣ್ಣನು ಅಲ್ಲಿ ನಿಂತಿರುತ್ತಾನೆ. ಆತನ ಪಾದರಕ್ಷೆಯ ಯೋಗ್ಯತೆಯು ನಿನಗಿರುವದಿಲ್ಲ. ನಾನು ಇಲ್ಲಿ ನಿಂತಿರುತ್ತೇನೆ. ಏನು ಮಾಡುವದನ್ನು ಆತಂಕವಿಲ್ಲದೆ ಮಾಡು. ಸ್ವಾಮಿಕಾರ್ಯದಲ್ಲಿ ದೇಹವನ್ನರ್ಪಿಸುವದಕ್ಕಿಂತ ನಮಗೆ ಹೆಚ್ಚಿನದೇನು ಬೇಕಾಗಿರುವದು? ಎಂದು ನುಡಿದಳು. ಈ ಕಾಲದಲ್ಲಿ ಇಂದಿರೆಯ ಉಗ್ರ ಮೂರ್ತಿಯು ನೋಡುವವರಿಗೆ ಬಹು ಭಯಪ್ರದವಾಗಿ ಒಪ್ಪುತ್ತಿತ್ತು.

ಇಂದಿರೆಯ ಈ ಧೈರ್ಯದ ಮಾತುಗಳನ್ನು ಕೇಳಿ ನಯನಪಾಲನು ಆಶ್ಚರ್ಯಮಗ್ನನಾದನು. ಆಕೆಯ ಮಾತುಗಳಿಂದ ಆತನ ಮರ್ಮಸ್ಥಾನಕ್ಕೆ ಗಾಯವಾದಂತಾಯಿತು. ಈ ಸ್ತ್ರೀಯಲ್ಲಿರುವ ತನ್ನ ಜಾತಿಯ, ಹಾಗು ದೇಶದ ಅಥವಾ ರಾಜ್ಯದ ಅಭಿಮಾನದ ಶತಾಂಶ ಅಭಿಮಾನವಾದರೂ ತನ್ನಲ್ಲಿರುವದಿಲ್ಲೆಂದು ಆತನು ನಾಚಿದನು. ಮೊದಲಿಗೆ ಉಂಟಾದ ವಿವೇಕದ ಉದ್ವೇಗದಲ್ಲಿ ಆತನು-- ಈ ಇಂದಿರೆಯನ್ನೂ ಆಕೆಯ ಅಣ್ಣನಾದ ಈ ದುರ್ಗಾದಾಸನನ್ನೂ ಬಿಟ್ಟು ಕೊಡಬೇಕಲ್ಲದೆ, ತಾನಾದರೂ ಬಾದಶಹನ ನೌಕರಿಯನ್ನು ಬಿಟ್ಟು ಜೋಧಪುರದ ಸಿಂಹಾಸನದ ಸೇವೆಯನ್ನು ಏಕನಿಷ್ಠೆಯಿಂದ ಮಾಡಬೇಕೆಂದು ಯೋಚಿಸಿದನು. ಹೀಗೆ ಯೋಚಿಸುವಾಗ ಇಂದಿರೆಯ ಮೋಹಕ ಸ್ವರೂಪದ ಕಡೆಗೂ, ಆಕೆಯ ದೈನ್ಯದ, ಆದರೆ ತೇಜಸ್ಸಿನಿಂದ ದೇದೀಪ್ಯಮಾನವಾದ ಮುಖಶ್ರೀಯ ಕಡೆಗೂ ಆತನ ಲಕ್ಷ್ಯವು ಹೋಯಿತು. ಆಕೆಯನ್ನು ನೋಡುತ್ತ ನೋಡುತ್ತ ಆತನ ಮನಸ್ಸಿನ ವಿಚಾರವು ಯಾವ ದಿಕ್ಕಿಗೆ ಹೊರಳಿತೋ ತಿಳಿಯದು; ಆತನು ಒಮ್ಮೆಲೆ ತನ್ನ ಜನರ ಕಡೆಗೆ ತಿರುಗಿ— ಎಲಾ, ಈ ದುರ್ಗಾದಾಸನನ್ನು ಬಿಟ್ಟು ಬಿಡಿರಿ. ಯಾರಿಗೆ ಗೊತ್ತು, ನನ್ನನ್ನು ಮೋಸಗೊಳಿಸಬೇಕೆಂದು ಈತನು ಈ ಎಲ್ಲ ಆಟವನ್ನು ಹೂಡಿರುತ್ತಾನೋ ಏನೋ ಅದನ್ನು ತಕ್ಕೊಂಡು ನಾವು ಮಾಡುವದೇನು? ಈಕೆಯೇ ಚಂದ್ರಾವತೀರಾಣಿಯಾಗಿರಬಹುದು. ರಾಣಿಯ ಗುರುತು ನಮಗಿಲ್ಲದ್ದರಿಂದ ಏನಾದರೂ ಹಂಚಿಕೆಮಾಡಿ ನಮ್ಮ ಕೈಯಿಂದ

ಆಕೆಯನ್ನು ಬಿಡಿಸುವದಕ್ಕಾಗಿ ಈತನು ಏನಾದರೂ ಹಂಚಿಕೆಮಾಡಿರಬಹುದು. ಈ ದುರ್ಗಾದಾಸನೊಡನೆ ನಮ್ಮ ಕೆಲಸವೇನು ? ಈಕೆಯನ್ನು ಮಾತ್ರ ಬಿಡಲಾಗದು. ಈತನು ತನ್ನ ಮನಬಂದತ್ತ ಹೋಗಲೊಲ್ಲನೇಕೆ, ಈತನ್ನು ನಮ್ಮ ಸಂಗಡ ಬರುತ್ತೇನೆಂದರೂ ಬೇಡ. ಏಳಿರಿನ್ನು, ಎಂದು ನುಡಿಯಲು ಇಂದಿರೆಯು—ನಯನಪಾಲಾ, ನೀನು ಹೀಗೆ ಎಷ್ಟು ಬೆದರಿಸಿದರೂ ನಾವು ಬೆದರುವ ಅಣ್ಣ ತಂಗಿಯರಲ್ಲ. ನೀನು ನನ್ನೊಬ್ಬಳನ್ನೇ ಕರಕೊಂಡು ಹೋಗು, ನಮ್ಮಿಬ್ಬರನ್ನು ಕರಕೊಂಡು ಹೋಗು, ಮನಸ್ಸಿಗೆ ಬಂದಂತೆ ಮಾಡು. ನಾವು ಮಾಡತಕ್ಕ ಕೆಲಸವನ್ನು ಮಾಡಿಬಿಟ್ಟೆವು. ನಮ್ಮ ಮಹಾರಾಣಾನು—ಅಜಿತಸಿಂಗಮಹಾರಾಜನು—ಚಂದ್ರಾವತೀ ಮಹಾರಾಣಿಯ ಪುತ್ರನು, ಆದರೆ ಮೂರ್ಖ, ನಯನಪಾಲಾ, ಇನ್ನು ನಿನ್ನ ಮುಂದೆ ಹೇಳುವದರಿಂದ ಪ್ರಯೋಜನವೇನು ? ನಮ್ಮ ಜೋಧಪುರದ ಬಾಲರಾಜನೂ, ಮಹಾರಾಣಿಯೂ ಜೋಧಪುರದ ಭಿಲ್ಲರ ಗಡಿಯನ್ನು ಸೇರಿದರು. ಇನ್ನು ಪ್ರತ್ಯಕ್ಷ ಬಾದಶಹನು ತನ್ನ ಪ್ರಚಂಡ ಸೈನ್ಯದೊಡನೆ ಹುಡುಕಲಿಕ್ಕೆ ಬಂದರೂ ಅವರು ಸಿಗಲಾರರು. ನಡೆ, ದಿಲ್ಲಿಗೆ ನನ್ನನ್ನು ಕರಕೊಂಡು ಹೋಗು. . ಬಾದಶಹನ ಮುಂದೆ ನನ್ನನ್ನು ನಿಲ್ಲಿಸಿ ಬೇಕಾದ ಹಾಗೆ ಹೇಳು. ಆ ಮೇಲೆ ನನ್ನ ಮನಸ್ಸಿಗೆ ಬಂದಂತೆ ನಾನು ಹೇಳುವೆನು. ಮುಂದೆ ಏನಾಗುತ್ತದೆ ನೋಡೋಣ. ನಯನಪಾಲಾ, ನಾನು ಬಾದಶಹನ ಮುಂದೆ ಎಲ್ಲ ತೋಡಿಕೊಂಡಬಳಿಕ ನಿನ್ನ ಗತಿಯೇನಾಗುವದೆಂಬದನ್ನಾದರೂ ನೋಡು!

ಈ ಮೇರೆಗೆ ನಯನಪಾಲನು ಒಂದು ಪಟ್ಟು ಗದ್ದರಿಸಿ ಹತ್ತು ಮಾತುಗಳನ್ನು ಆಡಿದರೆ, ಇಂದಿರೆಯು ಹತ್ತುಪಟ್ಟು ಗದ್ದರಿಸಿ, ಇಪ್ಪತ್ತು ಮಾತುಗಳನ್ನು ಆಡುತ್ತಿದ್ದಳು. ನಾನು ನಿನಗೆ ಎಳ್ಳಷ್ಟು ಹೆದರುವದಿಲ್ಲೆಂಬ ಭಾವವನ್ನು ಆಕೆಯು ವ್ಯಕ್ತಮಾಡಿದ್ದಳು. ಹೆದರುವ ಯೋಗ್ಯತೆಯ ಮನುಷ್ಯಳೇ ಇವಳಲ್ಲೆಂದು ಆಕೆಯು ಎಲ್ಲರ ಮುಂದೆ ನಡೆದು ತೋರಿಸಿದಳು; ಆದರೂ ನಯನಪಾಲನು ನಾಚಿಕೆಗೇಡಿಯಂತೆ ಮತ್ತೆ ಇಂದಿರೆಯನ್ನು ಕುರಿತು—ಎಲೈ ಉದ್ಧಟಳೇ, ನೀನು ಬೇಕಾದಷ್ಟು ದಿಟ್ಟತನವನ್ನು ತೋರಿಸು. ನಾನು ಬಾಯಿಂದ ಬಂದದ್ದನ್ನು ಮಾಡಿಯೇ ತೀರುವೆನು. ನಿಮ್ಮ ಅಣ್ಣನನ್ನು ಸುಮ್ಮನೆಯಾದರೂ ಯಾಕೆ ಬಿಡಬೇಕು ? ಆತನನ್ನು ನುಚ್ಚು

ನುಚ್ಚಾಗಿ ಕಡಿದು ಈ ಅರಣ್ಯದ ಹದ್ದು ಕಾಗೆಗಳ ಪಾಲುಮಾಡಿ ನಿನ್ನೊಡನೆ ದಿಲ್ಲಿಗೆ ಹೊರಡುವೆನು. ಅಂದರೆ ನಿನ್ನ ಕಣ್ಣುಗಳು ಸ್ವಲ್ಪ ತೆರೆದಾವು. ನನ್ನ ಮಾತುಗಳನ್ನೆಲ್ಲ ಹುಡುಗಾಟಿಕೆಯೆಂದು ನೀನು ತಿಳಿದಂತೆ ಕಾಣುತ್ತದೆ. ಕಣ್ಣು ಮುಟ್ಟಿ ನೋಡಿದರೆ ಗೊತ್ತಾಗುವದು. ಆ ಮೇಲೆ····
....ಎಂದು ನುಡಿಯುತ್ತಿರಲು, ಇಂದಿರೆಯು ಆತನನ್ನು ಮುಂದಕ್ಕೆ ಮಾತಾಡಗೊಡದೆ, ಮೊದಲಿನಂತೆ ಗಹಗಹಿಸಿ ನಕ್ಕು—ಅಂದಮೇಲೆ ಏನು ಮಾಡುವದನ್ನು ಈಗ ಮಾಡಿ ಬಿಡಬಾರದೆ ? ಸುಮ್ಮನೆ ಮಾತಾಡಿ ಬಾಯಿಯೇಕೆ ಹೊಲಸುಮಾಡಿಕೊಳ್ಳುತ್ತೀ ? ನಯನಪಾಲಾ, ಪ್ರತ್ಯಕ್ಷ ಯಮನಿಗೆ ಹೆದರಲಾರದವರ ಮುಂದೆ ಸಿನ್ನಂಥ ಹೇಸಿಯ ಆಟವೇನು ನಡೆಯಬೇಕು ? ಇನ್ನು ಬಾಯಿಂದ ಮಾತಾಡಬೇಡ, ಕೈಯಿಂದ ಮಾಡಿ ತೋರಿಸು." ಎಂದು ನುಡಿಯುವಾಗ ಇಂದಿರೆಯ ಆ ಅಂಗವಿಕ್ಷೇಪಾದಿಗಳನ್ನು ನೋಡಿ ಬೆಸ್ತಾಗಿ ನಯನಪಾಲನು ಕೆಲಹೊತ್ತಿನ ವರೆಗೆ '' ಏನು ಮಾಡಲಿ, ಹ್ಯಾಗೆ ಮಾಡಲಿ" ಎಂಬ ದಶಾಕ್ಷರೀ ಮಂತ್ರವನ್ನು ಜಪಿಸುತ್ತ ಕುಳಿತುಕೊಂಡನು. ಕಡೆಗೆ ದುರ್ಗಾದಾಸನನ್ನು ಬಿಟ್ಟು ಇಂದಿರೆಯೊಬ್ಬಳನ್ನೇ ಕರಕೊಂಡು ಹೋಗಬೇಕೆಂದು ನಿಶ್ಚಯಿಸಿ, ತನ್ನ ದಂಡಾಳುಗಳಲ್ಲಿ ಆರುಮಂದಿಯನ್ನು ಕರೆದು ಈತನನ್ನು ಅರಣ್ಯದಲ್ಲಿ ದೂರಬಿಟ್ಟು ಬರ್ರಿ, ಎಂದು ಆಜ್ಞಾಪಿಸಿದನು. ಕೂಡಲೆ ಅವರು ದುರ್ಗಾದಾಸನನ್ನು ಎಳೆದೊಯ್ಯಹತ್ತಿದರು. ಆಗ ಇಂದಿರೆಯು ಇನ್ನು ಅಣ್ಣನ ವಿಯೋಗವಾಗುವದೆಂದು ಅಸಮಾಧಾನ ಪಟ್ಟಳು. ಆಕೆಯ ಧೈರ್ಯವು ಅಳಿದು ಹೃದಯವು ಕರಗಿತು. ಎರಡು ದುಃಖಾಶ್ರುಗಳು ಪಟ್ಟನೆ ಉದುರಿದವು. ಅವನ್ನು ನಯನಪಾಲನು ನೋಡಬಾರದೆಂದು ಆಕೆಯು ಜಾಗ್ರತೆಯಿಂದ ಒರಿಸಿಕೊಂಡು ದುಃಖವನ್ನು ನುಂಗಿಕೊಂಡಳು. ಆ ಧೀರೆಯು ಅಣ್ಣನಿಗೆ ಧೈರ್ಯವನ್ನು ಹೇಳುವ ಉದ್ದೇಶದಿಂದ— ಅಣ್ಣಾ, ನಿನ್ನನ್ನು ಬಿಟ್ಟು ಕೊಟ್ಟದ್ದು ಪರಮ ಭಾಗ್ಯವೆಂದು ತಿಳಿ. ಸ್ವಾಮಿಕಾರ್ಯಸಾಧನದಲ್ಲಿ ದೇಹವನ್ನು ಸವಿಸಲಿಕ್ಕೆ ನಿನಗೆ ಅನುವು ದೊರೆಯಿತು; ಆದರೆ ಸ್ವಾಮಿಭಕ್ತನಾದ ನೀನು ನನ್ನ ಚಿಂತೆಯನ್ನು ಬಿಡು. ನಮ್ಮ ಕುಲಕ್ಕೆ ಕಲಂಕವನ್ನುಂಟು ಮಾಡುವ ಯಾವ ಕೃತಿಯೂ ನನ್ನಿಂದ ಘಟಿಸಲಿಕ್ಕಿಲ್ಲೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇದರ ಮೇಲಿಂದ ಬೇಕಾದದ್ದು ತಿಳಕೋ.

ಹೀಗೆ ನುಡಿಯುವಾಗ ಮತ್ತೆ ಉದುರಿದ ಒಂದೆರಡು ದುಃಖಾಶ್ರು ಬಿಂದುಗಳನ್ನು ಆಕೆಯು ಸರಕ್ಕನೆ ಒರಿಸಿಕೊಳ್ಳುತ್ತಿರಲು, ನಯನಪಾಲನ ಅಪ್ಪಣೆಯಿಂದ ಆಕೆಯ ಅಣ್ಣನು ಕಣ್ಣು ಮರೆಯಾದನು. ನಯನಪಾಲನು ದಂಡಾಳುಗಳನ್ನೆಲ್ಲ ಒಟ್ಟುಗೂಡಿಸಿಕೊಂಡು ದಿಲ್ಲಿಗೆ ಹೊರಟನು. ನಯನ ಪಾಲನು ಮಹತ್ವಾಕಾಂಕ್ಷಿಯಿದ್ದ ಮಾನದಿಂದ ಧೈರ್ಯಶಾಲಿಯಿದ್ದಿಲ್ಲ, ಕಾಪಟ್ಯಭಾವವು ಮಾತ್ರ ಅವನಲ್ಲಿ ಪೂರ್ಣವಾಗಿ ವಾಸಿಸುತ್ತಿತ್ತು. ಮಾರ್ಗ ದಲ್ಲಿ ಆತನ ಮನಸ್ಸು ವಿಚಾರಮಗ್ನವಾಯಿತು. ತನ್ನ ಹುಳಕು ಹೊರ ಬೀಳುವವರೆಗೆ, ಇಂದಿರೆಯೇ ಚಂದ್ರಾವತೀರಾಣಿಯೆಂತಲೂ, ಆಕೆಯ ಮಗನು ಹುಟ್ಟಿದ ಸ್ವಲ್ಪದಿನಗಳಲ್ಲಿ ಅಕಸ್ಮಾತ್ತಾಗಿ ಸತ್ತನೆಂತಲೂ ಬಾದ ಶಹನ ಮುಂದೆ ಸಾಧಿಸಿ, ತಾನು ಬಹು ಚಾತುರ್ಯದಿಂದ ರಾಣಿಯನ್ನು ಹಿಡಕೊಂಡು ಬಂದೆನೆಂದು ಹೇಳಬೇಕೆಂದು ಆತನು ಒಮ್ಮೆ ಮನಸ್ಸಿನಲ್ಲಿ ನಿಶ್ಚಯಿಸುವನು; ಆದರೆ ಇಂದಿರೆಯ ರೂಪಕ್ಕೆ ಮರುಳಾಗಿದ್ದ ಆತನು ಮತ್ತೊಮ್ಮೆ—ಇಂದಿರೆಯನ್ನು ಬಾದಶಹನ ಕಣ್ಣಿಗೆ ಹಾಕದೆ, ತಾನೇ ಲಗ್ನ ಮಾಡಿಕೊಳ್ಳಬೇಕೆಂದು ಯೋಚಿಸುವನು. ದುರ್ಗಾದಾಸನನ್ನು ಆಗ ಕೊಲ್ಲಿ ಸಿದ್ದರೆ ಇಂದಿರೆಯ ಮನಸ್ಸನ್ನು ಆಕರ್ಷಿಸಿಕೊಳ್ಳಲಿಕ್ಕೆ ಬರುತ್ತಿದ್ದಿಲ್ಲವಾದ್ದ ರಿಂದ ಆತನನ್ನು ಆಗ ಹಾಗೇ ಬಿಟ್ಟಿದ್ದು ನೆಟ್ಟಗಾಯಿತೆಂದು ನಯನಪಾಲನು ಭಾವಿಸುವನು. ಆತನು ಹಾದಿಯಲ್ಲಿ ವಸ್ತಿ ಮಾಡಿದಾಗ ನಡುನಡುವೆ ಇಂದಿರೆಯನ್ನು ಕರೆಸಿ, ಆಕೆಗೆ ತನ್ನ ಉದ್ದೇಶವನ್ನು ತಿಳಿಸಿ, ಆಕೆಯ ಮನ ಸ್ಸಿನಲ್ಲಿದ್ದದ್ದನ್ನು ತಿಳಕೊಳ್ಳಲಿಕ್ಕೆ ಯತ್ನಿಸುತ್ತಿದ್ದನು; ಆದರೆ ಆತನ ಪ್ರಯ ತ್ನವು ನಿಷ್ಫಲವಾಗುತ್ತಿತ್ತು; ಯಾಕಂದರೆ ಇಂದಿರೆಯು ಇತ್ತಿತ್ತ ಅವನೊಡನೆ ಮಾತಾಡುವದನ್ನೇ ಬಿಟ್ಟುಬಿಟ್ಟಿದ್ದಳು. ಆತನು ಬಹಳವಾಗಿ ಪೀಡಿಸಿ ರಿಪಿ ರಿಪಿ ಮಾಡಿದರೆ ಆಕೆಯು ಅಸಹ್ಯಪಟ್ಟು— ನೀನು ಬೇಕಾದದ್ದು ಮಾಡು. ನಿನ್ನ ಯಾವ ಮಾತಿಗೂ, ಕೃತಿಗೂ ನಾನು ಹೆದರುವಹಾಗಿಲ್ಲ. ಇದರ ಮೇಲೆಯೂ ಕೈಮೀರಿ ಬಂದರೆ ನನ್ನ ಜೀವವು ನನ್ನ ಕೈಯಲ್ಲಿರುತ್ತದೆ; ನನ್ನ ಹೆಸರಿಗೂ, ಕುಲಕ್ಕೂ, ಶೀಲಕ್ಕೂ ಕಲಂಕ ಹತ್ತದಂತೆ ನಡಕೊಳ್ಳುವೆನು. ಆ ಮಾತಿನ ಬಗ್ಗೆ ನನಗೆ ಎಳ್ಳಷ್ಟು ಭಯವಿಲ್ಲ. ಹಾಗೆ ಮಾಡುವದು ನನಗೆ ದುಸ್ತರವೂ ಅಲ್ಲ, ಎಂದು ಉತ್ತರಕೊಡುತ್ತಿದ್ದಳು. ಹೀಗೆ ನಯನಪಾಲನು

ಇಂದಿರೆಯ ತಿರಸ್ಕಾರದ ಮಾತುಗಳಿಂದ ಆಗಾಗ್ಗೆ ನಿರಾಶೆಪಡುತ್ತ, ಮತ್ತೆ ಮನೋರಾಜ್ಯದಲ್ಲಿ ಆಶಾಪಾಶದಿಂದ ಬದ್ಧನಾಗುತ್ತ ಮುಂದಕ್ಕೆ ಸಾಗಿ ಒಮ್ಮೆ ದಿಲ್ಲಿಗೆ ಬಂದನು.

೧೧ನೆಯ ಪ್ರಕರಣ

## ಔರಂಗಜೇಬ.

ದಿಲ್ಲಿಯನ್ನು ಸೇರಿದ ನಯನಪಾಲನು, ಇನ್ನು ಬಾದಶಹನನ್ನು ಹ್ಯಾಗೆ ಕಾಣಬೇಕು, ಆತನಿಗೆ ಏನು ಹೇಳಬೇಕು, ಎಂದು ಚಿಂತಿಸತೊಡಗಿದನು. ಇಂದಿರೆಯೇ ಚಂದ್ರಾವತಿಯೆಂದು ಸಾಧಿಸಿ, ಆಕೆಯ ಮಗನು ಸತ್ತಬಳಿಕ ಬಹು ಚಾತುರ್ಯದಿಂದ ಹಿಡಕೊಂಡು ಬಂದೆನೆಂದು ಹೇಳಿಬಾದಶಹನನ್ನು ಮೋಸಗೊಳಿಸಬೇಕೆಂದು ಹಾದಿಯಲ್ಲಿ ಆತನು ಯೋಚಿಸಿದ್ದನಷ್ಟೆ ? ಆದರೆ ಹಾಗೆ ಮಾಡಲಿಕ್ಕೆ ಈಗ ನಯನಪಾಲನಿಗೆ ಅಂಜಿಕೆ ಬರತೊಡಗಿತು. ಔರಂಗಜೇಬಬಾದಶಹನು ಅಂಥ ಇಂಥವನಿದ್ದಿಲ್ಲ. ಬೇರೆ ಯಾವದೊಂದು ಮಾರ್ಗದಿಂದ ಆತನಿಗೆ ಸತ್ಯಸ್ವರೂಪವು ತಿಳಿದರೆ, ತನ್ನನ್ನು ಆನೆಯ ಕಾಲಿಗೆ ಕಟ್ಟಿಸಿ ಎಳೆಸಿ, ಇಲ್ಲವೆ ಶೂಲಕ್ಕೇರಿಸಿ ಕೊಲ್ಲಿಸಬಹುದೆಂದು ನಯನಪಾಲನು ಬೆದರಿದನು. ನಡೆದ ನಿಜವಾದ ಸಂಗತಿಯನ್ನೇ ಬಾದಶಹನಿಗೆ ಹೇಳಬೇಕು; ಆದರೆ ಇಂದಿರೆಯನ್ನು ಕರಕೊಂಡು ಬಂದ ಸುದ್ದಿಯನ್ನು ಮಾತ್ರ ಆತನ ಮುಂದೆ ತೆಗೆಯಬಾರದು, ಎಂದು ಆ ಧೂರ್ತ ರಜಪೂತನು ನಿಶ್ಚಯಿಸಿದನು. ಇಂದಿರೆಯನ್ನು ಕರಕೊಂಡು ಬಂದಿರುವನೆಂದು ಬಾದಶಹನ ಮುಂದೆ ಹೇಳಿದರೆ " ಆ ದಿಟ್ಟ ಹುಡುಗೆಯು ಹ್ಯಾಗಿರುವಳು ನೋಡೋಣ ಕರತಾರೆ"ಂದು ಬಾದಶಹನು ಅನ್ನಬಹುದೆಂತಲೂ, ಇಂದಿರೆಯ ಸುಂದರ ರೂಪಕ್ಕೂ,

ಆಕೆಯ ಮನೋಹರವಾದ ಆವಿರ್ಭಾವಕ್ಕೂ ಮರುಳಾಗಿ ಆಕೆಯನ್ನು ತನ್ನ ರಾಣೀವಾಸದಲ್ಲಿ ಸೇರಿಸಿಕೊಳ್ಳಬಹುದೆಂತಲೂ ನಯನಪಾಲನು ಭಾವಿಸಿದ್ದನು. ಒಟ್ಟಿಗೆ ಆತನಿಗೆ ಇಂದಿರೆಯೂ ಲಭಿಸಬೇಕಾಗಿತ್ತು, ತನ್ನ ಜೀವವೂ ಉಳಿಯಬೇಕಾಗಿತ್ತು. ಇವೆರಡೂ ಮಾತುಗಳು ಸಾಧಿಸುವದಕ್ಕಾಗಿ ಬೇಕಾದ ಹಂಚಿಕೆಯನ್ನು ಮಾಡುವೆನೆಂದು ಆತನು ನಂಬಿಕೊಂಡಿದ್ದನು. ನಯನಪಾಲನು ದಿಲ್ಲಿಗೆ ಬಂದಕೂಡಲೆ ಬಾದಶಹನ ದರ್ಶನಕ್ಕೆ ಹೋಗಬೇಕಾಗಿತ್ತು; ಆದರೆ ಆತನು "ಏನು ಮಾಡಲಿ, ಹ್ಯಾಗೆ ಮಾಡಲಿ" ಎಂಬ ಮಂತ್ರಜಪದಲ್ಲಿ ಒಂದು ದಿವಸವನ್ನು ಕಳೆದನು. ಮರುದಿವಸ ಬಾದಶಹನ ಬಳಿಗೆ ಹೋಗಿ ಆತನ ಮುಂದೆ ನಿಂತುಕೊಂಡು ಮೊದಲಿನಿಂದ ಕಡೆಯ ತನಕ ನಡೆದ ನಿಜವಾದ ಸಂಗತಿಯನ್ನು ಹೇಳಿದನು. ನನ್ನ ಯೋಗ್ಯತೆ ಮೀರಿ ಜಾಗ್ರತೆಯಿಂದ ನಡಕೊಂಡರೂ, ಕೈಮೀರಿದ್ದರಿಂದ ಮೋಸಹೋದೆನೆಂತಲೂ, "ನಿನ್ನ ಮನಸ್ಸಿಗೆ ಬಂದಹಾಗೆ ಕೆಲಸ ಸಾಧಿಸೆಂ"ದು ಬಾದಶಹರು ಆಜ್ಞಾಪಿಸಿದ್ದರೆ ಹೀಗಾಗುತ್ತಿದ್ದಿಲ್ಲೆಂತಲೂ ಆತನು ಹಲವು ಸಾರೆ ಅಂದು ತೋರಿಸಿದನು; ಆದರೆ ಔರಂಗಜೇಬನು ಸಾಮಾನ್ಯನಿದ್ದಿಲ್ಲ. ನಯನಪಾಲನು ಹೇಳುವದನ್ನು ಆತನು ಸಮಾಧಾನದಿಂದ ಕೇಳಿಕೊಂಡು—ನಯನಪಾಲಾ, ಚಂದ್ರಾವತಿಯು ಹೋದರೂ, ಆಕೆಯ ಸ್ಥಳದಲ್ಲಿ ಇಂದಿರೆಯೆಂಬವಳು ಕುಳಿತುಕೊಂಡಿದ್ದಳಲ್ಲ, ಆಕೆಯೆಲ್ಲಿದ್ದಾಳೆ ? ಇಂಥ ಸಾಹಸಿಯಾದ ಸ್ತ್ರೀಯು ನನ್ನ ಕಣ್ಣಿಗೆ ಬೀಳಲೇಬೇಕು; ಮತ್ತು ಆ ದುರ್ಗಾದಾಸನು ಎಲ್ಲಿದ್ದಾನೆ ? ಆತನನ್ನು ಹಿಡಕೊಂಡು ಬಂದಿರುವೆಯೋ ಇಲ್ಲವೋ? ಎಂದು ಕೇಳಿದನು. ಬಾದಶಹನು ಹೀಗೆ ಕೇಳಿಯೇ ಕೇಳುವನೆಂದು ನಯನಪಾಲನು ಮೊದಲೇ ತರ್ಕಿಸಿದ್ದರಿಂದ ಹೇಳತಕ್ಕ ಉತ್ತರವನ್ನು ಆತನು ಮೊದಲೇ ಗೊತ್ತು ಮಾಡಿಕೊಂಡಿದ್ದನು. ಆತನು ಬಾದಶಹನನ್ನು ಕುರಿತು— ಖಾವಿಂದ, ಆ ಹುಡುಗೆಯು ಎಂಥ ಗಟ್ಟಿಗಳೆಂಬದನ್ನು ನಾನೇನು ಹೇಳಲಿ! ನಾನು ಚಂದ್ರಾವತೀರಾಣಿಯನ್ನು ಬೆನ್ನಟ್ಟಿ ಹೋಗುತ್ತಿರುವಾಗ ಆ ಹುಡುಗೆಯೂ, ಆಕೆಯ ಅಣ್ಣನಾದ ದುರ್ಗಾದಾಸನೂ ನಮಗೆ ಮಂಕುಬೂದಿಯನ್ನು ಹಚ್ಚಿ ಓಡಿಹೋದರು. ಅವರನ್ನು ಬಿಗಿಯಾದ ಕಾವಲಿನಲ್ಲಿಟ್ಟಿದ್ದರೂ, ಕಾವಲುಗಾರರಿಗೆ ಅವರ ಒಳಸಂಚು ಗೊತ್ತಾಗಲಿಲ್ಲ. ನಾನು ಆ ಕಾವಲುಗಾರರನ್ನು ಚನ್ನಾಗಿ ದಂಡಿಸಿ

ದೆನು; ಆದರೆ ಸೆರೆಯಾಳುಗಳು ಹೋದವರು ಹೋಗಿಬಿಟ್ಟರು.

ಆಕಸ್ಮಿಕವಾಗಿ ತುಂಬಿಬಂದ ಹಳ್ಳದಲ್ಲಿ ಸಿಕ್ಕವನು ಪರಾಧೀನನಾಗಿ ಹರಿಗುಂಟ ಹೋಗುವಂತೆ, ತೇಜಸ್ವಿಯೂ, ಉಗ್ರಶಾಸನದವನೂ ಆದ ಔರಂಗಜೇಬ ಬಾದಶಹನ ಪ್ರಶ್ನದಿಂದ ಪ್ರಜ್ಞಾಹೀನನಾದ ನಯನಪಾಲನು ಹಿಂದು ಮುಂದಿನ ವಿಚಾರವಿಲ್ಲದೆ ಬಾಯಿಗೆ ಬಂದಂತೆ ಬೊಗಳಹತ್ತಿದನು. ಈ ಮೊದಲು ಆಡಿದ ಮಾತುಗಳಿಗೂ ಈಗಾಡುವ ಮಾತುಗಳಿಗೂ ಏನು ವ್ಯತ್ಯಾಸ ವಾಗುವದೆಂಬದರ ಅರವೇ ಆತನಿಗೆ ಉಳಿಯಲಿಲ್ಲ. ಕಾಬೂಲಕ್ಕೆಹೋದದ್ದರಿಂದ ಹೆಚ್ಚು ಭಲಾ ಪಡೆದೇನೆಂಬ ಆತನ ಆಶೆಯು ಒತ್ತಟ್ಟಿಗುಳಿದು, ತನ್ನ ಮೊದಲಿನ ಮಾನ ಮಾನ್ಯತೆಗಳಾದರೂ ತನ್ನ ಪಾಲಿಗೆ ಉಳಿಯುವವೋ ಇಲ್ಲವೋ ಎಂಬ ಚಿಂತೆಯು ಆತನನ್ನು ಬಾಧಿಸಹತ್ತಿತು. ಔರಂಗಜೇಬನು ನಯನಪಾಲನ ಮಾತುಗಳನ್ನು ಕೇಳಿ ಆತನನ್ನು ಕುರಿತು— ಹ ! ಒಟ್ಟಿಗೆ ನೀವು ಒಳ್ಳೆಯ ಉಬ್ಬಿನಿಂದ ಕಾಬೂಲಕ್ಕೆ ಹೋದವರು, ಕಾರ್ಯವನ್ನು ಸಾಧಿಸದೆ ಕೈಗಳನ್ನು ಅಲ್ಲಾಡಿಸುತ್ತ ಹಾಗೇ ಬಂದಿರೆಂದ ಹಾಗಾಯಿತು. ಇಷ್ಟು ದಿವಸ ದರ್ಬಾರದಲ್ಲಿ ನೀವು ತಲೆಹಾಕುತ್ತ ಬಂದದ್ದು ವ್ಯರ್ಥವೇ ಏನು? ರಜಪೂತರ ಹೊಟ್ಟೆಯಲ್ಲಿ ಹುಟ್ಟಿ, ಜೋಧಪುರದ ಸಿಂಹಾಸನದ ಸಲುವಾಗಿ ಪ್ರಾರ್ಥಿಸುವವರು ಹೀಗೆ ಅಳುತ್ತ ಬರಬಹುದೇನು ? ಕುಳಿತುಕೊಳ್ಳಿರಿ ಇತ್ತ ! ಎಲಾ, ಅಲ್ಲಿ ಯಾರಿರುತ್ತೀರಿ, ಎನ್ನಲು, ನಾಲ್ಕಾರು ಜನ ಸೇವಕರು ಎದುರಿಗೆ ಬಂದು ನಿಂತುಕೊಂಡರು. ಆಗ ಔರಂಗಜೇಬನು— ಎಲಾ, ಈಗಲೇ ನೀವು ಹೋಗಿ ಈತನ ಮನೆಯನ್ನು ಮುತ್ತಿ ಒಳಗೆ ಯಾರಿದ್ದರೂ ಹಿಡಕೊಂಡು ಬರ್ರಿ; ಮತ್ತು ಈತನ ಕಾಲಗಳಲ್ಲಿ ಬೇಡಿಗಳನ್ನು ಹಾಕಿ ಈತನನ್ನು ಒಂದು ಕೋಣೆಯಲ್ಲಿ ಪ್ರತಿಬಂಧಿಸಿ ಇಡಿರಿ, ಎಂದು ಅಪ್ಪಣೆಮಾಡಿದನು. ಕೂಡಲೆ ಸೇವಕರು ನಯನಪಾಲನ ಮನೆಯನ್ನು ಮುತ್ತಿ ಇಂದಿರೆಯನ್ನು ದರ್ಬಾರಕ್ಕೆ ಕರತಂದು ಬಾದಶಹನ ಎದುರಿಗೆ ನಿಲ್ಲಿಸಿದರು. ಬಾದಶಹನು ನಯನಪಾಲನ ಸಮಕ್ಷ ಇಂದಿರೆಯನ್ನು ಉದೇಪುರೀಬೇಗಮೆಯ ಕಡೆಗೆ ದಾಸಿಯೆಂದು ಕಾಣಿಕೆಯಾಗಿ ಕಳಿಸಿದನು. ಇತ್ತ ನಯನಪಾಲನು ಚಡಪಡಿಸುತ್ತ ಸೆರೆಮನೆಯ ದಾರಿಯನ್ನು ಹಿಡಿಯಬೇಕಾಯಿತು. ನಯನಪಾಲನು ಕೆಲಸವನ್ನು ಕೆಡಿಸಿಕೊಂಡು ಬಂದದ್ದರಿಂದ ಔರಂಗಜೇಬನ

ಮನೋರಥವು ವ್ಯರ್ಥವಾಗಿ, ಅವನು ಬಹಳ ಅಸಮಾಧಾನಪಟ್ಟನು. ಜೋಧಪುರದ ಪ್ರಬಲ ರಜಪೂತ ಸಿಂಹಾಸನದ ಸೂತ್ರಗಳನ್ನು ತನ್ನ ಕೈಯಲ್ಲಿ ಹಿಡಿದುಕೊಂಡು, ಇಡಿಯ ರಜಪೂತರ ಕಸುವು ಕಡಿಮೆಮಾಡಬೇಕೆಂದು ಬಗೆದಿದ್ದ ಆತನು, ಅಪಕೀರ್ತಿಗೆ ಹೆದರದೆ ಪೃಥ್ವೀಸಿಂಗನನ್ನು ಕೂಡಿದ ದರ್ಬಾರದಲ್ಲಿ ವಿಷಲೇಪಿತವಾದ ಉಡುಪುಗಳನ್ನು ಹಾಕಿಸಿ ಕೊಲ್ಲಿಸಿದ್ದನು. ಈಗ ನಯನಪಾಲನು ಚಂದ್ರಾವತೀರಾಣಿಯನ್ನು ಪುತ್ರಸಮೇತವಾಗಿ ಹಿಡಕೊಂಡು ಬಂದಿದ್ದರೆ, ಎಲ್ಲ ಮುಖದಿಂದ ಬಾದಶಹನ ಕಾರ್ಯವು ಸಾಧಿಸಿದಂತಾಗುತ್ತಿತ್ತು; ಆದರೆ ಇಂದಿರೆ–ದುರ್ಗಾದಾಸರಂಥ ಸ್ವಾಮಿಭಕ್ತರ ಸಾಹಸದಿಂದ ತನ್ನ ಕಾರ್ಯಕ್ಕೆ ವಿಘ್ನವು ಒದಗಿದ್ದರಿಂದ ಔರಂಗಜೇಬನು ಚಿಂತೆಗೊಳಗಾದನು. ಹುಂದಿಯ ಮೇಲೆ ಹರಿಹಾಯುವದಕ್ಕಿಂತ ಹೆಚ್ಚಿನ ಕೆಲಸವಾದರೂ ಆತನ ಕೈಯಲ್ಲಿ ಈಗ ಉಳಿದಿದ್ದಿಲ್ಲ; ಆದರೆ ಆತನು ಇಂಥ ಸಣ್ಣಪುಟ್ಟ ಸಂಗತಿಗಳನ್ನು ಮನಸ್ಸಿಗೆ ಹಚ್ಚಿಕೊಂಡು ಸ್ವಸ್ಥವಾಗಿ ಕುಳಿತುಕೊಳ್ಳತಕ್ಕಂಥವನಿದ್ದಿಲ್ಲ. ಆತನು ಕೂಡಲೆ ಮಿಂಚಿಹೋದ ಮಾತಿನ ಸಲುವಾಗಿ ವಿಚಾರಿಸಿ, ತಾನು ಮುಂದೆ ನಡೆಯತಕ್ಕ ಮಾರ್ಗವನ್ನು ಗೊತ್ತುಮಾಡಿಕೊಂಡನು.

ತನ್ನನ್ನು ಬಾದಶಹನು ಉದೇಪುರದ ಬೇಗಮೆಯ ಕಡೆಗೆ ಕಳಿಸಿದ್ದರಿಂದ ಇಂದಿರೆಗೆ ಒಂದು ಬಗೆಯಿಂದ ಸಮಾಧಾನವಾಯಿತು. ನಯನಪಾಲನ ದವಡೆಯೊಳಗಿಂದ ತಾನು ಹ್ಯಾಗೆ ಪಾರಾದೇನೆಂದು ಆಕೆಯು ಚಿಂತಿಸುತ್ತಿದ್ದಳು. ನಯನಪಾಲನು ತನ್ನ ವಿಷಯವಾಗಿ ದುಷ್ಟವಾಸನೆಯನ್ನು ತಾಳಿದ್ದು ಆಕೆಗೆ ಯಾವಾಗೋ ಗೊತ್ತಾಗಿತ್ತು. ಬಾದಶಹನ ರಾಣೀವಾಸದಲ್ಲಿ ತಾನು ದಾಸಿಯಾಗಿ ಹೋಗುವದರಿಂದ ಏನೂ ಅಪಾಯವಾಗದೆಂತಲೂ, ಪ್ರಸಂಗ ಒದಗಿದರೆ ತನ್ನ ಕರ್ತೃತ್ವ ಸಾಮರ್ಥ್ಯದಿಂದ ಇಲ್ಲಿಂದ ತಾನು ತಪ್ಪಿಸಿಕೊಂಡು ಸಹ ಹೋಗಬಹುದೆಂತಲೂ ಆಕೆಯು ನಂಬಿದ್ದಳು. ಸೇವಕರು ಆಕೆಯನ್ನು ಕರೆದೊಯ್ದು ಉದೇಪುರದ ಬೇಗಮೆಯ ಮುಂದೆ ನಿಲ್ಲಿಸಿ "ಈಕೆಯನ್ನು ಬಾದಶಹರು ತಮ್ಮ ಕಡೆಗೆ ದಾಸಿಯೆಂದು ಕಳಿಸಿಕೊಟ್ಟಿದ್ದಾರೆ"ಂದು ಹೇಳಿದರು. ಇಂದಿರೆಯನ್ನು ನೋಡಿದ ಕೂಡಲೆ ಬೇಗಮೆಯು ಕೆಲವು ಹೊತ್ತು ಸುಮ್ಮನೆ ಕುಳಿತುಕೊಂಡಳು. ಇತ್ತ ಇಂದಿರೆಯು ಆಶ್ಚರ್ಯಮಗ್ನಳಾಗಿ ಬೇಗಮೆಯನ್ನು ಎವೆಯಿಕ್ಕದೆ ನೋಡಹತ್ತಿದಳು. ಇಂದಿರೆಯ ಮನಸ್ಸಿನಲ್ಲಿ ಹಲವು

ವಿಚಾರಗಳು ಉತ್ಪನ್ನವಾದವು. ಬೇಗಮೆಯು ರೂಪದಿಂದ ಅಪ್ರತಿಮ ಸುಂದರಿಯಾಗಿದ್ದಳು; ಮತ್ತು ಮೊಗಲರ ಜನಾನಖಾನೆಯಲ್ಲಿ ಆಕೆಯ ಕಾಲಹರಣವಾಗುತ್ತಿದ್ದದ್ದರಿಂದ ಮೊಗಲ ಸ್ತ್ರೀಯರಲ್ಲಿ ಮದದಿಂದ ಉಂಟಾಗುತ್ತಿದ್ದ ಆಲಸ್ಯವು ಆಕೆಯಲ್ಲಿ ಸಂಪೂರ್ಣವಾಗಿ ತುಂಬಿತ್ತು. ಆಕೆಯ ಕಣ್ಣುಗಳು ದುಂದಾಗಿದ್ದಂತೆ ಕಾಣುತ್ತಿದ್ದವು. ಆಗ ಆಕೆಯು ಅಚ್ಚ ಮೊಗಲ ಬೇಗಮೆಯರ ಉಡುಪುತೊಡಪುಗಳನ್ನು ಧರಿಸಿ, ಹಸರುಕಿನಕಾಫಿನ ಕೋಚಿನ ಮೇಲೆ ಹಿಂದಕ್ಕೆ ಆತು ಬಿದ್ದುಕೊಂಡಿದ್ದಳು. ಇಬ್ಬರು ದಾಸಿಯರಲ್ಲಿ ಒಬ್ಬಳು ತಲೆಗಿಂಬಿನ ಹತ್ತರ, ಮತ್ತೊಬ್ಬಳು ಕಾಲದಿಸೆಯಲ್ಲಿ ನಿಂತುಕೊಂಡು ಬಾಳದ ಬೇರಿನ ಬೀಸಣಿಕೆಗಳಿಂದ ಗಾಳಿಯನ್ನು ಹಾಕುತ್ತಿದ್ದರು. ಬೇಗಮೆಯು ಆಗ ಹಸರುಬಣ್ಣದ ಪೋಷಾಕನ್ನು ಹಾಕಿಕೊಂಡು, ಹಸರು ರತ್ನದ ಅಲಂಕಾರಗಳನ್ನೇ ನಖಶಿಖಾಂತವಾಗಿ ಧರಿಸಿದ್ದಳು. ಬೇಗಮೆಯ ಆ ಎಲ್ಲ ವೈಭವವನ್ನೂ, ಠಾಕಠೀಕನ್ನೂ ನೋಡಿ ಇಂದಿರೆಗೆ ಪರಮಾವಧಿ ಆಶ್ಚರ್ಯವಾಯಿತು. ಆ ಆಶ್ಚರ್ಯದ ಭರವು ತಗ್ಗಲು, ಖಿನ್ನತೆಯು ಅದರ ಸ್ಥಳವನ್ನು ಆಕ್ರಮಿಸಿತು. ಆಗ ಆಕೆಯು ಮನಸ್ಸಿನಲ್ಲಿ— "ತಾನು ಉದೇಪುರದ ಮನೆತನಕ್ಕೆ ಹೊಂದಿದವಳೆಂದು ತೋರಿಸುವದಕ್ಕಾಗಿ ಉದೇಪುರಿಯೆಂಬ ಹೆಸರನ್ನಿಟ್ಟುಕೊಂಡ ಈ ರಜಪೂತರ ಹುಡುಗೆಯು, ಮೊಗಲರ ಪದ ತಿಯನ್ನು ಎಷ್ಟು ಸ್ವೀಕರಿಸಿರುತ್ತಾಳಲ್ಲ! ಇಂಥ ಕುಲಗೇಡಿ ಹೆಂಗಸಿನ ದಾಸಿಯಾಗಿ ನಾನು ಇನ್ನು ಬಾಳಬೇಕಾಯಿತು! ದೈವದ ಗತಿಯು ವಿಚಿತ್ರವಾದದ್ದು" ಎಂದು ಮನಸ್ಸಿನಲ್ಲಿ ಅಸಮಾಧಾನಪಡಹತ್ತಿದಳು. ಅಷ್ಟರಲ್ಲಿ ಉದೇಪುರಿಯು ತನ್ನ ಕಡೆಗೆ ನೋಡಹತ್ತಲು, ಇಂದಿರೆಯು ತನ್ನ ದೃಷ್ಟಿಗಳನ್ನು ಬೇರೆಕಡೆಗೆ ಹೊರಳಿಸಿದಳು. ಉದೇಪುರಿಯು ಮುಗುಳುನಗೆಯಿಂದ ಇಂದಿರೆಯನ್ನು ಕುರಿತು— ತರುಣೀ, ಬಾದಶಹನಿಗೆ ನೀನೆಲ್ಲಿ ಸಿಕ್ಕೆ? ನೀನು ಜನ್ಮವಿರುವ ತನಕ ನನ್ನ ಬಳಿಯಲ್ಲಿಯೇ ಇಲ್ಲಿ ಇರಬೇಕಾಗಿರಲು, ನನ್ನನ್ನು ನೋಡಿ ನೀನು ಇಷ್ಟು ಖಿನ್ನಳು ಯಾಕಾಗಿರುತ್ತೀ? ನನ್ನನ್ನು ನೋಡಿ ನೀನು ಮರಗುವೆಯೋ- ಹೊಟ್ಟೇಕಿಚ್ಚು ಪಡುವೆಯೋ? ಎಂದು ಕೇಳಲು, ಮೋರೆಯ ಮುಂದೆ ಸ್ಪಷ್ಟಮಾತಾಡುವ ಸ್ವಭಾವದ ಇಂದಿರೆಯು—ಬೇಗಮ ಸಾಹೇಬರೇ, ನಿಮ್ಮನ್ನು ನೋಡಿ ಮರುಗುವಷ್ಟು ನಾನು ದೊಡ್ಡ ಮನುಷ್ಯಳಲ್ಲ; ಮತ್ತು ಹೊಟ್ಟೆಯಕಿಚ್ಚು ಪಡುವಷ್ಟು ನನ್ನ ಸ್ಥಿತಿಯು ಈಗ ಹೀನ

ತರದ್ದೂ ಆಗಿರುವದಿಲ್ಲ, ಎಂದು ಹೇಳಿದಳು. ಅದಕ್ಕೆ ಉದೇಪುರಿಯು ಸಮಾಧಾನದಿಂದ—ಇಂದಿರೇ, ನಿನ್ನ ಈ ಅಭಿಪ್ರಾಯವು ಕಡೆಯತನಕ ಸ್ಥಿರವಾಗಿರಲಿ. ನಿನ್ನ ವೃತ್ತಾಂತವೇನು ? ನೀನು ಬಾದಶಹನಿಗೆ ಹ್ಯಾಗೆ ಸಿಕ್ಕೆಯೆಂಬದನ್ನು ನನ್ನ ಮುಂದೆ ಹೇಳಲಿಲ್ಲ ? ಇತ್ತ ನನ್ನ ಬಳಿಯಲ್ಲಿ ಕುಳಿತುಕೊಂಡು ಯಾವತ್ತು ಸಂಗತಿಯನ್ನು ಹೇಳು. ಅಷ್ಟರಲ್ಲಿ ನಿನಗೆ ಯಾವ ಕೆಲಸ ಹೇಳಬೇಕೆಂಬದನ್ನು ಕುರಿತು ನಾನು ವಿಚಾರಮಾಡುತ್ತೇನೆ, ಎಂದು ಹೇಳಿದಳು. ಅದಕ್ಕೆ ಇಂದಿರೆಯು ನಿಂತಸ್ಥಳದಿಂದಲೇ ಬೇಗಮೆಯನ್ನು ಕುರಿತು—ಬೇಗಮುಸಾಹೇಬರೇ, ನನ್ನ ವೃತ್ತಾಂತವನ್ನು ನಿಮ್ಮ ಮುಂದೆ ಹೇಳುವದೇನು ? ದೈವದ ಘೋರತರವಾದ ಪ್ರವಾಹದ ಎಳತಕ್ಕೆ ಸಿಕ್ಕು ನಾನು ಇಲ್ಲಿಗೆ ಬಂದು ಬಿದ್ದೆನು. ಇದಕ್ಕೂ ಹೆಚ್ಚಿಗೆ ಏನು ಹೇಳಲಿ, ಎಂದು ತಟ್ಟನೆ ಉತ್ತರಕೊಟ್ಟಳು. ಅದಕ್ಕೆ ಉದೇಪುರಿಯು— ಯಾರಿಗಾದರೂ ಪ್ರಸಂಗಗಳು ದೈವಯೋಗದಿಂದಲೇ ಒದಗುತ್ತವೆ; ಅಂದಬಳಿಕ ನೀನು ಹೆಚ್ಚಿಗೆ ಹೇಳಿದ್ದೇನು ? ನೀನು ಹ್ಯಾಗೆ ಸಿಕ್ಕೆಯೆಂಬದನ್ನು ಸ್ಪಷ್ಟವಾಗಿ ಹೇಳಬಾರದೆ ? ಎಂದು ಕೇಳಲು, ಇಂದಿರೆಯು— ಬೇಗಮುಸಾಹೇಬರೇ, ನಾನು ಸ್ಪಷ್ಟವಾಗಿ ಹೇಳುವದರಿಂದ ನಿಮಗೆ ಲಾಭವಾಗುವದು ಅಷ್ಟರಲ್ಲಿಯೇ ಇರುತ್ತವೆ. ನನ್ನಂತೆ ಹಲವು ರಜಪೂತ ತರುಣಿಯರು ಒಂದಿಲ್ಲೊಂದು ಬಗೆಯಿಂದ ಬಾದಶಹನ ರಾಣೀವಾಸವನ್ನು ಸೇರಿರುತ್ತಾರಷ್ಟೆ? ಅದರಂತೆ ನಾನೂ ನಿಮ್ಮ ಸನ್ನಿಧಿಯನ್ನು ಹೊಂದಿರುತ್ತೇನೆ, ಎಂದು ಉತ್ತರಕೊಟ್ಟಳು.

ಯಾವಸಂಕೋಚವೂ, ನಯಭಯದ ಗಂಧವೂ ಇಲ್ಲದ ಇಂದಿರೆಯು ಹೀಗೆ ವೈ ಚಳಿಬಿಟ್ಟು ಮಾತಾಡುವದನ್ನು ನೋಡಿ ಉಳಿದ ದಾಸಿಯರು ಆಶ್ಚರ್ಯಪಟ್ಟರು. ಅವರಲ್ಲಿ ಒಬ್ಬಳಂತು ಇಂದಿರೆಯನ್ನು ಎಚ್ಚರಗೊಳಿಸಬೇಕೆಂದು ನಿಶ್ಚಯಿಸಿ “ ಏ ಲವಂಡಿ ” ಎಂದು ಇಂದಿರೆಯ ಕಡೆಗೆ ಕೆಟ್ಟಗಣ್ಣಿನಿಂದ ನೋಡಹತ್ತಿದಳು. ಆಕೆಯು ಇನ್ನು ಏನೋ ಮಾತಾಡತಕ್ಕವಳು, ಅಷ್ಟರಲ್ಲಿ ಬೇಗಮೆಯು ವಕ್ರದೃಷ್ಟಿಯಿಂದ ಆ ದಾಸಿಯನ್ನು ನಿಷೇಧಿಸಿ ಸುಮ್ಮನಿರಿಸಿ, ಇಂದಿರೆಯನ್ನು ಕುರಿತು— “ ನೀನು ಇಲ್ಲಿಗೆ ಹ್ಯಾಗೆ ಬಂದೆಯೆಂಬದನ್ನು ಹೇಳುಬಾ. ನಿನ್ನನ್ನು ನೋಡಿ ನನಗೆ ಕೌತುಕವಾಗುತ್ತದೆ ” ಎಂದು ನುಡಿದಳು. ಅದಕ್ಕೆ ಇಂದಿರೆಯು— ಬೇಗಮುಸಾಹೇಬರೇ, ಐಶ್ವರ್ಯ

ಮಗ್ನರಾಗಿರುವ ನೀವು ನಮ್ಮಂಥ ಅನಾಥ ಪ್ರಾಣಿಗಳನ್ನು ನೋಡಿ, ಕೌತುಕ ಪಡುವದರಲ್ಲಿ ಆಶ್ಚರ್ಯವಿಲ್ಲ. ಸುಂದರ ಸ್ತ್ರೀಯರು ಬಾದಶಹನ ಕಣ್ಣಿಗೆ ಬೀಳದಿದ್ದಗೆ ಉಪಾಯವಿಲ್ಲ; ಬಿದ್ದರೆ ಅವರು ರಾಣೀವಾಸವನ್ನು ಸೇರಿದ ರೆಂತಲೇ ತಿಳಿಯಬೇಕು. ಸುಂದರ ಸ್ತ್ರೀಯರ ಅಭಿಲಾಷೆಯು ಸಾಧಾರಣ ವಾಗಿ ಪುರುಷಮಾತ್ರರನ್ನು ಬಿಟ್ಟದ್ದಲ್ಲವೆಂದು ಹೇಳಬಹುದು. ಕಾರಣಾಂತರ ದಿಂದ ನಾನು ಬಾದಶಹನ ಕಣ್ಣಿಗೆ ಬೀಳಲು, ಆತನು ನನ್ನನ್ನು ರಾಣೀವಾ ಸಕ್ಕೆ ಕಳಿಸಿದನು. ಇದಕ್ಕೂ ಹೆಚ್ಚಿಗೆ ನಾನೇನು ಹೇಳಲಿ, ಎನ್ನಲು, ಬೇಗಮೆಯು ಇಂದಿರೆಯ ಮಾತಿನ ಅರ್ಥವನ್ನು ಕುರಿತು ಕ್ಷಣಹೊತ್ತು ವಿಚಾ ರಿಸಿ, ಇಂದಿರೆಯನ್ನು ಸೂಕ್ಷ್ಮದೃಷ್ಟಿಯಿಂದ ನೋಡುತ್ತ, ಆಕೆಯ ಚಲ್ವಿಕೆಗೆ ತನ್ನ ಚಲ್ವಿಕೆಯನ್ನು ಒರೆಹಚ್ಚಿ ನೋಡಹತ್ತಿದಳು. ಇಂದಿರೆಯ ಮೋಹಕ ಸ್ವರೂಪವು ಬೇಗಮೆಯ ಚಿತ್ತದಲ್ಲಿ ಬಿಂಬಿಸಿ, ಆಕೆಯ ಮನಸ್ಸು ಬಾದಶಹನ ವಿಷಯವಾಗಿ ಕಲುಷಿತವಾಗಿ ಅಸ್ವಸ್ಥವಾಯಿತು. ಬಾದಶಹನು ಇಂದಿರೆ ಯನ್ನು ರಾಣೀವಾಸಕ್ಕೆ ಯಾವ ಉದ್ದೇಶದಿಂದ ಕಳಿಸಿರಬಹುದೆಂದು ಆಕೆಯು ಚಿಂತಿಸಹತ್ತಿದಳು. ಈ ತರುಣಿಯು ಆಡಿದ ಮಾತು ನಿರರ್ಥಕವಾದದ್ದಲ್ಲ ವೆಂತಲೂ, ಬಾದಶಹನು ಪಾಪಬುದ್ಧಿಯಿಂದಲೇ ಈಕೆಯನ್ನು ಇಲ್ಲಿಗೆ ಕಳಿಸಿರ ಬಹುದೆಂತಲೂ ಬೇಗಮೆಯು ಕಲ್ಪಿಸಹತ್ತಿದಳು. ಅಷ್ಟರಲ್ಲಿ ಬಾದಶಹರು ಬಂದರೆಂದು ದಾಸಿಯರು ಬೇಗಮೆಗೆ ಹೇಳಿದರು. ಅದನ್ನು ಕೇಳಿಯಂತೂ ಉದೇಪುರಿಯ ಚಿತ್ತವು ಮತ್ತಿಷ್ಟು ಅಸ್ವಸ್ಥವಾಯಿತು. ಬಾದಶಹನು ಹೀಗೆ ಅಕಾಲದಲ್ಲಿ ರಾಣೀವಾಸಕ್ಕೆ ಬರಲಿಕ್ಕೆ ಇಂದಿರೆಯು ಆತನ ಮನಸ್ಸನ್ನು ಎಳ ಕೊಂಡದ್ದೇ ಕಾರಣವೆಂದು ಆಕೆಯು ನಿಶ್ಚಯಿಸಿದಳು. ಆಕೆಯ ಚಿತ್ತವು ಮತ್ತಿಷ್ಟು ಕ್ಷುಬ್ಧವಾಯಿತು. ಇಂದಿರೆಯು ಒಳಗೆ ಹೋದಳು. ಅಷ್ಟರಲ್ಲಿ ಬಾದಶಹನು ಬೇಗಮೆಯ ಬಳಿಗೆ ಬಂದನು; ಆದರೆ ಬೇಗಮೆಯು ಆತ ನನ್ನು ಎಂದಿನಂತೆ ಪ್ರೇಮದಿಂದ ಉಪಚರಿಸದೆ ದುಮುದುಮು ಮೋರೆ ಉರಿ ಯುತ್ತಿರಲು, ಬಿಮ್ಮನೆ ಬಿಗಿದುಕುಳಿತುಕೊಂಡಿದ್ದಳು. ಬಾದಶಹನು ಇದನ್ನು ಲಕ್ಷಿಸದೆ ಬೇಗಮೆಯನ್ನು ಕುರಿತು— ಏ ಪ್ಯಾರಿ, ನಾನು ಇಂದು ನಿನ್ನಬಳಿಗೆ ಒಬ್ಬ ಹೊಸದಾಸಿಯನ್ನು ಕಳಿಸಿ ಕೊಟ್ಟಿದ್ದೇನಲ್ಲ, ಆಕೆಯು ಹ್ಯಾಗಿರುವಳು? ಎಲ್ಲಿ ಅವಳು, ಇಲ್ಲಿ ಕಾಣುವದಿಲ್ಲ ? ನೀನು ಅವಳನ್ನು ತೀರ ಹತ್ತಿರ ಕುಳ್ಳಿರಿಸಿ

ಕೊಂಡಿರಬಹುದೆಂದು ನುಡಿದ್ದೆನು. ನಾನು ಅವಳನ್ನು ಕಾಣಬೇಕಾಗಿದೆ; ಆಕೆಯೊಡನೆ ಕೆಲವು ಮಾತಗಳನ್ನು ಆಡಬೇಕಾಗಿದೆ. ಆಕೆಯನ್ನು ಇಲ್ಲಿಗೆ ಕಳಿಸಿಕೊಟ್ಟಿದ್ದು ಯಾತಕ್ಕೆ ? ಎಂದು ಕೇಳಿದನು.

ಬಾದಶಹನ ಮುಖದಿಂದ ಹೊರಟ ಒಂದೊಂದು ಶಬ್ದಗಳು ಬೇಗ ಮೆಯ ಕಿವಿಯಲ್ಲಿ ಪ್ರವೇಶಿಸಿದಂತೆ ಆಕೆಯಸಂಶಯವು ಹೆಚ್ಚುತ್ತ ಹೋಯಿತು. ಆಕೆಯು, ಬಾದಶಹನ ಸಂಗಡ ಮಾತಾಡಲಿಕ್ಕಿಲ್ಲೆಂದು ನಿಶ್ಚಯಿಸಿರುವಂತೆ ಕುಳಿತುಕೊಂಡಿದ್ದಳು. ಆಕೆಯ ಈ ಕೃತಿಯ, ಹಾಗು ಮೂಕಭಾವದ ಅರ್ಥವು ಬಾದಶಹನಿಗೆ ತಿಳಿಯಲೊಲ್ಲದು. ಆಗ ಆತನು ಬೇಗಮೆಗೆ— " ಏ ಪ್ಯಾರೀ, ಮಾತಾಡುವದಿಲ್ಲವೇಕೆ ? ಆ ದಾಸಿಯು ಎಲ್ಲಿ ಇದ್ದಾಳೆ ? " ಎಂದು ಮತ್ತೆ ಕೇಳಿದನು. ಆಗ ಆಕೆಯು ವಕ್ರದೃಷ್ಟಿಯಿಂದ ಸುಮ್ಮನೆ ಬಾದಶಹನ ಕಡೆಗೆ ನೋಡಿದಂತೆ ಮಾಡಿ—ಅಷ್ಟು ಅವಶ್ಯವಿದ್ದರೆ ಆಕೆಯನ್ನು ಅಲ್ಲಿ ಎಲ್ಲಿಯಾದರೂ ಇಟ್ಟುಕೊಂಡು ಕೇಳುವದನ್ನು ಕೇಳಿಕೊಳ್ಳಲಿಲ್ಲವೇಕೆ ? ಆಕೆಯನ್ನು ಇತ್ತ ಕಳಿಸಿಕೊಡಬೇಕು, ಬೆನ್ನ ಹಿಂದೆಯೇ ಬರಬೇಕು. ಇದೇನು ಚಂದ, ಎಂದು ಕೇಳಲು, ಔರಂಗಜೇಬನು— ಪ್ರಿಯೇ, ಚಂದಕ್ಕಾಗಿ ನಾನು ಈಗ ಬಂದಿರುವದಿಲ್ಲ. ಆ ದಾಸಿಯು ಸಾಧಾರಣ ಮನುಷ್ಯಳಲ್ಲ. ಅವಳಿಂದ ಹಲವು ಸಂಗತಿಗಳನ್ನು ಕೇಳಕೊಳ್ಳಬೇಕಾಗಿದೆ. ನಾನು ಇಷ್ಟು ದಿವಸ ಜೋಧಪುರದ ಮನೆತನವನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂತಲೂ, ಅದರ ಯೋಗದಿಂದ ರಜಪೂತರ ಕಸುವನ್ನು ಕಡಿಮೆ ಮಾಡಬೇಕೆಂತಲೂ ಯೋಚಿಸಿದ್ದನ್ನು ನೀನು ಬಲ್ಲೆಯಷ್ಟೆ ? ಆ ಮಾತು ಎಷ್ಟರ ಮಟ್ಟಿಗೆ ಸಾಧ್ಯವಾಗಿರುತ್ತದೆಂಬದರ ನಿರ್ಣಯವು ಈ ದಾಸಿಯ ಯೋಗದಿಂದ ಆಗಬಹುದಾಗಿದೆ. ಏ ಉದೇಪುರೀ, ಯಾವದೊಂದು ಕೆಲಸಕ್ಕೂ ನಿನ್ನ ಸಹಾಯವು ನನಗೆ ಅವಶ್ಯವಾಗಿದೆ. ಆದಕ್ಕಾಗಿಯೇ ಯಾವತ್ತು ರಾಜ್ಯಕಾರಭಾರವನ್ನು ಇಲ್ಲಿಯೇ ಕುಳಿತು ಮಾಡುತ್ತಿರುತ್ತೇನೆ; ಆದರೆ ಈ ದಿನ ನೀನು ಸಿಟ್ಟಾದವಳ ಹಾಗೆ ಯಾಕೆ ಮಾಡುತ್ತೀ ? ನನ್ನನ್ನು ಕಣ್ಣೆತ್ತಿ ನೋಡದಂಥ, ನನ್ನೊಡನೆ ಬಾಯಿಬಿಚ್ಚಿ ಮಾತಾಡದಂಥ ಪ್ರಸಂಗವೇನು ಒದಗಿದೆ ? ಕಾರಣವಿಲ್ಲದೆ ಸಿಟ್ಟಾಗುವ ನಿನಗೆ ಏನೆನ್ನಬೇಕು ? ಆ ದಾಸಿಯು ಜಸವಂತಸಿಂಗನ ಒಬ್ಬ ಪ್ರಸಿದ್ಧ ಸ್ವಾಮಿಭಕ್ತ ಸರದಾರನ ತಂಗಿಯಾಗಿದ್ದಾಳೆ. ಆಕೆಯೇ ನಯನ

ಪಾಲನ ಕಣ್ಣಿನಲ್ಲಿ ಮಣ್ಣು ಹಾಕಿ ಚಂದ್ರಾವತೀ ರಾಣಿಯನ್ನು ಪುತ್ರ ಸಮೇತ ವಾಗಿ ಕಾಬೂಲದಿಂದ ದಾಟಿಸಿದಳು; ಮತ್ತು ತನ್ನ ಪರಿಣಾಮವೇನಾದೀ ತೆಂಬವರ ಚಿಂತೆಯಿಲ್ಲದೆ ಚಂದ್ರಾವತೀರಾಣಿಯ ಉಡುಪುತೊಡಪುಗಳನ್ನು ಧರಿಸಿ ಆಕೆಯ ಸ್ಥಳದಲ್ಲಿ ಕುಳಿತುಕೊಂಡಳು. ನೀನೇ ನೋಡು, ನೀನೇ ಹೇಳು; ಆ ಹುಡುಗೆಯಲ್ಲಿ ಏನಾದರೂ ವಿಶೇಷ ಗುಣವಿರುತ್ತದೋ ಇಲ್ಲವೋ ಯೆಂಬದನ್ನು. ನಯನಪಾಲನನ್ನಂತು ನಾನು ಈಗ ಕತ್ತಲಕೋಣೆಯಲ್ಲಿ ಹಾಕಿಸಿಬಿಟ್ಟಿರುತ್ತೇನೆ. ತೀರಾ ಕೆಲಸಕ್ಕೆಬಾರದ ಮನುಷ್ಯನವನು. ಆ ಠಕ್ಕನು ಈ ದಾಸಿಯ ಧೈರ್ಯ-ಚಾತುರ್ಯಗಳನ್ನು ನೋಡಿ, ಈಕೆಯ ರೂಪಕ್ಕೆ ಮರುಳಾಗಿ ಈಕೆಯನ್ನು ತನ್ನ ಮನೆಯಲ್ಲಿಟ್ಟುಕೊಂಡು, ನನ್ನ ಮುಂದೆ ಓಡಿಹೋದಳೆಂದು ಹೇಳಿ, ನನ್ನನ್ನು ವಂಚಿಸಬೇಕೆಂದುಮಾಡಿದ್ದನು. ಆದರೆ ನಯನಪಾಲನ ಜನರ ಮುಖಾಂತರ ಅವನ ಈ ಮೋಸವು ಬಯಲಿಗೆ ಬಿದ್ದಿತು. ಈಕೆಯ ಕೃತಿಯೂ, ರೂಪವೂ ಯಾರನ್ನಾದರೂ ಮರಳುಮಾಡುವ ಹಾಗಿವೆಯೆಂಬದರಲ್ಲಿ ಸಂಶಯವೇನು ?

ಬಾದಶಹನು ಸಹಜವಾಗಿ ಆಡಿದ ಮಾತುಗಳು ಬೇಗಮೆಗೆ ರುಚಿಸ ಲಿಲ್ಲ. ಆಕೆಯು ಬಾದಶಹನ ಮಾತಿಗೆ ಹೂಯೆಂದು ಸಹ ಅನ್ನುತ್ತಿದ್ದಿಲ್ಲ. ಇದರ ಕಾರಣವು ಬಾದಶಹನಿಗೆ ತಿಳಿಯಲೊಲ್ಲದು. ಆ ದಾಸಿಯು ಎಲ್ಲಿದ್ದಾಳೆ, ಬೇಗನೆ ಕರೆಸು ಎಂದು ಆತನು ಮೇಲೆ ಮೇಲೆ ಅನ್ನುತ್ತಿದ್ದನು; ಆದರೆ ಬೇಗಮೆಯು ಪಿಟ್ಟೆಂದು ಮಾತಾಡದೆ ಸುಮ್ಮನೆ ಕುಳಿತಿದ್ದಳು. ಆಗ ಬಾದ ಶಹನು ತಾನೇ ಒಬ್ಬ ದಾಸಿಯನ್ನು ಕರೆದು ಇಂದಿರೆಯನ್ನು ಕರತಾರೆಂದು ಹೇಳಿದನು. ಇದಂತು ಬೇಗಮೆಗೆ ತಡೆಯಲೇ ಇಲ್ಲ. "ನನ್ನ ತಲೆ ನೋಯುತ್ತದೆ, ಕುಳಿತುಕೊಳ್ಳುವಹಾಗಿಲ್ಲ, ಹೋಗಿ ಮಂಚದಮೇಲೆ ಬಿದ್ದು ಕೊಳ್ಳುತ್ತೇನೆ," ಎಂದು ನುಡಿದು, ಚಟ್ಟನೆ ಎದ್ದು ಹೋಗ ಹೋಗುತ್ತಾ—ಆಕೆಯನ್ನು ಏನಾದರೂ ಕೇಳಬೇಕಾಗಿದ್ದರೆ ಇಲ್ಲಿ ಯಾಕೆ ಕೇಳಬೇಕು ? ಎರಡನೆಯ ಕಡೆಗೆಲ್ಲಿಗಾದರೂ ಕರಕೊಂಡುಹೋಗಿ ಕೇಳಿದ ರಾಯಿತು." ಎಂದು ಅಕ್ಕಸದಿಂದ ನುಡಿದಳು; ಆದರೆ ಬಾದಶಹನು ಈ ಮಾತುಗಳನ್ನು ಪೂರಾ ಕೇಳಿದಂತೆ ತೋರಲಿಲ್ಲ; ಯಾಕಂದರೆ ಆತನ ಲಕ್ಷವು ಎದುರಿಗೆ ಬರುತ್ತಿರುವ ಇಂದಿರೆಯ ಕಡೆಗೆ ಹೋಗಿತ್ತು. ಇಂದಿರೆಯು

ಬರುತ್ತಿರುವದನ್ನು ನೋಡಿ ಬೇಗಮೆಯು ವ್ಯಾಕುಲಪಟ್ಟು ತನ್ನ ಹಿಂದೆ ಇದ್ದ ಬಾಗಿಲಿನಿಂದ ಆಚೆಯ ಕಡೆಯ ರಂಗಮಹಾಲಿಗೆ ಹೊರಟಳು; ಆದರೆ ಆಕೆಯನ್ನು ಮಾತ್ಸರ್ಯವು ಮುಂದಕ್ಕೆ ಹೋಗಗೊಡಲಿಲ್ಲ. ಇಂದಿರೆಯ ಸಂಗಡ ಬಾದಶಹನು ಏನೇನು ಮಾತಾಡುವನೆಂಬದನ್ನು ಕದ್ದು ನೋಡುವದಕ್ಕಾಗಿ ಆಕೆಯು ಬಾಗಿಲ ಪಡಕುಗಳನ್ನು ಇಕ್ಕಿದಂತೆ ಮಾಡಿ, ಅವುಗಳ ಸಂದಿಯೊಳಗಿಂದ ಹೊರಗೆ ನಡೆಯಬೇಕಾಗಿರುವದನ್ನು ನೋಡಹತ್ತಿದಳು. ಇಷ್ಟಾದರೂ ಬಾದಶಹನಿಗೆ ಉದೇಪುರಿಯ ಮನೋಭಾವವು ತಿಳಿಯಲಿಲ್ಲ. ತಿಳಿದಿದ್ದರೆ ಅತ್ತಕಡೆಗೆ ಆತನು ಲಕ್ಷವನ್ನಾದರೂ ಕೊಡುತ್ತಿದ್ದಿಲ್ಲ. ಆ ಧೂರ್ತನು ಬೇಗಮೆಯ ಭಾವವನ್ನು ಅರಿತು, ಮಜಲು ಎಲ್ಲಿಗೆ ಬರುತ್ತದೆ ನೋಡಬೇಕೆಂದು ಮೋಜಿಗೆ ಹೀಗೆ ಮಾಡಿದ್ದರೂ ಮಾಡಿರಬಹುದು. ಔರಂಗಜೇಬ ಬಾದಶಹನು ಎಂಥ ಹಟಮಾರಿಯೆಂಬದನ್ನು ಇತಿಹಾಸಜ್ಞರು ಬಲ್ಲರು. ಉದೇಪುರೀಬೇಗಮೆಯ ಮೇಲೆ ಆತನ ಪ್ರೇಮವು ಅತಿಶಯವಾಗಿದ್ದರೂ, ಆ ಹಟಮಾರಿಯು ತನ್ನ ಕಾರ್ಯ ಸಾಧನದಲ್ಲಿ ಆ ಬೇಗಮೆಯ ಮನಸ್ಸನ್ನು ನೋಯಿಸಲಿಕ್ಕೆ ಸ್ವಲ್ಪವಾದರೂ ಹಿಂದೆಮುಂದೆ ನೋಡಲಿಲ್ಲ. ಮನಸ್ಸಿಗೆ ಬಂದದ್ದನ್ನುಮಾಡಿಯೇ ತೀರುವದು ಔರಂಗಜೇಬನ ಸ್ವಭಾವಗುಣವಾಗಿತ್ತು. ಉದೇಪುರಿಯು ಎದ್ದು ಹೋದದ್ದನ್ನು ಆತನು ಲಕ್ಷಿಸಲೇ ಇಲ್ಲ. ಇಂದಿರೆಯು ಬೇಗನೆ ಬರಲಿಲ್ಲೆಂದು ಆಕೆಯನ್ನು ಕರೆಯಲಿಕ್ಕೆ ಮತ್ತೊಬ್ಬ ದಾಸಿಯನ್ನು ಕಳಿಸಿದನು. ಹೀಗೆ ಒಬ್ಬರಮೇಲೊಬ್ಬರಂತೆ ನೂರವರು ನಾಲ್ವರು ದಾಸಿಯರು ಕರೆಯಲಿಕ್ಕೆ ಬಂದದ್ದರಿಂದ, ಇಂದಿರೆಯು ಒಮ್ಮೆ ಬಾದಶಹನ ಬಳಿಗೆ ಬಂದಳು. ಆಕೆಯು ಬಂದವಳು ದೂರ ಒತ್ತಟ್ಟಿಗೆ ಮರ್ಯಾದೆಯಿಂದ ನಿಂತುಕೊಂಡಳು. ಈಗ ಆಕೆಯು ಜನಾನಖಾನೆಯೊಳಗಿನ ದಾಸಿಯಾಗಿದ್ದದ್ದರಿಂದ, ಬಾದಶಹನ ಮುಂದೆ ತೀರ ಬಗ್ಗಿ ಕುರ್ನಿಸಾತವನ್ನು ಮಾಡಬೇಕಾಗಿತ್ತು; ಆದರೆ ಇಂದಿರೆಯು ಹಾಗೇನು ಮಾಡದೆ ಮರ್ಯಾದೆಯಿಂದ ಸುಮ್ಮನೆ ನಿಂತುಕೊಂಡಳು ಮಾತ್ರ. ಈ ಸಂಗತಿಯು ಔರಂಗಜೇಬನ ಕಾಕದೃಷ್ಟಿಗೆ ಬೀಳದೆ ಹೋಗಲಿಲ್ಲ. ಆಗ ಆತನು ಇಂದಿರೆಯನ್ನು ಕುರಿತು—ಕ್ಯಾಬೇ ಲವಂಡೀ, ನೀನು ಎಲ್ಲಿರುತ್ತೀ, ಯಾರ ಮುಂದೆ ನಿಂತುಕೊಂಡಿರುತ್ತೀ ಎಂಬುದರ ಅರಿವು ನಿನಗೆ ಇರುವದಿಲ್ಲವೇನು? ಎಂದು ಕೇಳಲು,

ಇಂದಿರೆಯು—

ಇಂದಿರೆ— ಹಾಜೀ, ಅರಿವು ಇರದೇನು ಮಾಡೀತು? ನಾನು ಆಲಮಗೀರ ಬಾದಶಹನ ಎದುರಿಗೆ ನಿಂತುಕೊಂಡಿರುವೆನೆಂದು ತಿಳಿದಿರುವೆನು.

ಔರಂಗಜೇಬ—ಹಾಗಾದರೆ ಕುರ್ನಿಸಾತಮಾಡಿ ದಾಸಿಯಂತೆ ಅತ್ಯಂತ ಲೀನತೆಯಿಂದ ಬಾಗಿ ನಿಂತುಕೊಳ್ಳಲೊಲ್ಲೆಯೇಕೆ ?

ಇಂದಿರೆ— ನಾನು ದಾಸಿಯಲ್ಲ, ನಾನಾಗಿಯೇ ತಮ್ಮ ದರ್ಶನಕ್ಕೆ ಇಲ್ಲಿಗೆ ಬಂದವಳೂ ಅಲ್ಲ. ಬಾದಶಹನಿರಲಿ, ಬೇರೆ ಯಾವನಾದರೂ ಇರಲಿ, ಅಚ್ಚ ರಜಪೂತ ಸ್ತ್ರೀಯರು ಮುಸಲ್ಮಾನರ ಮುಂದೆ ಎಂದೂ ಬಾಗುತ್ತಿರುವದಿಲ್ಲ.

ಇಂಥ ದಿಟ್ಟತನದ ತಿರಸ್ಕಾರದ ಮಾತುಗಳನ್ನು ಆಡಿಸಿಕೊಳ್ಳುವ ರೂಢಿಯು ಔರಂಗಜೇಬನಿಗೆ ಎಷ್ಟು ಮಾತ್ರವೂ ಇದ್ದಿಲ್ಲ. ಈ ಮಾತುಗಳನ್ನು ಕೇಳಿದ ಕೂಡಲೆ ಆತನು ಉಗುರಿನಿಂದ ನಡನೆತ್ತಿಯವರೆಗೆ ಉರಿಯು ಹತ್ತಿದನು. ಆತನ ಕಣ್ಣುಗಳು ಕೆಂಡದಂತಾದವು. ಅವುಗಳಿಂದ ಕಿಡಿಗಳು ಹಾರುತ್ತಿರುವಂತೆ ಭಾಸವಾಗುತ್ತಿತ್ತು. ಆತನು ಕ್ಷಣಹೊತ್ತು ಸುಮ್ಮನೆ ಕುಳಿತುಕೊಂಡನು. ಆ ಮೇಲೆ ಆತನು ಒಮ್ಮೆಲೆ ಇಂದಿರೆಯನ್ನು ಕುರಿತು— ಏ ಲವಂಡೀ, ನೀನು ಯಾರೆಂದು ತಿಳಿದಿರುತ್ತೀ, ಯಾರ ಸಂಗಡ ಮಾತಾಡುತ್ತೀ .... ಎಂದು ನುಡಿಯುತ್ತಿರಲು, ಆ ಪ್ರಶ್ನೆಗೆ ಉತ್ತರವೋ ಎನ್ನುವಂತೆ ಇಂದಿರೆಯು ಸ್ವಲ್ಪ ನಕ್ಕಳು. ಅದನ್ನು ನೋಡಿ ಬಾದಶಹನು ಅತ್ಯಂತ ಕ್ರುದ್ಧನಾಗಿ—

ಔರಂಗಜೇಬ— ನೀನು ಚಂದ್ರಾವತೀರಾಣಿಯನ್ನು ಓಡಿಸಿ ಕಳಿಸಿದೆಯೋ? ಹಾಗೆ ಮಾಡಿದರೆ ಮುಂದೆ ನಿನ್ನ ಗತಿಯೇನಾದೀತೆಂದು ಮೊದಲೇ ವಿಚಾರಮಾಡಿದ್ದೆಯಾ ?

ಇಂದಿರೆ—ಗತಿಯು ಏನಾದೀತೆಂಬದನ್ನು ವಿಚಾರಿಸುವ ಅವಶ್ಯವಿದ್ದಿಲ್ಲ. ಪ್ರಾಣಹೋದರೂ ಹಿಡಿದ ಕೆಲಸವನ್ನು ಕೊನೆಗಾಣಿಸದೆ ಬಿಡಬಾರದೆಂದು ನಿಶ್ಚಯಿಸಿತ್ತು ಮಾತ್ರ. ಅಂದಬಳಿಕೇನು ? ಅಷ್ಟರಪೂರತೆಗಾಗಿ ಮಾಡಬೇಕಾದಷ್ಟು ವಿಚಾರವನ್ನು ಮಾಡಿದ್ದೆನು.

ಔರಂಗಜೇಬ— ಅದೇನು ವಿಚಾರಮಾಡಿರುವೆ ಹೇಳು ನೋಡುವಾ.

ಇಂದಿರೆ—ಬೇರೆ ವಿಚಾರವೇನು ? ಬಂದ ಪ್ರಸಂಗಗಳಿಗೆ ಎದೆಗೊಟ್ಟು ನಿಲ್ಲಬೇಕೆಂಬದೇ ವಿಚಾರವು.

ಔರಂಗಜೇಬ— ಒಟ್ಟಿಗೆ ನಾವು ಇಲ್ಲಿ ನಿನಗೆ ಏನು ಮಾಡಿದರೂ ಅನುಭವಸಲಿಕ್ಕೆ ನೀನು ಸಿದ್ಧಳಿರುತ್ತೀಯೆಂದಹಾಗಾಯಿತು. ಹೇಳು ಹಾಗಾದರೆ, ನಿನ್ನನ್ನು ಒಬ್ಬ ಸಿದ್ದೀಮನುಷ್ಯನಿಗೆ ಲಗ್ನ ಮಾಡಿಕೊಟ್ಟರೆ ಏನು ಮಾಡುತ್ತೀ ?

ಇಂದಿರೆ— ಮಾಡುವದೇನು ? ದೈವದಲ್ಲಿದ್ದದ್ದನ್ನು ಅನುಭವಸಲೇಬೇಕು. ಆದರ ಮುಂದೆ ಯಾರ ಆಟವು ನಡೆಯುವದು ?

ಔರಂಗಜೇಬ—ಇಂಥ ತತ್ವಜ್ಞಾನವನ್ನು ನನ್ನ ಮುಂದೆ ಹೇಳಬೇಡ. ನನ್ನ ಮನಸ್ಸಿನಲ್ಲಿ ಬಂದದ್ದನ್ನು ನಾನು ಮಾಡುತ್ತಿರುತ್ತೇನೆ. ಅಲ್ಲಿ ದೈವಗಿಯ್ವದಕಟ ಕಟಿಯು ಸಾಗುವದಿಲ್ಲ.

ಇಂದಿರೆ ( ನಕ್ಕು )— ತಮ್ಮ ಮನಸ್ಸಿನಲ್ಲಿ ಹೀಗೆ ಮಾಡಬೇಕೆಂಬ ವಿಚಾರವು ಹುಟ್ಟಲಿಕ್ಕಾದರೂ ದೈವವೇ ಕಾರಣವಲ್ಲವೆ ?

ಈ ಮಾತಿನಿಂದ ಬಾದಶಹನು ನಿರುತ್ತರನಾಗಿ ಇಂದಿರೆಯನ್ನು ಕುರಿತು— ಇಂದಿರೇ, ನೀನು ನಿನ್ನ ಜೀವವನ್ನು ಇಂಥ ಗಂಡಾಂತರದಲ್ಲಿ ಕೆಡವಿದ ಕಾರಣವಾದರೂ ಏನು ?

ಇಂದಿರೆ—ಸ್ವಾಮಿಭಕ್ತಿ, ಕೃತಜ್ಞತೆ ಇವುಗಳ ಹೊರತು ಬೇರೆ ಕಾರಣವೇನಿರಬೇಕು ? ವಂಶಪರಂಪರೆಯಿಂದ ನಾವು ಯಾವನ ಅನ್ನದಿಂದ ಬೆಳೆದೆವೋ ಅವನು ಸಂಕಟದಲ್ಲಿ ಬಿದ್ದಿರಲು, ನಾವು ಸಹಾಯ ಮಾಡದಿರುವದು ನ್ಯಾಯವೇ ? ಸಹಾಯ ಮಾಡುವದು ನಮ್ಮ ಕರ್ತವ್ಯವಾಗಿರುವದು.

ಔರಂಗಜೇಬ—ರಾಣಿಯನ್ನೂ, ರಾಜಪುತ್ರನನ್ನೂ ಇತ್ತ ದರ್ಬಾರಕ್ಕೆ ಕರಕೊಂಡು ಬಂದಿದ್ದರೆ ಏನು ಅಪಾಯವಾಗುತ್ತಿತ್ತು ?

ಇಂದಿರೆ— ಅಪಾಯವಾಗುತ್ತಿತ್ತೆಂಬದರಲ್ಲಿ ಸಂಶಯವೇಕೆ ? ಬಾದಶಹನೇ, ನಿನ್ನಂಥ ಕಪಟಿಯೂ, ಕೃತಘ್ನನೂ ಮತ್ತೊಬ್ಬನಿರಬಹುದೇ ? ಆಶ್ರಿತನ ಮಗನೆಂಬದನ್ನು ಲಕ್ಷಿಸದೆ ಪೃಥ್ವೀಸಿಂಗನನ್ನು ದರ್ಬಾರದಲ್ಲಿ ಮೋಸದಿಂದ ಕೊಲ್ಲಿಸಿದೆ. ಇಂಥ ದುಷ್ಟನಾದ ನಿನ್ನ ಬಳಿಗೆ ಚಂದ್ರಾವತೀ ರಾಣಿಯವರು ಬಂದಿದ್ದರೆ ಏನಾಗುತ್ತಿತ್ತೆಂಬದನ್ನು ಮತೊಬ್ಬರು ಹೇಳುವ

ಕಾರಣವಿಲ್ಲ; ಆದರೆ ಬಾದಶಹನೇ, ನೀನು ಚಂದ್ರಾವತೀರಾಣಿಯ ಯೋಗ್ಯತೆಯನ್ನು ಅರಿಯೀ ಅರಿಯೀ. ಆ ಸತಿಯು ಉದೇಪುರದ ಮನೆತನದವಳು. ಎಳ್ಳಷ್ಟು ಅಪಮಾನವನ್ನು ಸಹಿಸತಕ್ಕವಳಲ್ಲ. ಪ್ರಸಂಗಬಂದರೆ ಕ್ಷಣದಲ್ಲಿ ದೇಹವಿಟ್ಟು ಸ್ವರ್ಗಕ್ಕೆ ಹೋಗುತ್ತಿದ್ದಳು. ನೀಚಕುಲದೊಳಗಿನ ಕ್ಷುದ್ರಜನರು ಮಾತ್ರ, ದೊಡ್ಡ ಮನೆತನದ ಹೆಸರನ್ನಿಟ್ಟುಕೊಂಡು ಕುಲಗೆಟ್ಟು ನಿನ್ನ ಪಟ್ಟದ ರಾಣಿಯಾಗಿ ದೊಡ್ಡಿಸ್ತನವನ್ನು ಸಂಪಾದಿಸುವರು. ನಿನ್ನ ಗುಣವನ್ನು ತಿಳಿದೇ ನಾನೂ ನನ್ನ ಅಣ್ಣನೂ ಕೂಡಿ ಯುಕ್ತಿಯಿಂದ ರಾಣಿಯನ್ನೂ, ರಾಜಪುತ್ರನನ್ನೂ ದಾಟಿಸಿದೆವು.

ಈ ಮೇರೆಗೆ ನುಡಿದು ಇಂದಿರೆಯು ರಾಣಿಯನ್ನೂ, ರಾಜಪುತ್ರನನ್ನೂ ಹೊರಡಿಸಿ ಕಳಿಸಿದ ನಿಜವಾದ ಸಂಗತಿಯನ್ನು ವಿವರಿಸಿದಳು. ಹೆಂಗಸು ಕುಳಿತು ತನ್ನ ಮುಂದೆ ಇಷ್ಟು ಕಠೋರಮಾತುಗಳನ್ನು ನಿರಾತಂಕವಾಗಿ ಆಡುವದನ್ನು ನೋಡಿ ಬಾದಶಹನು ಆಶ್ಚರ್ಯಪಟ್ಟನು. ಹೀಗೆ ನಿಷ್ಠುರ ಮಾತುಗಳನ್ನು ಮೋರೆಯ ಎದುರಿಗೆ ಎಂದೂ ಆಡಿಸಿಕೊಳ್ಳದ ಆತನಿಗೆ ಪರಮಾವಧಿ ಸಂತಾಪವಾಯಿತು; ಆದರೆ ಇಂದಿರೆಯನ್ನು ಶಿಕ್ಷಿಸಲಿಕ್ಕೆ ಆತನ ಮನಸ್ಸು ಒಡಂಬಡಲಿಲ್ಲ. ಆತನು ಸಿಟ್ಟನ್ನು ನುಂಗಿ ಸಮಾಧಾನದಿಂದ ಇಂದಿರೆಯನ್ನು ಕುರಿತು— ಇಂದಿರೇ, ನೀನು ಒಳ್ಳೇ ಕರ್ತೃತ್ವಶಾಲಿಯು. ಯಾವನೊಬ್ಬ ಬಾದಶಹನ ಪಟ್ಟರಾಣಿಯಾಗಲಿಕ್ಕೆ ಯೋಗ್ಯಳಿರುತ್ತೀ; ಆದರೆ ಉದೇಪುರೀಬೇಗಮೆಯ ಮನಸ್ಸಿಗೆ ಹತ್ತುವಂಥ ಮಾತುಗಳನ್ನು ನೀನು ಆಡುವದು ಸರಿಯಲ್ಲ; ಯಾಕಂದರೆ, ಇನ್ನು ಮರಣಪರ್ಯಂತವಾಗಿ ನೀನು ಉದೇಪುರೀ ಬೇಗಮೆಯ ದಾಸಿಯಾಗಿರಬೇಕಾಗಿರುವದು. ವಿಚಾರದಿಂದ ಮಾತಾಡು, ಅನ್ನಲು, ಇಂದಿರೆಯು ಮತ್ತೊಮ್ಮೆ ನಕ್ಕಳು ಮಾತ್ರ. ಉತ್ತರವನ್ನು ಕೊಡಲಿಲ್ಲ. ಕಡೆಗೆ ಬಾದಶಹನು ಅಷ್ಟಕ್ಕೆ ಮಾತು ಮುಗಿಸಿ ಅಲ್ಲಿಂದ ಹೊರಟುಹೋದನು.

## ೧೧ನೆಯ ಪ್ರಕರಣ

# ಕೈಯ ತುತ್ತು ಬಾಯಿಗಿಲ್ಲ.

ಬಾದಶಹನು ತನ್ನನ್ನು ಮಾತಾಡಿಸದೆ ಹಾಗೇ ಹೋದದ್ದನ್ನು ನೋಡಿ ಉದೇಪುರಿಗೆ ಸಂತಾಪವಾಯಿತು. ತಲೆ ನೋಯುತ್ತದೆಂದು ಹೇಳಿ ತಾನು ಒಳಗೆ ಮಲಗಿಕೊಳ್ಳಲಿಕ್ಕೆ ಹೋಗಿರಲು, ಯೋಗಕ್ಷೇಮವನ್ನು ಕೇಳದೆ ಹೊರಗಿನಿಂದ ಹೊರಗೇ ಹೋಗಲಿಕ್ಕೆ ಕಾರಣವೇನಿರಬಹುದೆಂದು ಆಕೆಯು ಚಿಂತಿಸತೊಡಗಿದಳು. ಒಮ್ಮೆ ಔರಂಗಜೇಬನು ಇಂದಿರೆಗೆ— "ನೀನು ಒಬ್ಬ ಬಾದಶಹನ ಪಟ್ಟರಾಣಿಯಾಗಲಿಕ್ಕೆ ಯೋಗ್ಯಳಿರುತ್ತೀ," ಎಂದು ನುಡಿದದ್ದು ಬೇಗಮೆಯ ಮನಸ್ಸಿನಲ್ಲಿ ನಟ್ಟಿತ್ತು. ಬಾದಶಹನು ಇಂದು ನನ್ನನ್ನು ಮರೆಯಲಿಕ್ಕೆ ಈ ಇಂದಿರೆಯ ಮೋಹಕ ಸ್ವರೂಪವೇ ಕಾರಣವಾದದ್ದರಿಂದ, ಈಕೆಯನ್ನು ಇಲ್ಲಿಂದ ಬೇಗನೆ ಹೊರಡಿಸಬೇಕೆಂದು ಬೇಗಮೆಯು ನಿಶ್ಚಯಿಸಿದಳು; ಆದರೆ ಕ್ರೂರನಾದ ಬಾದಶಹನ ಮುಂದೆ ಹಾಗೆ ಮಾಡಿದಕ್ಕಿಸಕೊಳ್ಳಲಿಕ್ಕೆಆಕೆಗೆ ಧೈರ್ಯವು ಸಾಲಲೊಲ್ಲದು. ಬಾದಶಹನು ಹೋದಬಳಿಕ ಸ್ವಲ್ಪ ಹೊತ್ತಿನ ಮೇಲೆ ಆಕೆಯು ಹೊರಗೆ ಬಂದು ಇಂದಿರೆಯನ್ನು ಕರೆಸಿ —ಇಂದಿರೇ, ನೀನು ಇಲ್ಲಿ ಇದ್ದರೆ ನಿನ್ನ ಪರಿಣಾಮವು ನೆಟ್ಟಗಾಗದು. ನನ್ನ ತಂದೆಯು ನನ್ನನ್ನು ಬಾದಶಹನಿಗೆ ಕೊಟ್ಟಿದ್ದರೂ, ಬಡವೆಯಾದ ನಿನ್ನಂಥ ರಂಡೆಮುಂಡೆಗೆ ಅಂಥ ಪ್ರಸಂಗವು ಬರಬೇಕೆಂದು ನಾನು ಇಚ್ಛಿಸುವದಿಲ್ಲ. ನೀನು ಇಲ್ಲಿ ಇದ್ದರೆ, ನಿನ್ನ ಮೇಲೆ ಎಂಥ ಪ್ರಸಂಗ ಬಂದೀತು, ಎಂಥ ಪ್ರಸಂಗ ಬರಲಿಕ್ಕಿಲ್ಲೆಂಬದನ್ನು ಹೇಳಲಾಗುವದಿಲ್ಲ. ಔರಂಗಜೇಬ ಬಾದಶಹನಂಥ ಚಂಚಲ ಮನ

ಸ್ಸಿನವರು ಬೇರೆಯಾರೂ ಇರಲಿಕ್ಕಿಲ್ಲ. ಈಗ ಒಂದು ಮಾತು ಆಡಿ ಇನ್ನೊಂದು ಕ್ಷಣಕ್ಕೆ ಆತನು ಮತ್ತೇನಾದರೂ ಮಾಡಬಹುದು; ಆದ್ದರಿಂದ ನೀನು ನನ್ನ ದಾಸಿಯೆಂದು ಇರಹತ್ತಿದ ಮಾತ್ರದಿಂದ ನಿಷ್ಕಂಟಕಳಾದೆನೆಂದು ತಿಳಿಯು ಬೇಡ, ಎಂದು ನುಡಿದಳು. ಬೇಗಮೆಯ ಈ ಮಾತುಗಳನ್ನು ಕೇಳಿ ಚಾಣಾಕ್ಷ ಇಂದಿರೆಯು ಆಕೆಯ ಮನಸ್ಸಿನ ಭಾವವನ್ನು ತಿಳಿಕೊಂಡಳು. ಈ ಬೇಗಮೆಯು ನನ್ನ ವಿಷಯವಾಗಿ ಮತ್ಸರವನ್ನು ತಾಳಿ, ನನ್ನನ್ನು ಇಲ್ಲಿಂದ ಹೊರಗೆ ಹಾಕ ಬೇಕೆಂದು ಯೋಚಿಸಿರುತ್ತಾಳೆ. ಈಕೆಯು ಇಚ್ಛೆಯಂತೆ ನಡಕೊಂಡರೆ ನನ್ನ ಬಿಡುಗಡೆಯಾಗಬಹುದು, ಎಂದು ಯೋಚಿಸಿ, ಬೇಗಮೆಯನ್ನು ಕುರಿತು— ಬೇಗಮುಸಾಹೇಬರೇ, ತಮ್ಮ ಮಾತನ್ನು ನಾನು ಉಗುಳುಹಾಕಿ ದಾಟುವ ದಿಲ್ಲ, ಹೇಳಿದಹಾಗೆ ಕೇಳುವೆನು. ನಿಮ್ಮಿಂದ ನನ್ನ ಬಿಡುಗಡೆಯಾದೀತೆಂಬ ಆಶೆಯಿಂದಲೇ ನಿಮ್ಮ ದಾಸಿಯಾಗುವಂತೆ ಮಾಡೆಂದು ದೇವರನ್ನು ಪ್ರಾರ್ಥಿ ಸುತ್ತಿದ್ದೆನು. ದೇವರ ದಯವಿರಲು ನಯನಪಾಲನ ಕೈಯೊಳಗಿಂದ ಪಾರಾಗಿ ಈಗ ನಿಮ್ಮ ದಾಸಿಯಾಗಿದ್ದೇನೆ. ನನ್ನನ್ನು ಬಂಧಮುಕ್ತಳಾಗಮಾಡುವ ಭಾರವು ನಿಮ್ಮನ್ನು ಕೂಡಿದೆ. ನಿಮ್ಮ ಅಪ್ಪಣೆಯನ್ನು ನಾನು ಎಂದಿಗೂ ಮೀರುವದಿಲ್ಲ.

ಇಂದಿರೆಯ ಈ ಮಾತುಗಳನ್ನು ಕೇಳಿ ಬೇಗಮೆಗೆ ಪರಮಾನಂದ ವಾಯಿತು. ನಿನ್ನನ್ನು ಬೇಗನೆ ಬಂಧಮುಕ್ತಮಾಡುವೆನೆಂದು ವಚನಕೊಟ್ಟು, ಆಕೆಯನ್ನು ಹತ್ತರ ಕುಳ್ಳಿರಿಸಿಕೊಂಡು— "ಇಂದಿರೇ, ನೀನು ನಿಜವಾದ ರಜಪೂತನ ಮಗಳಾದ್ದರಿಂದಲೇ, ನಿನ್ನ ಒಡತೆಯ ಬಂಧವಿಮೋಚನೆಗಾಗಿ ಮೈಮೇಲೆ ಇಂಥ ಗಂಡಾಂತರವನ್ನು ತಂದುಕೊಂಡೆ. ನಾನು ಹೀಗೆ ಮೊಗ ಲರ ಮನೆಯನ್ನು ಸೇರಿಕೊಂಡಿದ್ದರಿಂದ ಹಿಂದಿನದನ್ನೆಲ್ಲ ಮರೆತಿರುವೆನೆಂದು ನೀನು ತಿಳಿಯಬೇಡ. ಛೆ! ಛೆ! ಇಂದಿರೇ, ನಮ್ಮ ತಂದೆಯು ನನ್ನನ್ನು ಕಟ ಕನ ಕೈಯಲ್ಲಿ ಕೊಟ್ಟರೆ ನಾನಾದರೂ ಏನು ಮಾಡಬೇಕು? ನನ್ನ ಕೈಯ ಲ್ಲೇನಿರುತ್ತದೆ? ಆದರೆ ಮೊಗಲರ ಮನೆತನಕ್ಕೆ ರಜಪೂತರ ಹೆಣ್ಣುಕೊಡುವ ಪದ್ಧತಿಯನ್ನು ನಿನ್ನ ಯಜಮಾನನ ತಂದೆಯೇ ಮೊದಲು ಪ್ರಚಾರದಲ್ಲಿ ತಂದನು. ಜೋಧಬಾಯಿಯನ್ನು ಅಕಬರ ಬಾದಶಹನಿಗೆ ಕೊಡದಿದ್ದರೆ.... .... ಆದರೆ ಇಂದಿರೇ, ಈ ಹಿಂದಿನ ಮಾತನ್ನು ಯಾಕೆ ತೆಗೆಯಬೇಕು?"

ಎಂದು ನುಡಿಯುತ್ತಿರಲು, ರಾಣೀವಾಸದ ಮುಖ್ಯನಾದ ಮುಸಾವುದನೆಂಬ ವನು ಇಂದಿರೆಯ ಅಣ್ಣನಾದ ದುರ್ಗಾದಾಸನನ್ನು ಕರಕೊಂಡು ಅಲ್ಲಿಗೆ ಬಂದನು.

ನಯುನಪಾಲನು ತನ್ನ ಸೇವಕರ ಕೈಯಿಂದ ದುರ್ಗಾದಾಸನನ್ನು ಅಡ ವಿಯಲ್ಲಿ ದೂಡಿಸಿರಲು, ಈಗ ಆತನು ಪುರುಷರ ಪ್ರವೇಶಕ್ಕೆ ಆಸ್ಪದವಿಲ್ಲದ ರಾಣೀವಾಸದಲ್ಲಿ ಹ್ಯಾಗೆ ಬಂದನೆಂದು ವಾಚಕರು ಆಶ್ಚರ್ಯಪಡಬಹುದು; ಆದರೆ ಅಣ್ಣ ತಂಗಿಯರ ಕೃತಿಗಳು ಆಶ್ಚರ್ಯಕರವಾದವುಗಳೆಂಬದನ್ನು ವಾಚ ಕರಿಗೆ ಬೇರೆಯಾಗಿ ಹೇಳಲವಶ್ಯವಿಲ್ಲ. ದುರ್ಗಾದಾಸನು ತಂಗಿಯನ್ನು ಸಂಕಟಕ್ಕೆ ಗುರಿಮಾಡಿ ಬೇರೆಕಡೆಗೆ ಹೋಗಲಾರದೆ, ದಿಲ್ಲಿಯ ಹಾದಿಯನ್ನು ಹಿಡಿದನು. ವೇಷಾಂತರದಿಂದ ಆತನು ವೇಗವಾಗಿ ನಡೆದು ಬಂದು, ನಯುನಪಾಲನು ಬಂದ ದಿವಸವೇ ದಿಲ್ಲಿಗೆ ಬಂದು ಮುಟ್ಟಿದನು. ಬುದ್ಧಿಶಾಲಿಯಾದ ದುರ್ಗಾದಾಸನು ಹಸ್ತಿದಂತದ ಕೆತ್ತಿಗೆಯ ಕೆಲಸದಲ್ಲಿಯೂ, ಗಾಯನದಲ್ಲಿಯೂ ಅತ್ಯಂತ ಪ್ರವೀಣನಿದ್ದನು. ಆತನು ಕೆತ್ತಿಗೆಯ ಕೆಲಸದ ಒಬ್ಬ ಉದ್ಯೋಗಸ್ಥನ ಆಶ್ರಯ ವನ್ನು ಪಡೆದನು. ದುರ್ಗಾದಾಸನ ಕಲಾಕೌಶಲ್ಯದಿಂದ ಆ ಉದ್ಯೋಗಸ್ಥನ ಪ್ರಾಪ್ತಿಯು ಮಿತಿಮೀರಿ ಹೆಚ್ಚಿ, ದಿಲ್ಲಿಯ ಪಟ್ಟಣದ ತುಂಬ ಆತನ ಪ್ರಸಿ ದ್ಧಿಯು ಆಯಿತು. ತನ್ನ ತಂಗಿಯಾದ ಇಂದಿರೆಯು ಉದೇಪುರೀ ಬೇಗ ಮೆಯ ಬಳಿಯಲ್ಲಿರುವದರಿಂದ, ಆ ಬೇಗಮೆಗೆ ಹಸ್ತಿದಂತದ ಒಂದು ಅಪ್ರ ತಿಮ ಬೀಸಣಿಕೆಯನ್ನು ಕಾಣಿಕೆಯಾಗಿ ಕೊಡುವ ನೆವದಿಂದ ಅಂತಃಪುರ ವನ್ನು ಪ್ರವೇಶಿಸಿ, ತಂಗಿಯ ಬಂಧವಿಮೋಚನಕ್ಕಾಗಿ ಯತ್ನಿಸಬೇಕೆಂದು ದುರ್ಗಾದಾಸನು ಮಾಡಿದನು. ಆತನು ಬಿಚ್ಚಲಿಕ್ಕೂ, ಮುಚ್ಚಲಿಕ್ಕೂ ಬರುವ ಬೀಸಣಿಕೆ ಮಾಡಲಿಕ್ಕೆ ತಕ್ಕದ್ದಾದ ಒಂದು ಹಸ್ತಿದಂತವನ್ನು ತನ್ನ ಆಶ್ರಯ ದಾತೃವಿನಿಂದ ಇಸಕೊಂಡು, ಬಹು ಚಾತುರ್ಯದಿಂದ ಒಂದು ಅತ್ಯುತ್ಕೃಷ್ಟ ವಾದ ಬೀಸಣಿಕೆಯನ್ನು ಮಾಡಿದನು. ಅದರ ನಡುವಿನ ಪಟ್ಟಿಯಲ್ಲಿ ಔರಂಗಜೇಬಬಾದಶಹನು ಮಯೂರಾಸನದ ಮೇಲೆ ಕುಳಿತಿದ್ದು, ಅದರ ಎಡಮಗ್ಗಲ ಪಟ್ಟಿಯಲ್ಲಿ ಉದೇಪುರೀ ಬೇಗಮೆಯೂ, ಆಕೆಯ ಆರುವರ್ಷದ ಮಗನಾದ ಕಾಮುಭಕ್ಷನೂ ಕುಳಿತಂತೆ ಚಿತ್ರಗಳನ್ನು ಕೊರೆದಿದ್ದನು. ಈ ಚಿತ್ರಗಳ ಅತ್ಯುತ್ಕೃಷ್ಟತೆಯನ್ನು ಅಷ್ಟಿಷ್ಟೆಂದು ವರ್ಣಿಸುವ ಹಾಗಿದ್ದಿಲ್ಲ.

ಕಲಾಕೌಸಲ್ಯಗಳು ನಿರರ್ಥಕವೆಂದು ತೀರ ತಿರಸ್ಕರಿಸುವ ಅರಸಿಕನಾದ ಔರಂಗ ಜೇಬನು ಕೂಡ ಅವನ್ನು ನೋಡಿ ಸಂತೋಷಪಡಬಹುದಾಗಿತ್ತು; ಆದರೆ ಬಾದಶಹನು ಸಂತೋಷಪಡಲಿಕ್ಕೆ ಆ ಬೀಸಣಿಕೆಯಲ್ಲಿ ಅದೊಂದೇ ಕಾರಣವಿದ್ದಿಲ್ಲ. ಬಾದಶಹನ ಮೆಚ್ಚಿಕೆಯ ಧರ್ಮ ಪುಸ್ತಕವಾದ ಕುರಾಣದೊಳಗಿನ ಆತನ ಅತ್ಯಂತ ಪ್ರೀತಿಯ ಯಾವತ್ತು ಅಧ್ಯಾಯಗಳನ್ನು ಬೀಸಣಿಕೆಯ ಪಟ್ಟಿಗಳ ತುದಿಗಳಲ್ಲಿ ಕೊರೆದಿದ್ದು, ಅವನ್ನು ಸುಂದರವಾದ ಬಣ್ಣಗಳಿಂದ ಅಲಂಕರಿಸಿದ್ದನು. ಇದಲ್ಲದೆ ಧಾರ್ಮಿಕರಾದ ಕವಿಗಳ ಸುಂದರವಾದ ಎರಡು ಅಲ್ಲಾನ ಸ್ತೋತ್ರ ಗಳನ್ನು ಹಿಡಿಕೆಯ ಎರಡೂ ಮಗ್ಗಲುಗಳಲ್ಲಿ ಕೊರೆದಿದ್ದನು. ಇಂಥ ಸುಂದರ ವಾದ ಬೀಸಣಿಕೆಯನ್ನು ನೋಡಿ ಆತನ ಆಶ್ರಯದಾತೃವು ಆನಂದಪರವಶ ನಾಗಿ ಥೋಟುಸಿಂಗನೆಂದು ಹೆಸರಿಟ್ಟುಕೊಂಡಿದ್ದ ದುರ್ಗಾದಾಸನನ್ನು ಬಹಳ ವಾಗಿ ಹೊಗಳಿದನು. ಆ ಮೇಲೆ ದುರ್ಗಾದಾಸನು ಬೀಸಣಿಕೆಯನ್ನೂ, ಬೇರೆ ಸುಂದರ ಸುಂದರ ಚಿತ್ರಗಳನ್ನೂ ತಕ್ಕೊಂಡು, ಉದೇಪುರೀರಾಣಿಯ ಅಂತರ್ಗೃಹಕ್ಕೆ ಸಾಗಿದನು. ಆತನು ಹೊಸ ಚಿತ್ರಗಳನ್ನು ಕೊರೆಯುವ ದಕ್ಕಾಗಿ ಹಸ್ತಿದಂತದ ತುಂಡುಗಳನ್ನೂ, ಶಸ್ತ್ರಗಳನ್ನೂ, ಬಣ್ಣಗಳನ್ನೂ, ಕುಂಚಗಳನ್ನೂ ಸಂಗಡ ತಕ್ಕೊಂಡು ಹೋಗಿದ್ದನು. ಮಂದಿರದ ಬಾಗಿಲಿಗೆ ಹೋದಕೂಡಲೆ ಅಲ್ಲಿ ಇರುವ ಕಾವಲುಗಾರರಿಗೆ ಆತನು ಮೋಜಿನಿಂದ ಮುಜುರೆಮಾಡಿ "ನಾನು ಚಿತ್ರಗಳನ್ನು ಕೊರೆಯುವವನು. ನೀವು ನನ್ನನ್ನು ಒಳಗೆ ಬಿಟ್ಟರೆ, ನಿಮ್ಮ ಚಿತ್ರಗಳನ್ನು ಕೊರೆದುಕೊಡುತ್ತೇನೆ. ಬೇಕಾಗಿದ್ದರೆ ನನ್ನಲ್ಲಿ ಸುಂದರ ಸುಂದರ ಚಿತ್ರಗಳಿವೆ, ನಿಮಗೆ ಕೊಡುವೆನು" ಎಂದು ಹೇಳಿದನು. ಅದನ್ನು ಕೇಳಿ ಕಾವಲುಗಾರರು ದುರ್ಗಾದಾಸನ ಸುತ್ತು ನೆರೆ ದರು. ಸುಂದರ ಚಿತ್ರಗಳನ್ನು ಕೊಡುವದೂ, ಅವರವರ ಹೊಸ ಚಿತ್ರಗಳನ್ನು ಕೊರೆದು ಅವರವರಿಗೆ ಕೊಡುವದೂ ಭರದಿಂದ ನಡೆದಿರಲು, ಜನಾನಖಾನೆಯ ಮುಖ್ಯನಾದ ಮಸಾವುದನು ಅಲ್ಲಿಗೆ ಬಂದನು. ದುರ್ಗಾದಾಸನು ಮಸಾ ವುದನಿಗೆ ವಿನಯದಿಂದ ಸಲಾಮು ಮಾಡಿ ಕೆಲವು ಉತ್ತಮೋತ್ತಮವಾದ ಚಿತ್ರಗಳನ್ನು ಆತನಿಗೆ ಕೊಟ್ಟನು. ಬಳಿಕ ಆತನ ಚಿತ್ರವನ್ನು ಕೊರೆದು ಕೊಡಲು, ಅದನ್ನು ನೋಡಿ, ಮಸಾವುದನು ಸಂತುಷ್ಟನಾದನು. ಮಸಾವುದನು

ಸಿದ್ದೀಮನುಷ್ಯನು, ಕುರೂಪಿಯು, ವಿಕರಾಳವದನನು. ಆತನು ಕಪ್ಪಿನಲ್ಲಿ ಇದ್ದಲಿಯನ್ನು ಹೋಲುತ್ತಿದ್ದನು. ಇಂಥವನನ್ನು ಒಬ್ಬ ಸುಂದರಿಯು ಅಪ್ಪಿಕೊಳ್ಳಲಿಕ್ಕೆ ಬರುವಂತೆ ದುರ್ಗಾದಾಸನು ಹಸ್ತಿದಂತದಲ್ಲಿ ಚಿತ್ರವನ್ನು ಕೊರೆದಿದ್ದನು. ಆದರಿಂದ ಮಸಾವುದನು ಸಂತುಷ್ಟನಾಗಿ ದುರ್ಗಾದಾಸನನ್ನು ಬೇಗಮೆಯ ಬಳಿಗೆ ಕರಕೊಂಡು ಹೋಗಲು ಒಡಂಬಟ್ಟು, ಆತನೊಡನೆ ಜನಾನಖಾನೆಯನ್ನು ಪ್ರವೇಶಿಸುವದಕ್ಕಾಗಿ ಹೊರಟನು.

ಮುಸಲ್ಮಾನರ ಜನಾನಖಾನೆಯ ಸೊಬಗನ್ನು ಇಷ್ಟೆಂದು ವರ್ಣಿಸಲಾಗುವದಿಲ್ಲ. ಅದೊಂದು ಸ್ವತಂತ್ರ ಸ್ತ್ರೀರಾಜ್ಯದಂತೆ ಒಪ್ಪುವದು. ಅಲ್ಲಿಯ ಪುರುಷರೆಂದರೆ ಖೊಜ್ಜೆಜನರು, ಜಗತ್ತಿನ ಸಂಗತಿಗಳ ಜ್ಞಾನವು ಜನಾನಖಾನೆಯವರಿಗೂ, ಜನಾನಖಾನೆಯ ಸಂಗತಿಗಳ ಜ್ಞಾನವು ಜಗತ್ತಿನವರಿಗೂ ಇರುವದಿಲ್ಲ. ಒಂದು ದೃಷ್ಟಿಯಿಂದ ಇಲ್ಲಿ ಪುರುಷರ ಪ್ರವೇಶಕ್ಕೆ ಆಸ್ಪದವಿಲ್ಲದಂತೆ ವ್ಯವಸ್ಥೆಯಿರುವದು. ಮತ್ತೊಂದು ದೃಷ್ಟಿಯಿಂದ ನೋಡಿದರೆ, ಮೈಗೆ ಮುಳ್ಳು ಬರುವಂಥ ಕಲ್ಪನಾತೀತವಾದ ಪ್ರಸಂಗಗಳು ಇಲ್ಲಿ ಒದಗುತ್ತಿರುವವು. ಇಲ್ಲಿ ಇರುವವರು ಮರಣ ಪರ್ಯಂತವಾಗಿ ಹೊರಗಿನ ಜಗತ್ತಿನ ಮೋರೆಯನ್ನು ನೋಡಲಿಕ್ಕಿಲ್ಲೆಂದು ನಿಶ್ಚಯ ಮಾಡಿದರೆ, ನಡೆಯುವಹಾಗಿರುತ್ತದೆ. ಜನಾನಖಾನೆಯೆಂದರೆ ಸುಂದರವಾದ ಒಂದು ಸಣ್ಣ ಪಟ್ಟಣದಂತೆ ಇರುತ್ತದೆಂದು ಹೇಳಬಹುದು. ದೊಡ್ಡ ದೊಡ್ಡ ತೋಟಗಳು, ವಿಶ್ರಾಂತಿಯ ಬಯಲುಗಳು ಮೊದಲಾದ ರಮಣೀಯ ಸ್ಥಳಗಳು ಅಲ್ಲಿ ಇರುವವು. ಲೋಕಸುಂದರಿಯರ ವಾಸಕ್ಕೆ ತಕ್ಕ ಹಲವು ಅಂತಸ್ತಿನ ಸುಂದರ ಮಂದಿರಗಳು ಮನೋಹರ ವಸ್ತುಗಳಿಂದ ತುಂಬಿಕೊಂಡು ಅಲ್ಲಿ ಒಪ್ಪುವವು. ಕೃತ್ರಿಮ ನದಿಗಳ ನೀರುಗಳು ಅಲ್ಲಲ್ಲಿ ಹರಿಸಲ್ಪಟ್ಟಿರುವವು. ಇಂಥ ಸ್ಥಳದಲ್ಲಿ ಬಹಳ ಮಾಡಿ ಅನ್ಯರ ಪ್ರವೇಶವು ಆಗುವ ಸಂಭವವೇ ಇರುವದಿಲ್ಲ, ಒಂದು ಪಕ್ಷದಲ್ಲಿ ಆದರೆ, ಪ್ರವೇಶಿಸಿದ ಮನುಷ್ಯನು ಬೆರಗಾಗಿ ಮುಂದುಗಾಣದೆ ನಿಂತುಕೊಳ್ಳುವನು. ಎಷ್ಟೋ ಪ್ರಸಂಗದಲ್ಲಿ ಒಳಗೆ ಹೊಕ್ಕ ಮನುಷ್ಯನು ಬಂದಹಾಗೆ ಸುಸೂತ್ರವಾಗಿ ಒಮ್ಮೆ ಹೊರಗೆ ಹ್ಯಾಗೆ ಹೋದೇನೆಂದು ಚಡಪಡಿಸುವ ಸಂಭವವೂ ಇರುವದು; ಆದರೆ ದುರ್ಗಾದಾಸನ ಸ್ಥಿತಿಯು ಹಾಗೇನು ಆಗಲಿಲ್ಲ. ಆತನು ಹಲವು ಸಾರೆ ಜನಾನಖಾನೆಯಲ್ಲಿ ಹೋಗಿಬಂದವನಂತೆ

ಸ್ವಾಭಾವಿಕವಾಗಿ ಮುಸಾವುದನ ಬೆನ್ನುಹತ್ತಿ ಸಾಗಿದನು. ಆತನು ಹೀಗೆ ಸಾಗಿರುವಾಗ, ಔರಂಗಜೇಬನ ಪ್ರೀತಿಯ ತಂಗಿಯಾದ ರೋಷನಾರಳ ಜನಾನಖಾನೆಯ ಮುಖ್ಯನಾದ ಫರುಕ್‌ಶಾಯುರನು ಎದುರಿಗೆ ಭೆಟ್ಟಿಯಾದನು. ಆತನು ರೋಷನಾರಳ ತಾವುಸವೆಂಬ ವಾದ್ಯವನ್ನು ನೆಟ್ಟಗೆ ಮಾಡಿಸುವ ದಕ್ಕಾಗಿ ಊರೊಳಗೆ ಹೊರಟಿದ್ದನು. ಅವರಿಬ್ಬರು ಬೇಗಮೆಯರ ಜನಾನ ಖಾನೆಗಳಿಂದ ಹೊರಬೀಳುವ ಮಾರ್ಗವು ಒಂದೇ ಆಗಿತ್ತು. ರೋಷನಾರಳ ವರ್ಚಸ್ಸು ಔರಂಗಜೇಬನಲ್ಲಿ ವಿಶೇಷವಾಗಿದ್ದದ್ದರಿಂದ ಆಕೆಯ ಜನಾನ ಖಾನೆಯ ಮುಖ್ಯನಿಗೆ ಉಳಿದ ಜನಾನಖಾನೆಯ ಮುಖ್ಯರು ಬಹಳ ಮಾನ ಕೊಡುತ್ತಿದ್ದರು. ಅದರಂತೆ ಮುಸಾವುದನು ಫರುಕ್‌ಶಾಯುರನಿಗೆ ಸಲಾಮು ಮಾಡಿ ಅವನೊಡನೆ ಒತ್ತಟ್ಟಿಗೆ ಕುಳಿತುಕೊಂಡು, ದುರ್ಗಾದಾಸನಲ್ಲಿದ್ದ ಹಸ್ತಿದಂತದ ಸುಂದರ ಚಿತ್ರಗಳನ್ನು ಆತನಿಗೆ ತೋರಿಸಿದನು. ಅಷ್ಟರಲ್ಲಿ ದುರ್ಗಾದಾಸನು ಫರುಕ್‌ಶಾಯುರನದೊಂದು ಚಿತ್ರವನ್ನು ಕೊರೆದನು. ಅದ ರಲ್ಲಿ ಇಬ್ಬರು ಸುಂದರಿಯರು ಫರುಕ್‌ಶಾಯುರನನ್ನು ಅಪ್ಪಿಕೊಳ್ಳಲಿಕ್ಕೆಹೋಗು ತ್ತಿದ್ದರು. ಅದನ್ನು ನೋಡಿ ಫರುಕ್‌ಶಾಯುರನು ಸಂತುಷ್ಟನಾಗಿ ಭೋಟು ಸಿಂಗನನ್ನು ( ದುರ್ಗಾದಾಸನನ್ನು ) ಬಹಳವಾಗಿ ಹೊಗಳಿ, ಈ ತಾವುಸ ವನ್ನು ನೆಟ್ಟಗೆ ಮಾಡಿಸಿಕೊಂಡು ಬಂದ ಮೇಲೆ ನನ್ನ ಒಡೆಯುಳಾದ ರೋಷ ನಾರಳ ಭೆಟ್ಟಿಯನ್ನು ನಿಶ್ಚಯುವಾಗಿ ಮಾಡಿಸುತ್ತೇನೆ”ಂದು ಒಡಂಬಟ್ಟನು. ಚಿತ್ರಕಲೆಯಲ್ಲಿ ಪ್ರವೀಣನಿದ್ದನು. ಆತನು ಫರುಕ್‌ಶಾಯುರನ ಕೈಯಿಂದ ತಾವುಸವನ್ನು ಇಸಕೊಂಡು ಅದನ್ನು ಲಕ್ಷ್ಯಪೂರ್ವಕವಾಗಿ ನೋಡಿ, ಅದರ ಕ್ಲಿವಿಗಳನ್ನು ತಿರುವಿ, ಕಮಾನುಮೊದಲಾದವನ್ನು ತಿದ್ದಿ, ಅದನ್ನು ನೆಟ್ಟಗೆ ಮಾಡಿ ಫರುಕ್‌ಶಾಯುರನ ಕೈಯಲ್ಲಿ ಕೊಟ್ಟನು. ಅದರಿಂದಂತು ಫರಕ್‌ ಶಾಯುರನು ಆನಂದಪಟ್ಟು ಮುಸಾವುದನನ್ನು ಕುರಿತು— ಮುಸಾವುದ, ನೀವು ಸ್ವಲ್ಪ ಹೊತ್ತು ಇಲ್ಲಿಯೇ ಕುಳಿತುಕೊಳ್ಳಿರಿ. ನಾನು ಈಗ ರೋಷ ನಾರಳಿಗೆ ಈ ತಾವುಸವನ್ನು ತೋರಿಸಿ, ಕೊಟ್ಟು ಬರುತ್ತೇನೆ, ಎಂದು ಹೇಳಿ ದನು. ಮುಸಾವುದನು ಅದಕ್ಕೆ ಒಡಂಬಟ್ಟು ಭೋಟುಸಿಂಗನೊಡನೆ ಕುಳಿತು ಕೊಳ್ಳಲು, ಫರುಕ್‌ಶಾಯುರನು ರೋಷನಾರಳ ಬಳಿಗೆ ಹೋಗಿ ಕೂಡಲೆ ತಿರುಗಿಬಂದು—“ ನಮ್ಮ ಒಡೆಯುಳು ನಿನ್ನನ್ನು ಕರಕೊಂಡು ಬರಬೇಕೆಂದು

ಹೇಳಿದ್ದಾಳೆ, ಬಾರೆ”ಂದು ದುರ್ಗಾದಾಸನನ್ನು ಕರೆದನು. ಆಗ ಮುಸಾವುದನು ಫರುಕ್‌ಶಾಯರನಿಗೆ ಅಭಿಮಾನದಿಂದ— ಫರುಕ್‌ಶಾಯರ, ಈಗ ನಾನು ಈ ಛೋಟುಸಿಂಗನನ್ನು ನಿನ್ನ ಬಡತಿಯ ಬಳಿಗೆ ಕಳಿಸುವದಿಲ್ಲ. ಬೇಕಾದರೆ ನಮ್ಮ ಒಡತಿಯನ್ನು ಕಂಡುಬಂದಮೇಲೆ ನಿಮ್ಮ ಒಡತಿಯನ್ನು ಕಾಣಲಿಕ್ಕೆ ಬರಲೊಲ್ಲನೇಕೆ, ಎಂದು ಹೇಳಿ, ಛೋಟುಸಿಂಗನನ್ನು ( ದುರ್ಗಾದಾಸನನ್ನು ) ಒತ್ತಾಯದಿಂದ ಕರಕೊಂಡು ಉದೇಪುರೀ ಬೇಗಮೆಯ ಜನಾನಖಾನೆಯನ್ನು ಪ್ರವೇಶಿಸಿದನು. ಜನಾನಖಾನೆಯ ಮುಖ್ಯನ ಬೆನ್ನಹತ್ತಿ ಹೋದದ್ದರಿಂದ ಯಾವ ತೊಂದರೆಯೂ ಇಲ್ಲದೆ ದುರ್ಗಾದಾಸನು ಮೇಲೆ ಹೇಳಿದಂತೆ ಉದೇಪುರಿಯ ಎದುರಿಗೆ ನಿಂತುಕೊಂಡನು.

ಉದೇಪುರೀ ಜೇಗಮೆಯ ಮಂದಿರದ ಐಶ್ವರ್ಯವನ್ನೇನು ವರ್ಣಿಸುವದದೆ ? ಆ ಐಶ್ವರ್ಯವನ್ನು ನೋಡುವಷ್ಟು ಸಮಾಧಾನ ಸ್ಥಿತಿಯು ದುರ್ಗಾದಾಸನಿಗೆ ಇದ್ದಿಲ್ಲವಾದದ್ದರಿಂದ, ನಾವಾದರೂ ಅದನ್ನು ವರ್ಣಿಸುವ ಗೊಡವಿಗೆ ಹೋಗುವದಿಲ್ಲ. ದುರ್ಗಾದಾಸನು ಮುಸಾವುದನ ಹೇಳಿಕೆಯಂತೆ ತೀರ ಬಗ್ಗಿ ಬೇಗಮೆಗೆ ಸಲಾಮು ಮಾಡಿ, ತಾನು ತಂದಿದ್ದ ಅತ್ಯುತ್ತಮ ಬೀಸಣಿಕೆಯನ್ನು ಬೇಗಮೆಯ ಮುಂದೆ ಇಟ್ಟು, ಮತ್ತೆ ಕುರ್ನಿಸಾತವನ್ನು ಮಾಡಿ ಕೈಜೋಡಿಸಿ ನಿಂತುಕೊಂಡನು. ಉದೇಪುರಿಯು ಆ ಬೀಸಣಿಕೆಯನ್ನು ಕೈಯಲ್ಲಿ ತಕ್ಕೊಂಡು ಒಮ್ಮೆ ನೋಡಿ ಕೂಡಲೆ ಛೋಟುಸಿಂಗನನ್ನು (ದುರ್ಗಾದಾಸನನ್ನು) ಕುರಿತು— ಈ ಬೀಸಣಿಕೆಯನ್ನು ನೀವು ಮಾಡಿರುವಿರೋ ? ಶಾಬಾಸ, ಬಹಳ ನೆಟ್ಟಗಿರುತ್ತದೆ. ನಿಮ್ಮ ಕೌಶಲ್ಯವನ್ನು ನೋಡಿ ನಮಗೆ ಬಹಳ ಸಂತೋಷವಾಯಿತು. ಮುಸಾವುದ, ಮುಸಾವುದ, ಇತ್ತ ನೋಡು. ಈ ಬೀಸಣಿಕೆಯ ಮೇಲೆ ಯಾರ ಯಾರ ಚಿತ್ರಗಳಿರುತ್ತವೆ, ನೋಡು; ಆದರೆ ಯಾಕೋ ಚಿತ್ರಗಾರಾ, ನೀನು ಇದರ ಮೇಲೆ ನಮ್ಮ ಮುಸಾವುದನ ಚಿತ್ರವನ್ನು ಕೊರೆದಿಲ್ಲ ? ಅವಶ್ಯವಾಗಿ ಕೊರೆಯಬೇಕಾಗಿತ್ತು; ಇರಲಿ, ಆದದ್ದು ಆಯಿತು. ಇನ್ನು ಬೇಗನೆ ಆತನ ಮದುವೆಯಾಗಬೇಕಾಗಿದೆ. ಮದುವೆಯಾದ ಬಳಿಕ ದಂಪತಿಗಳಿಬ್ಬರ ಚಿತ್ರವನ್ನು ಕೊರೆದು ಒಂದು ಬೀಸಣಿಕೆಯನ್ನು ಮಾಡಿ ತಂದೆಯಂದರೆ, ನಾವು ಅದನ್ನು ಮುಸಾವುದನಿಗೆ ಉಚಿತವಾಗಿ ಕೊಡುವೆವು. ಯಾಕೋ ಮುಸಾವುದ, ಏ ಮುಸಾವುದ,

ನಿನಗೆ ಇಂಥ ಬೀಸಣಿಕೆಯು ಬೇಕೋ ಬೇಡವೋ, ಎಂದು ಕೇಳಿದಳು. ಅದಕ್ಕೆ ಮುಸಾವುದನು ಬಾಯಿಬಿಚ್ಚಿ ಉತ್ತರಕೊಡದೆ, ತನ್ನ ಕಪ್ಪುಮೋರೆ ಯಲ್ಲಿ ಸ್ಪಷ್ಟವಾಗಿ ಕಾಣುವಂತೆ ತನ್ನ ಬಿಳಿಯ ಹಲ್ಲುಗಳನ್ನು ತೆಗೆದು "ಹಿಹಿ ಹಿಹಿ" ಎಂದು ನಕ್ಕು, ಆ ನಗೆಯ ರೂಪದಿಂದ ಉತ್ತರಕೊಟ್ಟನು. ರಕ್ತ ದಂತೆ ಕೆಂಪಾದ ಬಾಯಿ ತೆರೆದು ಹೀಗೆ ನಗುವದನ್ನು ನೋಡಿ ಬೇಗಮೆಗೆ ಹುಚ್ಚುನಗೆ ಬಂದಿತು. ಆಕೆಯು ಕೂಡಲೆ ಭೋಟುಸಿಂಗನನ್ನು ಕುರಿತು— ಎಲೈ ಚಿತ್ರಕೊರೆಯುವವನೇ, ನೀನು ಮುಸಾವುದನಿಗೆ ಕೊಡತಕ್ಕ ಬೀಸಣಿಕೆ ಯನ್ನು ಮಾಡುವಾಗ, ಈಗ ಮುಸಾವುದನು ಹಲ್ಲು ತಗೆದು ನಗುತ್ತಿರುವಾಗ ಕಾಣುವಂತೆ ಆತನ ಚಿತ್ರವನ್ನು ಕೊರೆ. ಅಂದರೆ, ಈಗ ಆತನ ಬಾಯಿತೆರ ದಂತೆ ಚಿತ್ರದ ಬಾಯಿ ತೆರೆದಿರಬೇಕು. ಅದರಲ್ಲಿ ಈ ಹಲ್ಲುಗಳು ಕಾಣಿಸ ಬೇಕು. ಒಳಮಗ್ಗಲು ಉದಯವಾಗುವ ಸೂರ್ಯನಂಥ ಕೆಂಪು ಬಣ್ಣವೂ, ಹೊರಮಗ್ಗಲು ಅಮಾವಾಸ್ಯೆಯ ರಾತ್ರಿಯಂತೆ ಅಚ್ಚಕಪ್ಪು ಬಣ್ಣವೂ ಕಾಣಿಸ ಬೇಕು. ಯಾಕೆ, ಬರಬಹುದೋ ಈ ಮದನನ ಪುತ್ತಳಿಯನ್ನು ಹೀಗೆ ಕೊರೆಯಲಿಕ್ಕೆ ನಿನಗೆ ? ಅನ್ನಲು, ಭೋಟುಸಿಂಗನು—ಹಾ ಜೀ ಸರಕಾರ, ಮುಸಾವುದಜೀಯವರ ತಸಬೀರನ್ನು ಆಗಲೆ ಕೊರೆದು ತೋರಿಸಿದನು. ಅದನ್ನು ನೋಡಿ ಅವರು ಬಹಳ ಸಂತೋಷಪಟ್ಟರು. ಅಪ್ಪಣೆಯಾದರೆ ಇಲ್ಲಿಯೇ ಇವರದಿನ್ನೊಂದು ಚಿತ್ರವನ್ನು ಕೊರೆದು ಕೊಡುತ್ತೇನೆ, ಎಂದು ಹೇಳಿದನು. ಭೋಟುಸಿಂಗನ ಈ ಮಾತುಗಳನ್ನು ಕೇಳಿ ಉದೇಪುರಿಯು ಚಕಿತಳಾಗಿ— ಏನು ! ಇಲ್ಲಿಂದಿಲ್ಲಿಯೇ ಚಿತ್ರವನ್ನು ಕೊರೆಯುವೆಯೋ ? ಆದರೆ ಇವನೊಬ್ಬನ ಚಿತ್ರವನ್ನು ಕೊರೆಯುವದರಲ್ಲಿ ಅರ್ಥವಿಲ್ಲ. ಆತನಿಗೆ ಜೋಡಿಯು ಬೇಕು. ಇಕೋ, ಈ ಇಂದಿರೆಯು ಇಲ್ಲಿ ಇರುತ್ತಾಳೆ. ಭೋಟು ಸಿಂಗ, ಇವರಿಬ್ಬರ ಚಿತ್ರವನ್ನು ಜೋರಾಗಿ ಕೊರೆ, ಅನ್ನಲು, ಮುಸಾವುದನು ಗಹಗಹಿಸಿ ನಗುತ್ತ ಬೇಗಮೆಯನ್ನು ಕುರಿತು— ಬೇಗಮ ಸಾಹೇಬರೇ, ನನ್ನ ಜೊತೆಯಲ್ಲಿ ಕೊರೆದ ಚಿತ್ರದವಳೊಡನೆ ನನ್ನಲಗ್ನವಾಗಬೇಕು, ಅಂದರೆ ಅದು ಚಿತ್ರವು, ಇಲ್ಲದಿದ್ದರೆ ಆ ಚಿತ್ರವನ್ನು ತೆಗೆದುಕೊಂಡು ಮಾಡುವ ದೇನು ? ಎಂದನು. ಆಗ ರಾಣಿಯು ಇಂದಿರೆಯನ್ನು ನೋಡಿ—ಇಂದಿರೇ, ನೀನು ಬಹು ಶೀಲವಂತೆಯೆಂದು ನಾನು ಕೇಳಿದ್ದೇನೆ. ನಾನು ಮುಟ್ಟಿದ

ನೀರನ್ನು ನೀನು ಕುಡಿಯುವದಿಲ್ಲವಂತೆ. ನನ್ನ ಸೇವೆಮಾಡುವ ನಿನ್ನ ಸರತಿಯು ತೀರಿದ ಕೂಡಲೆ ಹೋಗಿ ಮೈ ತೊಳಕೊಳ್ಳುತ್ತೀಯಂತೆ. ಮೈ ತೊಳಕೊಳ್ಳದೆ ನೀನು ಬಾಯಲ್ಲಿ ನೀರು ಹಾಕುವದಿಲ್ಲೆಂದು ನಾನು ಕೇಳಿದ್ದೇನೆ. ಇದು ನಿಜವಿದ್ದರೆ, ನನ್ನ ಮಾನಭಂಗಮಾಡುವದು ನಿನ್ನ ಮನಸ್ಸಿನಲ್ಲಿದ್ದರೆ ಇಂದಿರೇ, ಈಗ ನೀನು ಹ್ಯಾಗೂ ನನ್ನ ಕೈಯಲ್ಲಿರುತ್ತೀ. ಈ ಮುಸಾವುದನೊಡನೆ ಈ ಕ್ಷಣದಲ್ಲಿ ನಿನ್ನ ಲಗ್ನಮಾಡಿಟ್ಟರೆ ಹ್ಯಾಗೆ ಮಾಡುವೆ ? ಆ ಮೇಲೆ ನನ್ನ ಕೈಯೊಳಗಿನ ನೀರು ಕುಡದೀಯೇನು ? ಮೈ ತೊಳಕೊಂಡೀಯೇನು ?

ಬೇಗಮೆಯ ಈ ಮಾತುಗಳನ್ನು ಕೇಳಿ ಇಂದಿರೆಯು ಮೋರೆ ತಗ್ಗಿಸಿ ನಿಂತುಕೊಂಡಳು. ಭೋಟುಸಿಂಗನು ( ದುರ್ಗಾದಾಸನು ) ಆಕೆಯು ಕಡೆಗೆ ಚಮತ್ಕಾರದ ದೃಷ್ಟಿಯಿಂದ ನೋಡಹತ್ತಿದನು. ಇತ್ತ ಮುಸಾವುದನ ಆನಂದಕ್ಕೆ ಪಾರಾಪಾರವಿಲ್ಲದಾಯಿತು. ಇಂದಿರೆಯ ಈ ದೀನ ವೃತ್ತಿಯನ್ನು ನೋಡಿ, ಇಲಿಯೊಡನೆ ಚಿನ್ನಾಟವಾಡುವ ಬೆಕ್ಕಿನಂತೆ ಬೇಗಮೆಯು ಬಹು ಸಮಾಧಾನಪಡುತ್ತಿದ್ದಳು. ಮುಸಾವುದನ ಸಂಗಡ ಈಕೆಯ ಲಗ್ನವನ್ನು ಮಾಡಿಯೇ ಬಿಡಬೇಕೆಂದು ಬೇಗಮೆಯು ನಿಶ್ಚಯಿಸಿ, ಇಂದಿರೆಯನ್ನು ಕುರಿತು— ನಿನಗೆ ನಿನ್ನ ಜಾತಿಯು ಅಭಿಮಾನವು ವಿಶೇಷವಾಗಿರುತ್ತದಲ್ಲವೆ ? ನಾವು ಕುಲಗೆಟ್ಟವೆಂದು ನಮ್ಮನ್ನು ಹಳಿಯುತ್ತೀಯಾ? ಈಗ ನಿನ್ನ ಜಾತಿಯು ಹ್ಯಾಗಿರುತ್ತದೆಂಬದನ್ನು ತೋರಿಸಲಾ ? ಎಂದು ಹಂಗಿಸಿ, ಮುಸಾವುದನ್ನು ಕುರಿತು— ಮುಸಾವುದಾ, ಮುಸಾವುದಾ, ನಿನಗೆ ಹೆಂಡತಿಯು ಬೇಕಲ್ಲವೆ ? ಅಹಹಾ ! ಎಂಥ ಗಂಡನಿವನು ! ಮುಸಾವುದಾ, ನಿನ್ನ ಹೆಂಡತಿಯನ್ನು ಹತ್ತರ ಕರಕೋ, ಅನ್ನಲು, ಮುಸಾವುದನು ಇಂದಿರೆಯನ್ನು ಕರಕೊಳ್ಳಲಿಕ್ಕೆ ನಿಜವಾಗಿಯೇ ಮುಂದಕ್ಕೆ ಸಾಗಿದನು. ಆಗ ಇಂದಿರೆಯು ಆ ಚಂಡಾಲನು ಎಲ್ಲಿ ಅಂಗಸ್ಪರ್ಶ ಮಾಡುವನೋ, ಎಂದು ಬೆದರಿದಳು. ಅಷ್ಟರಲ್ಲಿ ಭೋಟುಸಿಂಗನು ( ಇಂದಿರೆಯ ಅಣ್ಣನಾದ ದುರ್ಗಾದಾಸನು) ಸಹಜವಾಗಿ ಮುಸಾವುದನನ್ನು ಹಿಂದಕ್ಕೆ ಜಗ್ಗಿಕೊಂಡು ಮೆಲ್ಲನೆ ಆತನ ಕಿವಿಯಲ್ಲಿ—ಮುಸಾವುದಜೀ, ನೀವು ನನಗೆ ಮುಲಿಕಾಬೇಗಮುಸಾಹೇಬರ ಭೆಟ್ಟಿಯನ್ನು ಮಾಡಿಸದ್ದಕ್ಕಾಗಿ ನನಗೆ ಬಹಳ ಉಪಕಾರವಾಯಿತು. ಇನು

ಮಲಿಕಾಬೇಗಮಸಾಹೇಬರಿಂದ ನನಗೆ ಅಪ್ಪಣೆಯನ್ನಿಷ್ಟು ಕೊಡಿಸಿದರೆ ಬಹಳ ಮೆಹರ್ಬಾನಗಿಯಾಗುವದು. ನಾನು ಜ್ಯೋತಿಷವನ್ನು ಬಲ್ಲೆನು. ನೀವು ನನ್ನ ಮಿತ್ರರಾಗಿರುವದರಿಂದ ಒಂದು ಹಿತದ ಮಾತನ್ನು ಹೇಳುತ್ತೇನೆ. (ತೀರ ಕಿವಿಯ ಹತ್ತರ ಮೋರೆಯನ್ನು ಒಯ್ದು)— ಈ ಸ್ತ್ರೀಯೊಡನೆ ನೀನು ಸರ್ವಥಾ ಲಗ್ನಮಾಡಿಕೊಳ್ಳಬೇಡ. ಮಾಡಿಕೊಂಡರೆ ವರ್ಷದೊಳಗೆ ನಿನಗೆ ತಪ್ಪದೆ ಮರಣವು ಒದಗುವದು. ಬಾಲವಿಧವೆಯಾಗಿರುವ ಈ ಸ್ತ್ರೀಯು ಕರ್ಮವೇ ಹಾಗಿರುವದು. ಈಕೆಯನ್ನು ಲಗ್ನಮಾಡಿಕೊಂಡವನು ಒಂದು ವರ್ಷದೊಳಗೆ ಸಾಯಲೇಬೇಕು; ಆದ್ದರಿಂದ ಲಗ್ನಮಾಡಿಕೊಳ್ಳಬೇಕಾದರೆ ವಿಚಾರಮಾಡಿ ಮಾಡಿಕೊಳ್ಳಬೇಕು, ಎಂದು ಹೇಳಿ, ಬೇಗಮೆಯನ್ನು ಕುರಿತು— ಬೇಗಮಸಾಹೇಬರೇ, ಬುದ್ಧಿಹಾಕಿ ಬಹು ಶ್ರಮಬಟ್ಟು ಮಾಡಿರುವ ಈ ಬೀಸಣಿಕೆಯನ್ನು ತಾವು ಸ್ವೀಕರಿಸಿದ್ದರಿಂದ ನನಗೆ ಬಹಳ ಸಂತೋಷವಾಯಿತು. ನನ್ನ ಶ್ರಮವು ಸಾರ್ಥಕವಾಯಿತು. ನನ್ನದಿನ್ನೊಂದು ವಿನಂತಿಯನ್ನು ಕೇಳಿಕೊಳ್ಳುವದಾಗಬೇಕು. ನಾನು ಜ್ಯೋತಿಷ್ಯವನ್ನು ಬಲ್ಲೆನು. ತಮ್ಮ ಅಪ್ಪಣೆಯಾದರೆ ಇಲ್ಲಿ ಕುಳಿತಿರುವಾಗಲೆ ತಮ್ಮ ವರ್ಷಫಲವನ್ನು ಬರಕೊಡುತ್ತೇನೆ. ಯಾವಯಾವ ತಿಂಗಳಲ್ಲಿ ತಮಗೆ ಯಾವ ಫಲಗಳಾಗುವವು, ಯಾವ ಯಾವ ದಿವಸ ನೀವು ಏನೇನು ಕೆಲಸ ಮಾಡುವಿರಿ, ಎಲ್ಲಿ ಕುಳಿತುಕೊಳ್ಳುವಿರಿ, ನಿಮ್ಮ ಹಿತಕ್ಕೆ ಯಾರು ಕಾರಣರಾಗುವರು, ಅಹಿತಕ್ಕೆ ಯಾರು ಕಾರಣರಾಗುವರು, ಇದನ್ನೆಲ್ಲ ಬರಕೊಡುವೆನು. ತಾವು ನನ್ನ ವಿದ್ಯೆಯನ್ನು ಪರೀಕ್ಷಿಸಬೇಕು. ನಾನು ದುರ್ಗಾಚರಣ ಜ್ಯೋತಿಷಿಯ ಶಿಷ್ಯನಿರುತ್ತೇನೆ. ಆತನಲ್ಲಿ ನಾನು ಈ ವಿದ್ಯೆಯನ್ನು ಕಲಿತಿರುವೆನು, ಎಂದು ಹೇಳಿದನು. ಅದನ್ನು ಕೇಳಿದ ಕೂಡಲೆ ಬೇಗಮೆಯು ಮೆಟ್ಟಿಬಿದ್ದು ಛೋಟುಸಿಂಗನ ಕಡೆಗೆ ನೋಡಿ— ಏನಂದಿರಿ ? ಯಾವತ್ತು ವರ್ಷಫಲವನ್ನು ಹೇಳುವಿರಾ ? ಆದರ ಜ್ಞಾನವು ನಿಮಗಿರುತ್ತದೋ, ಅನ್ನಲು, ಛೋಟುಸಿಂಗನು— ಹಾ ಸರಕಾರ. ನಾನು ಜ್ಯೋತಿಷ್ಯಶಾಸ್ತ್ರದ ಅಧ್ಯಯನ ಮಾಡಿರುವದರಿಂದಲೇ ಬೇಡಿಕೊಳ್ಳುತ್ತೇನೆ. ಹೊಟ್ಟೆಯ ಸಲುವಾಗಿ ಬಡಿದಾಡುವ ನಮ್ಮಂಥ ಜನರು ತಮ್ಮ ಕಡೆಗೆ ಬಾರದೆ ಮತ್ತೆ ಯಾರಕಡೆಗೆ ಹೋಗಬೇಕು ? ತಾವು ಗುಣಜ್ಞರಿರುವದರಿಂದಲೇ ತಮ್ಮ ಕಡೆಗೆ ಬರಬೇಕಾಗುವದು.

ಈ ಮಾತುಗಳನ್ನು ಕೇಳಿ ಉದೇಪುರಿಯು ಭೋಟುಸಿಂಗನಿಗೆ— ನಾನು ನಿಮಗೆ ಕಾಗದವನ್ನೂ, ಮಸಿಯನ್ನೂ ತರಿಸಿಕೊಡುತ್ತೇನೆ; ಆದರೆ ಮೊದಲು ನಿಮಗೊಂದು ಪ್ರಶ್ನೆ ಮಾಡುವೆನು. ಅದರ ಉತ್ತರವನ್ನು ಹೇಳಿದಮೇಲೆ ವರ್ಷಫಲವನ್ನು ಬರೆದು ಕೊಡುವಿರಂತೆ, ಅನ್ನಲು, ಭೋಟುಸಿಂಗನು— " ಉತ್ತರಕೊಡುವೆನು " ಎಂದು ನುಡಿದು, ಒಂದು ಮಣ್ಣಿ ಹಲಗೆಯ ಮೇಲೆ ಚೌರಸಾಕೃತಿಯ ಮನೆಗಳನ್ನು ಹಾಕಿ ಅವುಗಳಲ್ಲಿ ಅಂಕೆಗಳನ್ನು ತುಂಬಿ, " ನೀವು ಕೇಳತಕ್ಕ ಪ್ರಶ್ನವನ್ನು ಮನಸ್ಸಿನಲ್ಲಿ ಹಿಡಿದು ಯಾವದೊಂದು ಅಂಕೆಯ ಮೇಲೆ ಬೆರಳು ಇಡಿರೆ"ಂದು ಬೇಗ ಮೆಗೆ ಹೇಳಿದನು. ಬೇಗಮೆಯು ಆದರಂತೆ ಮಾಡಲು, ಭೋಟುಸಿಂಗನು ಬೆರಳುಗಳನ್ನು ಹಾಕಿ, ಮುಗಿಲ ಕಡೆಗೆ ನೋಡಿ, ಬೇಗಮೆಯ ಮುಖವನ್ನು ಪರೀಕ್ಷಿಸಿದಂತೆ ಮಾಡಿ ಆಕೆಯನ್ನು ಕುರಿತು— ಬೇಗಮಸಾಹೇಬರೇ, ನಿಮ್ಮ ಮನಸ್ಸಿನೊಳಗಿನ ಪ್ರಶ್ನದ ಉತ್ತರವನ್ನು ಹೇಳುತ್ತೇನೆ ಕೇಳಿರಿ. ಸದ್ಯಕ್ಕೆ ನಿಮ್ಮ ಬಳಿಯಲ್ಲಿ ಯಾವಳೋ ಒಬ್ಬ ಪರಕೀಯಳಾದ ಮನುಷ್ಯ ಳಿದ್ದಾಳೆ. ಆಕೆ ಬಂದಂದಿನಿಂದ ನಿಮ್ಮ ಮನಸ್ಸಿಗೆ ಸಮಾಧಾನವಿಲ್ಲ. ರಾತ್ರಿ ನಿಮಗೆ ನೆಟ್ಟಗೆ ನಿದ್ದೆಸಹ ಬರುವದಿಲ್ಲ. ಆಕೆಯನ್ನು ನೀವು ಎಲ್ಲಿ ಗಾದರೂ ದೂರ ದಾಟಿಸಿಕೊಡಬೇಕು. ದಿಲ್ಲಿಯ ಸಮೀಪದಲ್ಲಿ ಆಕೆಯನ್ನು ಇರಗೊಟ್ಟರೂ ನಿಮಗೆ ಸುಖವಾಗದು. ಆಕೆಯನ್ನು ಸಮೀಪದಲ್ಲಿಟ್ಟು ಕೊಳ್ಳುವದರಿಂದ ನಗರಸ್ವಾಮಿನಿಗೂ, ಸ್ವಾಮಿಗೂ ಏನಾದರೂ ಒಡಕು ಹುಟ್ಟಿ ಅನರ್ಥವಾಗುವಂತೆ ಆಕೆಯ ವಿಚಿತ್ರಗ್ರಹಯೋಗವಿರುತ್ತದೆ. ಮಲಿಕಾ ಬೇಗಮಸಾಹೇಬರೇ, ಈಗ ಹತ್ತು ಹದಿನೈದು ದಿವಸಗಳೊಳಗೆ ಆ ಹೆಂಗಸು ನಿಮ್ಮ ಬಳಿಗೆ ಬಂದಿರಬೇಕು. ಆಕೆ ಬಂದಂದಿನಿಂದ ನಿಮ್ಮ ಜೀವಕ್ಕೆ ಸುಖವಿಲ್ಲ. ನನ್ನ ಈ ಮಾತು ನಿಜವಿದ್ದರೆ ನಿಜವೆಂದು ಒಪ್ಪಿಕೊಳ್ಳಿರಿ. ಸುಳ್ಳಾದರೆ ನನ್ನ ಜ್ಯೋತಿಷ್ಯವು ತಪ್ಪಿತು. ನನ್ನ ಮಾತು ಸುಳ್ಳಾದರೆ ತಿರುಗಿ ಕೈಯಲ್ಲಿ ಪಂಚಾಂಗವನ್ನು ಹಿಡಿಯಲಿಕ್ಕಿಲ್ಲ ! ಬೇಗಮಸಾಹೇಬರೇ, ನಾನು ನಿಮಗೆ ಇನ್ನೊಂದು ಮಾತಿನ ಅನುಭವವನ್ನು ತಂದು ಕೊಡು ತ್ತೇನೆ, ಚಿತ್ತಯಿಸಬೇಕು. ನಿಮ್ಮ ಬಳಿಯಲ್ಲಿ ನಿಂತಿರುವ ಈ ದಾಸಿಯು ಬಾಲವಿಧವೆಯಿದ್ದಾಳೆ. ಈಕೆಯ ಮೋರೆಯನ್ನು ನೋಡಿದ ಕೂಡಲೆ

ಗಣಿತದಿಂದ ನನಗೆ ಗೊತ್ತಾದದ್ದೇನಂದರೆ— ಈಕೆಗೆ ಸ್ವತಃ ತನ್ನ ಜೀವಕ್ಕೆ ಸುಖವಿಲ್ಲ. ಈಕೆಯ ಸಂಬಂಧವನ್ನು ಮಾಡಿದವರೆಲ್ಲ ಮರಣಕ್ಕೆ ಗುರಿಯಾಗುವರು. ಈಕೆಯು ಬಾಲವಿಧವೆಯಿದ್ದದ್ದು ಸಟಿಯೋ ದಿಟವೋ ಎಂಬದನ್ನು ಈಗ ವಿಚಾರಿಸಿಬಿಟ್ಟರೆ, ನನ್ನ ಭವಿಷ್ಯದ ಸತ್ಯತೆಯು ತಮ್ಮ ಅನುಭವಕ್ಕೆ ಬಂದಂತಾಗುವದು. ಈಕೆಯನ್ನು ನೋಡಿದ ಕೂಡಲೆ ಜನರು ಮರುಳಾಗಿ ಹೋಗುವರು. ನನ್ನ ಮಾತಿನ ಅನುಭವವನ್ನು ನೋಡಿಯೇ ಬಿಡಬೇಕೆಂದು ನೀವು ನಿಶ್ಚಯಿಸಿದರೆ, ವಿಷ ಪರೀಕ್ಷೆ ಮಾಡಿಯೇ ತೀರಬೇಕೆಂದು ನಿಶ್ಚಯಿಸಿದಂತಾಗುತ್ತದೆ. ಆದ್ದರಿಂದ ಬೇಗಮುಸಾಹೇಬರೇ, ಈ ಹುಡುಗೆಯನ್ನು ಒಂದು ಕ್ಷಣವಾದರೂ ತಮ್ಮ ಬಳಿಯಲ್ಲಿ ಇಟ್ಟುಕೊಳ್ಳಬೇಡಿರಿ. ತಮ್ಮ ಹಿತಕ್ಕಾಗಿಯೇ ನಾನು ಇಷ್ಟು ಹೇಳುತ್ತೇನೆ ತಮ್ಮ ಮನಸ್ಸಿಗೆ ಬಂದರೆ ಈಕೆಯನ್ನು ದಾಟಿಸಬೇಕು, ಬಾರದಿದ್ದರೆ ಬಿಡಬೇಕು. ತಮ್ಮ ಇಚ್ಛೆಯು. ಇನ್ನು ನನಗೆ ಅಪ್ಪಣೆಕೊಟ್ಟರೆ ಹೋಗುತ್ತೇನೆ. ಅಪ್ಪಣೆಯಾದರೆ ನಾಳೆ ಮತ್ತೆ ಬರುವೆನು. ಅಪ್ಪಣೆಯಾದಂತೆ ನಡಕೊಳ್ಳುವೆನು.

ಭೋಟುಸಿಂಗನ ಈ ಭವಿಷ್ಯವು ಉದೇಪುರಿಯ ಮನಸ್ಸಿಗೆ ಹತ್ತಿತು. ಈತನು ಹೇಳಿದ ಮಾತುಗಳೆಲ್ಲ ನಿಜವಿರುವದರಿಂದ, ಈತನಿಂದ ವರ್ಷಫಲವನ್ನು ಬರಿಸಿಕೊಳ್ಳಬೇಕೆಂದು ಆಕೆಯು ನಿಶ್ಚಯಿಸಿದಳು. ಆದರೆ ಬಾದಶಹನು ಬರುವ ಹೊತ್ತಾದದ್ದನ್ನರಿತು, ನಾಳೆ ಮತ್ತೆ ಬಂದು ಭೆಟ್ಟಿಯಾಗೆಂದು ಹೇಳಿ, ಉಚಿತವನ್ನು ಕೊಟ್ಟು, ಮತ್ತೆ ನಾಳೆ ಕೊಡುವೆನೆಂದು ಹೇಳಿ, ಈತನನ್ನು ಕರಕೊಂಡು ಹೋಗೆಂದು ಮಸಾವುದನಿಗೆ ಅಪ್ಪಣೆಮಾಡಿದಳು. ಭೋಟುಸಿಂಗನು ಬೇಗಮೆಗೆ ಕುರ್ನಿಸಾತವನ್ನು ಮಾಡಿ ಮಸಾವುದನ ಬೆನ್ನ ಹತ್ತಿ ನಡೆದನು. ಹೋಗುವಾಗ ಆತನು ರತ್ನಗಂಬಳಿಯ ತುದಿಗೆ ಕಾಲು ಸಿಕ್ಕಿತೆಂಬ ನೆವದಿಂದ ಕೆಳಗೆ ಬಗ್ಗಿ ಒಂದು ಪತ್ರವನ್ನು ರತ್ನಗಂಬಳಿಯ ತುದಿಯ ಮಡಿಕೆಯ ಕೆಳಗೆ ಇಟ್ಟು ಮುಂದಕ್ಕೆ ಸಾಗಿದನು. ಇದನ್ನೆಲ್ಲ ನೋಡುತ್ತಿದ್ದ ಇಂದಿರೆಯು— ಎಂಥ ವಿಚಿತ್ರಜನರಿವರು, ನೆಟ್ಟಗೆ ನಡೆಯಲಿಕ್ಕೆ ಸಹ ಬರುವದಿಲ್ಲ. ರತ್ನಗಂಬಳಿಯನ್ನು ಮುದುಡಿಬಿಟ್ಟರು, ಎಂದು ಲಗುಬಗೆಯಿಂದ ಹೋಗಿ ರತ್ನಗಂಬಳಿಯನ್ನು ನೆಟ್ಟಗೆ ಮಾಡುವ ನೆವದಿಂದ ಆ ಚೀಟಿಯನ್ನು ತಕ್ಕೊಂಡು ಮುಚ್ಚಿ ಇಟ್ಟುಕೊಂಡಳು. ಬೇಗ

ಮೆಯು ವಿಚಾರ ಮಗ್ನಳಾಗಿ ಯೋಚಿಸುತ್ತ ಕುಳಿತುಬಿಟ್ಟಿದ್ದರಿಂದ ಇಂದಿರೆಯು ಪಡದೆಯ ಮರೆಯಿಂದ ಒಳಗೆ ಹೊರಟುಹೋದಳು. ಇತ್ತ ಮುಸಾವುದನ ಬೆನ್ನಹತ್ತಿ ಭೋಟುಸಿಂಗನು ಸಾಗಿದ್ದನು. ಅಷ್ಟರಲ್ಲಿ ಬಾದಶಹನು ಬರಲು, ಮುಸಾವುದನು ಬಾಯಲ್ಲಿ ಎಸರು ಇಲ್ಲದೆ ಓಡಾಡಹತ್ತಿ, ಭೋಟುಸಿಂಗನನ್ನು ಒಂದು ನಡುವಿನ ಬಾಗಿಲ ಬಳಿಯಲ್ಲಿ ಅಡಗಿಸಿ, ಈಗ ಬರುತ್ತೇನೆಂದು ಹೇಳಿ ಹೊರಟುಹೋದನು; ಆದರೆ ಎಷ್ಟು ಹೊತ್ತಾದರೂ ಮುಸಾವುದನು ಭೋಟುಸಿಂಗನ ಬಳಿಗೆ ಬರಲಿಲ್ಲ. ಹೊತ್ತು ಮುಣುಗಿ ಕತ್ತಲಾದರೂ ಆತನ ಸುಳವು ಇಲ್ಲ. ಅಷ್ಟರಲ್ಲಿ ಮೂರು ನಾಲ್ಕು ಜನರು ಅಲ್ಲಿಗೆ ಬಂದು ವಸ್ತ್ರದಿಂದ ಭೋಟುಸಿಂಗನ ಕಣ್ಣುಗಳನ್ನು ಗಟ್ಟಿಯಾಗಿ ಕಟ್ಟಿ, ಆವನ ಕೈಕಾಲುಗಳನ್ನು ಬಿಗಿದು ಮೊಟ್ಟೆ ಕಟ್ಟಿ ಎತ್ತೋ ಹೊತ್ತುಕೊಂಡು ನಡೆದರು. ಯಾರು ಬಂದರು, ತನ್ನನ್ನು ಎಲ್ಲಿಗೆ ಹೊತ್ತುಕೊಂಡು ಹೋಗುತ್ತಾರೆಂಬದೇನೂ ತಿಳಿಯದೆ, ಭೋಟುಸಿಂಗನು ವ್ಯಸನ ಪಡಹತ್ತಿದನು. ಮುಂದೆ ಕೆಲವು ಹೊತ್ತಿನ ಮೇಲೆ ಆತನಿಗೆ ಕಾರಾಗೃಹ ಭೋಗವು ಪ್ರಾಪ್ತವಾಯಿತು. ಬೇಗಮೆಯ ಸುಪ್ರಸನ್ನತೆಯಿಂದ ತನ್ನ ತಂಗಿಯ ಬಂಧವಿಮೋಚನವಾಗಬಹುದೆಂದು ಆತನು ಸಂತೋಷಪಡುತ್ತಿರಲು, ಆತನ ಪಾಲಿಗೆ ಕೈಯ ತುತ್ತು ಬಾಯಿಗೆ ಬಾರದಂತಾಯಿತು !

## ೧೨ ನೆಯ ಪ್ರಕರಣ

# ಸಂತಾಪಾತಿರೇಕ.

ಸದ್ಯಕ್ಕೆ ಭೋಟುಸಿಂಗನನ್ನು ಕಾರಾಗೃಹದಲ್ಲಿ ಕೊಳೆಯಗೊಟ್ಟು, ಇಂದಿರೆಯನ್ನು ಬೇಗಮೆಯ ಅಂತರ್ಗೃಹದಲ್ಲಿ ಬಿಟ್ಟು ನಾವೆಲ್ಲರೂ ರೂಪನಗರಕ್ಕೆ ಹೋಗೋಣ. ರೂಪಮತಿಯೂ, ಆಕೆಯ ತಂದೆಯಾದ ವಿಜಯಸಿಂಹನೂ ಚಂದ್ರಾವತಿಗೆ ಸಮಾಧಾನದ ಪತ್ರಬರೆದು ಕಾಬೂಲಕ್ಕೆ ಈವೊದಲೆ ಕಳಿಸಿದ್ದನ್ನು, ವಾಚಕರು ಮರೆತಿರಲಿಕ್ಕಿಲ್ಲ. ಮರೆತಿದ್ದರೂ ಕಷ್ಟಪಟ್ಟು ನೆನಪು ಮಾಡಿಕೊಳ್ಳಬೇಕು. ನಾವು ಬರೆದ ಪತ್ರಗಳನ್ನು ಔರಂಗಜೇಬನ ಗುಪ್ತಚಾರರು ಕಸಿದುಕೊಂಡು ಬಾದಶಹನಿಗೆ ಕೊಡಬಹುದೆಂದು ತಿಳಿದು, ಆ ತಂದೆಯೂ, ಮಗಳೂ ಬಾದಶಹನಿಗೆ ಸಿಟ್ಟು ಬರುವಂತೆ ಸಿಟ್ಟಿನಿಂದ ಬುದ್ಧಿಪೂರ್ವಕವಾಗಿ ಸಿಕ್ಕ ಹಾಗೆ ಪತ್ರಬರೆದಿದ್ದರೆಂಬದನ್ನು ವಾಚಕರಿಗೆ ನಾವು ನೆನಪುಮಾಡಿ ಕೊಡುವೆವು. ಅವರು ತಮ್ಮ ಪತ್ರಗಳಲ್ಲಿ ಔರಂಗಜೇಬನನ್ನು ಬಹಳವಾಗಿ ಆಡಿಕೊಂಡಿದ್ದರು. ರೂಪಮತಿಯು ಬಾದಶಹನನ್ನಲ್ಲದೆ, ಉದೇಪುರೀ ಬೇಗಮೆಯನ್ನು ಮನಸ್ಸಿಗೆ ಬಂದಂತೆ ಜರೆದಿದ್ದಳು. ಆ ಪತ್ರಗಳನ್ನು ವಿಜಯಸಿಂಹನ ಚಾರರು ಕಾಬೂಲಕ್ಕೆ ಚಂಪ್ರಾವತಿಯ ಬಳಿಗೆಒಯ್ಯುತ್ತಿರಲು, ಔರಂಗಜೇಬನ ಚಾರರು ಅವರನ್ನು ನಡಹಾದಿಯಲ್ಲಿ ತುಂಡರಿಸಿ, ಅವರ ಬಳಿಯಲ್ಲಿದ್ದ ಪತ್ರಗಳನ್ನು ತಕ್ಕೊಂಡು ಹೋಗಿ ಬಾದಶಹನ ಕೈಯಲ್ಲಿ ಕೊಟ್ಟರು. ಆಗ ಬಾದಶಹನು ಉದೇಪುರೀ ಬೇಗಮೆಯ ಬಳಿಯಲ್ಲಿದ್ದನು. ಬೇಗಮೆಯು ಆ ಪತ್ರಗಳನ್ನು ಓದಿ, ರೂಪಮತಿಯು ತನ್ನನ್ನು ಕುಲಗೇಡಿ

ಯೆಂದು ಮನಸ್ಸಿಗೆ ಬಂದಂತೆ ಹಳಿದಿರುವದನ್ನು ಮನಸ್ಸಿಗೆ ಹಚ್ಚಿಕೊಂಡು ಸಂತಾಪಗೊಂಡು—“ ಇಂಥ ಕ್ಷುದ್ರ ರಜಪೂತ ಸಂಸ್ಥಾನಿಕನ ಪೋರಿ ಯೊಬ್ಬಳು ತಮ್ಮನ್ನೂ, ನನ್ನನ್ನೂ ಇಷ್ಟು ಹಳಿಯಹತ್ತಿದ ಬಳಿಕ ಬಾದ ಶಹರ ಗೌರವವೆಲ್ಲಿ ಉಳಿಯಿತೆಂ”ದು ಔರಂಗಜೇಬನನ್ನು ರೇಗಿಗೆಬ್ಬಿಸಿದಳು. ಔರಂಗಜೇಬನು ಮೊದಲೇ ಅಭಿಮಾನಿಯು, ರಜಪೂತರ ಮೇಲೆ ಹುಟ್ಟಾ ಬೆಂಕಿಯನ್ನು ಕಾರುವವನು. ಅದರಲ್ಲಿ ಉದೇಪುರಿಯಂಥ ಅತ್ಯಂತ ಪ್ರೀತಿಯ ಬೇಗವೆಯು ಆತನ ಮನಸ್ಸಿಗೆ ಹತ್ತುವಂತೆ ಮಾತಾಡಿ, ಮುನಿಸುಗೊಂಡ ಬಳಿಕ ಕೇಳುವದೇನು ? ಆತನು ತನ್ನ ಪ್ರೀತಿಯ ಉದೇಪುರಿಯನ್ನು ಹಲವು ವಿಧದಿಂದ ರಮಿಸಿ ಆಕೆಯನ್ನು ಸಮಾಧಾನಮಾಡುವದಕ್ಕಾಗಿ—ಉದೇಪುರೀ, ನೀನು ಆಲಮಗೀರನ ಯೋಗ್ಯತೆಯನ್ನು ಅರಿಯದವಳೇನು ? ಔರಂಗಜೇಬ ಬಾದಶಹನ ಮುಖದಿಂದ ಹೊರಟ ಶಬ್ದಗಳು ವ್ಯರ್ಥವಾಗಲಿಕ್ಕಿಲ್ಲೆಂಬ ಖ್ಯಾತಿ ಯನ್ನು ನೆನಪಿಗೆ ತಂದುಕೋ. ನಿನ್ನ ಮುಂದೆ ಪ್ರತಿಜ್ಞೆಯಿಂದ ನಾನಾಡುವ ಮಾತುಗಳನ್ನು ಲಕ್ಷಗೊಟ್ಟು ಕೇಳು. ಆಲಮಗೀರನು ಬಹಳ ಮಾತಾಡ ತಕ್ಕವನಲ್ಲ. ಮಾಡಿ ತೋರಿಸುವವನು. ನಿನಗೆ ಅಪಮಾನದ ಶಬ್ದಗಳನ್ನು ಬರೆದಿರುವ ಆ ರಜಪೂತ ಪೋರಿಯನ್ನು ನಿನ್ನ ದಾಸಿಯಾಗಿ ನಿನ್ನ ಅಂತ ರ್ಗೃಹದಲ್ಲಿ ಸೇರಿಸದಿದ್ದರೆ ಆಲಮಗೀರನೆಂಬ ಹೆಸರನ್ನು ಬಿಟ್ಟುಕೊಡುತ್ತೇನೆ. ಯಾರವರು ಹೊರಗೆ ? ಎಲಾ ಹೋಗಿರೋ..........ಇರಲಿ, ನಾನೇ ಹೋಗು ತ್ತೇನೆ. ಏ ಪ್ಯಾರೀ, ಆ ಪೋರಿಯನ್ನು ಈವೊತ್ತಿನಿಂದ ಎರಡು ತಿಂಗ ಳೊಳಗೆ ದಿಲ್ಲಿಪಟ್ಟಣಕ್ಕೆ ಎಳತಂದು ನಿನ್ನ ಜನಾನಖಾನೆಯ ಮುಖ್ಯ ನಾದ ಮಸಾವುದನಿಗೆ ಲಗ್ನಮಾಡಿಕೊಟ್ಟು ನಿನ್ನ ದಾಸಿಯನ್ನಾಗಿ ಮಾಡು ವೆನು. ಇದು ನಿನ್ನ ಆಲಮಗೀರ ಬಾದಶಹನ ಪ್ರತಿಜ್ಞೆಯೆಂದು ತಿಳಿ. ಆಲಮ ದುನಿಯಾದ ಬಾದಶಹನಾದ ಆಲಮಗೀರನು ನಿನ್ನ ದಾಸನಾಗಿರಲು, ನಿನಗೆ ಯಾತರದೇನು ಕೊರತೆ ? ಅನ್ನಲು, ಉದೇಪುರಿಯು— ಖಾವಿಂದ, ಇಂಥ ಅಭಿಮಾನಿಗಳಾದ ರಜಪೂತರು ಜೀವದಿಂದಿರುವವರೆಗೆ ಆಲಮದುನಿಯೆಯ ಬಾದಶಹರೆನಿಸಿಕೊಳ್ಳಲಿಕ್ಕೆ ತಮ್ಮ ಮನಸ್ಸಿಗೆ ನೆಟ್ಟಗಾಗುವದೇನು ? ನಾನು ಆ ರೂಪಮತಿಯನ್ನು ಚನ್ನಾಗಿ ಬಲ್ಲೆನು. ಆಕೆಯ ತಾಯಿಯು ಒಂದು ದಿನ ಬಹಳವಾಗಿ ನನ್ನ ಅಪಮಾನ ಮಾಡಿದ್ದರಿಂದ ನನಗೆ ಮೂರುದಿನ

ಅನ್ನವು ರುಚಿಪತ್ತಲಿಲ್ಲ. ಮುಂದೆ ನಾನು ತಮ್ಮ ಸೇವೆಗೆ ಬಂದಬಳಿಕ ಆಕೆಯ ಸೇಡು ತೀರಿಸಿಕೊಳ್ಳಬೇಕೆಂದು ಮಾಡಿದ್ದೆನು; ಆದರೆ ಸ್ವಲ್ಪ ದಿನ ಗಳಲ್ಲಿ ಆಕೆಯು ಸತ್ತು ಹೋದಳು. ಖಾವಿಂದ, ಆ ಅಪಮಾನದ ಕಾರಣ ವನ್ನು ಹೇಳುವೆನು ಕೇಳಿರಿ. ನಮ್ಮ ತಂದೆಯು ನನ್ನನ್ನು ನಿಮಗೆ ಕೊಡ ಬೇಕೆಂದು ಮಾಡಿದ್ದರಿಂದ ಆಕೆಗೆ ಅಷ್ಟು ಸಿಟ್ಟು ಬಂದು ನನ್ನ ಮಾನಖಂಡನ ಮಾಡಿದಳು. ಖಾವಿಂದ, ಆ ಹಿಂದಿನ ಅಪಮಾನದ ಸಲುವಾಗಿಯೂ, ಇಂದಿನ ಪತ್ರದಿಂದ ಆದ ಅಪಮಾನದ ಸಲುವಾಗಿಯೂ ಆ ಸೊಕ್ಕಿನ ಪೋರಿಯ ಸೇಡನ್ನು ಚನ್ನಾಗಿ ತೀರಿಸಿಕೊಳ್ಳಬೇಕು. ತಾವು ತಮ್ಮ ಪ್ರತಿಜ್ಞೆಯನ್ನು ಪೂರ್ಣ ಮಾಡುವಿರಷ್ಟೆ ? ಇಲ್ಲದಿದ್ದರೆ, ರಜಪೂತರ ಉಸಾಬರಿಗೆ ಯಾರು ಹೋಗಬೇಕೆಂದು, ಇಲ್ಲಿಯ ಪ್ರತಿಜ್ಞೆಯನ್ನು ಇಲ್ಲಿಯೇ ಮರೆತು ಬಿಟ್ಟೀರಿ. ರೂಪನಗರದ ವಿಜಯಸಿಂಹನ ಪಾರಪತ್ಯ ಮಾಡುವವೇನು ಸಾಮಾನ್ಯ ಕೆಲಸವಲ್ಲ. ಆತನ ರಾಜ್ಯವು ಸಣ್ಣದು, ತೀರಸಣ್ಣದು; ಆದರೆ ಇಡಿಯ ರಜ ಪೂತಸ್ಥಾನದ ಮೇಲೆ ವಿಜಯಸಿಂಹನ ವರ್ಚಸ್ಸು ಮಿತಿಮೀರಿ ಇರುವದು. ಆತನ ಮೇಲೆ ಸಂಕಟ ಬಂದಿರುವದೆಂಬದನ್ನು ಕೇಳಿದರೆ, ಇಡಿಯ ರಜಪೂತಸ್ಥಾನವು ಒಕ್ಕಟ್ಟಾಗಬಹುದು. ಅದರಲ್ಲಿ ಜಸವಂತಸಿಂಗನ ಮರಣ ದಿಂದ ರಜಪೂತರ ಮನಸ್ಸಿನ ಸ್ಥಿತಿಯು ಹ್ಯಾಗಾಗಿರುವದೆಂಬದನ್ನು ಯಾರು ಹೇಳಬೇಕು ? ಆದ್ದರಿಂದ ಪ್ರತಿಜ್ಞೆಯನ್ನು ವಿಚಾರಪೂರ್ವಕವಾಗಿ ಮಾಡ ಬೇಕು. ನಾನೇನು ತಮ್ಮ ದಾಸಿಯು. ನಾನು ಅಘುತಿಂದು ಸತ್ತರೆ, ನನ್ನಂಥ ನಾಲ್ಕುಜನ ದಾಸಿಯರು ತಮ್ಮನ್ನು ಓಲಯಿಸಬಹುದು. ಅನ್ನಲು, ಔರಂಗ ಜೇಬನು— ಪ್ರಿಯೇ, ಇಂಥ ಅಭದ್ರಮಾತುಗಳನ್ನು ಆಡಬೇಡ. ನನ್ನ ಪ್ರತಿಜ್ಞೆಯು ಎಂದೂ ವ್ಯರ್ಥವಾಗಲಿಕ್ಕಿಲ್ಲೆಂಬ ಮಾತನ್ನು ನಂಬು.

ಈ ಮೇರೆಗೆ ನುಡಿದು ಔರಂಗಜೇಬನು ಅಲ್ಲಿಂದ ಹೊರಟು ದಿವಾಣ ಖಾನೆಗೆ ಹೋಗಿ ವಿಜಯಸಿಂಹನಿಗೆ ಕೈಮುಟ್ಟ ಪತ್ರವನ್ನು ಬರೆದನು. ಆ ಮೇಲೆ ಕೂಡಲೆ ಆತನು ಸಾದತಖಾನನೆಂಬ ಸರದಾರನನ್ನು ಕರೆಸಿ—ನೀನು ಎರಡು ಸಾವಿರ ಸೈನ್ಯದೊಡನೆ ಅಬೂಪರ್ವತದ ಮೇಲೆ ಸಾಗಿ ಹೋಗಿ, ರೂಪನಗರದ ವಿಜಯಸಿಂಹನನ್ನು ಸೆರೆಹಿಡಕೊಂಡು ಬಾ. ಮೊದಲು ಆತ ನಿಗೆ ಈ ಪತ್ರವನ್ನು ಕೊಡು. ಪತ್ರದಂತೆ ಎರಡನೆಯಮಾತು ಆಡದೆ ಆತನು

ತನ್ನ ಮಗಳೊಡನೆ ನಿನ್ನ ಸಂಗಡ ಬಂದರೆ ನೆಟ್ಟಗಾಯಿತು. ಇಲ್ಲದಿದ್ದರೆ, ಆ ರೂಪನಗರವನ್ನೂ, ಅದರ ಕೋಟೆಯನ್ನೂ ಸಂಪೂರ್ಣವಾಗಿ ನಾಶಮಾಡಿ ಬಾ. ಲೇಶವಾದರೂ ದಯೆಯನ್ನು ತೋರಿಸದೆ ತಂದೆಯನ್ನೂ, ಮಗಳನ್ನೂ ಸೆರೆಹಿಡಕೊಂಡು ಬರತಕ್ಕದ್ದು. ಉನ್ಮತ್ತರನ್ನು ಹೀಗೆ ದಂಡಿಸದಿದ್ದರೆ ವರ್ಚಸ್ಸು ಕೂಡದು— ರಾಜ್ಯಕಾರಭಾರವು ಸುಯಂತ್ರವಾಗಿ ಸಾಗದು, ಎಂದು ಆಜ್ಞಾಪಿಸಿದನು. ಅಪ್ಪಣೆಯಂತೆ ಸಾದತಖಾನನು ಕೂಡಲೆ ಸೈನ್ಯದೊಡನೆ ಸಾಗಿ, ಆದಷ್ಟು ಒತ್ತರದಿಂದ ಮಾರ್ಗವನ್ನು ಕ್ರಮಿಸಿ ರೂಪನಗರಕ್ಕೆ ಸಮೀಪವಾಗಿ ಸೈನ್ಯದ ತಳವೂರಿದನು. ಹೀಗೆ ತನ್ನ ಮೇಲೆ ಸೈನ್ಯವು ಸಾಗಿ ಬರುತ್ತದೆಂಬ ಸುದ್ದಿಯು ವಿಜಯಸಿಂಹನಿಗೆ ಮೊದಲೇ ಗೊತ್ತಾಗಿತ್ತು. ತನ್ನಮೇಲೆ ರಜಪೂತರ ವಿಶ್ವಾಸವು ಎಷ್ಟು ಇದ್ದರೂ ಅವರು ಹೊತ್ತಿಗೆ ಸಹಾಯ ಮಾಡುವರೆಂದು ಆತನು ನಂಬುವಂತೆ ಇದ್ದಿಲ್ಲ; ಯಾಕಂದರೆ, ಆಗ ರಜಪೂತಸ್ಥಾನದಲ್ಲಿ ಒಕ್ಕಟ್ಟು ಇದ್ದಿಲ್ಲ. ಪ್ರಸಂಗದಲ್ಲಿ ಜಸವಂತಸಿಂಗನಂತೆ ಬಾದಶಹನ ಮುಂದೆ ಬಾಲಗುಂಡಾಡಿಸತಕ್ಕವರೇ ವಿಶೇಷವಾಗಿ ಇದ್ದರಲ್ಲದೆ, ದೇಶಾಭಿಮಾನ, ಧರ್ಮಾಭಿಮಾನ, ಜಾತ್ಯಾಭಿಮಾನ, ಕುಲಾಭಿಮಾನ, ಸ್ವಾಭಿಮಾನಗಳಿಂದ ಬಾದಶಹನ ಸೈನ್ಯಕ್ಕೆ ಎದರಾಗಿ ಕಾದುವವರು ರಜಪೂತರಲ್ಲಿ ವಿಶೇಷವಾಗಿ ಇದ್ದಿಲ್ಲ. ಉದೇಪುರದ ಒಬ್ಬ ರಾಜಸಿಂಹನ ಆಶೆಮಾತ್ರ ವಿಜಯಸಿಂಹನಿಗೆ ಇತ್ತು. ತನ್ನನ್ನೂ, ತನ್ನ ಮಗಳನ್ನೂ ಸೆರೆಹಿಡಕೊಂಡು ಹೋಗಲಿಕ್ಕೆ ಬಾದಶಹನ ಸೈನ್ಯವು ಬರುವದೆಂಬದನ್ನು ಕೇಳಿ ಆ ವೃದ್ಧರಜಪೂತನು ಸಂತಾಪದಿಂದ ಒಂದೇ ಸವನೆ ಉರಿಯುತ್ತಿದ್ದನು. ಬೇಕಾದವರು ತನಗೆ ಸಹಾಯ ಮಾಡಲಿ, ಬೇಡಾದವರು ಬಿಡಲಿ, ತಾನಂತು ತನ್ನ ಪ್ರಾಣವಿರುವತನಕ ಮಗಳ ಸಂರಕ್ಷಣಮಾಡುವೆನೆಂತಲೂ, ಕೈ ಮೀರಿದರೆ ಮಗಳನ್ನು ಈಶ್ವರಾರ್ಪಣಮಾಡಿ ತಾನು ಸಮರ ಭೂಮಿಯಲ್ಲಿ ದೇಹವಿಡುವೆನೆಂತಲೂ, ಆತನು ನಿಶ್ಚಯಿಸಿದ್ದನು. ತನ್ನ ಸೈನಿಕರನ್ನೆಲ್ಲ ಕರಿಸಿ ಕುಲಾಭಿಮಾನವನ್ನೂ, ಮಗಳ ಮಾನವನ್ನೂ ಕಾಯಬೇಕೆಂದು ಹೇಳಿ, ಆತನು ಯುದ್ಧದ ಸಿದ್ಧತೆಯನ್ನು ಮಾಡಿದನು. ಇತ್ತ ಸಾದತಖಾನನು ಸೈನ್ಯದ ತಳವೂರಿದ ಕೂಡಲೆ ಬಾದಶಹನ ಪತ್ರವನ್ನು ಒಬ್ಬ ಚಾರನ ಸಂಗಡ ವಿಜಯಸಿಂಹನ ಕಡೆಗೆ ಕಳಿಸಿದನು. ಆ ಪತ್ರದಲ್ಲಿ ಬಾದಶಹನು ಕೈಮುಟ್ಟಿ

ನಾಲ್ಕೇ ಸಾಲುಗಳನ್ನು ಬರೆದಿದ್ದನು. ಫಾರಸಿ ಭಾಷೆಯಲ್ಲಿ ಬರೆದಿದ್ದ ಆ ಪತ್ರದ ಕನ್ನಡ ಭಾಷಾಂತರವೇನಂದರೆ— "ನೀನೂ ನಿನ್ನ ಮಗಳೂ ಈ ಪತ್ರವನ್ನು ನೋಡಿದಕೂಡಲೆ ಸಾದತಖಾನನ ಸ್ವಾಧೀನರಾಗಿ ಇತ್ತ ಕಡೆಗೆ ಹೊರಟು ಬರ್ರಿ. ಈ ಮಾತಿಗೆ ನೀನು ಸಂತೋಷದಿಂದ ಒಪ್ಪಿಕೊಳ್ಳದಿದ್ದರೆ ಒತ್ತಾಯದಿಂದ ಕಾರ್ಯಸಾಧಿಸಲಿಕ್ಕೆ ಸಾದತಖಾನನಿಗೆ ಅಪ್ಪಣೆಯಾಗಿದೆ. ಆಲಮಗೀರ ಬಾದಶಹನು ತನ್ನಮನಸ್ಸಿನಲ್ಲಿ ಬಂದದ್ದನ್ನು ಮಾಡಲಿಲ್ಲೆಂದು ಈವರೆಗೂ ಆಗಿರುವದಿಲ್ಲ.

ಪತ್ರವನ್ನು ಓದಿದಕೂಡಲೆ ವಿಜಯಸಿಂಹನು ಸಂತಾಪಗೊಂಡನು. ಆ ಸಂತಾಪದಭರದಲ್ಲಿ ಆತನು ಔರಂಗಜೇಬನ ಚಾರನನ್ನು ಗದ್ದರಿಸಿ ಕರೆದು— ಇತ್ತ ನೋಡು, ಈ ಉತ್ತರವನ್ನು ನಿನ್ನ ಯಜಮಾನನಿಗೆ ಹೋಗಿ ಹೇಳು, ಎಂದು ನುಡಿದು, ಮೂರುಸಾರೆ ಆ ಪತ್ರದಮೇಲೆ ಉಗುಳಿದನು. ಆ ಮೇಲೆ ಅದನ್ನು ನೆಲದ ಮೇಲೆ ಚಲ್ಲಿಕೊಟ್ಟು, ಕಾಲೊಳಗಿನಜೋಡುಗಳಿಂದ ಅದನ್ನು ನೆಲಕ್ಕೆ ತಿಕ್ಕಿ, ಜೋಡಿನ ಹಿಮ್ಮಡದಿಂದ ಅದನ್ನು ಚಾರನ ಮೈಮೇಲೆ ಚಿಮ್ಮಿದನು. ಅದನ್ನು ನೋಡಿ ಚಾರನು—"ಕೃಷ್ಣಸರ್ಪದ ಹೆಡೆಗೆ ಹೊಡೆಯುವದು ಸಹ ಇಷ್ಟು ಭಯಂಕರವಲ್ಲೆಂ"ಬವಿಷ್ಟೇ ಶಬ್ದಗಳನ್ನು ನುಡಿದು, ಉಗುಳಿನಿಂದ ತೊಯ್ದು, ಹಾಗು ಮೆಟ್ಟಿನಿಂದ ತಿಕ್ಕಿ ಮಣ್ಣಾಗಿದ್ದ ಆ ಪತ್ರವನ್ನು ತಕ್ಕೊಂಡು ಹೊರಟು ಹೋದನು. ಆಗ ರೂಪಮತಿಯು ತಂದೆಯ ಬಳಿಯಲ್ಲಿ ಕುಳಿತುಕೊಂಡಿದ್ದಳು. ಆಕೆಯು— "ಅಪ್ಪಾ, ಅದರಲ್ಲಿ ಏನು ಬರೆದಿರುವದು?" ಎಂದು ಕೇಳಲು, ಸಂತಾಪಾತಿರೇಕದಿಂದ ಆತನ ತುಟಿಯು– ಕಿಂಬಹುನಾ ಆತನ ಸರ್ವಾಂಗವು ಇನ್ನೂ ನಡಗುತಿದ್ದದರಿಂದ, ಆತನಿಂದ ಉತ್ತರಕೊಡುವದಾಗಲಿಲ್ಲ. ಮುದುಕನ ಕಣ್ಣುಗಳು ಕೆಂಡದಂತಾಗಿದ್ದವು. ಸಂತಾಪದಿಂದ ಆತನಿಗೆ ಏನೂ ಕಾಣದಹಾಗಾಗಲು, ಕ್ಷಣಮಾತ್ರ ಅವನು ತನ್ನ ಮಗಳ ಮೋರೆಯನ್ನು ನೋಡುತ್ತ ಸುಮ್ಮನೆ ಕುಳಿತುಕೊಂಡನು. ರೂಪಮತಿಗೆ ಈ ಮೊದಲೆ ಎಲ್ಲ ಸುದ್ದಿಯು ಗೊತ್ತಾಗಿತ್ತು. ಆದರೂ ತಂದೆಗೆ ಇಷ್ಟು ಸಂತಾಪವನ್ನುಂಟುಮಾಡುವ ಯಾವ ಶಬ್ದಗಳನ್ನು ಬಾದಶಹನು ಬರೆದಿರುವನೆಂಬದನ್ನು ಕೇಳುವ ಕುತೂಹಲವು ಆಕೆಯಲ್ಲಿ ಉತ್ಪನ್ನವಾಗಿತ್ತು;

ತನ್ನ ತಂದೆಯನ್ನು ಆಗ್ರಹದಿಂದ ಕೇಳಲಿಕ್ಕೆ ಇದು ಸಮಯವಲ್ಲೆಂದು ತಿಳಿದು ಆಕೆಯು ಸುಮ್ಮನಾದಳು. ಕೆಲಹೊತ್ತಿನ ಮೇಲೆ ವಿಜಯಸಿಂಹನು ಸ್ವಲ್ಪ ಶಾಂತನಾಗಿ ತನ್ನ ಸೇನಾಪತಿಯನ್ನು ಕರೆಸಿ ತನ್ನ ದುರ್ಗದ ಸುತ್ತುಮುತ್ತು ಸೈನ್ಯದ ವ್ಯವಸ್ಥೆಯನ್ನು ಹ್ಯಾಗೆ ಮಾಡಬೇಕೆಂಬದನ್ನು ಹೇಳಿಬಿಟ್ಟನು. ಸಾದತಖಾನನು ಇನ್ನುಮೇಲೆ ತನ್ನಿಂದಾದಷ್ಟು ಯತ್ನಮಾಡಿ ಬೇಕಾದ ಉಪಾಯದಿಂದ ತನ್ನನ್ನೂ, ತನ್ನ ಮಗಳನ್ನೂ ಸೆರೆಹಿಡಿದು ಬಾದಶಹನ ಬಳಿಗೆ ಒಯ್ಯದೆ ಬಿಡನೆಂದು ಆ ವೃದ್ಧ ರಜಪೂತನು ನಿಶ್ಚಯಿಸಿದ್ದನು. ಆತನನ್ನು ಪರಮಾವಧಿಯಾಗಿ ಸಿಟ್ಟಿಗೆಬ್ಬಿಸಿರುವದರಿಂದ ಖಾನನು ಕ್ಷಣವಾದರೂ ವಿಲಂಬಮಾಡದೆ ಕಾರ್ಯಸಾಧಿಸುವನೆಂಬ ಮಾತನ್ನು ಸೇನಾಪತಿಯ ಮುಂದೆ ಹೇಳಿಬಿಟ್ಟನು. ಕೂಡಲೆ ಆ ವೃದ್ಧವೀರನ ಅಪ್ಪಣೆಯಂತೆ ಎಲ್ಲ ವ್ಯವಸ್ಥೆಯಾಯಿತು. ತನ್ನ ಸ್ಥಿತಿಯು ಈಗ ಹ್ಯಾಗಾಗಿರುತ್ತದೆ, ಉಳಿದ ರಜಪೂತರು ಈಗ ಏನು ಮಾಡತಕ್ಕದ್ದು ಎಂಬದನ್ನು ರಜಪೂತರೆನಿಸುವವರಿಗೆ ತಿಳಿಸಬೇಕೆಂದು ವಿಜಯಸಿಂಹನು ಪತ್ರಗಳನ್ನು ಬರೆಯಹತ್ತಿದನು. ಯಾವತ್ತು ಪತ್ರಗಳನ್ನು ಕೈಮುಟ್ಟಿ ಬರೆದನು. ಪತ್ರಗಳನ್ನು ಸುಮ್ಮನೆ ಬೆಳಸಿಬರೆಯದೆ, ಸ್ವಲ್ಪದರಲ್ಲಿ ರಜಪೂತರ ದೇಶಾಭಿಮಾನ, ಕುಲಾಭಿಮಾನಗಳು ಜಾಗ್ರತವಾಗುವಂತೆ ಬರೆದಿದ್ದನು. ಅವುಗಳಲ್ಲಿ ಒಂದನ್ನು ಇಲ್ಲಿ ಮಾದರಿಗಾಗಿ ಕೊಟ್ಟಿರುತ್ತದೆ. ರಾಜಸಿಂಹನು ಈ ಪತ್ರವನ್ನು ತನ್ನ ಸಮಾನಸ್ಕಂಧನಾದ ಬೇರೊಬ್ಬ ಸಂಸ್ಥಾನಿಕನಿಗೆ ಬರೆದಿದ್ದನು. ಆದರ ಅಭಿಪ್ರಾಯವು ಹ್ಯಾಗಂದರೆ---

" ವೀರರೇ, ರಜಪೂತರ ಚಂದ್ರವಂಸವಿರಲಿ, ಸೂರ್ಯವಂಶವಿರಲಿ, ಸೂರ್ಯ-ಚಂದ್ರರಿಬ್ಬರಿಗೂ ಖಗ್ರಾಸಗ್ರಹಣ ಹಿಡಿಯುವ ಪ್ರಸಂಗವು ಬಂದೊದಗಿರುತ್ತದೆ. ಈಗ ನೀವು ಕಗ್ಗತ್ತಲೆಯಲ್ಲಿ ಮುಣುಗಿ ಹೋಗಿ, ಭಂಗಬಟ್ಟು ಮಾನ ಮರ್ಯಾದೆಯಿಲ್ಲದೆ, ಹೊಟ್ಟೆಹೊರಕೊಂಡು ಹೆಂಡಿರು-ಮಕ್ಕಳನ್ನು ಅವಿಂಥರಿಗೆ ಕೊಡುವಿರೋ, ಅಥವಾ ಹೊತ್ತುಬಂದರೆ ಆ ಹೆಂಡಿರು-ಮಕ್ಕಳನ್ನು ನಿಮಗಿಂತ ಮೊದಲೆ ಕೈಮುಟ್ಟಿ ಸ್ವರ್ಗಕ್ಕೆ ಕಳಿಸಿಕೊಟ್ಟು, ನೀವು ರಣಾಂಗಣದಲ್ಲಿ ಮಡಿದು ಪೂರ್ವಜರಲ್ಲಿ ದೃಷ್ಟಿಯನ್ನಿಟ್ಟು ಅವರನ್ನು ಹಿಂಬಾಲಿಸಿ ವೀರ ಸ್ವರ್ಗಕ್ಕೆ ಹೋಗುವಿರೋ? ನಮ್ಮನ್ನು

ಕಾಫರರೆಂದು ತಿಳಿಯುವ ಆಲಮಗೀರಬಾದಶಹನ ಚರಣದಲ್ಲಿ ದೃಷ್ಟಿಯು ನ್ನಿಟ್ಟು ನರಕವಾಸವನ್ನು ಭೋಗಿಸುವದೇ ನಿಮಗೆ ನೆಟ್ಟಗೆ ಕಾಣುತ್ತಿದ್ದರೆ, ಹುಚ್ಚು ಮುಪ್ಪು ಕೂಡಿದ ಈ ಮುದುವನ ಮಾತೇನೆಂದು ಸ್ವಸ್ಥವಾಗಿ ನಿಮ್ಮ ಮನೆಯಲ್ಲಿ ನೀವು ಕುಳಿತುಕೊಳ್ಳಿರಿ; ಇದಕ್ಕೆ ವಿರುದ್ಧವಾಗಿ— ಯಯಾತಿ, ರಘು, ಶ್ರೀರಾಮ, ಪಾಂಡವ ಮೊದಲಾದ ವೀರಾಗ್ರೇಸ ಕ್ಷತ್ರಿಯರ ಪವಿತ್ರ ವಂಶದವರೆಂಬ ಅಭಿಮಾನವು ನಿಮಗಿರುತ್ತಿದ್ದರೆ, ನಿಮ್ಮ ಕ್ಷಾತ್ರತೇಜವನ್ನು ಆಲಮಗೀರನಿಗೆ ತೋರಿಸಿ, ಕುಲಭೂಷಣರಾಗಿರಿ. ಏನು ಮಾಡಬೇಕೆಂಬ ದನ್ನು ವಿಚಾರದಿಂದ ನಿರ್ಧರಿಸಿ, ಕ್ಷಣವಾದರೂ ವಿಲಂಬಮಾಡದೆ ಕಾರ್ಯ ಪ್ರವೃತ್ತರಾಗಿರಿ. ನಾನಂತು ಏನು ಮಾಡಬೇಕೆಂಬುದನ್ನು ನಿಶ್ಚಯಿಸಿಕೊಂಡು ಬಿಟ್ಟಿದ್ದೇನೆ. ಅಚ್ಚ ರಜಪೂತನು ಅಚ್ಚಳಿಯದ ಕ್ಷಾತ್ರತೇಜಸ್ಸನ್ನೇ ಪ್ರಕಟಿ ಸುವನಲ್ಲದೆ, ತೇಜೋಹೀನರಂತೆ ಹಂಗಿನ ಕೂಳು ತಿಂದು ಹೊಟ್ಟೆಹೊರ ಕೊಳ್ಳುವ ಹೇಡಿತನದಿಂದ ಕಾಲಹರಣ ಮಾಡಲಾರನು!

ಮುದುಕರಿಗೆ ಪರಾಧೀನತೆಯಿಂದ ಮೊದಲೇ ಸಂತಾಪ ಬಹಳ; ಅದ ರಲ್ಲಿ ಔರಂಗಜೇಬನ ಪತ್ರದಿಂದ ವಿಜಯಜಂಹನ ಸಂತಾಪಾತಿರೇಕವಾಗಿ ಆತನ ತಲೆ ತಿರುಗಿ ಹೋಗಿತ್ತು; ಆದ್ದರಿಂದ ಮನಸ್ಸಿನಲ್ಲಿ ಬಂದ ವಿಚಾರ ಗಳನ್ನು ಆತನು ಬಡಬಡ ಬರೆದು ತಡಮಾಡದೆ ಅವರವರಿಗೆ ಪತ್ರಗಳನ್ನು ಕಳಿಸಿ ಬಿಟ್ಟನು. ಸಾದತಖಾನನು ದುರ್ಗಕ್ಕೆ ಮುತ್ತಿಗೆ ಹಾಕಿದ ಬಳಿಕ ಪತ್ರಕಳಿಸಲಿಕ್ಕೆ ಆಸ್ಪದವಾಗಲಿಕ್ಕಿಲ್ಲೆಂಗು ತಿಳಿದು, ಆ ವೃದ್ಧವೀರನು ಪರ ಮಾವಧಿಯಾದ ಚಟವಟಿಕೆಯನ್ನು ತೋರಿಸಿದನು. ಹಾಗೆ ಮಾಡದಿದ್ದರೆ ಪತ್ರಕಳಿಸುವದು ಆಗುತ್ತಿದ್ದಿಲ್ಲ; ಯಾಕಂದರೆ, ಮುಂದೆ ಸ್ವಲ್ಪ ಹೊತ್ತಿ ನಲ್ಲಿಯೇ ಸಾದತಖಾನನ ಸೈನ್ಯವು ದುರ್ಗವನ್ನೂ, ರೂಪನಗರವನ್ನೂ ಮುತ್ತಿತು. ಆ ಭದ್ರವಾದ ಕೋಟೆಯನ್ನು ಕೂಡಲೆ ಕೈಸೇರಿಸಿಕೊಳ್ಳಬೇ ಕೆಂದು ಸಾದತಖಾನನು ಯತ್ನಿಸಹತ್ತಿದನು. ಆದರೆ ಎರಡು ವರ್ಷ ಮುತ್ತಿಗೆ ಹಾಕಿಕೊಂಡು ಕುಳಿತರೂ ಒಳಗಿನವರನ್ನು ಅಚ್ಚಳಿಯದೆ ರಕ್ಷಿಸುವಷ್ಟು, ದುರ್ಗವು ಭದ್ರವಾಗಿತ್ತು. ದುರ್ಗದಲ್ಲಿ ಅನ್ನ ಸಂಗ್ರಹಕ್ಕೂ ಕೊರತೆಯಿದ್ದಿಲ್ಲ. ಸಾದತಖಾನನು ಎಷ್ಟು ನೆಗದಾಡಿದರೂ ಆತನ ಕಾಟಸಾಗದೆಂಬ ಮಾತು ವಿಜಯಸಿಂಹನಿಗೆ ಚನ್ನಾಗಿ ಗೊತ್ತಿತ್ತು; ಆದರೆ ಹೀಗೆ ಕೊಳೆಯುತ್ತ ಬಿದ್ದು

ಕೊಳ್ಳುವದು ಆ ವೃದ್ಧ ರಜಪೂತನ ಮನಸ್ಸಿಗೆ ಬರಲಿಲ್ಲ. ಹೊರಗಿನ ರಜಪೂತರನ್ನು ಎಚ್ಚರಗೊಳಿಸಿ, ಹೊರಗಿನಿಂದ ಅವರೂ, ಒಳಗಿನಿಂತ ತಾನೂ ಸಾದತಖಾನನ ಮೇಲೆ ಮುಗಿಬಿದ್ದು ಅಲಮಗೀರನಿಗೆ ರಜಪೂತರ ಕೈತೋರಿಸಬೇಕೆಂದು ಆತನು ನಿಶ್ಚಯಿಸಿ, ಮೇಲೆ ಹೇಳಿದಂತೆ ಪತ್ರಗಳನ್ನು ಬರೆದಿದ್ದನು. ಯಾವನಾದರೂ ರಜಪೂತನು ಅಭಿಮಾನದಿಂದ ತನಗೆ ಸಹಾಯ ಮಾಡುವದಕ್ಕಾಗಿ ಬರಬಹುದೆಂದು ಆತನು ನಂಬಿದ್ದನು. ಒಂದು – ಎರಡು ಎಂದು ದಿನಗಳು ಕ್ರಮಿಸಹತ್ತಿದರೂ ರಜಪೂತರ ಸುಳವು ಕಾಣದ್ದರಿಂದ ಆ ವೃದ್ಧನ ನಂಬಿಗೆಯು ಕಡಿಮೆಯಾಗಹತ್ತಿತು. ಕಾಲಮಹಿಮೆಯಿಂದ ಹೊಸ ಸಂತತಿಯಲ್ಲಿ ದಿನದಿನಕ್ಕೆ ಕ್ಷಾತ್ರತೇಜವು ನಷ್ಟವಾಗುತ್ತ ನಡೆದಿದ್ದು, ಹೆಸರಿಗೆ ಮಾತ್ರ ರಜಪೂತರೆನಿಸಿಕೊಳ್ಳುವ ದುರ್ಯೋಗವು ತಮಗೆ ಬಂದೊದಗಿರುತ್ತದೆಂದು ತಿಳಿದು, ಆತನು ಅಸಮಾಧಾನಪಡಹತ್ತಿದನು. ತಾನಂತು ಕೃಷ್ಣಸರ್ಪದ ಹೆಡೆಯಮೇಲೆ ಕಾಲು ಇಟ್ಟುಬಿಟ್ಟೆನೆಂದು ಆತನು ತಿಳಿದಿದ್ದನು. ಕಾಲಿಟ್ಟಂತೆ ಬಂದದ್ದನ್ನು ನೋಡಿಕೊಳ್ಳಲಿಕ್ಕೆ ಸಿದ್ಧವಾಗಿಯೇ ಇರುವೆನೆಂಬ ನಿಶ್ಚಯದಿಂದ ಆತನು ನಿಶ್ಚಿಂತನಾಗಿದ್ದನು. ದಿನಾಲು ಉಭಯ ಪಕ್ಷದ ದಂಡಾಳುಗಳಲ್ಲಿ ಅಲ್ಪ ಸ್ವಲ್ಪ ಜನರು ಗಾಯಪಡಹತ್ತಿದರು, ಸಾಯಲೂ ಹತ್ತಿದರು. ತನ್ನಿಂದ ವೃಧ್ಯಾಪ್ಯಕಾಲದಲ್ಲಿ ತನ್ನ ತಂದೆಯ ಮೇಲೆ ಬಂದೊದಗಿದ ಈ ದುರ್ಧರ ಪ್ರಸಂಗವನ್ನು ನೋಡಿ ರೂಪಮತಿಯು ಪರಮಾವಧಿಯಾಗಿ ವ್ಯಸನಪಡುತ್ತಿದ್ದಳು. ದಿನಾಲು ಆಕೆಯು ದುರ್ಗದಲ್ಲಿಯ ಎತ್ತರವಾದ ಸ್ಥಳದಲ್ಲಿ ಕುಳಿತುಕೊಂಡು, ಯಾರಾದರೂ ರಜಪೂತರು ತನ್ನ ತಂದೆಯ ಸಹಾಯಕ್ಕಾಗಿ ಬರುವರೋ, ಎಂದು ಆತುರದಿಂದ ಮಾರ್ಗನಿರೀಕ್ಷಣ ಮಾಡುತ್ತಿದ್ದಳು; ಆದರೆ ನಿರಾಶೆಯ ಹೊರತು ಬೇರೆ ಫಲವೇನು ಆಕೆಗೆ ದೊರೆಯುತ್ತಿದ್ದಿಲ್ಲ. ಆಕೆಯ ಪ್ರೀತಿಯ ದಾಸಿಯಾದ ಪದ್ಮೆಯು ಆಕೆಯ ಬಳಿಯಲ್ಲಿರುತ್ತಿದ್ದಳು. ಆ ಸ್ವಾಮಿಭಕ್ತಳು ಹಿಂದಕ್ಕೆ ರೂಪಮತಿಯ ಪತ್ರವನ್ನು ತಕ್ಕೊಂಡು ಬಲಿಭಿನ್ನನೊಡನೆ ಕಾಬೂಲಕ್ಕೆ ಚಂದ್ರಾವತಿಯ ಬಳಿಗೆ ಹೋದದ್ದನ್ನೂ, ಅಜಿತಸಿಂಗರಾಜಕುಮಾರನನ್ನು ವೈಕುಂಠಯೋಗಿಗಳ ಬಳಿಯಲ್ಲಿಟ್ಟು ಬಂದದ್ದನ್ನೂ ವಾಚಕರು ಮರೆತಿರಲಿಕ್ಕಿಲ್ಲ. ವೈಕುಂಠಯೋಗಿ

ಗಳು ಅಜಿತಸಿಂಗನನ್ನು ಒಬ್ಬ ಭಿಲ್ಲಸ್ತ್ರೀಗೆ ಒಪ್ಪಿಸಿ, ಆ ಕುಮಾರನ ಸಂಗೋಪನವನ್ನು ನಡಿಸಿದರು. ಇತ್ತ ಚಂದ್ರಾವತಿಯು ಸಿಪಸಿಂಗ, ಗಿಯಾ ಸುದ್ದೀನ ಮೊದಲಾದ ಸ್ವಾಮಿಭಕ್ತರ ಸಾಹಸದಿಂದ ಜೋಧಪುರಕ್ಕೆ ಬಂದು ಬಿದ್ದಳು. ಪುತ್ರನನ್ನು ಅಗಲಿ ಅಸಮಾಧಾನ ಪಡುತ್ತಿರುವ ಚಂದ್ರಾವತೀ ರಾಣಿಯನ್ನು ಪದ್ಮೆಯೇ ಆಗಿಂದಾಗ್ಗೆ ಸಮಾಧಾನ ಪಡಿಸುತ್ತಿದ್ದಳು. ಎಂಟೆಂಟು ದಿನಗಳಿಗೊಮ್ಮೆಯಾದರೂ ಆ ಸ್ವಾಮಿಭಕ್ತದಾಸಿಯು ಗುಪ್ತ ರೀತಿಯಿಂದ ವೈಕುಂಠಯೋಗಿಗಳ ಬಳಿಗೆ, ಹೋಗಿ, ಅಜಿತಸಿಂಗನನ್ನು ನೋಡಿಕೊಂಡು, ಆತನ ಯೋಗಕ್ಷೇಮವನ್ನು ಚಂದ್ರಾವತಿಗೆ ತಿಳಿಸಿ, ಆ ಸಾಧ್ವಿಯನ್ನು ಸಮಾಧಾನಪಡಿಸುತ್ತಿದ್ದಳು; ಆದರೆ ರೂಪನಗರಕ್ಕೆ ಈಗ ಮುತ್ತಿಗೆ ಬಿದ್ದದ್ದರಿಂದ ಪದ್ಮೆಗೆ ತನ್ನ ಅತ್ಯಂತ ಗುಪ್ತವಾದ ಈ ಕಾರ್ಯ ವನ್ನು ಮಾಡಲಿಕ್ಕೆ ಮಾರ್ಗವಿಲ್ಲದಾಯಿತು.

ತಂದೆಯ ಪತ್ರದಂತೆ ಒಬ್ಬರೂ ಸಹಾಯಕ್ಕೆ ಬಾರದ್ದರಿಂದ ರೂಪ ಮತಿಗೆ ಬಹಳ ಅಸಮಾಧಾನವಾಯಿತು. ರಜಪೂತರಲ್ಲಿ ವೀರರು ಅಸ್ತಂಗತ ರಾದರೆಂದು ಆಕೆಯು ದುಃಖಿಸಿದಳು. ಇಡಿಯ ರಜಪೂತಸ್ಥಾನದಲ್ಲಿ ಉದೇ ಪುರದ ಮನೆತನವು ಅತ್ಯಂತ ಪವಿತ್ರವಾದದ್ದು. ಆ ಮನೆತನದಲ್ಲಿ ಪ್ರತಾಪ ಸಿಂಹ, ಭೀಮಸಿಂಹರಂಥ ಸತ್ವಶೀಲರಾದ ರಣಶೂರರು ಆಗಿಹೋದದ್ದ ರಿಂದ, ಆ ಮನೆತನವನ್ನು ರಜಪೂತರು ವಿಚಿತ್ರವಾದ ಪೂಜ್ಯಬುದ್ಧಿಯಿಂದ ಮನ್ನಿಸುತ್ತಿದ್ದರು. ಸದ್ಯದ ಉದೇಪುರದ ರಾಣಾನು ರಾಜಸಿಂಹನೆಂಬ ವೀರನು ಇದ್ದನು. ಆತನಮೇಲೆ ರೂಪಮತಿಯ ಪ್ರೇಮವು ವಿಶೇಷವಾಗಿತ್ತು. ರೂಪಮತಿಯ ತಂದೆಯಾದ ವಿಜಯಸಿಂಹನಮೇಲೆ ರಾಜಸಿಂಹನ ಭಕ್ತಿಯು ವಿಶೇಷವಾಗಿ ಇದ್ದದ್ದರಿಂದ, ಆ ತರುಣನು ಮೇಲಿಂದಮೇಲೆ ರೂಪನಗರಕ್ಕೆ ಬರುತ್ತಿದ್ದನು. ಆದ್ದರಿಂದ ಚಿಕ್ಕಂದಿನಿಂದಲೇ ರೂಪಮತಿಯೂ, ರಾಜ ಸಿಂಹನೂ ಪರಿಚಿತರಾಗಿದ್ದರು. ತನ್ನ ತಂದೆಯು ಸಂಕಟ ಕಾಲದಲ್ಲಿ ಯಾವ ರಜಪೂತನೂ ಸಹಾಯಕನಾಗಿ ಬಾರದಿರಲು, ರೂಪಮತಿಯು ರಾಜಸಿಂಹನನ್ನು ಮನಸ್ಸಿನಲ್ಲಿ ಚಿಂತಿಸಹತ್ತಿದಳು. ಈ ವೀರ ಮೂರ್ತಿಯಿಂದಲೇ ತನ್ನ ತಂದೆಯ ಸಂಕಟನಿವಾರಣವಾದರೆ ಆಗಬೇಕೆಂದು ತಿಳಿದು ಆಕೆಯು ತದೇಕಧ್ಯಾನ

ದಿಂದ ರಾಜಸಿಂಹನನ್ನು ನೆನಿಸುತ್ತಿದ್ದಳು. ಹೀಗೆ ತನ್ನ ಮನಸ್ಸನ್ನು ಹರಣ ಮಾಡಿದ ವೀರಮೂರ್ತಿಯನ್ನು ನೆನಿಸುತ್ತ ರೂಪಮತಿಯು ಮಲಗಿರಲು, ರಾಜಸಿಂಹನು ಆಕೆಯ ಸ್ವಪ್ನದಲ್ಲಿ ಬಂದು— " ನಿನ್ನ ತಂದೆಯ ಸಂಕಟ ವನ್ನು ದೂರಮಾಡಿ ನಿನ್ನ ಪ್ರಾಣಿಗ್ರಹಣ ಮಾಡುವೆನು " ಎಂದು ಹೇಳಿದ ಹಾಗಾಯಿತು. ಇದರಿಂದ ರೂಪಮತಿಗೆ ಬಹಳ ಸಮಾಧಾನವಾಯಿತು; ಆದರೆ ಸ್ವಪ್ನದ ಸಂಗತಿಯನ್ನು ನಿಜವೆಂದು ಯಾರು ಹೇಳಬೇಕೆಂದು ಆಕೆಯು ಚಿಂತಿಸತೊಡಗಿದಳು. ಈ ಪ್ರಸಂಗದಲ್ಲಿ ತಾನು ಕೈಮುಟ್ಟಿ ಒಂದು ಪತ್ರ ವನ್ನು ಬರೆದು ರಾಜಸಿಂಹನ ಬಳಿಗೆ ಕಳಿಸಿದರೆ, ಕಾರ್ಯವಾದೀತೆಂದು ಆಕೆಯು ಯೋಚಿಸತೊಡಗಿದಳು; ಆದರೆ ಈ ಯೋಚನೆಯು ಕೈಗೂಡುವ ಬಗೆಯೇನು ? ಸಾದತಖಾನನ ಸೈನ್ಯವು ಮುತ್ತಿದ್ದರಿಂದ ಕೋಟೆಯೊಳಗಿನ ಒಂದು ನರಪ್ರಾಣಿಯು ಹೊರಗೆ ಹೋಗುವಂತೆ ಇದ್ದಿಲ್ಲ. ಆದರೂ ತನ್ನ ಸ್ವಪ್ನದ ವೃತ್ತಾಂತವನ್ನೂ, ತನ್ನ ವಿಚಾರವನ್ನೂ ತನ್ನ ಪ್ರೀತಿಯ ಗೆಳತಿ ಯಾದ ಪದ್ಮೆಗೆ ಹೇಳಬೇಕೆಂದು ನಿಶ್ಚಯಿಸಿ, ಆಕೆಯನ್ನು ಏಕಾಂತದಲ್ಲಿ ಕುಳ್ಳಿರಿಸಿಕೊಂಡು ಎಲ್ಲ ವೃತ್ತಾಂತವನ್ನು ರೂಪಮತಿಯು ಹೇಳಿದಳು; ಮತ್ತು ಪದ್ಮೆಯನ್ನು ಕುರಿತು— ಪದ್ಮೇ, ರಾಜಸಿಂಹಮಹಾರಾಜರಿಗೆ ಪತ್ರವನ್ನು ಮುಟ್ಟಿಸುವದು ಅಸಾಧ್ಯವೆಂಬದನ್ನು ನಾನು ಬಲ್ಲೆನು; ಆದರೆ ಕಾಬೂಲದಂಥ ಬಿಕ್ಕಟ್ಟಿನ ಪ್ರದೇಶದಲ್ಲಿ ಪ್ರವಾಸಮಾಡಿ, ಚಂದ್ರಾವತೀರಾಣಿಯ ಆಪತ್ತನ್ನು ನಿವಾರಿಸಿದ ನಿನ್ನಂಥ ಸ್ವಾಮಿಭಕ್ತಳ ಮುಂದೆ ನನ್ನ ಮನಸ್ಸಿನಲ್ಲಿ ಬಂದದ್ದನ್ನು ಒಮ್ಮೆ ಹೇಳಿ ಬಿಡಬೇಕೆಂದು ಮಾಡಿದ್ದೇನೆ. ಈ ಕಾರ್ಯವನ್ನು ನೀನು ಮಾಡಲಿಲ್ಲೆಂದು ನಾನು ನಿನ್ನನ್ನು ಆಡಿಕೊಳ್ಳುವ ಹಾಗಿಲ್ಲ. ಕೋಟೆಯ ಹೊರಗೇ ಹೋಗಲಿಕ್ಕೆ ಮಾರ್ಗವಿಲ್ಲದ ಬಳಿಕ ನೀನು ಮಾಡುವದೇನು ? ಎಂಟುದಿನಕ್ಕೊಮ್ಮೆ ತಪ್ಪದೆ ವೈಕುಂಠಯೋಗಿಗಳ ದರ್ಶನಕ್ಕೆ ಹೋಗಿ ಅಜಿತ ಸಿಂಗಕುಮಾರನನ್ನು ಕಣ್ಣುಮುಟ್ಟ ನೋಡಿ, ಆತನ ಯೋಗಕ್ಷೇಮವನ್ನು ಚಂದ್ರಾವತೀರಾಣಿಗೆ ತಿಳಿಸುವ ನೀನು, ಕೈಸಾಗದ್ದರಿಂದ ಈಗ ಸುಮ್ಮನೆ ಕುಳಿತಿರುವದನ್ನು ನಾನು ನೋಡುತ್ತೇನೆ. ಅಂದಬಳಿಕ ಪತ್ರಮುಟ್ಟಿಸುವ ಕಾರ್ಯವು ಹ್ಯಾಗೆ ಸಾಧಿಸಬೇಕು ಹೇಳು. ಪದ್ಮೇ, ಪ್ರಸಂಗವು ಹ್ಯಾಗಿದೆ ನೋಡಿದೆಯಾ ? ಮುಪ್ಪಿನಲ್ಲಿ ತಂದೆಗೆ ನನ್ನಿಂದ ಎಷ್ಟು ವ್ಯಥೆಯಾಗಬೇಕು ?

ನನ್ನ ತಂದೆಯು ಸತ್ವವನ್ನು ನಾನು ಬಲ್ಲೆನು. ಪ್ರಸಂಗಬಂದರೆ ತನ್ನದೊಂದ ಅಂಕುರವು ಕೂಡ ಮೊಗಲರ ಕೈಗೆ ಸಿಗದಂತೆ ಆತನು ನಮ್ಮೆಲ್ಲರನ್ನು ತುಂಡರಿಸಿ, ತಾನು ಸಮರಭೂಮಿಯಲ್ಲಿ ದೇಹವಿಡುವನೆಂಬದನ್ನು ನಾನು ಅರಿತಿರುವೆನು; ಆದರೆ, ರಾಜಸಿಂಹನಂಥ ವೀರರು ರಜಪೂತಸ್ಥಾನದಲ್ಲಿ ಬದುಕಿರಲು ನನ್ನ ವೃದ್ಧ ತಂದೆಗೆ ಇಂಥ ಪ್ರಸಂಗವು ಬರಬೇಕೇ? ನಿರಾಯಾಸವಾಗಿ ಬಾದಶಹನ ಪ್ರತಿಜ್ಞೆಯು ನೆರವೇರಿದರೆ, ರಜಪೂತರ ಪ್ರತಾಪದ ಗೌರವವೇನು ಉಳಿದಂತಾಗುವದು ! ಹಾಯ ಹಾಯ ! ರಜಪೂತಸ್ಥಾನವು ನಿರ್ವೀರ್ಯವಾಯಿತೇ ?" ಎಂದು ನುಡಿದು ರೂಪಮತಿಯು ಉಸರ್ಗಳೆಯಲು, ಪದ್ಮೆಯು— ಅಮ್ಮಾ, ರೂಪಮತೀ, ಚಿಂತಿಸಬೇಡಮ್ಮಾ. ನನಗೆ ಕೋಟೆಯ ಹೊರಗೆ ಹೋಗಲಿಕ್ಕೆ ಮಾರ್ಗವು ಈಗ ಎಂಟು ಹತ್ತುದಿನಗಳಿಂದ ಗೊತ್ತಾಗಿದ್ದಿಲ್ಲವಾದರೂ, ಈಗ ನಿನ್ನ ಮಾತುಗಳನ್ನು ಕೇಳಿ ಆ ಮಾರ್ಗವು ನನ್ನ ಕಣ್ಣಿಗೆ ಕಟ್ಟಿದಂತಾಗುತ್ತದೆ. ಬರೆ, ಬೇಗನೆ ಪತ್ರವನ್ನು ಬರೆ, ವ್ಯರ್ಥ ಮಾತುಗಳಿಂದ ಹೊತ್ತುಗಳೆಯಲಿಕ್ಕೆ ಇದು ಸಮಯವಲ್ಲ. ರುಕ್ಮಿಣಿಯ ಪತ್ರವನ್ನು ವ್ಯಂಕಟಭಟ್ಟನು ಶ್ರೀಕೃಷ್ಣನಿಗೆ ಮುಟ್ಟಿಸಿದಂತೆ, ಸಾಮುಳಪಂಡಿತನು ನಿನ್ನ ಪತ್ರವನ್ನು ರಾಜಸಿಂಹನಿಗೆ ಮುಟ್ಟಿಸುವನು. ಪಂಡಿತನನ್ನು ಹಾದಿಗೆ ಹಚ್ಚಿ ಉದೇಪುರಕ್ಕೆ ಮುಟ್ಟಿಸುವ ಕೆಲಸವು ನನ್ನನ್ನು ಕೂಡಿತು. ಈ ಪ್ರಸಂಗವು ಬಂದೇಬರುವದೆಂದು ನಾನು ಮೊದಲೇ ಯೋಚಿಸಿ, ಎಲ್ಲ ಸಿದ್ಧತೆಯನ್ನು ಮಾಡಿದ್ದೇನೆ. "ಹು! ಇನ್ನು ಬರೆ ಪತ್ರವನ್ನು" ಎಂದು ಹೇಳಿದಳು. ಪದ್ಮೆಯ ಈ ಮಾತುಗಳನ್ನು ಕೇಳಿ ರೂಪಮತಿಗೆ ಸಂತೋಷವಾಯಿತು. ಆಕೆಯು ಪತ್ರವನ್ನು ಬರೆಯುವದಕ್ಕೆ ಕುಳಿತುಕೊಳ್ಳಲು— ಕುಲೀನಸ್ತ್ರೀಯರು, ವಿಶೇಷವಾಗಿ ಕುಲೀನರಜಪೂತ ಸ್ತ್ರೀಯರು ಹೀಗೆ ಪರಪುರಷರಿಗೆ ಪತ್ರ ಬರೆಯುವದು ಶೀಲಕ್ಕೆ ಒಪ್ಪಬಹುದೋ, ಎಂಬ ಸಂಶಯವು ಆಕೆಯನ್ನು ಬಾಧಿಸತೊಡಗಿತು. ಕೂಡಲೆ ಆಕೆಯು ಶ್ರೀಕೃಷ್ಣನಿಗೆ ರುಕ್ಮಿಣಿಯು ಪತ್ರ ಬರೆದದ್ದನ್ನು ನೆನಪು ಮಾಡಿಕೊಂಡು ಸಮಾಧಾನಪಟ್ಟು, ಪತ್ರವನ್ನು ಬರೆಯಹತ್ತಿದಳು. ಒಮ್ಮೆಲೆ ಪತ್ರದ ಸಂಗತಿಯು ನೆಟ್ಟಗೆ ಕೂಡಲೊಲ್ಲದು. ಮನಸ್ಸಿಗೆ ಬಾರದ್ದರಿಂದ ಆಕೆಯು ಎಷ್ಟೋ ಪತ್ರಗಳನ್ನು ಬರೆದು ಬರೆದು ಹರಿದಳು. ಕಡೆಗೆ ತನ್ನ ಮನಸ್ಸಿಗೆ ಒಪ್ಪಿಗೆಯಾಗುವಂತೆ

ಪತ್ರವು ಸಿದ್ಧವಾಗಲು, ಅದನ್ನು ಪದ್ಮೆಗೆ ತೋರಿಸಿದಳು. ಅದು ಪದ್ಮೆಯ ಮನಸ್ಸಿಗೆ ಬಂದದ್ದರಿಂದ ಕಳಿಸಲಿಕ್ಕೆ ತಕ್ಕದ್ದಾಯಿತು. ಪದ್ಮೆಯು ಯಾವ ಉಪಾಯದಿಂದ ದುರ್ಗದ ಮಾರ್ಗವನ್ನು ಹುಡುಕಿತೆಗೆದಳೋ, ದುರ್ಗದ ಕೊಂಕು ಕೊರತೆಗಳೆಲ್ಲ ಆಕೆಗೆ ಮೊದಲೇ ಗೊತ್ತಿದ್ದವೋ ದೇವರೇ ಬಲ್ಲ. ಆಕೆಯು ಅದೇ ದಿನ ಮಧ್ಯರಾತ್ರಿಯಲ್ಲಿ ಸಾಮಳಪಂಡಿತನೊಡನೆ ಆ ಗುಪ್ತ ಮಾರ್ಗದೆಡೆಗೆ ಹೋಗಿ, ಆ ಮಾರ್ಗದಿಂದ ಸಾಮಳಪಂಡಿತನನ್ನೂ ಬಲಿ ಭಿಲ್ಲನನ್ನೂ ಕೆಳಗೆ ಇಳಿಸಿ, ತಟ್ಟನೆ ಮನೆಗೆ ಬಂದು ತನ್ನ ಹಾಸಿಗೆಯ ಮೇಲೆ ಮಲಗಿಕೊಂಡಳು !

ಇತ್ತ ಸಾಮಳಪಂಡಿತನನ್ನು ಕರಕೊಂಡು ಬಲಿಭಿಲ್ಲನು ಹೊರಟನು. ಅವರನ್ನು ಮತ್ತೆ ಕೆಲವು ಭಿಲ್ಲರು ಕೂಡಿದರು. ಅವರು ಹೊರಟಿದ್ದ ಮಾರ್ಗವು ಬಹು ಕಠಿಣವಾದದ್ದು, ಹಾದಿಯು ಬಡಿಯುವ ಭಿಲ್ಲರ ಹೊರತು ಬೇರೆ ಜನರಿಗೆ ಅದು ಗೊತ್ತಾಗತಕದ್ದಲ್ಲ. ಅಖಂಡ ಮೂರುದಿನ ಅವರು ಭಯಂಕರವಾದ ಅಡವಿಯೊಳಗಿಂದ ಹಾದಿಯನ್ನು ನಡೆದು ಹೋಗಬೇಕಾಯಿತು. ನಾಲ್ಕನೆಯ ದಿವಸ ಅವರು ದೊಡ್ಡ ಮಾರ್ಗಕ್ಕೆ ಹತ್ತಿದರು. ಅವರು ಹಾಗೇ ಮಾರ್ಗವನ್ನು ಕ್ರಮಿಸಿ, ಇನ್ನು ಒಂದು ದಿವಸಕ್ಕೆ ಉದೇಪುರಕ್ಕೆ ಮುಟ್ಟತಕ್ಕವರು. ಅಷ್ಟರಲ್ಲಿ ಸಾದತಖಾನನಿಂದ ಕಳಿಸಲ್ಪಟ್ಟ ಐವತ್ತು ಜನ ಮೊಗಲರು ಬೆನ್ನಟ್ಟಿ ಬಂದು ಅವರನ್ನು ಮುತ್ತಿದರು. ಅದನ್ನು ನೋಡಿ ಸಾಮಳ ಪಂಡಿತನು ಬೆದರಿದನು. ಬ್ರಾಹ್ಮಣರ ಬಾಯಿಬಡಕತನವೇ ಹೆಚ್ಚು. ಆ ಮೇಲೆ ಭಿಲ್ಲರಿಗೂ ಮೊಗಲರಿಗೂ ಯುದ್ಧವುಂಟಾಯಿತು. ಭಿಲ್ಲರು, ಯುದ್ಧ ವಿದ್ಯೆಯಲ್ಲಿ ಒಳಿತಾಗಿ ನುರಿತವರು. ಅವರು ಒಬ್ಬೊಬ್ಬರೇ ಇಬ್ಬರಂತೆ ಮೂವರಂತೆ ಮೊಗಲರನ್ನು ಕೆಡವುತ್ತ, ಸ್ವಲ್ಪಹೊತ್ತಿನಲ್ಲಿ ನಾಲ್ವತ್ತೈದು ಜನ ಮೊಗಲರನ್ನು ನೆಲಕ್ಕೆ ಕೆಡವಿದರು. ಭಿಲ್ಲರಲ್ಲಿಯೂ ಬಹು ಜನರು ಸತ್ತರು. ಕಡೆಗೆ ಮೊಗಲರ ಮುಖ್ಯನು ನೆಲಕ್ಕೆ ಉರಳಲು, ಉಳಿದವರು ಕಾಲದೆಗೆದರು. ಆಗ ಭಿಲ್ಲರು "ಜಯಕಾಲಿಕಾಮಾತೇ" ಎಂದು ಗರ್ಜಿಸಿದರು. ಅದನ್ನು ಕೇಳಿ ಸಾಮಳಪಂಡಿತನಿಗೆ ಜೀವದಲ್ಲಿ ಜೀವಬಂದಿತು. ಆತನು ಉಸ್ಸೆಂದು ಉಸರ್ಗಳೆದು, "ಶಿವಶಿವ ಎಂಥ ಕಠಿಣಪ್ರಸಂಗವಿದು! ಈ ಆಸುರೀಕೃತಿಯು ಬ್ರಾಹ್ಮಣರಿಗೆ ಸಲ್ಲದು!" ಎಂದು ತನ್ನ ಅಂಜುಬುರುಕುತನ

ವನ್ನು ಮುಚ್ಚಿಕೊಳ್ಳುವ ಮಾತುಗಳನ್ನಾಡುತ್ತ, ತಾನು ಅಡಗಿಕೊಂಡಿದ್ದ ವಿಶಾಲವೃಕ್ಷದ ಬಡ್ಡೆಯ ಮರೆಯಿಂದ ಬೈಲಿಗೆ ಬಂದನು. ಅದನ್ನು ನೋಡಿ ಭಿಲ್ಲರಿಗೆ ನಗೆಬಂದಿತು. ನೆಲಕ್ಕೆ ಬಿದ್ದಿದ್ದ ಮೊಗಲರ ನಾಯಕನನ್ನು ಸೆರೆ ಹಿಡಿದು ಉದೇಪುರಕ್ಕೆ ಒಯ್ಯಬೇಕೆಂದು ಸಾಮಳಪಂಡಿತನು ನುಡಿಯಲು, ಭಿಲ್ಲರು ಆತನ ಮುತ್ಸದ್ದಿತನದ ಮಾತನ್ನು ಧಿಕ್ಕರಿಸಿ, ಆ ನಾಯಕನನ್ನು ಅಲ್ಲಿಯೇ ಬೀಳಗೊಟ್ಟು, ಸಾಮಳ ಪಂಡಿತನೊಡನೆ ಉದೇಪುರಕ್ಕೆ ನಡೆದರು. ಅವರು ಉದೇಪುರಕ್ಕೆ ಮುಟ್ಟಿದ ಬಳಿಕ ಬಲಿಭಿಲ್ಲನೊಬ್ಬನನ್ನು ಸಾಮಳ ಪಂಡಿತನ ಬಳಿಯಲ್ಲಿ ಬಿಟ್ಟು, ಉಳಿದವರು ತಮ್ಮ ತಮ್ಮ ವಾಸಸ್ಥಳಗಳಿಗೆ ಹೊರಟುಹೋದರು. ರೂಪಮತಿಯ, ಹಾಗು ಪದ್ಮೆಯ ಒಳಸಂಚಿನ ಈ ಕೆಲಸವನ್ನು ವೃದ್ಧವಿಜಯಸಿಂಹನು ಅರಿಯೇ ಅರಿಯನು. ಆತನು ಒಮ್ಮೆ ಔರಂಗಜೇಬ ಬಾದಶಹನ ಅನ್ಯಾಯದ ಕೃತಿಗಳನ್ನೂ, ಉದ್ಧಟತನವನ್ನೂ, ನೆನಿಸಿ, ಮತ್ತೊಮ್ಮೆ ಇತ್ತಕಡೆಯ ತಮ್ಮ ರಜಪೂತರ ನಿರಭಿಮಾನ ಸ್ಥಿತಿಯನ್ನೂ, ಹೇಡಿತನವನ್ನೂ ಮನಸ್ಸಿನಲ್ಲಿ ತಂದು ಸಂತಾಪಗೊಳ್ಳುತ್ತಿದ್ದನು.

೧೩ ನೆಯ ಪ್ರಕರಣ

# ವೀರಪ್ರತಿಜ್ಞೆ

ಸಾಮುಳಪಂಡಿತನು ಉದೇಪುರದ ಆಗಸಿಯಲ್ಲಿ ಕಾಲಿಟ್ಟಕೂಡಲೆ ಉತ್ಸಾಹಗೊಂಡನು. ಆತನು ಉದೇಪುರದಲ್ಲಿರುವ ತನ್ನ ಒಬ್ಬ ಮಿತ್ರನ ಮನೆಯನ್ನು ಹುಡುಕಿ, ಅಲ್ಲಿ ಊಟ-ಉಡಿಗೆಗಳನ್ನು ತೀರಿಸಿಕೊಂಡು, ಆ ಮಿತ್ರನ ಸಹಾಯದಿಂದ ತಕ್ಕ ಉಡುಪುಗಳನ್ನು ಸಂಪಾದಿಸಿ ಧರಿಸಿ ದರ್ಬಾರಕ್ಕೆ ಹೊರಟನು. ರಾಜದ್ವಾರವನ್ನು ಮುಟ್ಟಿದಕೂಡಲೇ ತಾನು ದರ್ಶನಕ್ಕೆ ಬಂದಿರುವೆನೆಂಬದನ್ನು ದ್ವಾರಪಾಲಕರ ಮುಖಾಂತರ ರಾಜಸಿಂಹನಿಗೆ ತಿಳಿಸಿದನು. ರಾಜಸಿಂಹನು ಸಾಮುಳಪಂಡಿತನನ್ನು ಒಳಗೆ ಬಿಡಲಿಕ್ಕೆ ಆಜ್ಞಾಪಿಸಲು, ಪಂಡಿತನು ರಾಜಸಭೆಯನ್ನು ಪ್ರವೇಶಿಸಿ, ಅತ್ಯಂತ ಲೀನವೃತ್ತಿಯಿಂದ ಕೈಜೋಡಿಸಿ ನಿಂತುಕೊಂಡು ರಾಜಸಿಂಹನನ್ನು ಕುರಿತು—ರಾಜಾಧಿರಾಜ ಮಹಾರಾಜರೇ, ತಮ್ಮ ಈ ದಾಸನು ರೂಪನಗರದಿಂದ ಧಾವಿಸಿ ಬಂದಿರುತ್ತಾನೆ. ಮೊಗಲರು ರೂಪನಗರವನ್ನು ಯಾವಗತಿಗೆ ಮುಟ್ಟಿಸುತ್ತಾರೆಂಬದನ್ನೂ, ಯಾಕೆ ಮುಟ್ಟಿಸಿರುತ್ತಾರೆಂಬದನ್ನೂ ನಾನು ಹೇಳಬೇಕೆನ್ನುವ ಹಾಗಿಲ್ಲ. ಯಾವತ್ತೂ ರಜಪೂತಸ್ಥಾನದ ಲಜ್ಜೆಯನ್ನು ಕಾಯುವದು ಬಿಡುವದು ಈಗ ನಿಮ್ಮ ಕಡೆಗೆ ಇರುತ್ತದೆ. ಈವೊತ್ತಿನವರೆಗೆ ಮೊಗಲರ ಮುಂದೆ ಎಂದೂ ತಲೆಬಾಗಿಸದ ರೂಪನಗರದ ವಿಜಯಸಿಂಹನ ಮಗಳನ್ನು, ಯಾವತ್ತು ರಜಪೂತರು ಬದುಕಿರುತ್ತಿರಲು, ಮೊಗಲರು ಎಳೆದೊಯ್ಯತಕ್ಕವರಿರುತ್ತಾರೆ. ತಾವು ತಮ್ಮ ಮನೆತನದ ಬಿರುದನ್ನು ಮರೆತಿರದಿ

ದ್ದರೆ, ತಮಗೆ ಈ ಪತ್ರವನ್ನು ಮುಟ್ಟಿಸಬೇಕೆಂದು ಹೇಳಿಕಳಿಸಿದ್ದರಿಂದ ನಾನು ಬಂದೆನು. ಇದಕ್ಕೂ ಹೆಚ್ಚಿಗೆ ನಾನೇನು ಹೇಳಿಕೊಳ್ಳಲಿ ? ಎಂದು ನುಡಿದು ಸಾಮುಳಪಂಡಿತನು ರೂಪಮತಿಯ ಪತ್ರವನ್ನು ಕೈಯಲ್ಲಿ ತಕ್ಕೊಂಡು ಎರಡೂ ಕೈಗಳನ್ನು ಜೋಡಿಸಿ—ಮಹಾರಾಜರೇ, ಈ ಪತ್ರವನ್ನು ಇಲ್ಲಿ ಎಲ್ಲರ ಸಮಕ್ಷ ಓದುವಹಾಗಿಲ್ಲ. ತಾವು ತಮ್ಮ ಸ್ವಂತದ ಮಂದಿರಕ್ಕೆ ಹೋಗಿ ಏಕಾಂತದಲ್ಲಿ ತಮ್ಮೊಳಗೆ ಓದಿಕೊಳ್ಳುವ ಕೃಪೆಮಾಡಬೇಕು. ಈ ಪತ್ರವು ಯಾರ ಕೈಯಿಂದ ಬರಿಯಲ್ಪಟ್ಟಿರುವದೋ, ಆ ಕೈಯನ್ನು ಹಿಡಿಯಲಿಕ್ಕೆ ನೀವು ಒಬ್ಬರೇ ಪಾತ್ರರಿರುತ್ತೀರಿ. ನೀವು ನಿಮ್ಮ ಬಿರುದನ್ನು ಕಾಯ್ದುಕೊಳ್ಳುವದಕ್ಕಾಗಿ ಈಗ ಅಬಲೆಯ ಬಂಧವಿಮೋಚನೆಯನ್ನು ಮಾಡದಿದ್ದರೆ, ಆ ಕೈಯು ತನ್ನ, ಹಾಗು ತನ್ನ ಸ್ವಾಮಿನಿಯ ನಾಶವನ್ನು ಮಾಡಿಕೊಳ್ಳಬಹುದಲ್ಲದೆ, ಅದು ಮೊಗಲರ ಸ್ಪರ್ಶಕ್ಕೆ ಎಂದೂ ಅನುವುಗೊಡಲಿಕ್ಕಿಲ್ಲ. " ತಾವು ಸೂರ್ಯವಂಶದವರು, ತಾವು ಚಂದ್ರವಂಶದವರು " ಎಂದು ಹೇಳಿಕೊಳ್ಳುವ ರಜಪೂತರ ಕೈಯಲ್ಲಿ, ತಮ್ಮ ಹೆಣ್ಣುಮಕ್ಕಳನ್ನು ಕಾಯ್ದುಕೊಳ್ಳುವ ಸಾಮರ್ಥ್ಯವು ಇಲ್ಲದಂತಾಯಿತು! ರಜಪೂತರ ಮನೆಗೆ ಕಳ್ಳರು ಮುತ್ತಿ ಅವರ ಹೆಂಡಿರು ಮಕ್ಕಳನ್ನು ಓಡಿಸಿಕೊಂಡು ಹೋದರೂ, ಕೇಳುವವರು ಇಲ್ಲದಂತಾಯಿತು. ಈ ಹೀನಸ್ಥಿತಿಯನ್ನು ನೆನಸಿದರೆ ನಿಜವಾದ ರಜಪೂತನ ಎದೆಯು ಬಿಚ್ಚದೆ ಯಾಕೆ ಬಿಟ್ಟೀತು? ಭಾಟರು ಪೂರ್ವಕಾಲದ ರಜಪೂತರ ಪರಾಕ್ರಮದ ವರ್ಣನವನ್ನು ವರ್ಣಿಸುವದು, ಕೇವಲ ಸಂಜೆ–ಮುಂಜಾವಿನ ಮೋಜಿಗಾಗಿ ಎಂಬ ಅಪವಾದವು ಲೋಕದಲ್ಲಿ ಪಸರಿಸೀತೆಂಬ ಎಚ್ಚರಿಕೆಯು ರಜಪೂತರಾದವರಿಗೆ ಇರತಕ್ಕದ್ದು. ಸಾಕು, ಇದಕ್ಕೂ ಹೆಚ್ಚಿಗೆ ನಾನು ಮಾತಾಡುವದಿಲ್ಲ. ಎಂದು ನುಡಿದು ಪತ್ರವನ್ನು ರಾಜಸಿಂಹಾಸನದಮೇಲೆ ಒಗೆದು, ತಾನು ಸುಮ್ಮನೆ ಕೈಜೋಡಿಸಿ ನಿಂತುಕೊಂಡನು. ರಾಜಸಭೆಯೊಳಗಿನವರೆಲ್ಲರು ಆಶ್ಚರ್ಯದಿಂದ ಒಬ್ಬರನ್ನೊಬ್ಬರು ನೋಡಹತ್ತಿದರು. ಪತ್ರದಲ್ಲಿ ಏನು ಬರೆದಿರಬಹುದೆಂಬದರ ಕಲ್ಪನೆಯು ಯಾರಿಗೂ ಆಗಲೊಲ್ಲದು. ರಾಜಸಿಂಹನು ಆ ಪತ್ರವನ್ನು ಕೈಯಲ್ಲಿ ತಕ್ಕೊಂಡು ಸಾಮುಳಪಂಡಿತನನ್ನು ನೋಡುತ್ತ ಕೆಲವುಹೊತ್ತು ಸುಮ್ಮನೆ ಕುಳಿತುಕೊಂಡನು. ಮುಂದೆ ಸ್ವಲ್ಪಹೊತ್ತಿನಮೇಲೆ ದರ್ಬಾರವನ್ನು ಮುಗಿಸಿ

ಸಾವುಳಪಂಡಿತನೊಡನೆ ತನ್ನ ಸ್ವಂತದ ಮಂದಿರಕ್ಕೆ ಹೋಗಿ, ಏಕಾಂತದಲ್ಲಿ ಆ ಪತ್ರವನ್ನು ಒಡೆದು ಓದಹತ್ತಿದನು. ರೂಪಮತಿಯು ಪತ್ರವನ್ನು ಅಚ್ಚು ಕಟ್ಟಾಗಿ ಬರೆದಿದ್ದರೂ, ಅದು ಬಹು ಪರಿಣಾಮಕಾರಕವಾಗಿತ್ತು. ಆಕೆಯು ತನ್ನ ಪತ್ರದಲ್ಲಿ ರಾಜಸಿಂಹನನ್ನು ಕುರಿತು—ರಾಜಾಧಿರಾಜರೇ, ತಮಗೆ ಈ ಪತ್ರವನ್ನು ಬರೆಯುವಾಗ ನನ್ನ ಹೃದಯವು ತಲ್ಲಣಿಸಹತ್ತಿದೆ, ಕೈಗಳುನಡಗಹತ್ತಿವೆ,ಲೇಖನಿಯು ಜಾರಿ ಬೀಳಹತ್ತಿದೆ; ಆದರೆ ಮಾಡಲೇನು? ದುಷ್ಟ ಆಲಮಗೀರನ ಕಪಟಕೃತಿಯಿಂದ ಕಂಗೆಟ್ಟು ನಾನು ತಮಗೆ ಶರಣುಬರುವ ಉದ್ದೇಶದಿಂದ ಹೀಗೆ ಪತ್ರಬರೆಯುವ ಸಾಹಸ ಮಾಡಬೇಕಾಯಿತು. ಸ್ವಪ್ನದಲ್ಲಿಯೇ ಆಗಲೊಲ್ಲದೇಕೆ, ಒಂದು ದಿನ ತಾವು ನನ್ನ ಬಳಿಗೆ ಬಂದು—"ನಿನ್ನ ತಂದೆಗೆ ಸಹಾಯ ಮಾಡಿ ನಿನ್ನ ಪ್ರಾಣಿಗ್ರಹಣಮಾಡುವೆನೆಂ"ದು ಹೇಳಿದ್ದರಿಂದ ನಾನು ಧನ್ಯಳಾದೆನು. ಎಂದಿನಿಂದಲೂ ತಮ್ಮ ಚರಣವನ್ನು ಸುತ್ತುತ್ತಿದ್ದ ನನ್ನ ಮನಸ್ಸು ಸ್ವಪ್ನದೃಷ್ಟಾಂತದಿಂದ ತಮ್ಮ ಚರಣವನ್ನು ಆಶ್ರಯಿಸಿಬಿಟ್ಟಿತು. ಇನ್ನು ಅನ್ಯಪುರುಷಚಿಂತನವು ಈ ಜನ್ಮದಲ್ಲಿ ಏಕೆ, ಜನ್ಮಾಂತರದಲ್ಲಿಯೂ ಆಗದು. ಇನ್ನು ಮೇಲೆ ನಾನು ಉದೇಪುರದ ರಾಣಿಯೆಂಬ ಗೌರವದ ಪದವಿಯನ್ನು ನನ್ನಲ್ಲಿ ನಾನೇ ಪಡೆದು, ಸತೀಧರ್ಮವನ್ನು ಪಾಲಿಸಲು ಸಿದ್ಧಳಾಗಿದ್ದೇನೆ. ಕ್ಷುದ್ರಳಾದ ನನ್ನನ್ನು ಬಿಡಿಸುವ ನೆವದಿಂದ ಯಾವತ್ತೂ ರಜಪೂತಸ್ಥಾನದ, ಹಾಗು ಆ ವೀರ ಭೂಮಿಯಲ್ಲಿ ಜನಿಸಿಬಾಳುತ್ತಿರುವ ವೀರ ಕ್ಷತ್ರಿಯ ವಂಶದ ಮರ್ಯಾದೆಯನ್ನು ಈ ಪ್ರಸಂಗದಲ್ಲಿ ನೀವು ಕಾಯ್ದರೂ ಸರಿಯೆ; ಪ್ರತಾಪಸಿಂಗ ಮಹಾರಾಜರ ವಂಶದಲ್ಲಿ ಜನಿಸಿರುವ ಅಭಿಮಾನವನ್ನು ತ್ಯಜಿಸಿ, ದುಷ್ಟ ಔರಂಗಜೇಬನ ಉಸಾಬರಿಗೆ ಹೋಗಿ ವಿಪತ್ತಿಗೆ ಗುರಿಯಾಗುವದು ಯಾತಕ್ಕೆ ಎಂದು ಉದೇಪುರದಲ್ಲಿ ನೀವು ಸ್ವಸ್ಥ ಕುಳಿತುಬಿಟ್ಟರೂ ಸರಿಯೆ; ಆದರೆ ರೂಪಮತಿಯು ಮಾತ್ರ ಹಿಂದಿನ ಸತ್ವಶೀಲ ರಜಪೂತಸ್ತ್ರೀಯರ ಚರಣವನ್ನು ಸ್ಮರಿಸಿ, ಪ್ರಸಂಗ ಬಂದರೆ ಮೊಗಲರಿಗೆ ತನ್ನ ಜಡದೇಹದ ಬೂದಿಯು ಕೂಡ ಬೇರೆಯಾಗಿ ಸಿಗದಂತೆ ಮಾಡದೆ ಬಿಡಳೆಂಬದನ್ನು ಪ್ರಭುಗಳು ಮರೆಯಲಾಗದು. ಪ್ರಭುಗಳೇ, ನನ್ನ ಮುದುಕ ತಂದೆಯ ಮೇಲಿರುವ ತಮ್ಮ ವಿಶ್ವಾಸವನ್ನು ನೆನಪಿಗೆ ತಂದುಕೊಳ್ಳಬೇಕು, ಈ ಅಬಲೆಯ ಪ್ರಾರ್ಥನೆಗೆ ಕಿವಿಗೊಟ್ಟು ಹೊತ್ತಿಗೆ

ಆತನಿಗೆ ಸಹಾಯಮಾಡಿ ಕುಲಭೂಷಣರಾಗತಕ್ಕದ್ದು. ಸ್ವಲ್ಪ ದಿನಗಳಲ್ಲಿ ದುಷ್ಟನಾದ ಔರಂಗಜೇಬ ಬಾದಶಹನು ನನ್ನನ್ನು ತನ್ನ ಜನಾನಖಾನೆಯ ದಾಸಿಯನ್ನಾಗಿ ಮಾಡತಕ್ಕವನಿದ್ದಾನೆ. ನನ್ನ ಮನಸ್ಸಿಗೆ ಸ್ವಲ್ಪವಾದರೂ ಸಮಾಧಾನವಿಲ್ಲ. ನೀವು ಸಹಾಯಕ್ಕಾಗಿ ಬಾರದಿದ್ದರೆ ರಜಪೂತರ ಗೌರವವು ನಷ್ಟವಾಗಿ ಹೋಗುವದು. ಹಾಯ್ ಹಾಯ್! ರಜಪೂತರೆಲ್ಲರೂ ಸತ್ತರೋ ಏನು! ಇಷ್ಟು ದಿವಸಗಳಾದರೂ ಒಬ್ಬರೂ ರೂಪನಗರದ ಕಡೆಗೆ ಹಣಿಕಿ ನೋಡಬಾರದೆ ? ಮಹಾರಾಜರೇ, ಈ ದಾಸಿಯು ತಮ್ಮ ಚರಣವನ್ನು ನಂಬಿಕೊಂಡಿದ್ದಾಳೆ. ಉದಾಸೀನ ಮಾಡಬೇಡಿರಿ. ಹಂಸಿಯನ್ನು ಕಾಗೆಯು, ಇಲ್ಲವೆ ಹರಿಣಿಯನ್ನು ಜಂಬೂಕವು ಎಳೆದೊಯ್ಯುವಂತೆ ಆಗುತ್ತದೆ. ದುಷ್ಟ ಮೊಗಲರು ರಜಪೂತ ಕುಮಾರಿಯರ ಅವಮಾನವನ್ನು ಹೀಗೆ ಮಾಡುತ್ತಿರಲು, ನಿಮ್ಮಂಥ ವೀರಮಣಿಗಳು ಸುಮ್ಮನೆ ಕುಳಿತುಕೊಳ್ಳಬಹುದೇನು ? ಸರ್ವಾಂಶದಿಂದ ತಮ್ಮನ್ನೇ ಹೊಂದಿರುವ ಈ ಅಬಲೆಯು ಇದಕ್ಕೂ ಹೆಚ್ಚಿಗೆ ಸ್ಪಷ್ಟವಾಗಿ ಏನು ಬರೆಯಬೇಕು ? ಇಲ್ಲ, ಇನ್ನು ಒಂದು ಅಕ್ಷರವನ್ನು ಕೂಡ ಬರೆಯುವದಿಲ್ಲ. ಸುಮ್ಮನೆ ಉದೇಪುರದ ಹಾದಿಯನ್ನು ಎವೆಯಿಕ್ಕದೆ ನೋಡುತ್ತ, ತಮ್ಮ ವೀರ ಮೂರ್ತಿಯನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ ಕಾಲ ಹರಣಮಾಡುವೆನು ”

ಈ ಪತ್ರವನ್ನು ಓದಿ ರಾಜಸಿಂಹನು ಶ್ಯೂನ್ಯದೃಷ್ಟಿಯಿಂದ ನೋಡುತ್ತ ಕೆಲ ಹೊತ್ತು ಸುಮ್ಮನೆ ಕುಳಿತುಕೊಂಡು, ಆ ಮೇಲೆ ಸಾಮುಳಪಂಡಿತನನ್ನು ಕುರಿತು--ಪಂಡಿತಜೀ, ಈ ಪತ್ರವನ್ನು ನಿಮಗೆ ಯಾರು ಕೊಟ್ಟರು ? ಎಂದು ಕೇಳಲು, ಸಾಮುಳಪಂಡಿತನು ನಕ್ಕು— ಮಹಾರಾಜರೇ, ಯಾರು ಪತ್ರವನ್ನು ಬರೆದರೋ ಅವರೇ ಇದನ್ನು ನನ್ನ ಕೈಯಲ್ಲಿ ಕೊಟ್ಟರು, ಎಂದು ಹೇಳಿದನು. ಆಗ ರಾಜಸಿಂಹನು ಆವೇಶಗೊಂಡು ಗದ್ದರಿಸಿ— ಇಲ್ಲ ಇಲ್ಲ! ಎಲ್ಲಿಯವರೆಗೆ ರಜಪೂತರೊಳಗಿನ ಈ ಸಿಸೋದಿಯಾ ಕುಲದ ರಾಜಸಿಂಹನು ಬದುಕಿರುವನೋ, ಅಲ್ಲಿಯವರೆಗೆ ರಜಪೂತ ಕುಮಾರಿಯರ ಕೈಯನ್ನು ಮೊಗಲರಿಂದ ಮುಟ್ಟಗೊಡಲಿಕ್ಕಿಲ್ಲ. ಹಂಸಿಯನ್ನು ಕಾಗೆಯು, ಹರಿಣಿಯನ್ನು ಜಂಬೂಕವು ಎಳೆದೊಯ್ದ ಬಳಿಕ ನಾವು ಭೂಮಿಯಲ್ಲಿ ಬದುಕಿಯಾದರೂ ಯಾಕೆ ಇರಬೇಕು ? ಸಾಮುಳ ಪಂಡಿತನೇ, ಇನ್ನು

ನೀನು ನಿಶ್ಚಿಂತನಾಗಿರು. ನಿನ್ನ ಯಜಮಾನನ ಮಗಳಕೈಯನ್ನು, ನಾನು ಬದುಕಿರುವವರೆಗೆ ಮೊಗಲರಿಂದ ಮುಟ್ಟಗೊಡಲಿಕ್ಕಿಲ್ಲೆಂಬ ಮಾತನ್ನು ನಂಬು. ಇಂದಿನಿಂದ ಹತ್ತುದಿನಗಳೊಳಗೆ ರೂಪಮತಿಯನ್ನು ಮೊಗಲರ ದವಡೆಯೊಳಗಿಂದ ಬಿಡಿಸಿದೆನೆಂದು ತಿಳಿ. ಪ್ರತಾಪಸಿಂಗಮಹಾರಾಜರ ವಂಶದಲ್ಲಿ ಹುಟ್ಟಿ, ಇಂಥ ಪ್ರಸಂಗದಲ್ಲಿ ಪ್ರಾಣವನ್ನು ಅರ್ಪಿಸದಿದ್ದರೆ, ಆ ವಂಶದಲ್ಲಿ ಹುಟ್ಟುವದಾದರೂ ಯಾತಕ್ಕೆ ? ಪಂಡಿತರೇ , ನೀವು ಈ ಪತ್ರವನ್ನು ತಕ್ಕೊಂಡು ಬಂದದ್ದು-ಬಹಳ ನೆಟ್ಟಗಾಯಿತು. ಔರಂಗಜೇಬನು ಬಹು ಮತ್ತನಾಗಿದ್ದಾನೆ. ಆತನನ್ನು ಹಾದಿಗೆ ತರಬೇಕೆಂದು ನಾನು ಒಂದು ಪತ್ರವನ್ನು ಬರೆದಿದ್ದೆನು; ಆದರೆ ಆ ಅವಿವೇಕಿಯು ತನ್ನ ಹಿತವನ್ನು ಮರೆತು ಮತ್ತಿಷ್ಟು ಅಡ್ಡದಾರಿಯನ್ನು ಹಿಡಿದನು. ಆತನು ನನ್ನ ಶಾಸನ ಮಾಡುವ ಹವಣಿಕೆಯಲ್ಲಿದ್ದಾನಂತೆ. ಇರಲಿ, ಹಾನೂ ಚಿಂತೆಯಿಲ್ಲ. ಅವನಾಗಿಯೇ ನನ್ನ ಮೇಲೆ ಸಾಗಿ ಬರುವತನಕ ಕೈಕಾಯುಬೇಕೆಂದು ನಾನು ಇಷ್ಟು ದಿನ ಸುಮ್ಮನೆ ಇದ್ದೆನು. ಆದದ್ದು ಆಗಿಹೋಯಿತು. ಇಷ್ಟು ಹೊತ್ತಿಗೇ ನಾನು ವಿಜಯಸಿಂಹನಿಗೆ ಸಹಾಯವನ್ನು ಮಾಡತಕ್ಕದ್ದು ; ಆದರೆ ನನ್ನ ಪತ್ರದಿಂದ ಬಾದಶಹನು ವಿವೇಕಿಯಾದಾನೆಂದು ಹಾದಿಯ ನೋಡಬೇಕಾಯಿತು. ಸಾಮುಳಪಂಡಿತ, ಈ ಪತ್ರದಿಂದ ನನ್ನ ವಿಚಾರಗಳೆಲ್ಲ ಬದಲಾದವು. ನಾನು ನನ್ನ ಸೈನ್ಯದೊಡನೆ ಹೊರಟುಬರುವದಲ್ಲದೆ, ನನ್ನ ಯಾವತ್ತು ಸರದಾರರಿಗೂ, ಮಾಂಡಲಿಕರಿಗೂ ತಮ್ಮ ತಮ್ಮ ಸೈನ್ಯಗಳೊಡನೆ ನನ್ನ ಸಂಗಡ ಬರಬೇಕೆಂದು ಆಜ್ಞಾಪತ್ರಗಳನ್ನು ಕಳಿಸುವೆನು, ಅನ್ನಲು, ಸಾಮುಳಪಂಡಿತನು—ಮಹಾರಾಜರೇ, ತಾವು ಹೀಗೆ ಮಾಡದೆಬಿಡಿರೆಂದು ನಾನು ಮೊದಲೇ ತರ್ಕಿಸಿದ್ದೆನು. ಕ್ಷತ್ರಿಯ ವಂಶದ ರಾಜಾಧಿರಾಜರು ಇಂಥ ಪ್ರಸಂಗದಲ್ಲಿ ಹೀಗೆ ಮಾಡದಿದ್ದರೆ ಶೋಭಿಸಬಹುದೆ ? ತಮ್ಮ ಈ ನಿಶ್ಚಯವನ್ನು ಅತ್ತಕಡೆಗೆ ತಿಳಿಸಿ ಧೈರ್ಯ ಹೇಳಲಿಕ್ಕೆ ಅಪ್ಪಣೆಯಾದರೆ, ಒಬ್ಬ ಭಿಲ್ಲನನ್ನು ಈಗಲೆ ರೂಪನಗರಕ್ಕೆ ಕಳಿಸುವೆನು, ಎಂದನು. ಆದಕ್ಕೆ ರಾಜಸಿಂಹನು— ಅವಶ್ಯವಾಗಿ ಕಳಿಸು. ನನ್ನ ಮಾತಿನಲ್ಲಿ ಎಳ್ಳಷ್ಟು ಇನ್ನು ಹೆಚ್ಚುಕಡಿಮೆಯಾಗಲಾರದು; ರೂಪಮತಿಯನ್ನು ಬಿಡಿಸಿಕೊಂಡು ಬಂದು ಉದೇಪುರದ ಮಹಾಹಾರಾಣಿಯನ್ನಾಗಿ ಮಾಡುವೆನು, ಇಲ್ಲದಿದ್ದರೆ, ಅದೇ ರೂಪನಗರದ ರಣಾಂಗಣದಲ್ಲಿ ಅಳಿಹು

ಗೀರನೊಡನೆ ಯುದ್ಧಮಾಡಿ ದೇಹವಿಡುವೆನು. ಹೋಗು, ನೀನು ಮಾರ್ಗ ಶ್ರಮದಿಂದ ಬಹಳ ಬಳಲಿರಬಹುದು. ನಾನಾದರೂ ನನ್ನ ಸೈನ್ಯವನ್ನು ವ್ಯವಸ್ಥೆಗೊಳಿಸಿ, ಶ್ರೀಗುರುಮಹಾರಾಜರವರ ಅಪ್ಪಣೆಯನ್ನು ಪಡೆಯುವ ದಕ್ಕಾಗಿ ಆಬೂಪರ್ವತದ ಶಿಖರದ ಮೇಲಿರುವ ಅಚಲೇಶ್ವರಸ್ಥಾನಕ್ಕೆ ಹೋಗುವೆನು.

ಸಾಮಳಪಂಡಿತನು ರಾಜಸಿಂಹನ ಅನುಮತಿಯಿಂದ ಬಲಿಭಿಲ್ಲನ ಸಂಗಡ ರೂಪನಗರಕ್ಕೆ ಪತ್ರವನ್ನು ಕಳಿಸಿದನು. ಪತ್ರವು ತೀವ್ರ ಮುಟ್ಟ ಬೇಕೆಂದು ಹೇಳಿದ್ದರಿಂದ, ಸ್ವಾಮಿಭಕ್ತನಾದ ಬಲಿಭಿಲ್ಲನು ಬಹುಒತ್ತರದಿಂದ ಮಾರ್ಗವನ್ನು ಕ್ರಮಿಸಹತ್ತಿ, ಆದಷ್ಟು ಬೇಗನೆ ಪತ್ರಮುಟ್ಟಿಸಿ ತನ್ನ ಸ್ವಾಮಿಗೆ ಸಂತೋಷವನ್ನುಂಟು ಮಾಡಬೇಕೆಂದು ಇಚ್ಛಿಸಿದನು. ಆದರೆ ಮನುಷ್ಯನ ಇಚ್ಛೆಗಳೆಲ್ಲ ಎಲ್ಲಿ ಪೂರ್ಣವಾಗುತ್ತವೆ? ಬಲಿಭಿಲ್ಲನು ಬಹು ವೇಗದಿಂದ ಹಾದಿಯನ್ನು ನಡೆಯುತ್ತ, ಹಿಂದಕ್ಕೆ ಉದೇಪುರಕ್ಕೆ ಬರುವಾಗ ತಮಗೂ ಮೊಗಲರಿಗೂ ಯುದ್ಧವಾದ ಸ್ಥಳಕ್ಕೆ ಬಂದನು. ಕೂಡಲೆ ಹಿಂದಿನಿಂದ ಆತನ ತಲೆಗೊಂದು, ಹೆಗಲಿಗೊಂದು ಹೀಗೆ ಎರಡು ಕತ್ತಿಯ ಕಡತಗಳು ಬಿದ್ದವು. ಆಗ ಬಲಿಯು ಆಶ್ಚರ್ಯಪಟ್ಟು, ತನ್ನ ಕತ್ತಿಯನ್ನು ಒರೆಯೊಳ ಗಿಂದ ಹಿರಿಯುತ್ತ ಹಿಂದಕ್ಕೆ ತಿರುಗಿ ನೋಡಲು, ಇಬ್ಬರು ಮೊಗಲರು ತನ್ನನ್ನು ನಾಶಗೊಳಿಸಲಿಕ್ಕೆ ಸಿದ್ಧರಾಗಿ ನಿಂತುಕೊಂಡಿದ್ದರು. ಬಲಿಭಿಲ್ಲನು ತನ್ನ ಖಡ್ಗವನ್ನು ನೆಗಹಿ ಮೊಗಲರ ಸಮಾಚಾರ ತಕ್ಕೊಳ್ಳಬೇಕೆನ್ನುವಷ್ಟ ರಲ್ಲಿ, ಆತನ ತಲೆಯೊಳಗಿಂದ ಮಿತಿಮೀರಿ ರಕ್ತಸ್ರಾವವಾದದ್ದರಿಂದ ಆತನು ಮೂರ್ಛಿತನಾಗಿ ನೆಲಕ್ಕೆ ಬಿದ್ದನು. ಕೂಡಲೆ ಮೊಗಲರು ಮತ್ತೆ ಎರಡು ಸಾರೆ ಆತನ ಮೇಲೆ ಖಡ್ಗವನ್ನು ಪ್ರಯೋಗಿಸಲು, ಆ ಸ್ವಾಮಿಭಕ್ತಭಿಲ್ಲನು ನಿಶ್ಚೇಷ್ಟಿತನಾಗಿ ಬಿದ್ದನು. ಆಗ ಮೊಗಲರು ಬಲಿಯನ್ನು ಶೋಧಿಸಿ, ಆತನ ಬಳಿಯಲ್ಲಿದ್ದ ಪತ್ರವನ್ನು ತಕ್ಕೊಂಡು, ಅದನ್ನು ತಮ್ಮ ಯಜಮಾನನಾದ ಸಾದತಖಾನನಿಗೆ ಮುಟ್ಟಿಸುವದಕ್ಕೆ ವೇಗವಾಗಿ ಸಾಗಿದರು. ಹಿಂದಕ್ಕೆ ಭಿಲ್ಲ ರಿಂದ ಹೊಡೆಯಲ್ಪಟ್ಟು ಅವಮಾನಿತರಾಗಿ ಓಡಿಹೋಗಿದ್ದ ಮೊಗಲರು ಮತ್ತೆ ತಿರುಗಿಬಂದು, ರೂಪನಗರಕ್ಕೆ ಉತ್ತರವನ್ನು ಒಯ್ಯುವ ಸಾಮಳಪಂಡಿತನ ಹಾದಿಯನ್ನು ನೋಡುತ್ತ ಕುಳಿತುಕೊಂಡಿದ್ದರು. ಸಾಮಳಪಂಡಿತನ ಬದಲು

ಖಿಲಿಭಿಲ್ಲನು ಅವರ ಕೈಗೆ ಸಿಕ್ಕು ಅವರ ಕಾರ್ಯವಾಯಿತು. ಅವರು ಯಾವ ವಿಘ್ನವೂ ಇಲ್ಲದೆ ತಮ್ಮ ಒಡೆಯನಾದ ಸಾದತಖಾನನ ಬಳಿಗೆ ಹೋಗಿ ಪತ್ರವನ್ನು ಕೊಟ್ಟರು. ಖಾನನು ಪತ್ರವನ್ನು ಓದಿ ಸಮಾಧಾನಪಟ್ಟನು. ಈ ಪತ್ರವು ರೂಪನಗರಕ್ಕೆ ಮುಟ್ಟಿದ್ದರೆ, ವಿಜಯಸಿಂಹನು ಧೈರ್ಯದಿಂದ ರಾಜಸಿಂಹನ ಮಾರ್ಗವನ್ನು ನೋಡುತ್ತಿದ್ದನೆಂತಲೂ, ಇನ್ನು ರಾಜಸಿಂಹನು ಬರುವದರೊಳಗೆ ನಾವು ಜೀವದ ಹಂಗುದೊರೆದು ಕಾದಿ ವಿಜಯಸಿಂಹನನ್ನೂ ಆತನ ಮಗಳಾದ ರೂಪಮತಿಯನ್ನೂ ಸೆರೆಹಿಡಕೊಂಡು, ದಿಲ್ಲಿಯ ಕಡೆಗೆ ಸಾಗಬೇಕೆಂತಲೂ ಆತನು ನಿಶ್ಚಯಿಸಿದನು. ತಾನು ದಿಲ್ಲಿಯಿಂದ ಸಹಾಯವು ಬರುವತನಕ ಹಾದಿಯು ನೋಡುತ್ತ ಕುಳಿತುಕೊಂಡರೆ, ಪ್ರತಿಜ್ಞೆ ಮಾಡಿದಂತೆ ರಾಜಸಿಂಹನು ಉದೇಪುರದಿಂದ ಅಷ್ಟರಲ್ಲಿ ಬಂದು, ತಾನು ಇಬ್ಬರ ಹೊಡತಗಳ ನಡುವೆ ಸಿಕ್ಕು ಸಂಪೂರ್ಣ ನಾಶವಾಗಬಹುದೆಂದು ಖಾನನು ಬೆದರಿದನು. ಕೂಡಲೆ ಆತನು ತನ್ನ ಸರದಾರರನ್ನೆಲ್ಲ ಏಕಾಂತದಲ್ಲಿ ಕರಿಸಿಕೊಂಡು ಎಲ್ಲ ವೃತ್ತಾಂತವನ್ನು ಹೇಳಿದನು. ಆ ಮೇಲೆ ಬಹಳ ಹೊತ್ತು ಆರೆದಾಟವಾದ ಬಳಿಕ ಸಾದತಖಾನನು ಯಾವತ್ತು ಸರದಾರರನ್ನು ಕುರಿತು— ನಾವು ಇಂದೇ ರೂಪನಗರದ ಮೇಲೆ ಸಾಗಿ ಹೋಗಿ ವಿಜಯಸಿಂಹನನ್ನು ಹಣ್ಣಿಗೆ ತರದಿದ್ದರೆ, ನಮ್ಮಲ್ಲಿಯ ಒಬ್ಬನೂ ತಿರುಗಿ ಜೀವದಿಂದ ಹೋಗಲಾರನೆಂಬದನ್ನು ನೆನಪಿನಲ್ಲಿಡಿರಿ. ಮೇವಾಡದ ರಜಪೂತರು ಅಂಥಇಂಥವರಲ್ಲ. ಅವರು ಒಮ್ಮೆ ರೊಚ್ಚಿಗೆದ್ದರೆಂದರೆ ಏನು ಮಾಡ್ಯಾರು ಏನುಮಾಡಲಿಕ್ಕಿಲ್ಲೆಂಬದನ್ನು ಹೇಳಲಿಕ್ಕಾಗುವದಿಲ್ಲ; ಆದ್ದರಿಂದ ಹೊಡೆಯಬೇಕು, ಇಲ್ಲವೆ ಮಡಿಯಬೇಕು; ಎಂಬ ನಿಶ್ಚಯದಿಂದ ಇಂದು ಕೋಟೆಗೆ ಲಗ್ಗೆಹತ್ತಿ ಅದನ್ನು ಸ್ವಾಧೀನ ಪಡಿಸಿಕೊಳ್ಳಬೇಕು; ಇಲ್ಲದಿದ್ದರೆ ಒಳಗಿನಿಂದ ವಿಜಯಸಿಂಹನ ಪೆಟ್ಟನ್ನೂ, ಹೊರಗಿನಿಂದ ರಾಜಸಿಂಹನ ಪೆಟ್ಟನ್ನೂ ತಿನ್ನುತ್ತ ಸುದ್ದಿಯು ಹೇಳಲಿಕ್ಕೆ ಜನರು ಇಲ್ಲದಂತೆ ಎಲ್ಲರೂ ಸತ್ತುಹೋಗಬೇಕಾದೀತು, ಎಂದು ಹೇಳಿ, ಎಲ್ಲರ ಮನಸ್ಸನ್ನು ಒಲಿಸಿಕೊಂಡು ಒಮ್ಮೆ ಭರದಿಂದ ಕೋಟೆಯ ಮೇಲೆ ಏರಿಹೋಗಬೇಕೆಂದು ನಿಶ್ಚಯಿಸಿದನು.

ಇತ್ತ ರೂಪಮತಿಯೂ, ಪದ್ಮೆಯೂ ಸಾಮಳಪಂಡಿತನ ಹಾದಿಯನ್ನು ಆತುರದಿಂದ ನೋಡುತ್ತಿದ್ದರು. ಇಂದೆ ಬಂದಾನು— ನಾಳೆಗೆ ಬಂದಾನು,

ಸಂಜೆಗೆ ಬಂದಾನು-ಮುಂಜಾವಿಗೆ ಬಂದಾನು ಎಂದು ಅವರು ಚಡಪಡಿಸ ಹತ್ತಿದರು. ಅವರ ಮನಸ್ಸಿನಲ್ಲಿ ಬಗೆಬಗೆಯ ವಿಚಾರಗಳು ಉತ್ಪನ್ನವಾಗ ಹತ್ತಿದವು. ಏನಾದರೂ ಪಂಡಿತರು ಸುದ್ದಿಯನ್ನು ತರಬಹುದಷ್ಟೇ, ಎಂದು ಅವರು ಚಿಂತಿಸುತ್ತಿದ್ದರು. ಹೀಗಿರುವಾಗ ಅವರು ಒಂದು ದಿನ ಬಾಲೆಯು ಕಿಲ್ಲೆಯನ್ನೇರಿ ಸುತ್ತುಮುತ್ತು ನೋಡುತ್ತಿರಲು, ಸಾದತಖಾನನ ಸೈನ್ಯವು ಚಲಿಸುತ್ತಲಿದ್ದದ್ದು ಅವರ ಕಣ್ಣಿಗೆ ಬಿದ್ದಿತು. ಔರಂಗಜೇಬನಿಂದ ಹೊಸ ಸೈನ್ಯದಸಹಾಯವು ಒದಗುವ ಹಾದಿಯನ್ನು ನೋಡ್ಡುತ್ತಿದ್ದ ಸಾದತಖಾನನು ಈ ದಿನ ಸೈನ್ಯದ ತಳಕಿತ್ತಿ ಕೋಟೆಯ ಕಡೆಗೆ ಬರುವದನ್ನು ನೋಡಿ ಅವರು ಗಾಬರಿಯಾದರು. ನೋಡನೋಡುತ್ತ ನಾಲ್ಕೂ ಕಡೆಯಿಂದ ಸೈನ್ಯವು ಕೋಟೆಯನ್ನು ತೀರ ಸಮೀಪಿಸಿತು. ಇದು ದುರ್ಲಕ್ಷಣವೆಂದು ಭಾವಿಸಿ ಆ ಇಬ್ಬರು ಪ್ರಮದೆಯರು ಈ ವರ್ತಮಾನವನ್ನು ವಿಜಯಸಿಂಹನಿಗೆ ಹೇಳ ಬೇಕೆಂದು ಹೊರಟರು. ಅಷ್ಟರಲ್ಲಿ ಕೋಟೆಯ ಮೇಲೆ ಅಲ್ಲಲ್ಲಿ ಕಾವಲಾಗಿದ್ದ ವರು ಈ ಸುದ್ದಿಯನ್ನು ವಿಜಯಸಿಂಹನಿಗೆ ಹೇಳಿದರು. ಮೊಗಲರ ಬಾಣ ಗಳೂ, ಗುಂಡುಗಳೂ ಕೋಟೆಯ ಮೇಲೆ ಬೀಳಹತ್ತಿದವು. ಇದನ್ನು ನೋಡಿ ವಿಜಯಸಿಂಹನೇ ಮೊದಲಾದವರು ಶತ್ರುಗಳಿಗೆ ಹೊಸ ಸಹಾಯವು ಬಂದೊ ದಗಿತೆಂದು ನಿಶ್ಚಯಿಸಿದರು. ಅವರು ಹೀಗೆ ನಿಶ್ಚಯಿಸಬೇಕೆಂತಲೇ ಸಾದತ ಖಾನನು ಹಲವು ಯುಕ್ತಿಗಳನ್ನು ಯೋಚಿಸಿದನು. ಆ ದಿನ ರಾತ್ರಿ ಆತನು ಕೋಟೆಯ ಒಂದು ನಿಟ್ಟಿನಹೊರತು ಉಳಿದ ನಿಟ್ಟುಗಳಲ್ಲಿ ದಂಡನ್ನು ಅಂಗ ಲಾಗಿ ಇಟ್ಟು ಉಳಿದ ದಂಡನ್ನು ಕೋಟೆಯಿಂದ ಒಂದೆರಡು ಹರದಾರಿಗಳ ಮೇಲೆ ಕಳಿಸಿ, ಹಲವು ದೀವಟಿಗೆಗಳನ್ನು ಹಚ್ಚಿ ಬಹುದೊಡ್ಡ ಸೈನ್ಯವು ಸಹಾಯಕ್ಕೆ ಬರುವದೆಂಬ ಭ್ರಾಂತಿಯನ್ನು ರೂಪನಗರದೊಳಗಿನ ಜನರಲ್ಲಿ ಉಂಟುಮಾಡಬೇಕೆಂದು ತನ್ನ ದಂಡಿನವರಿಗೆ ಹೇಳಿದನು. ದಂಡಾಳುಗಳು ಅದರಂತೆ ಮಾಡಿದರು. ಸಾದತಖಾನನ ಈ ಯುಕ್ತಿಯು ಬಹು ಚನ್ನಾಗಿ ಸಾಧಿಸಿತು. ಕೋಟೆಯ ಬಳಿಯಲ್ಲಿ ಒತ್ತಟ್ಟಿಗೆ ಬಹಳ ಸೈನ್ಯವಿದ್ದು, ಅದರ ಸಹಾಯಕ್ಕಾಗಿ ಮತ್ತೊಂದು ದೊಡ್ಡ ಸೈನ್ಯವು ಬರುತ್ತದೆಂದು ತಿಳಿದು ಅವರು ಬೆದರಿದರು. ಕೋಟೆಯ ಉಳಿದ ಕಡೆಯಲ್ಲಿ ಸೈನ್ಯವು ಅಂಗಲವಾಗಿದ್ದದ್ದನ್ನು ಅವರು ನೋಡಲಿಲ್ಲ. ಎಲ್ಲರ ಮುಖಗಳು ನಿಸ್ತೇಜವಾದವು; ಆದರೆ ವೃದ್ಧ

ನಾದ ವಿಜಯಸಿಂಹನು ಮಾತ್ರ ರಜಪೂತರ ಸಹಾಯವು ಬರಲಿಲ್ಲೆಂಬ ನಿರಾಶೆಯಿಂದ, ತನ್ನ ಜೀವದ ಆಶೆಯನ್ನೂ, ಮಗಳ ಮೋಹವನ್ನೂ ಬದಿಗಿಟ್ಟು ವೀರರಜಪೂತರ ಕಟ್ಟಕಡೆಯ ಉಪಾಯವನ್ನೂ, ಕೈಕೊಳ್ಳಲು ಸಿದ್ಧನಾದನು. ಆತನು ತನ್ನ ಸೈನ್ಯದಲ್ಲಿ ತಕ್ಕಂತೆ ವ್ಯವಸ್ಥೆಮಾಡಿ, ಒಮ್ಮೆ ರಜಪೂತರ ನಿಜವಾದ ಕ್ಷಾತ್ರತೇಜಸ್ಸನ್ನು ತೋರಿಸಲು ಟೊಂಕಕಟ್ಟಿದನು.

ಇತ್ತ ರಾಜಸಿಂಹನು ;— "ಹತ್ತುದಿವಸಗಳಲ್ಲಿ ರೂಪಮತಿಯನ್ನು ಬಿಡಿಸಿಕೊಂಡು ಉದೇಪುರದ ಮಹಾರಾಣಿಯನ್ನಾಗಿ ಮಾಡುವೆನು, ಇಲ್ಲವೆ ರೂಪನಗರದ ರಣಭೂಮಿಯಲ್ಲಿ ಔರಂಗಜೇಬನ ಸಂಗಡ ಯುದ್ಧ ಮಾಡಿ ದೇಹವಿಡುವೆನು," ಎಂದು ಸಾಮಳಪಂಡಿತನ ಮುಂದೆ ಪ್ರತಿಜ್ಞೆಯನ್ನು ಮಾಡಿದನಷ್ಟೇ ? ಆದರೆ ಔರಂಗಜೇಬ ಬಾದಶಹನ ಎದುರಿಗೆ ತೋಳು ತಟ್ಟಿಕೊಂಡು ಯುದ್ಧಕ್ಕೆ ನಿಲ್ಲುವದೆಂದರೆ ಸರ್ವಸಾಧಾರಣ ಕೆಲಸವಿದ್ದಿಲ್ಲ. ಈವೊತ್ತಿನವರೆಗೆ ಅವರಿಬ್ಬರಲ್ಲಿ ಪರಸ್ಪರ ಪ್ರೇಮದ ಬಳಿಕೆಯಿಲ್ಲದಿದ್ದರೂ, ಪ್ರತ್ಯಕ್ಷ ದ್ವೇಷವಿದ್ದಿಲ್ಲ. ಈಗ ರಾಜಸಿಂಹನು ಔರಂಗಜೇಬನ ಸಂಗಡ ದ್ವೇಷವನ್ನೇ ಕಟ್ಟಿಕೊಳ್ಳಬೇಕಾಯಿತು. ಉದೇಪುರದ ರಾಣಾನಸಂಗಡ ನಾನು ಇಲ್ಲದ ಆಧ್ಯತೆಯಿಂದ ನಡೆದರೆ, ಪರಿಣಾಮವಾಗದೆಂದು ತಿಳಿದು, ಔರಂಗಜೇಬನು ಅಷ್ಟು ಉದ್ದ ನೀರಿಗೆ ಹೋಗುತ್ತಿದ್ದಿಲ್ಲ. ಆ ಮನೆತನದ ಮೇಲೆ ಇಡಿಯ ರಜಪೂತ ಸ್ಥಾನದ ಪ್ರೇಮವು ಇನ್ನೂ ವಿಶೇಷವಾಗಿರುವದರಿಂದ, ರಾಜಸಿಂಹನ ಸಂಗಡ ನಾನು ಯುದ್ಧವನ್ನು ಆರಂಭಿಸಿದರೆ, ಇಡಿಯ ರಜಪೂತಸ್ಥಾನವೇ ತನ್ನ ಮೇಲೆ ತಿರುಗಿ ಬೀಳಬಹುದೆಂದು ಬಾದಶಹನು ಭಾವಿಸಿದ್ದನು. ಈ ಭಾವನೆಯಿಂದ ಅಲಮಗೀರನು ರಾಜಸಿಂಹನ ದ್ವೇಷವನ್ನು ಹೊಟ್ಟೆಯಲ್ಲಿಟ್ಟುಕೊಂಡು, ಪ್ರಸಂಗ ಒದಗಿದರೆ ಒಮ್ಮೆಲೆ ಆತನ ಸೇಡುತೀರಿಸಿಕೊಳ್ಳಬೇಕೆಂದು ಮಾಡಿದ್ದನು. ಇದರಂತೆ, ಉದೇಪುರದ ರಾಣಾನಾದ ರಾಜಸಿಂಹನು ಔರಂಗಜೇಬನನ್ನು ಬಹಳವಾಗಿ ತಿರಸ್ಕರಿಸುತ್ತಿದ್ದರೂ, ಪ್ರಸಿದ್ಧರೀತಿಯಿಂದ ತೋಳುತಟ್ಟಿಕೊಂಡು ಬಾದಶಹನ ಎದುರಿಗೆ ಯುದ್ಧಕ್ಕೆ ನಿಲ್ಲಲಿಕ್ಕೆ ಆತನಿಗೆ ಧೈರ್ಯವಿದ್ದಿಲ್ಲ; ಯಾಕಂದರೆ, ಬಾದಶಹನ ಪ್ರಚಂಡ ಸೈನ್ಯಕ್ಕೆ ತನ್ನ ಒಬ್ಬನಸೈನ್ಯವು ಈಡಾಗದೆಂದು ಆತನು ತಿಳಿದಿದ್ದನು. ಅದರಿಂದಲೇ ಆತನು ಬಾದಶಹನ ಸಂಗಡ ನೋಡಿಕೊಂಡು ನಡೆಯುತ್ತಿ

ದ್ದನು. ಈಗ ರಜಪೂತರಲ್ಲಿ ಒಕ್ಕಟ್ಟು ಇಲ್ಲದ್ದರಿಂದ, ಯಾರು ಯಾರ ವಿಶ್ವಾಸಘಾತಮಾಡಿ ಬಾದಶಹನ ಪ್ರೇಮಸಂಪಾದಿಸಬಹುದೆಂಬದನ್ನು ಹೇಳುವ ಹಾಗಿದ್ದಿಲ್ಲ. ಆದರೂ ತನ್ನ ಮನೆತನದ ಗೌರವವನ್ನು ಕಾಯ್ದು ಕೊಂಡು ಬಾದಶಹನಿಗೆ ತೋರಿಸಬಹುದಾದಷ್ಟು ನಿಸ್ಪೃಹತೆಯನ್ನು ತೋರಿಸ ಲಿಕ್ಕೆ ರಾಜಸಿಂಹನು ಎಂದೂ ಹಿಂದೆಮುಂದೆ ನೋಡಲಿಲ್ಲ. ಅಂಥ ಪ್ರಸಂಗವೇ ಒದಗಿದರೆ, ತಾನು ರಾಜ್ಯಲೋಭಕ್ಕೂ ಜೀವಿತಲೋಭಕ್ಕೂ ಒಳಗಾಗಿ, ಮೊಗಲರ ಮುಂದೆ ತಲೆಯನ್ನು ಬಾಗಿಸಿ ತನ್ನ ಪವಿತ್ರವಂಶದ ಶುಭ್ರಕೀರ್ತಿಗೆ ಕಲಂಕವನ್ನುಂಟುಮಾಡಲಿಕ್ಕಿಲ್ಲೆಂತಲೂ, ಪ್ರತಾಪಸಿಂಹನ, ಹಾಗು ಭೀಮ ಸಿಂಹನ ಹೆಸರುಗಳು, ಜಗತ್ತಿನ ಜನರ ಸ್ಮರಣಪಟದಿಂದಲೂ ಮಾಜಿಹೋಗು ವವರೆಗೆ ನಾನು ಅವರ ಹೆಸರಿಗೆ ಕುಂದನ್ನುಂಟುಮಾಡುವ ಕೆಲಸವನ್ನು ಮಾಡಲಿಕ್ಕಿಲ್ಲೆಂತಲೂ ರಾಜಸಿಂಹನು ನಿಶ್ಚಯಿಸಿದ್ದನು. ನನಗೆ ನೀಗದ ಪ್ರಸಂಗವೇ ಒದಗಿದ ಪಕ್ಷದಲ್ಲಿ ಹೆಂಡರು ಮಕ್ಕಳನ್ನು ಕೈಮುಟ್ಟ ತುಂಡರಿಸಿ, ಮಕ್ಕಳು ಮರಿಗಳಿಂದ ಸಹಿತವಾಗಿ ಸಮರಭೂಮಿಯಲ್ಲಿ ಪರಾಕ್ರಮವನ್ನು ಪ್ರಕಟಮಾಡಿ, ದೇಹತ್ಯಾಗ ಮಾಡೇನಲ್ಲದೆ, ಉದೇಪುರದ ಪವಿತ್ರವಂಶದ ಒಂದು ಅಂಕುರವನ್ನು ಕೂಡ ಮೊಗಲರ ಕೈಗೆ ಹತ್ತಗೊಡಲಿಕ್ಕಿಲ್ಲೆಂದು ಆತನು ನಿರ್ಧರಿಸಿದ್ದನು. ಹೀಗಿರುವಾಗ, ರೂಪಮತಿಯು ಮನಸ್ಸಿಗೆ ನಡು ವಂತೆ ಪತ್ರುಬರೆದದ್ದರಿಂದ, ರಾಜಸಿಂಹನು ಮೇಲೆ ಹೇಳಿದಂತೆ ಪ್ರತಿಜ್ಞೆ ಯನ್ನು ಮಾಡಿದನು. ರಜಪೂತರ ಪ್ರತಿಜ್ಞೆಗೆ ಮರಣದ ಹೊರತು ಬೇರೆ ಯಾವದೂ ಅಡ್ಡ ಬರಲಾರದೆಂಬದು ಪ್ರಸಿದ್ಧವೇ; ಆದರೆ ಈಗಿನ ಪ್ರಸಂಗ ದಲ್ಲಿ ತನ್ನ ಪ್ರತಿಜ್ಞೆಗೆ ಹಲವು ವಿಘ್ನಗಳು ಒದಗುವವೆಂದು ರಾಜಸಿಂಹನಿಗೆ ತೋರಿದ್ದರಿಂದ, ಆತನು ರಜಪೂತಸ್ಥಾನದೊಳಗಿನ ಯಾವತ್ತು ಸಣ್ಣದೊಡ್ಡ ಅರಸರಕಡೆಗೆ ಪತ್ರುಗಳನ್ನು ಕಳಿಸಿದನು. ಆ ಪತ್ರುಗಳೊಳಗಿನ ಅಭಿಪ್ರಾಯ ವೇನೆಂದರೆ— ಆರ್ಯಾವರ್ತಕ್ಕೆ ಲಲಾಮಭೂತವಾದ ರಾಜಸ್ಥಾನದೊಳಗಿನ ಸೂರ್ಯ-ಚಂದ್ರ ವಂಶದ ರಾಜಮಂಡಲದೊಳಗಿನ ವೀರಪುರುಷರಿಗೆ, ಉದಯಪುರ ನಿವಾಸಿಗಳೆನಿಸುವ ಶಿಸೋದಿಯಾವಂಶಸಮುದ್ಭವರ ಸೇವಕ ನಾದ ರಾಣಾರಾಜಸಿಂಹನ ಅನೇಕ ಪ್ರಣತಿಪೂರ್ವಕ ವಿಜ್ಞಾಪನೆಗಳು.

ನರವೀರರೇ, ನಮ್ಮ ಈ ಆರ್ಯಾವರ್ತದ ಮೇಲೆ ಬಹು ಭಯಂಕರ

ಪ್ರಸಂಗಗಳೊದಗುವ ಚಿಹ್ನಗಳು ದಿನದಿನಕ್ಕೆ ವಿಶೇಷವಾಗಿ ತೋರಹತ್ತಿವೆ. ಇದರ ಯಥಾ ಯೋಗ್ಯವಿಚಾರಮಾಡಿ ತಾವೆಲ್ಲರು ಕೂಡಿ ಒಕ್ಕಟ್ಟಿನಿಂದ ಏನಾದರೂ ಉಪಾಯ ಮಾಡಬೇಕೆಂದು ನನ್ನ ಅಲ್ಪಬುದ್ಧಿಗೆ ತೋರುತ್ತದೆ. ಬಾದಶಹನಾದ ಔರಂಗಜೇಬನು ನಮ್ಮ ಗೌರವವನ್ನು ಎಷ್ಟು ಮಟ್ಟಿಗೂ ಉಳಿಸಲಿಲ್ಲ. ನಮ್ಮ ಪವಿತ್ರವಾದ ದೇವಾಲಯುಗಳನ್ನು ಕೆಡವಿಸಿ, ಮೇಲೆ ಮಸೀದಿಗಳನ್ನು ಕಟ್ಟಿಸಿದನು. ಪ್ರತಾಪಿಯಾದ ಅಕಬರಬಾದಶಹನು ಗೋ ಹತ್ಯವನ್ನು ಪ್ರತಿಬಂಧಿಸುವ ಪದ್ಧತಿಯನ್ನು ತೋರಿಸಿರಲು, ಔರಂಗಜೇಬ ಬಾದಶಹನು ಆ ಪದ್ಧತಿಯನ್ನು ಯಾವಾಗೋ ಮುರಿದುಬಿಟ್ಟನು. ಹಾಗೆ ಮಾಡಬಾರದೆಂದು ಬೇಡಿಕೊಂಡವರ ಬೇಡಿಕೆಯನ್ನು ದುರ್ಲಕ್ಷಿಸಿದನು. ಆತನ ಸಂಗಡ ವಿನಯದಿಂದ ನಡಕೊಂಡ ಕ್ಷತ್ರಿಯರಾಜರ ಸಂಗಡಲೂ, ಅವರ ಪಶ್ಚಾತ್ ಅವರ ಹೆಂಡರು ಮಕ್ಕಳ ಸಂಗಡಲೂ ಬಾದಶಹನು ಎಷ್ಟು ಉದ್ಧತವೃತ್ತಿಯಿಂದ, ಹಾಗು ಅಪ್ರಮಾಣಿಕತನದಿಂದ ನಡೆದುಕೊಳ್ಳುವ ನೆಂಬದನ್ನು ಹುಡುಕಲಿಕ್ಕೆ ದೂರಹೋಗುವ ಕಾರಣವಿಲ್ಲ. ವೀರ ಶಿರೋ ಮಣಿಗಳೇ, ಜಸವಂತಸಿಂಗಮಹಾರಾಜರ, ಹಾಗು ಅವರ ಜೇಷ್ಠಪುತ್ರನಾದ ಪೃಥ್ವೀಸಿಂಗನ ಮರಣಕ್ಕೆ ಯಾರು ಕಾರಣರಾದರು ? ಅವರ ಪಶ್ಚಾತ್ ರಜಪೂತಸ್ಥಾನದ ಅಭಿಮಾನಕ್ಕೆ ಕಾರಣರಾದ ತೀರ್ಥರೂಪಿಣೀ ಮಾತುಃಶ್ರೀ ಚಂದ್ರಾವತೀಮಹಾರಾಣಿಯವರ ಕಷ್ಟಮಯಸ್ಥಿತಿಯು ಯಾರಿಂದ ಉಂಟಾ ಯಿತು ? ಹಡೆದ ಸ್ವಲ್ಪದಿನಗಳಲ್ಲಿಯೇ ಪುತ್ರನನ್ನು ಅಗಲಿ ಶೋಕಪಡುವ ಪ್ರಸಂಗವು ಆ ಸಾಧ್ವಿಗೆ ಯಾರಿಂದ ಒದಗಿತು ? ಈ ಪ್ರಶ್ನಗಳ ಉತ್ತರವನ್ನು ನಾನು ಇಲ್ಲಿ ಬರೆಯುವ ಅವಶ್ಯವಿರುವದೋ ? ಅದಿರಲಿ. ವಿಜಯಸಿಂಹ ರಾಣಾನವರ ರೂಪನಗರದ ಸಂಸ್ಥಾನವು ಸಣ್ಣದೆಂಬದೆನೋ ನಿಜ; ಆದರೆ ಈವೊತ್ತಿಗೆ ವಯಸ್ಸಿನಿಂದ, ಅನುಭವದಿಂದ, ಪ್ರತಾಪದಿಂದ, ಕ್ಷಾತ್ರತೇಜಸ್ಸಿ ನಿಂದ, ಹಾಗೆಯೇ ಬೇರೆ ಅನೇಕ ಕಾರಣಗಳಿಂದ ಅವರು ನಮಗೆ ಭೀಷ್ಮಾ ಚಾರ್ಯರಂತೆ ಮಾನ್ಯರಾಗಿರುವರು. ಅಂಥವರ ಮೇಲೆ ಈಗ ಎಂಥ ಪ್ರಸಂಗ ಬಂದಿರುತ್ತದೆಂಬದನ್ನು ವಿಚಾರಮಾಡಿರಿ. ಹಿಂದೂ ಜನರ ಮೇಲೆ ಜಿಜಿಯಾ ತಲೆಪಟ್ಟಿಯನ್ನು ಕೂಡ್ರಿಸುವದರಿಂದ ನಿಮಗೂ ಪ್ರಜೆಗಳಿಗೂ ಹಿತವಾಗ ದೆಂದು ತಿಳಿದು ನಾನು ಅಲಮಗೀರನಿಗೆ ಗುರುಗಳ ಅಪ್ಪಣೆಯಂತೆ ಪತ್ರವನ್ನು

ಬರೆದರೆ, ಆತನು ಹುಡುಗಾಟಿಕೆ ಮಾಡಿದ ಹಾಗೆ ಮಾಡಿ, ಪತ್ರವನ್ನು ಧಿಕ್ಕರಿಸಿ ನನ್ನ ಸೇಡುತೀರಿಸಿಕೊಳ್ಳುವ ನಿಶ್ಚಯಮಾಡಿದನಂತೆ. ಮಾಡಲಿ, ಗುರುಗಳ ಅಪ್ಪಣೆಯಂತೆ ಪತ್ರಬರೆದಿರುವ ನಾನು, ಅದರ ಫಲವನ್ನು ಭೋಗಿಸಲಿಕ್ಕೆ ಸಿದ್ಧನಾಗಿದ್ದೇನೆ; ಆದರೆ ವಿಜಯಸಿಂಗಮಹಾರಾಣಾನ ಮೇಲೆ ಈಗ ಬಂದಿರುವ ಪ್ರಸಂಗದ ನಿವಾರಣಕ್ಕಾಗಿ ನಾನು ನಿಮ್ಮೆಲ್ಲರ ಬಳಿಗೆ ಈ ವಿನಂತಿಯ ಪತ್ರವನ್ನು ಕಳಿಸಿರುವೆನು. ವೀರರೇ, ಈಗ ಬರಿಯ ವಿಜಯಸಿಂಹ ಮಹಾರಾಜರ ಕನ್ಯೆಯನ್ನೇ ಅಲ್ಲ, ಯಾವತ್ತು ರಜಪೂತಸ್ಥಾನದ ಲಜ್ಜೆಯನ್ನು ಆಲಮಗೀರ ಬಾದಶಹನು ಹರಣಮಾಡುತ್ತಿರುವನೆಂಬದನ್ನು ಚನ್ನಾಗಿ ನೆನಪಿನಲ್ಲಿಡಿರಿ. ಈ ಕನ್ಯೆಯನ್ನು ನಮ್ಮೆಲ್ಲರ ಎದುರಿಗೆ ಹರಣಮಾಡುವದೆಂದರೆ, ರಜಪೂತರ ಮೈಯಲ್ಲಿ ತಮ್ಮ ಹೆಂಡರು ಮಕ್ಕಳನ್ನು ರಕ್ಷಿಸುಕೊಳ್ಳುವ ಸಾಮರ್ಥ್ಯವು ಕೂಡ ಉಳಿಯಲಿಲ್ಲೆಂದು ಜಗತ್ತಿನ ಮುಂದೆ ಕೂಗಿ ಹೇಳಿದ ಹಾಗಿರುತ್ತದೆ. ರಜಪೂತರ ರಾಜ್ಯಲಕ್ಷ್ಮಿಯು ಹೊರಟುಹೋದಳು; ರಜಪೂತರ ಲಜ್ಜಾರೂಪಸ್ತ್ರೀಯು ಗುಳೇಕಟ್ಟಿದಳು; ರಜಪೂತರು ಹತವೀರ್ಯರಾದರು; ಎಂದು ಜಗತ್ತಿನ ಜನರು ಹಳಿದರೂ ಚಿಂತೆಯಿಲ್ಲ; ನಮ್ಮ ರಾಜ್ಯವೂ ಜೀವಿತವೂ ಸುರಕ್ಷಿತವಾಗಿದ್ದರೆ ಸಾಕೆಂದು ತಿಳಿಯುವ ಹೇಡಿಗಳ ಸಲುವಾಗಿ ನಾನು ಈ ಪತ್ರವನ್ನು ಬರೆದಿರುವದಿಲ್ಲ. ಮಾನ ಧನಕ್ಕಾಗಿ ಸರ್ವಧನಗಳನ್ನು ತ್ಯಜಿಸಿ, ಪ್ರಸಂಗದಲ್ಲಿ ತನ್ನ, ಹಾಗು ತನ್ನ ಬಂಧು ಬಾಂಧವರ ಜೀವಿತವು ತೃಣಕ್ಕಿಂತ ಕಡಿಮೆಯೆಂದು ತಿಳಿದು ಕ್ಷಾತ್ರತೇಜಸ್ಸನ್ನು ಕಾಯ್ದುಕೊಳ್ಳುವ ಧೀರರ ಸಲುವಾಗಿಯೇ ನಾನು ಈ ಪತ್ರವನ್ನು ಬರೆದಿದ್ದೇನೆ. ಯಾವತ್ತು ರಾಜಮಂಡಲಕ್ಕೆ ಹೀಗೆ ಪತ್ರಗಳನ್ನು ಬರೆಯುವ ಅಧಿಕಾರವು ಈಗ ನನಗಿಲ್ಲೆಂಬದನ್ನು ನಾನು ಬಲ್ಲೆನು; ಆದರೆ ಯಾವತ್ತು ರಜಪೂತಸ್ಥಾನದ ವಿಷಯವಾಗಿ ನನ್ನಲ್ಲಿರುವ ಅಭಿಮಾನವೂ, ಪ್ರಸ್ತುತದ ಪ್ರಸಂಗದಿಂದ ನನ್ನಲ್ಲಿ ಉಂಟಾಗಿರುವ ಆವಸಾನವೂ ನನ್ನಲ್ಲಿ ಪತ್ರ ಬರೆಯುವ ಪ್ರೇರಣೆಯನ್ನುಂಟು ಮಾಡಿರುತ್ತವೆ. ತಮ್ಮ ಹೆಂಡರು ಮಕ್ಕಳನ್ನು ಮಂದಿ ಎಳೆದೊಯ್ಯುತ್ತಿರಲು, ಗೋಳಾಡುತ್ತ ಕೂಡ್ರುವಷ್ಟು ಹೇಡಿತನವು ಇನ್ನೂ ರಜಪೂತರನ್ನು ಮುಸುಕಿಲ್ಲೆಂಬದರ ಅನುಭವವನ್ನು ಆಲಮಗೀರನಿಗೆ ತಂದುಕೊಡುವದಕ್ಕಾಗಿ ಈಗ ನಾನು ಮುಂದಾಳಾಗಿದ್ದೇನೆ. ನಾನಂತು, ಬಾದಶಹನನ್ನು

ಸಂಪೂರ್ಣ ಪರಾಭವಗೊಳಿಸಿ, ಬಾಯಿ ÷ ÷ ಗಳನ್ನು ತಟ್ಟಿಕೊಳ್ಳುತ್ತ ಬಂದ ಹಾದಿಯಿಂದ ಆತನು ತಿರುಗಿ ಹೋಗುವಂತೆಯಾದರೂ ಮಾಡಬೇಕು, ಅದು ಆಗದಿದ್ದರೆ ಸಮರಾಂಗಣದಲ್ಲಿ ದೇಹವನ್ನಾದರೂ ಇಡಬೇಕು, ಎಂದು ಪ್ರತಿಜ್ಞೆಮಾಡಿದ್ದೇನೆ. ನನ್ನ ಪ್ರತಿಜ್ಞೆಯು ಪೂರ್ಣವಾಗಲಿಕ್ಕೆ ತಮ್ಮೆಲ್ಲರ ಸಹಾಯದ ಅವಶ್ಯಕತೆಯಿರುವದು; ಆದ್ದರಿಂದ ನನಗೆ ಸಹಾಯಮಾಡಿ ಹಿಂದಿನಂತೆ ಇನ್ನೊಮ್ಮೆ ರಜಪೂತರ ಕ್ಷಾತ್ರತೇಜಸ್ಸನ್ನು ಪ್ರಕಟಮಾಡ ಬೇಕೆಂದು ಬೇಡಿಕೊಳ್ಳುವೆನು. ಹೆಚ್ಚಿಗೆ ಏನೂ ಬರೆಯುವದಿಲ್ಲ. ಇತಿ ವಿಜ್ಞಾಪನೆ.

ಹೀಗೆ ಪತ್ರ ಬರೆದು ರಾಜಸಿಂಹನು ಅವನ್ನು ಎಲ್ಲ ರಜಪೂತರಾಜರ ಕಡೆಗೆ ಕಳಿಸಿದನು. ಆತನು ಯಾವ ಕೆಲಸಮಾಡಬೇಕಾದರೂ ತನ್ನ ಗುರುಗಳಾದ ವೈಕುಂಠಯೋಗಿಗಳ ಅಪ್ಪಣೆಯನ್ನು ಕೇಳಿಕೊಳ್ಳದೆ ಮಾಡುತ್ತಿದ್ದಿಲ್ಲ; ಆದರೆ ಈಗ ಪ್ರಸಂಗವು ಬಹಳ ಒತ್ತರಿಸಿ ಬಂದದ್ದರಿಂದ, ತನ್ನಲ್ಲಿ ಉಂಟಾದ ಪ್ರೇರಣೆಯು ಗುರುಗಳದೇ ಎಂದು ಭಾವಿಸಿ, ಪತ್ರಕಳಿಸುವದು ಅನುಚಿತವೂ, ಗುರುಗಳಿಗೆ ಅಸಮ್ಮತವೂ ಆಗಲಿಕ್ಕಿಲ್ಲೆಂದು ತಿಳಿದು, ವೇಗವಾಗಿ ನಡೆಯುವ ಒಂಟೆಗಳ ಸವಾರರ ದ್ವಾರದಿಂದ ಅವನ್ನು ಕಳಿಸಿಬಿಟ್ಟನು. ಆ ಮೇಲೆ ತನ್ನ ಸೈನ್ಯವನ್ನು ಸಜ್ಜುಗೊಳಿಸಲಿಕ್ಕೆ ಸೇನಾಪತಿಯನ್ನು ಆಜ್ಞಾಪಿಸಿ, ವೈಕುಂಠ ಯೋಗಿಗಳ ಆಶೀರ್ವಾದವನ್ನೂ ಮಂತ್ರಾಲೋಚನೆಯನ್ನೂ ಸಂಪಾದಿಸುವ ದಕ್ಕಾಗಿ ಅಬೂಪರ್ವತದೊಳಗಿನ ಅಚಲೇಶ್ವರಸ್ಥಾನಕ್ಕೆ ತೆರಳಿದನು.

## ೧೪ನೆಯ ಪ್ರಕರಣ

# ವೈಕುಂಠಯೋಗಿಗಳೂ, ರಾಜಸಿಂಹನೂ

ರಾಜಸಿಂಹನು ವೈಕುಂಠಯೋಗಿಗಳ ದರ್ಶನಕ್ಕೆ ಕೇವಲ ಬಡವನಂತೆ ಹೋಗುತ್ತಿದ್ದನು. ಸಂಗಡ ಕರಕೊಂಡು ಬಂದಿದ್ದ ನಾಲ್ಕಾರು ಜನರನ್ನು ಕೂಡ ಆತನು ಆಶ್ರಮದ ಗಡಿಯಲ್ಲಿ ಬಿಟ್ಟು, ತಾನೊಬ್ಬನೇ ಪಾದಚಾರಿಯಾಗಿ ಹೋಗಿ, ಯೋಗಿಗಳನ್ನು ಕಾಣುವದು ಆತನ ನಿಯಮವಾಗಿತ್ತು. ವೈಕುಂಠಯೋಗಿಗಳು ಮಹಾತ್ಮರು; ತಪೋನಿಧಿಗಳು; ಅವರು ಪ್ರತ್ಯಕ್ಷ ವಸಿಷ್ಠರ ಅವತಾರವೆಂದು ಯಾವತ್ತು ರಜಪೂತರೂ ಭಿಲ್ಲರೂ ಭಾವಿಸುತ್ತಿದ್ದರು. ಆ ಕಾಲದಲ್ಲಿ ಆ ಯೋಗಿವರರು ಯಾವತ್ತು ರಜಪೂತವೀರರ ಪ್ರೇರಕ ಚೈತನ್ಯವಾಗಿದ್ದರೆಂದು ಹೇಳಬಹುದು. ಅವರ ತ್ರಿಕಾಲಜ್ಞಾನದ ಸಂಬಂಧದಿಂದಲೂ ಕೀರ್ತಿಯು ನಾಲ್ಕೂಕಡೆಗೆ ಹಬ್ಬಿತ್ತು. ಅವರ ದರ್ಶನದ ಸಲುವಾಗಿ ಯಾವಾಗಲೂ ಜನರು ಉತ್ಸುಕರಾಗಿರುತ್ತಿದ್ದರು; ಆದರೆ ಅವರು ಯಾವಾಗಲೂ ಜನರ ಕಣ್ಣಿಗೆ ಬಿದ್ದಾರೆಂಬದರ ನಿಯಮವಿದ್ದಿಲ್ಲ. ರಾಜಸಿಂಹ ವಿಜಯಸಿಂಹರಂತು ವೈಕುಂಠಯೋಗಿಗಳ ಸಂಬಂಧದಿಂದ ಅತ್ಯಂತ ಶ್ರದ್ಧೆಯುಳ್ಳವರಾಗಿದ್ದರು. ಆ ಗುರುಪುತ್ರರು ಗುರ್ವಾಜ್ಞೆಯನ್ನು ಎಂದೂ ಉಲ್ಲಂಘಿಸುತ್ತಿದ್ದಿಲ್ಲ. ರಾಜಸಿಂಹನು ಆದಷ್ಟು ವೇಗದಿಂದ ಮಾರ್ಗವನ್ನು ಕ್ರಮಿಸಿ ಅಬೂಪರ್ವತದ ಆ ಶಿಖರದ ಬುಡವನ್ನು ಹೊಂದಿದನು. ವೈಕುಂಠಯೋಗಿಗಳ ತಪೋವನದ ಸೀಮೆಯನ್ನು ಮುಟ್ಟಿದ ಕೂಡಲೆ ಆತನು ತನ್ನ ಸಂಗಡಿಗರನ್ನು ಅಲ್ಲಿಯೇ ಬಿಟ್ಟು ತಾನೊಬ್ಬನೇ ಆ ನಿಬಿಡವಾದ ಅರಣ್ಯವನ್ನು

ಸೇರಿದನು. ಆಗ ಯೋಗಿಗಳಿರುವ ಸ್ಥಾನವು ಆತನಿಗೆ ಗೊತ್ತಿದ್ದದ್ದರಿಂದ ಆತನು ನೆಟ್ಟಗೆ ಆ ಸ್ಥಾನದ ಕಡೆಗೇ ಸಾಗಿದನು. ಯೋಗಿರಾಜರು ಸರೋವರದಲ್ಲಿ ಸ್ನಾನ ಸಂಧ್ಯೆಗಳನ್ನು ತೀರಿಸಿಕೊಂಡು, ಕಾಲಲ್ಲಿ ಆವುಗೆಗಳನ್ನು ಮೆಟ್ಟಿಕೊಂಡು, ಆಶ್ರಮಕ್ಕೋ, ಮತ್ತೆ ಎಲ್ಲಿಗೋ ಹೋಗಲಿಕ್ಕೆ ಸಿದ್ಧರಾಗಿ ಕುಳಿತುಕೊಂಡಿದ್ದರು. ಅವರು ಸರೋವರದ ದಂಡೆಯಿಂದೆದ್ದು ತಮ್ಮ ಯೋಗದಂಡವನ್ನು ತಕ್ಕೊಂಡು, ಹೊರಳಿ ಇನ್ನು ಪಾವಟಿಗೆಗಳ ಕಡೆಗೆ ನೋಡತಕ್ಕವರು, ಅಷ್ಟರಲ್ಲಿ ಅತ್ಯಂತ ವಿನಯದಿಂದ ತಲೆಯನ್ನು ಬಾಗಿಸಿ, ಸಮೀಪದಲ್ಲಿ ನಿಂತುಕೊಂಡಿದ್ದ ರಾಜಸಿಂಹನ ಮೂರ್ತಿಯು ಅವರ ಕಣ್ಣಿಗೆ ಬಿದ್ದಿತು. ಆಗ ಅವರು ಕೂಡಲೆ ತಮ್ಮ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಆತನನ್ನು ಆಶೀರ್ವದಿಸಿ— ವತ್ಸಾ, ರಾಜಸಿಂಹಾ, ನಿನ್ನ ಕುಲಕ್ಕೂ, ರಾಜಸ್ಥಾನದೊಳಗಿನ ಯಾವತ್ತು ರಜಪೂತರಿಗೂ ಯೋಗ್ಯವಾದದ್ದನ್ನೇ ನೀನು ಮಾಡಿದೆ. ನೀನು ಬರೆದಿರುವ ಪತ್ರಗಳು ವ್ಯರ್ಥವಾಗಲಿಕ್ಕಿಲ್ಲ. ನಿನಗೆ ಎಲ್ಲ ರಜಪೂತರಿಂದ ಸಹಾಯವು ಒದಗಿ, ಕಾರ್ಯದಲ್ಲಿ ಉತ್ತಮ ಪ್ರಕಾರದ ಸಿದ್ಧಿಯು ಪ್ರಾಪ್ತವಾಗುವದು. ರೂಪಮತಿಯಂಥ ರತ್ನವು ನಿನ್ನ ಕಂಠದಲ್ಲಿಯೇ ಒಪ್ಪುವದು. ನೀನು ಆ ರತ್ನವನ್ನು ಮೊಗಲರ ಮುತ್ತಿಗೆಯೊಳಗಿಂದ ಬಿಡಿಸಿ ಸಂಪಾದಿಸಿಕೊಂಡು, ಹೋಗು. ಈ ರತ್ನದ ಬೆಲೆಯು ಇನ್ನು ಸ್ವಲ್ಪದಿನಗಳ ಮೇಲೆ ನಿನಗೆ ಗೊತ್ತಾಗಬಹುದು. ರೂಪಮತಿಯು ನಿಜವಾದ ರಾಜಪುತ್ರಿಯು, ವೀರಕನ್ಯೆಯು. ಆಕೆಯು ನಿನ್ನನ್ನು ಮನಃಪೂರ್ವಕವಾಗಿ ವರಿಸಿರುವಳು. ಆಕೆಯು ನಿನಗೆ ಪತ್ರವನ್ನು ಕಳಿಸಿ, ತನ್ನ ಹಾಗು ಯಾವತ್ತು ರಜಪೂತರ ರಕ್ಷಣಮಾಡುವಂಥ, ತನ್ನ ಮನೆತನದ ಗೌರವವನ್ನು ಕಾಯುವಂಥ ಸುಯೋಗವನ್ನು ನಿನಗೆ ಒದಗಿಸಿಕೊಟ್ಟಳು. ನಿನಗೆ ಈ ಕಾರ್ಯದಲ್ಲಿ ಯಶಸ್ಸು ದೊರೆತರೆ, ರಾಜಕುಮಾರನಾದ ಅಜಿತಸಿಂಗನ ವನವಾಸವು ತಪ್ಪುವದು. ಆ ಮೇಲೆ ಆತನನ್ನು ಆತನ ತಾಯಿಯಾದ ಚಂದ್ರಾವತೀರಾಣಿಯ ಬಳಿಯಲ್ಲಿಟ್ಟರೂ, ಆ ಸಾಧ್ವಿಯನ್ನು ತಡವುವ ಧೈರ್ಯವು ಆಲಮಗೀರನಿಗೆ ಆಗಲಾರದು. ಅಡವಿಯಲ್ಲಿ ಶಕ್ಯವಿದ್ದ ಮಟ್ಟಿಗೆ ರಾಜಪುತ್ರನ ಸಂಗೋಪನವು ಉತ್ತಮರೀತಿಯಿಂದ ಆಗುತ್ತಿರುವದು; ಆದರೆ ನಮ್ಮಂಥ ವನಚರರಿಂದ ರಾಜೋಪಚಾರಗಳು ಕುಮಾರನಿಗೆ

ಪ್ರಾಪ್ತವಾಗುವ ಬಗೆ ಹ್ಯಾಗೆ ? ರಾಜಸಿಂಹಾ, ನಡೆ ನನ್ನ ಸಂಗಡ ಪರ್ಣ ಕುಟಿಗೆ. ನಿನ್ನ ಸೋದರಳಿಯನಾದ ಆ ರಾಜಕುಮಾರನನ್ನು ಕಣ್ಣುಮುಟ್ಟ ನೋಡಿ, ನಿನ್ನ ಭಗಿನಿಗೆ ಆತನಯೋಗ ಕ್ಷೇಮವನ್ನು ತಿಳಿಸು. ಆ ಅಜಿತ ಸಿಂಹಕುಮಾರನು ಅಲೌಕಿಕಪುರುಷನಾಗಿ ತನ್ನ ಮನೆತನದ ಕೀರ್ತಿಯನ್ನು ಕಾಯ್ದುಕೊಳ್ಳುವನು; ಆದರೆ ಆತನ ಅಲೌಕಿಕತೆಯು ಪ್ರಕಟವಾಗಲಿಕ್ಕೆ ತಕ್ಕ ಸಂಧಿಯೂ, ಪ್ರಸಂಗವೂ ಮಾತ್ರ ಆತನಿಗೆ ಪ್ರಾಪ್ತವಾಗಲಾರವು.

ರಾಜಸಿಂಹನು ಯೋಗಿಗಳ ಮಾತನ್ನು ಸುಮ್ಮನೆ ಕೇಳುತ್ತಿದ್ದನು. ರೂಪಮತಿಯು ತನಗೆ ಪತ್ರಕಳಿಸಿದ್ದನ್ನೂ, ತಾನು ರಜಪೂತರಾಜರ ಕಡೆಗೆ ಪತ್ರಕಳಿಸಿದ್ದನ್ನೂ ಯೋಗಿಗಳು ನೋಡಿದವರಂತೆ ಹೇಳಿದ್ದು , ಆತನಿಗೆ ಆಶ್ಚರ್ಯಕರವಾಗಿ ತೋರಲಿಲ್ಲ; ಯಾಕಂದರೆ, ಯೋಗಿಗಳ ತ್ರಿಕಾಲಜ್ಞಾನದ ಇಂಥ ಹಲವು ಅನುಭವಗಳು ಆತನಿಗೆ ಎಷ್ಟೋಸಾರೆ ಬಂದಿದ್ದವು. ಯೋಗಿಗಳು ಅಂತರ್ಜ್ಞಾನದಿಂದ ಎಲ್ಲವನ್ನೂ ತಿಳಕೊಳ್ಳುವರೆಂಬ ನಂಬಿಗೆಯು ಯಾವತ್ತು ರಜಪೂತರಲ್ಲಿ ಇತ್ತು. ಆ ಸಂಬಂಧದಿಂದ ರಾಜಸಿಂಹನು ಯೋಗಿಗಳ ಮುಂದೆ ಯಾವ ಮಾತನ್ನೂ ಆಡದೆ, ಅವರನ್ನು ಕುರಿತು— ಮಹಾತಪೋನಿಧಿಗಳೇ , ತಮ್ಮ ಮಂತ್ರಾಲೋಚನೆಯನ್ನು ಕೇಳಿಕೊಳ್ಳದೆ ನನ್ನ ಸ್ವತಂತ್ರದಿಂದ ಪತ್ರಗಳನ್ನು ಕಳಿಸಿದ್ದಕ್ಕಾಗಿ ಕ್ಷಮಿಸಬೇಕು. ತಾವು ಹೀಗೆಯೇ ಆಲೋಚನೆ ಹೇಳುವಿರೆಂದು ನನ್ನಮನಸ್ಸಿನ ಪ್ರವೃತ್ತಿಯಾಯಿತು. ಇಲ್ಲದಿದ್ದರೆ ನನ್ನ ಮನಸ್ಸಿಗೆ ಹಾಗೆ ಯಾಕೆ ಪ್ರೇರಣೆಯಾಗುತ್ತಿತ್ತು ? ನಾನು ಪತ್ರಕಳಿಸಿದ್ದು ತಮ್ಮ ಮನಸ್ಸಿಗೆ ಬಂದದ್ದರಿಂದ ನನಗೆ ಬಹಳ ಸಮಾಧಾನ ವಾಗಿದೆಯೆಂದು ಬಾಯಿಬಿಚ್ಚಿ ಹೇಳುವಕಾರಣವಿಲ್ಲ; ಆದರೆ, ಯೋಗಿವರ್ಯರೇ ತಮ್ಮ ಆಶೀರ್ವಾದವೂ, ಅನುಗ್ರಹವೂ ಆದ ಹೊರತು ನನ್ನಿಂದ ಇಂಥ ಮಹತ್ಕಾರ್ಯವು ಹ್ಯಾಗೆ ಸಾಧಿಸಬೇಕು ? ತಮ್ಮ ಆಶೀರ್ವಾದವನ್ನು ಪಡೆಯುವದಕ್ಕಾಗಿಯೂ, ಅನುಗ್ರಹವನ್ನು ಸಂಪಾದಿಸುವದಕ್ಕಾಗಿಯೂ ನಾನು ಇಲ್ಲಿಗೆ ಬಂದಿದ್ದೇನೆ. ಚರಣದರ್ಶನವಾದದ್ದರಿಂದ ನನ್ನ ಮನೋರಥಗಳೆಲ್ಲ ಪೂರ್ಣವಾದವು. ಇನ್ನು ಸ್ವಲ್ಪ ಪಾದಸೇವನಮಾಡಿ ಅಪ್ಪಣೆ ಪಡೆಯುವೆನು. ರಾಜಪುತ್ರನಾದ ಅಜಿತಸಿಂಹನು ತಮ್ಮ ಬಳಿಯಲ್ಲಿದ್ದ ಬಳಿಕ ಆತನಿಗೇನು ಕೊರತೆಯಾಗುವದು ? ತನ್ನ ತಾಯಿಯ ಬಳಿಯಲ್ಲಿದ್ದರೆ

ಆತನ ಸಂರಕ್ಷಣವು ಇದಕ್ಕೂ ಚೆನ್ನಾಗಿ ಆಗುತ್ತಿತ್ತೆಂದು, ತಿಳಿದವರು ಯಾರು ಅನ್ನಬಹುದು ? ದಾಸರಥಿ ಶ್ರೀರಾಮಚಂದ್ರನು ವಿಶ್ವಾಮಿತ್ರರ ಬಳಿಯಲ್ಲಿ ದ್ದದ್ದರಿಂದಲೇ ರಾವಣನನ್ನು ಗೆಲ್ಲಲು ಸಮರ್ಥನಾದನೆಂಬದನ್ನೇನು ಜನರು ಮರೆತಿರುವರೇ ? ಅನ್ನಲು, ವೈಕುಂಠಯೋಗಿಗಳು—ರಾಜಸಿಂಹಾ, ಹ್ಯಾಗೇ ಇರಲಿ, ಬಂದಪ್ರಸಂಗಗಳಲ್ಲಿ ಸಮಾಧಾನದಿಂದ ನಡೆಯುವದು ಹಿತಕರವು. ಇರಲಿ, ನೀನು ರಾಜಕುಮಾರನನ್ನು ನೋಡಲಿಕ್ಕೆ ಬರುವೆಯಷ್ಟೆ ? ಎಂದು ನುಡಿದು ಯೋಗಿಗಳು ಪರ್ಣಕುಟೀರದ ಕಡೆಗೆ ನಡೆದರು. ರಾಜಸಿಂಹನು ಅವರನ್ನು ಹಿಂಬಾಲಿಸಿ ಸಾಗಿದನು. ಅವರಿಬ್ಬರು ಹೋಗಹೋಗುತ್ತ ಒಂದು ಪರ್ಣಕುಟಿಯ ಬಳಿಗೆ ಬರಲು, ಅದರೊಳಗಿಂದ ಅತ್ಯಂತ ಶ್ಯಾಮ ವರ್ಣದ ಒಬ್ಬ ಭಿಲ್ಲಜಾತಿಯ ಸುಂದರ ತರುಣಿಯು ಎರಡೂ ಕೈಗಳಮೇಲೆ ರಾಜಕುಮಾರನನ್ನು ಕರಕೊಂಡು ಆತನನ್ನು ಆಡಿಸುವದಕ್ಕಾಗಿ ಹಾಡುತ್ತ ಪರ್ಣಕುಟೀರದ ಹೊರಗೆ ಬಂದಳು. ಆಕೆಯ ದೃಷ್ಟಿಯು ವೈಕುಂಠಯೋಗಿ ಗಳ ಕಡೆಗೂ, ಅವರ ಸಂಗಡಬಂದಿದ್ದ ರಾಜಸಿಂಹನ ಕಡೆಗೂ ಹೋದದ್ದ ರಿಂದ, ಆಕೆಯು ಅಲ್ಲಿಯೇ ತಡೆದು ನಿಂತಳು. ಆದರೆ ನಾಗರಿಕ ಸ್ತ್ರೀಯ ರಲ್ಲಿಯ ನಿರರ್ಥಕವಾದ ಲಜ್ಜೆಯ ಪ್ರಕಾರವನ್ನು ಆಕೆಯು ಅರಿಯದವಳಾದ ದ್ದರಿಂದ, ಆಕೆಯು ಹಾಡುವದನ್ನು ಬಿಟ್ಟು ಸುಮ್ಮನೆ ನಿಂತುಕೊಂಡು ಎವೆ ಯಿಕ್ಕದೆ ಅವರಿಬ್ಬರನ್ನು ನೋಡಹತ್ತಿದಳು. ಆಗ ವೈಕುಂಠಯೋಗಿಗಳು ರಾಜಸಿಂಹನಿಗೆ— ಈ ವಾರುಣಿಯು ಈವೊತ್ತಿನವರೆಗೆ ಅಜಿತಸಿಂಹನನ್ನು ರಕ್ಷಿಸಿದಳು. ಅತ್ತ ನೋಡು, ಆ ಪುಂಡನು ಹೊಸಬನಾದ ನಿನ್ನನ್ನು ಹ್ಯಾಗೆ ನೋಡುವನು. ನಿನ್ನಂಥ ಮನುಷ್ಯನನ್ನು ಆತನು ಇಂದೇ ಮೊದಲು ನೋಡಿದ್ದು.

ರಾಜಕುಮಾರನ ವನವಾಸವನ್ನು ನೋಡಿ ರಾಜಸಿಂಹನಿಗೆ ವ್ಯಸನ ವಾಯಿತು. ಕುಮಾರನಿಗೆ ತಾಯಿಯು ಇದ್ದೂ ಇಲ್ಲದ ಹಾಗಾಗಿತ್ತು. ಆಲ ಮಗೀರನಿಗೆ ಅಜಿತಸಿಂಗಕುಮಾರನು ಇಂಥಲ್ಲಿ ಇರುವನೆಂಬ ಸುದ್ದಿಯು ಹತ್ತಿದ್ದರೆ, ಆತನನ್ನು ಹುಡುಕುವದಕ್ಕಾಗಿ ಬಾದಶಹನು ಆಕಾಶ ಪಾತಾಳ ಗಳನ್ನು ಒಂದು ಮಾಡುತ್ತಿದ್ದನು. ತಾನು ಮೇಲಿಂದಮೇಲೆ ಮಗನಬಳಿಗೆ ಹೋಗಹತ್ತಿದರೆ, ಬಾದಶಹನಿಗೆ ಸಂಶಯಬಂದು, ತನ್ನ ಮಗನನಾಶಕ್ಕೆ

ತಾನೇ ಕಾರಣಳಾಗಬಹುದೆಂದು ತಿಳಿದು, ಚಂದ್ರಾವತಿಯು ಬಹುಶಃ ಮಗ ನನ್ನು ನೋಡಲಿಕ್ಕೆ ಬರುತ್ತಿದ್ದಿಲ್ಲ; ಆದರೆ ಎಷ್ಟು ಮಾಡಿದರೂ ತಾಯಿಯ ಕರಳು; ಆದರಲ್ಲಿ ಚಂದ್ರಾವತಿಗೆ ಅಜಿತಸಿಂಗನೊಬ್ಬನೇ ಆಶಾತಂತುವಾಗಿ ದ್ದನು; ಆದ್ದರಿಂದ ಮನಸ್ಸುನಿಲ್ಲದೆ ಯಾವಾಗಾದರೂ ಅಪರೂಪವಾಗಿ ಆಕೆಯು ಭಿಲ್ಲಸ್ತ್ರೀಯ ವೇಷದಿಂದ ಮಗನನ್ನು ನೋಡಲಿಕ್ಕೆ ಬರುತ್ತಿದ್ದಳು. ಉಳಿದ ವೇಳೆಯಲ್ಲಿ ಪದ್ಮೆಯು ಬಂದು ತಿಳಿಸುವ ಮಗನ ಯೋಗಕ್ಷೇಮ ದಿಂದಲೇ ಆಕೆಯು ಸಮಾಧಾನಪಟ್ಟುಕೊಂಡಿರುತ್ತಿದ್ದಳು. ಕುಮಾರನನ್ನು ನೋಡುತ್ತಿರುವಾಗ ರಾಜಸಿಂಹನಿಗೆ ಒಂದು ಮಾತಿನನೆನಪಾಯಿತು. ಜೋಧ ಪುರದಂಥ ಬಲಾಢ್ಯಸಂಸ್ಥಾನದಲ್ಲಿ ನಿಜವಾದ ರಣಶೂರರು ಬಹು ಜನರಿರಲು ಈ ರಾಜಕೀಯ ಪ್ರಸಂಗದಲ್ಲಿ ಅವರ ಸಹಾಯವನ್ನು ಸಂಪಾದಿಸದೆ ಇರು ವದು ಆತನಿಗೆ ಅಸಮಾಧಾನಕರವಾಗಿ ತೋರಿತು. ಅಷ್ಟರಲ್ಲಿ ಆತನು ವಿವೇಕವನ್ನು ತಂದುಕೊಂಡನು. ಚಂದ್ರಾವತೀ ರಾಣಿಯು ಚಾತುರ್ಯ ದಿಂದ ಬಾದಶಹನ ಸಂಗಡ ಸಖ್ಯವನ್ನು ಕಾಯ್ದುಕೊಂಡು, ಆತನಿಗೆ ವಾರ್ಷಿಕ ಖಂಡಣಿಯನ್ನು ಕೊಟ್ಟು ಸಮಾಧಾನ ಪಡಿಸಿ, ಆ ಪಿಶಾಚವನ್ನು ಸುಮ್ಮ ನಿರಿಸಲು, ಈಗ ನನಗೆ ಆಕೆಯು ಸಹಾಯಮಾಡಿದರೆ ದುಷ್ಟ ಆಲಮಗೀರನು ರಾಣಿಯ ಮೇಲೆ ಸಿಟ್ಟಾಗಿ ಆಕೆಯ ಅಹಿತವನ್ನು ಚಿಂತಿಸಬಹುದು; ಆದ್ದ ರಿಂದ ಈ ಪ್ರಸಂಗದಲ್ಲಿ ಆಕೆಯ ಸಹಾಯವನ್ನು ಬಯಸುವದು ನೆಟ್ಟಗಲ್ಲ. ಇಷ್ಟಾಗಿ ಇಬ್ಬರಿಗೂ ಹಿತವನ್ನು ಬೋಧಿಸಲಿಕ್ಕೆ ವೈಕುಂಠಯೋಗಿಗಳು ಇರು ತ್ತಾರಲ್ಲ. ನಾನು ಯಾಕೆ ಸುಮ್ಮನೆ ವಿಚಾರಮಾಡಿ ದಣಿಯಬೇಕು, ಎಂದು ಆ ರಣಶೂರನು ಆಲೋಚಿಸುತ್ತಿರಲು, ಸ್ವಲ್ಪ ಹೊತ್ತಿನಮೇಲೆ ವೈಕುಂಠಯೋಗಿಗಳು ಆತನನ್ನು ಕುರಿತು— ರಾಜಸಿಂಹಾ, ನೀನು ಈಗ ಜಯಶಾಲಿಯಾಗುವೆಯೆಂದು ನಾನು ಹೇಳಿದ ಮಾತ್ರದಿಂದ ಉಬ್ಬಬೇಡ. ಮೊಗಲರ ಅಭ್ಯುದಯವು ಔರಂಗಜೇಬನ ಸಂಗಡಲೇ ಮುಗಿದು ಹೋಗು ವದು; ಆದರೂ ನಿಮ್ಮ ಸ್ವರಾಜ್ಯದ ಉಪಭೋಗವು ನಿಮಗೆ ಚಿರಕಾಲ ಲಭಿಸುವದೆಂದು ತಿಳಿಯಬೇಡ. ಔರಂಗಜೇಬನ ತರುವಾಯ ಇಬ್ಬರು ಬಾದಶಹರು ಕೂಡ ತಮ್ಮ ಸಿಂಹಾಸನವನ್ನು ರಕ್ಷಿಸಲು ಸಮರ್ಥರಾಗಲಾರರು. ಆ ಮೇಲೆ ಅವರ ರಾಜ್ಯವು ಯಾರಕಡೆಗೆ ಹೋಗುವದು, ಭರತಭೂಮಿಯ

ಸ್ಥಿತಿಯು ಏನಾಗುವದು, ಎಂಬದನ್ನು ಈಗ ನಿನ್ನ ಮುಂದೆ ಹೇಳುವದಿಲ್ಲ. ಹೇಳುವದರಿಂದ ಪ್ರಯೋಜನವೂ ಆಗಲಿಕ್ಕಿಲ್ಲ. ಸಂಸಾರಿಕರು ಮುಂದೆ ಏನಾಗುವದೆಂಬದನ್ನು ಅರಿತುಕೊಳ್ಳುವಗೋಜಿಗೆ ಹೋಗದೆ, ಸಂಸಾರ ಸಾಗಿಸುವದು ಹಿತಕರವು. ಈಗ ರಾಜಸ್ಥಾನದೊಳಗಿನ ಕ್ಷಾತ್ರತೇಜವು, ಅದರ ಉತ್ತರನಿಟ್ಟಿನಲ್ಲಿರುವ ನಿನ್ನೊಬ್ಬನಲ್ಲಿ ಮಾತ್ರ ಇರುತ್ತದೆ; ಸ್ವದೇಶದ ಅಭಿಮಾನವು ನಿನ್ನೊಬ್ಬನಲ್ಲಿ ಮಾತ್ರ ಇರುವದು. ಚಿಂತಿಮಾಡಬೇಡ, ಔರಂಗಜೇಬನ ಸಂಗಡ ನೀನು ಹೂಡಬೇಕಾಗಿರುವ ಯುದ್ಧ ಪ್ರಸಂಗದಲ್ಲಿ ನಿನಗೆ ದೊಡ್ಡ ಸೈನ್ಯವು ಬೇಕಾಗಲಿಕ್ಕಿಲ್ಲ; ಆದರೂ ನೀನು ಮಾಡುವಂತೆ ಯುದ್ಧದ ಸಿದ್ಧತೆಯನ್ನು ಮಾಡು. ನೀನು ಯುದ್ಧದ ಹಿಡತವನ್ನು ಒಳಿತಾಗಿ ಬಲ್ಲವನಿರುತ್ತೀ. ಅದರ ಸಂಬಂಧದಿಂದ ನಾನು ನಿನಗೆ ಉಪದೇಶಿಸುವ ಅವಶ್ಯವಿಲ್ಲ. ಇಂಥ ಯುದ್ಧಪ್ರಸಂಗವೂ, ಚಿಂತೆಯ ಪ್ರಸಂಗವೂ ನಿನ್ನ ಜೀವಮಾನದಲ್ಲಿ ನಿನಗೂ, ಬಹುಶಃ ಬೇರೆ ರಜಪೂತರಿಗೂ ತಿರುಗಿ ಬರಲಾರವು. ಈ ಯುದ್ಧದಿಂದ ಬಹು ಮಹತ್ವದ ಕಾರ್ಯವಾಗಬೇಕಾಗಿದೆ. ಔರಂಜೇಬನು ಈ ಯುದ್ಧದಲ್ಲಿ ಚನ್ನಾಗಿ ಪೆಟ್ಟುತಿಂದನೆಂದರೆ, ನಿನ್ನ ಗೊಡವಿಗಾಗಲಿ, ಚಂದ್ರಾವತೀರಾಣಿಯ ಗೊಡವಿಗಾಗಲಿ, ಬೇರೆ ರಜಪೂತರ ಗೊಡವಿಗಾಗಲಿ ಹೋಗನು; ಆದರೆ ನೀವು ಒಟ್ಟುಗೂಡಿ ಚನ್ನಾಗಿ ಪ್ರಯತ್ನವನ್ನು ಮಾಡಿರಿ; ನಿಮ್ಮದಿಷ್ಟು ಪ್ರಯತ್ನವು ಸಿದ್ಧಿಸಿದರೆ, ನಾನು ಇಲ್ಲಿಂದ ಅಂತರ್ಧಾನವನ್ನು ಹೊಂದುವೆನು. ನನಗೆ ಎರಡನೆಯ ಕಡೆಗೆ ಕೆಲಸ ವಿರುವದು. ನೀವು ಯತ್ನಮಾಡುವಲ್ಲಿ ಮಾತ್ರ ಔದಾಸೀನ್ಯವನ್ನು ತಾಳಬೇಡಿರಿ.

ಯೋಗಿರಾಜನ ಮುಖದಿಂದ— "ನಾನು ಇಲ್ಲಿಂದ ಅಂತರ್ಧಾನವನ್ನು ಹೊಂದುವೆನು, ಎರಡನೆಯ ಕಡೆಗೆ ಕೆಲಸವಿರುತ್ತದೆ." ಎಂಬ ಶಬ್ದಗಳು ಹೊರಟದ್ದನ್ನು ಕೇಳಿದ ಕೂಡಲೆ, ರಾಜಸಿಂಹನ ಮುದ್ರೆಯು ಖಿನ್ನವಾಯಿತು. ಯೋಗಿಗಳ ಮೇಲೆ ಆತನ ನಿಷ್ಠೆ ಬಹಳ. ಅವರನ್ನು ತನ್ನ ಶ್ರೇಷ್ಠದೈವತವೆಂದು ಆತನು ಭಾವಿಸಿದ್ದನು. ಇಂಥವರು ತನ್ನನ್ನು ಅಗಲಿ ಹೋಗುವರೆಂಬದನ್ನು ಸ್ಮರಿಸಿ, ಆತನು ಖಿನ್ನನಾದನು. ಆತನು ಅಸಮಾಧಾನದಿಂದ ಯೋಗಿಗಳನ್ನು ಕುರಿತು—ಯೋಗಿರಾಜರೇ, ತಾವು ಇಲ್ಲಿಂದ ಅಂತರ್ಧಾನ

ಹೊಂದುವೆವೆಂದು ನುಡಿದದ್ದನ್ನು ಕೇಳಿ, ನನ್ನ ಕೈಕಾಲುಗಳೇ ಹೋಗಿರು ವವು. ತಾವು ನಮ್ಮ ಪ್ರಾಣವು; ನಾವು ಕೇವಲ ಶರೀರಮಾತ್ರರು. ಹೊರಗೆ ನೋಡುವ ಮಟ್ಟಿಗೆ ನಾವು ನಮ್ಮರಾಜ್ಯಕ್ಕೆ ರಾಜರು; ಆದರೆ ತಾವು ನಮ್ಮ ರಾಜರು. ದೇಹದಿಂದ ಪ್ರಾಣವು ಹೊರಟು ಹೋದಮೇಲೆ,- ರಾಜ್ಯದಿಂದ ಅರಸನು ಹೊರಟು ಹೋದಮೇಲೆ ಉಳಿಯುವದೇನು ? ನಮಗೆ ಸ್ವಲ್ಪ ತೊಂದರೆ ಬಂದಕೂಡಲೆ ನಿಮ್ಮ ಬಳಿಗೆ ಓಡಿಬರುವೆವು; ತಾವು ಪ್ರೇರಿಸಿ ದಂತೆ ಕಾರ್ಯಮಾಡುವೆವು. ಆ ಪ್ರೇರಣೆಯೇ ಇನ್ನು ನಷ್ಟವಾದಮೇಲೆ ನಮ್ಮಗತಿಯೇನು ? ಎಂದು ನುಡಿಯಲು, ರಾಜಸಿಂಹನ ನಿಜವಾದ ಆಸ ಮಾಧಾನವನ್ನೂ, ಆತನ ದೈನ್ಯವೃತ್ತಿಯನ್ನೂ ನೋಡಿ, ಯೋಗಿಗಳಿಗೂ ಅಸಮಾಧಾನವಾದಂತೆ ತೋರಿತು. ಆದರೆ ಅವರು ರಾಜಸಿಂಹನ ಮಸ್ತಕದ ಮೇಲೆ ತಮ್ಮ ವರದಹಸ್ತವನ್ನಿಟ್ಟು— ರಾಜಾ, ನೀನನ್ನುವದು ನಿನ್ನದೃಷ್ಟಿ ಯಿಂದ ಸತ್ಯವಾದದ್ದು. ನಾವಾದರೂ ಎರಡನೆಯವರ ಅಪ್ಪಣೆಯಂತೆ ನಡೆ ಯುವ ಅಸ್ವತಂತ್ರರೇ ಇರುವೆವು. ನಾವು ನಿರಿಚ್ಛರು; ಯಾಕಂದರೆ, ನಮ್ಮ ಇಚ್ಛೆಗಳು ನಮ್ಮಾಧೀನವಾಗಿರುವದಿಲ್ಲ. ಒಂದು ಪಕ್ಷದಲ್ಲಿ ಸಾಂಸಾರಿಕರಾದ ನೀವು, ನಮಗಿಂತಲೂ ಸಾವಿರಪಾಲಿಗೆ ಬೇಕು. ನಿಮಗೆ ನಿಮ್ಮ ಹಿತದ ಮಟ್ಟಿಗೆ ಕಾಣುವದು. ನಮ್ಮ ಮಾತು ಹಾಗಲ್ಲ. ರಾಜಾ, ಇದನ್ನು ವಿವರಿ ಸುತ್ತ ಕುಳಿತುಕೊಳ್ಳಲಿಕ್ಕೆ ಇದು ಸಮಯವಲ್ಲ. ಇನ್ನು ನೀನು ಹೋಗು. ನಿನ್ನ ಕೆಲಸಗಳು ಬಹಳ ಅವೆ. ಔರಂಗಜೇಬನನ್ನು ಸೋಲಿಸಿ ಓಡಿಸಿದ ಮಾತ್ರದಿಂದ ನಿನ್ನ ಕೆಲಸಗಳು ತೀರುವ ಹಾಗಿಲ್ಲ. ನಿನ್ನ ಪ್ರಜೆಗಳನ್ನು, ಕಿಂಬ ಹುನಾ ರಜಪೂತಸ್ಥಾನದೊಳಗಿನ ಯಾವತ್ತು ಪ್ರಜೆಗಳನ್ನು , ಮಕ್ಕಳಂತೆ ಪಾಲಿಸುವ ಪ್ರಸಂಗವು ನಿನಗೆ ಬರುವದು. ಅದಕ್ಕೆ ನೀನು ಸಿದ್ಧನಾಗಿರು. ಇಂದು ತಾನಾಗಿಯೇ ನಿನ್ನ ಕಡೆಗೆ ಸಾಗಿ ಬಂದಿರುವವಳು ರೂಪನಗರದ ರಾಜಕನ್ಯೆಯೆಂದು ತಿಳಿಯಬೇಡ, ಆಕೆಯು ಪ್ರತ್ಯಕ್ಷ ರಾಜಲಕ್ಷ್ಮಿಯೆಂದು ತಿಳಿ. ಆಕೆಯು ನಿನ್ನ ಪ್ರಜೆಗಳನ್ನು ತಾಯಿಯಂತೆ ಸಂರಕ್ಷಿಸಬಹುದು. ರಾಜ ಸಿಂಹಾ, ನಿನ್ನ ಯೋಗ್ಯತೆಯು ಬಹುದೊಡ್ಡದು ಕಂಡೆಯಾ ? ಅಂತೇ ನಿನ್ನ ಬಳಿಗೆ ತಾನಾಗಿ ಬರುವ ಬುದ್ಧಿಯು ರೂಪಮತಿಗೆ ಉತ್ಪನ್ನವಾಯಿತು. ನಿನ್ನಿಂದ ಚಂದ್ರಾವತೀರಾಣಿಯ ಕಷ್ಟವೂ ಮುಗಿಯುವದು. ಮತ್ತೊಮ್ಮೆ

ನಾನು ನಿನಗೆ ದರ್ಶನಕೊಡುವೆನು, ಇಲ್ಲೆನ್ನುವದಿಲ್ಲ; ಆದರೆ ಯಾವಾಗ ದರ್ಶನ ಕೊಡುವೆನು, ಎಲ್ಲಿ ದರ್ಶನ ಕೊಡುವೆನು ಎಂಬದನ್ನು ಮಾತ್ರ ಹೇಳುವದಿಲ್ಲ. ಚಂದ್ರಾವತೀರಾಣಿಯು ಈಗ ಪರ್ಣಕುಟೀರಕ್ಕೆ ಬಂದಿರಬಹುದು. ನಾನು ಹೇಳಿ ಆಕೆಯ ಸೈನ್ಯದ ಸಹಾಯವನ್ನು ನಿನಗೆ ಒದಗಿಸಿ ಕೊಡುವೆನು. ನಾನು ನಿನ್ನ ಸಂಗಡ ಇನ್ನೂ ಬಹಳ ಮಾತುಗಳನ್ನು ಆಡಬೇಕಾಗಿದೆ. ಇನ್ನೊಮ್ಮೆ ದರ್ಶನವಾದಾಗ ಆಡುವೆನು, ಎಂದು ನುಡಿದು, ಅವರು ರಾಜಸಿಂಹನನ್ನು ಆಶೀರ್ವದಿಸಿದರು. ಚಂದ್ರಾವತಿಯು ಪರ್ಣಕುಟೀರಕ್ಕೆ ಬಂದಿರುವಳೆಂಬದನ್ನು ಕೇಳಿ, ರಾಜಸಿಂಹನಿಗೆ ಆಶ್ಚರ್ಯವಾಯಿತು. ಜೋಧಪುರದಿಂದ ಮಗನನ್ನು ನೋಡಲಿಕ್ಕೆ ಆಕೆಯು ಹೀಗೆ ಬರುತ್ತಿರಬಹುದೆಂದು ರಾಜಸಿಂಹನಿಗೆ ತೋರಿದ್ದಿಲ್ಲ. ಯೋಗಿರಾಜನು ರಾಜಸಿಂಹನೊಡನೆ ಪರ್ಣಕುಟೀರಕ್ಕೆ ಹೋಗುವದರೊಳಗೆ ರಾಣಿಯು ಮಗನನ್ನು ತೊಡೆಯಮೇಲೆ ಮಲಗಿಸಿಕೊಂಡು ಚುಂಬಿಸುತ್ತಿದ್ದಳು. ಆಕೆಯು—ಬಾಳಾ, ನಾನು ನಿನ್ನನ್ನು ಮನೆಗೆ ಕರಕೊಂಡು ಹೋಗಿ ಎಂದು ನಿನ್ನ ಸಂಗೋಪನವನ್ನು ಮಾಡೇನು ? ಎಷ್ಟು ದಿವಸ ನೀನು ಈ ವನವಾಸವನ್ನು ಭೋಗಿಸಬೇಕಾಗುವದು ? ಎಂದು ಬಹಳ ಆಚ್ಛೆಯಿಂದ ನುಡಿಯುತ್ತಿರಲು, ಅಜ್ಞಾನಿಯಾದ ಅರ್ಭಕನಿಗೆ ಏನು ತಿಳಿಯಿತೋ ಏನೋ, ಅದು ಘಟ್ಟಿಯಾಗಿ ಗಹಗಹಿಸಿ ನಕ್ಕು, ತನ್ನ ತಾಯಿಯ ಮಾತಿಗೆ ಪ್ರತ್ಯುತ್ತರವೋ ಅನ್ನುವಂತೆ ಹೂಂಕರಿಸಿತು. ಆಗ ಚಂದ್ರಾವತಿಯು ಅತ್ಯಂತ ಪ್ರೇಮದಿಂದ— “ ಎಲಾ ಕಳ್ಳಾ, ನನ್ನ ಮಾತಿಗೆ ಗಹಗಹಿಸಿ ನಗುತ್ತೀಯಾ ? ಹೂಂ ಕರಿಸುತ್ತೀಯಾ ” ಎನ್ನುತ್ತಿರಲು, ಅದನ್ನು ಕೇಳಿ ವೈಕುಂಠಯೋಗಿಗಳು ರಾಣಿಯ ಬಳಿಗೆ ಬಂದು-— ನಗದೆ ಏನು ಮಾಡ್ಯಾನು ? ಇನ್ನು ಸ್ವಲ್ಪ ದಿನಗಳಲ್ಲಿಯೇ ತಾನು ತನ್ನ ಮನೆಗೆ ಹೋಗಿ ತಾಯಿಯ ಸಂಗೋಪನದಿಂದ ಸುಖಪಡುವೆನೆಂಬದು ಆತನಿಗೆ ತಿಳಿದಿರುತ್ತದೆ. ಆ ಮೇಲೆ ತನ್ನ ತಾಯಿಯು ಹೀಗೆ ಭಿಲ್ಲಸ್ತ್ರೀಯ ವೇಷದಿಂದ ತನ್ನನ್ನು ಕಾಣುವ ಕಾರಣವಿಲ್ಲೆಂದು ಆತನು ತಿಳಿದಿರುವನು. ರಾಜಕುಮಾರಾ, ನನ್ನ ಮಾತು ನಿಜವಷ್ಟೇ, ಎಂದು ಕೇಳಿದರು.

ವೈಕುಂಠಯೋಗಿಗಳ ಧ್ವನಿಯನ್ನು ಕೇಳಿದಕೂಡಲೆ ಚಂದ್ರಾವತೀ ರಾಣಿಯು, ಚಟ್ಟನೆ ಎದ್ದು ಮಗನನು ಎತ್ತಿಕೊಂಡು, ತಲೆಬಾಗಿಸಿ ಯೋಗೀ

ಶ ರರನ್ನು ಕುರಿತು—ಯೋಗಿರಾಜರೇ, ಈ ಕುಮಾರನು ತಮ್ಮಲ್ಲಿರುವದ ರಿಂದ ನನ್ನ ಬಳಿಯಲ್ಲಿರುವದಕ್ಕಿಂತ ಸುರಕ್ಷಿತವಾಗಿರುವನೆಂಬದನ್ನು ನಾನು ಬಲ್ಲೆನು. ಬಹುದಿವಸದ ಮೇಲೆ ಮಗನ ಮೋರೆಯನ್ನು ಕಂಡ ನಾನು, ಮೋಹಪರವಶಳಾಗಿ ಏನಾದರೂ ಅಂದಿರಬಹುದು, ಅದನ್ನು ಲಕ್ಷಿಸದೆ ನನ್ನನ್ನು ಕ್ಷಮಿಸಬೇಕು, ಎಂದು ಪ್ರಾರ್ಥಿಸಿದಳು. ಆಗಯೋಗಿಗಳು ಮುಗುಳು ನಗೆ ನಕ್ಕು— ಚಂದ್ರಾವತೀ, ನಿನ್ನನ್ನು ದೂಷಿಸುವ ಉದ್ದೇಶದಿಂದ ನಾನು ಮಾತಾಡಲಿಲ್ಲ. ನೀನು ಖಿನ್ನಳಾಗಬೇಡ. ನಿನ್ನ ಬಂಧುವಾದ ರಾಜಸಿಂಹನು ಹೊರಗೆ ನಿಂತಿದ್ದಾನೆ. ಈ ಕಾಲದಲ್ಲಿ ಸ್ವಸಂರಕ್ಷಣದ ವಿಚಾರವನ್ನು ಮಾಡದೆ ನಿನ್ನ ಸೈನಿಕರನ್ನು ಆತನ ಸಹಾಯಕ್ಕೆ ಕಳಿಸು. ಆತನಿಂದ ಅತ್ಯಂತ ಮಹ ತ್ವದ ಕಾರ್ಯವು ಸಾಧಿಸಬೇಕಾಗಿರುವದು. ಯಾವತ್ತು ರಜಪೂತಸ್ಥಾನದ ಉರಲು ಆತನಿಂದ ಈಗ ತಪ್ಪುವಹಾಗಿದೆ. ನೀನಾದರೂ ಹೀಗೆ ಮೇಲಿಂದ ಮೇಲೆ ಭಿಲ್ಲಸ್ತ್ರೀಯ ವೇಷದಿಂದ ಇಲ್ಲಿಗೆ ಬರುವ ಅವಶ್ಯವಿಲ್ಲ. ನಿನ್ನ ಮಗನು ನಿನ್ನ ಬಳಿಯಲ್ಲಿ ಸುರಕ್ಷಿತವಾಗಿ ಇರುವನು, ಎಂದು ಹೇಳಿದರು. ಆದಕ್ಕೆ ಚಂದ್ರಾವತೀರಾಣಿಯು ಯಾವ ಮಾತನ್ನೂ ಆಡದೆ ತಲೆಬಾಗಿಸಿ ಸುಮ್ಮನೆ ನಿಂತುಕೊಂಡಳು. ಆಗ ವೈಕುಂಠಯೋಗಿಗಳು— ನೀನು ಮನಸ್ಸಿನಲ್ಲಿ ಯಾವ ಸಂಶಯಕ್ಕೂ ಆಸ್ಪದಕೊಡಬೇಡ. ನಾನು ಹೇಳಿದಂತೆ ಮಾಡು. ಯಾರಿಗೆ ಗೊತ್ತು, ರಾಜಸಿಂಹನು ನಿನ್ನನ್ನು ಪ್ರಾಣಸಂಕಟದಿಂದ ಸಹ ಉಳಿಸಬಹುದು, ಅನ್ನಲು, ಚಂದ್ರಾವತಿಯು—ಮಹಾತ್ಮರೇ ನಾನು ಸಂಶಯ ದಿಂದ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಇಂಥ ಸುದಿನವನ್ನು ನಾನು ಕಾಣ ಬಹುದೆ ? ಎಂಬ ವಿಚಾರದಲ್ಲಿ ಮಗ್ನಳಾಗಿ ಸುಮ್ಮನೆ ಕುಳಿತುಕೊಂಡೆನು. ತಮ್ಮ ಅಪ್ಪಣೆಗೆ ನಾನು ಹೊರಗಾದವಳಲ್ಲ, ಎಂದು ಹೇಳಿದಳು. ಆ ಮೇಲೆ ವೈಕುಂಠಯೋಗಿಗಳು ರಾಜಸಿಂಹನನ್ನು ಒಳಗೆ ಕರೆದು, ಚಂದ್ರಾ ವತೀಯನ್ನು ಕುರಿತು— ಚಂದ್ರಾವತೀ, ಈತನು ಕೇವಲ ನಿನ್ನ ಬಂಧುವಾದ ದ್ದರಿಂದ ಪರಸ್ಪರರ ಪ್ರತ್ಯಕ್ಷ ದರ್ಶನಕ್ಕೆ ಆತಂಕವಿಲ್ಲ, ಎಂದು ಹೇಳಿ, ಆವರಿ ಬ್ಬರ ಭೆಟ್ಟಿಯನ್ನು ಮಾಡಿಸಿ, ಅವರನ್ನು ತನ್ನ ಎಡಬಲಗಳಲ್ಲಿ ಕುಳ್ಳಿರಿಸಿ ಕೊಂಡರು. ಚಂದ್ರಾವತಿಯು ಉದೇಪುರದ ರಾಜಕನ್ಯೆಯಾಗಿದ್ದರೂ, ಆಕೆಯು ಪತಿಯಾದ ಜಸವಂತಸಿಂಗನು ಔರಂಗಜೇಬನ ಪಕ್ಷವನ್ನು ವಹಿಸಿದ್ದ

ರಿಂದ, ಆಕೆಗೆ ತವರಮನೆಯ ಆಶೆಯು ತಪ್ಪಿದಂತೆ ಆಗಿತ್ತು. ಈಗ ಔರಂಗಜೇಬನು ಜಸವಂತಸಿಂಗನಿಗೆ ಅಹಿತವನ್ನು ಚಿಂತಿಸಿದ್ದರಿಂದ, ಉದೇಪುರ-ಜೋಧಪುರಸಂಸ್ಥಾನಗಳೆರಡಕ್ಕೂ ಬಾದಶಹನು ಶತ್ರುವಾದಂತಾಯಿತು. ಯೋಗಿರಾಜನ ಬೋಧದಿಂದ ಆ ಬಂಧು-ಭಗಿನಿಯರಲ್ಲಿದ್ದ ಅಲ್ಪಸ್ವಲ್ಪ ದ್ವೇಷಭಾವವು ನಷ್ಟವಾಗಿ ಹೋಗಿ ಅವರಲ್ಲಿಯ ಬಂಧುಪ್ರೇಮವು ಪುನಃ ಜಾಗ್ರತವಾಯಿತು. ಗುರ್ವಾಜ್ಞೆಯಿಂದ ಅವರಿಬ್ಬರು ಉಪಾಹಾರಾದಿಗಳನ್ನು ತೀರಿಸಿಕೊಂಡು, ಗುರುಗಳ ಆಶೀರ್ವಾದವನ್ನು ಪಡೆದು ಉದೇಪುರಕ್ಕೆ ಹೊರಟರು. ಪ್ರತ್ಯಕ್ಷ ಬಂಧುವಾದ ರಾಜಸಿಂಹನೇ ತನ್ನ ರಕ್ಷಕನಾದದ್ದರಿಂದ ಚಂದ್ರಾವತಿಗೆ ಭಿಲ್ಲಸ್ತ್ರೀಯವೇಷವನ್ನು ಧರಿಸುವ ಅವಶ್ಯವಿಲ್ಲದಾಯಿತು. ಆಕೆಯು ತವರಮನೆಗೆ ಹೋಗಿ, ಎಲ್ಲರನ್ನು ಕಂಡು ಜೋಧಪುರಕ್ಕೆ ಬಂದಳು. ಆಕೆಯು ತನ್ನ ಅಮಾತ್ಯನನ್ನೂ, ಪ್ರತಿನಿಧಿಯನ್ನೂ ಕರೆಸಿ ಯೋಗಿರಾಜರ ಅಪ್ಪಣೆಯನ್ನು ತಿಳಿಸಲು, ಆರಂಭದಲ್ಲಿ ಅವರಿಗೆ ಆಶ್ಚರ್ಯವಾಯಿತು. ರಾಣಿಯು ಜೋಧಪುರದ ರಾಜ್ಯವನ್ನು ಈವೊತ್ತಿನವರೆಗೆ ಪ್ರಜೆಗಳಿಗೆ ದುಃಖವಾಗದಂತೆ ಬಹು ಚಾತುರ್ಯದಿಂದ ರಕ್ಷಣಮಾಡುತ್ತ ಬಂದಿರುವಳಲ್ಲದೆ, ಬಹುದೂರ ಲಕ್ಷಕೊಟ್ಟು, ಬಾದಶಹನು ತನ್ನಮೇಲೆ ಸಾಗಿಬರದಂತೆ ಆತನಿಗೆ ಕಪ್ಪಕಾಣಿಕೆಯನ್ನು ಕೊಟ್ಟು ಸಮಾಧಾನಪಡಿಸಿರುವಳು. ಹೀಗಿದ್ದು, ಪರ್ಯಾಯದಿಂದ ತಮಗೆ ಶತ್ರುವಿನಂತೆಯಿದ್ದ ಉದೇಪುರದ ರಾಜಸಿಂಹ ಮಹಾರಾಜರಿಗೆ ಸಹಾಯ ಮಾಡಬೇಕೆಂದು ಈಗ ಹೇಳುವರಲ್ಲ, ಎಂದು ಅವರುಶಂಕಿಸಿದರು; ಆದರೆ ಯಾವತ್ತುಸಂಗತಿಯು ಪೂರ್ಣವಾಗಿ ತಿಳಿದಮೇಲೆ ಅವರ ಮನಸ್ಸು ಸಮಾಧಾನಪಟ್ಟು, ದುಷ್ಟನಾದ ಔರಂಗಜೇಬನ ವೈರವನ್ನು ಮೆತ್ತಗೆ ಮಾಡುವದಕ್ಕಾಗಿ ಅವರು ಸಂತೋಷದಿಂದ ಒಪ್ಪಿಕೊಂಡರು. ಈ ವರ್ತಮಾನವನ್ನು ಕೇಳಿ ಮಾರವಾಡದ ತರುಣವೀರರ ಬಾಹುಗಳು ಸ್ಫುರಣ ಹೊಂದಿದವು. ಇದರಂತೆ ರಾಜಸಿಂಹನ ಪತ್ರದಿಂದ ಉಳಿದ ರಜಪೂತ ಸಂಸ್ಥಾನಿಕರ ಮೇಲೆಯೂ ಒಳ್ಳೆಯ ಪರಿಣಾಮವಾಯಿತು. ಔರಂಗಜೇಬನ ಸೊಕ್ಕನ್ನು ಮುರಿಯಲಿಕ್ಕೆ ಇದು ತಕ್ಕ ಸಮಯವೆಂದು ತಿಳಿದು ಅವರೆಲ್ಲರು ತಮ್ಮ ತಮ್ಮ ಸೈನ್ಯಗಳನ್ನು ಸಜ್ಜುಗೊಳಿಸಹತ್ತಿದರು. ಈ ಸುದ್ದಿಯನ್ನು ಕೇಳಿ ರಾಜಸಿಂಹನು ಸಂತೋಷಪಟ್ಟು ಯಾವತ್ತೂ ರಜಪೂತ ಅರಸರ

ಕಡೆಗೆ ಮತ್ತೊಂದು ಪತ್ರವನ್ನು ಬರೆದು ಕಳಿಸಿದನು. ಅದರಲ್ಲಿ ಬರೆದ ಅಭಿಪ್ರಾಯವೇನಂದರೆ— ವೀರರೇ, ನನ್ನ ಮೊದಲಿನ ಪತ್ರದಂತೆ ನೀವೆಲ್ಲರು ರಜಪೂತಸ್ಥಾನದ ಲಜ್ಜೆಯನ್ನು ರಕ್ಷಿಸುವದಕ್ಕಾಗಿ ಟೊಂಕಕಟ್ಟುತ್ತಿರುವಿರೆಂದು ಕೇಳಿ ನನ್ನ ಬಾಹುಗಳು ವಿಚಿತ್ರಸ್ಫುರಣವನ್ನು ಹೊಂದುತ್ತಲಿವೆ. ವಿಜಯಸಿಂಹಮಹಾರಾಜರಿಗೆ ಸೈನ್ಯದ ಸಹಾಯವು ಆದಷ್ಟು ಬೇಗನೆ ದೊರೆಯುವದು ಅವಶ್ಯವಿರುವದರಿಂದ, ನಾನು ಈಗ ಸೈನ್ಯದೊಡನೆ ಹೊರಡುವೆನು. ಸದ್ಯದ ಪ್ರಸಂಗಕ್ಕೆ ನನ್ನ ಸೈನ್ಯವು ಸಾಕಾಗಿರುವದು; ಆದರೆ ಔರಂಗಜೇಬನ ಪ್ರಚಂಡಸೈನ್ಯವು ಬಂದರೆ ಬಹಳ ತೊಂದರೆಯಾಗಬಹುದು; ಆದ್ದರಿಂದ ತಾವೆಲ್ಲರು ತೀವ್ರವಾಗಿ ಹೊರಟುಬರುವಿರೆಂದು ನಾನು ನಂಬಿರುವೆನು. ರಣಶೂರರೇ, ಮೊಗಲರೊಡನೆ ಒಮ್ಮೆ ಯುದ್ಧಮಾಡಿ, ನಮ್ಮ ತೋಳತಿಂಡೆಯನ್ನಾದರೂ ತೀರಿಸಿಕೊಳ್ಳೋಣ. ರಾಜಸ್ಥಾನದ ಶಾಂತಗುಣಕ್ಕಾದರೂ ಮರ್ಯಾದೆಯಿರುವದೋ ಇಲ್ಲವೋ ? ತಾಯಿ-ತಂಗಿ ಮೊದಲಾದ ಮನೆಯೊಳಗಿನ ಹೆಂಗಸರ ತನಕ ಮೊಗಲರು ಕೈಚಾಚಿದ ಬಳಿಕ, ರಜಪೂತರು ಅವನ್ನು ತುಂಡರಿಸಿಚಲ್ಲದೆ ಬಿಡಲಾರರೆಂಬದರ ಅನುಭವವು ಆಲಮಗೀರನಿಗೆ ಆಗಲಿ.

ಈ ಮೇರೆಗೆ ಪತ್ರವನ್ನು ಬರೆದು, ರಾಜಸಿಂಹನು ಕೂಡಲೆ ಸೈನ್ಯದೊಡನೆ ರೂಪನಗರಕ್ಕೆ ಸಾಗಿದನು.

## ೧೫ ನೆಯ ಪ್ರಕರಣ

# ಸತ್ಯನಿಷ್ಠೆ.

ಇಂದಿರೆಯ ಅಣ್ಣನಾದ ದುರ್ಗಾದಾಸನು ಘೋಟುಸಿಂಗನೆಂಬ ಹೆಸರನ್ನಿಟ್ಟುಕೊಂಡು, ಉದೇಪುರೀಬೇಗಮೆಯ ಜನಾನಖಾನೆಯನ್ನು ಪ್ರವೇಶಿಸಿದ್ದನಷ್ಟೆ? ತಿರುಗಿ ಬರುವಾಗ ಯಾರೋ ಆತನನ್ನು ಹೊತ್ತುಕೊಂಡು ಹೋದರೆಂಬದನ್ನು ವಾಚಕರು ಮರೆತಿರಲಿಕ್ಕಿಲ್ಲ. ಬೇಗಮೆಯ ಜನಾನಖಾನೆಯೊಳಗಿಂದ ಆತನನ್ನು ಹೀಗೆ ಯಾರು ಹೊತ್ತುಕೊಂಡು ಹೋಗಿರಬಹುದೆಂದು ವಾಚಕರು ಆಶ್ಚರ್ಯಪಡುವದು ಸ್ವಾಭಾವಿಕವು. ಉದೇಪುರೀಬೇಗಮೆಯ ಮೇಲೆ ಬಾದಶಹನ ಪ್ರೇಮವು ವಿಶೇಷವಾಗಿತ್ತೆಂದು ಹಿಂದೆ ಹಲವು ಸಾರೆ ಹೇಳಿರುತ್ತದೆ; ಆದರೆ ಔರಂಗಜೇಬನ ತಂಗಿಯಾದ ರೋಷನಾರಳು ಉದೇಪುರಿಯ ಶತ್ರುವಾಗಿದ್ದಳು. ರೋಷನಾರಳು ಬಹುಕ್ರೂರಳು. ಆಕೆಯನ್ನು ಹೋಲುವ ದುಷ್ಟಸ್ತ್ರೀಯು, ಆಗಿನ ಮೊಗಲರಾಜ್ಯದಲ್ಲಿ ಮತ್ತೊಬ್ಬಳಿದ್ದಿಲ್ಲ. ದುಷ್ಟ ಔರಂಗಜೇಬನು ತನ್ನ ತಂದೆಯನ್ನು ಸೆರೆಯಲ್ಲಿಟ್ಟು, ಅಣ್ಣ ತಮ್ಮಂದಿರನ್ನು ಕೊಲ್ಲಿಸಿ, ದಿಲ್ಲಿಯರಾಜ್ಯವನ್ನು ಸಂಪಾದಿಸುವಾಗ, ರೋಷನಾರಳು ಆತನಿಗೆ ಪರಿಪರಿಯಾಗಿ ಸಹಾಯಮಾಡಿದ್ದಳು. ರೋಷನಾರಳ ಸಹಾಯವಿಲ್ಲದಿದ್ದರೆ, ಔರಂಗಜೇಬನಿಗೆ ರಾಜ್ಯವು ಸಿಗುತ್ತಿದ್ದಿಲ್ಲವೆಂದು ಹೇಳಬಹುದು. ಇದರಿಂದ ಆಲಮಗೀರನು ತಂಗಿಯನ್ನು ವಿಶೇಷವಾಗಿ ಪ್ರೀತಿಸುತ್ತಿದ್ದನು. ತಾನೇ ಯಾವತ್ತು ಜನಾನಖಾನೆಯ ಯಜಮಾನಳಾಗಬೇಕೆಂತಲೂ, ಜನಾನಖಾನೆಯೊಳಗಿನ ಯಾವತ್ತು ರಾಜ

ಸ್ತ್ರೀಯರು ತನಗೆ ಬಗ್ಗಿ ನಡೆಯಬೇಕೆಂತಲೂ ರೋಷನಾರಳು ಯತ್ನಿಸುತ್ತಿದ್ದಳು. ಅವಳ ಈ ಯತ್ನಕ್ಕೆ ಉದೇಪುರೀಬೇಗಮೆಯು ದೊಡ್ಡ ಪ್ರತಿಬಂಧವಾದದ್ದರಿಂದ, ಏನಾದರೂ ಹಂಚಿಕೆ ಮಾಡಿ ಬೇಗಮೆಯ ಮೇಲಿನ ಔರಂಗಜೇಬನ ಪ್ರೇಮವನ್ನು ಕಡಿಮೆ ಮಾಡಬೇಕೆಂದು, ಆ ದುಷ್ಟರೋಷನಾರಳು ಹವಣಿಸುತ್ತಿದ್ದಳು. ಅವಳ ಈ ಹವಣಿಕೆಗೆ ದುರ್ಗಾದಾಸನ ಜನಾನಖಾನೆಯ ಪ್ರವೇಶವು ಅನುಕೂಲವಾಯಿತು. ದುರ್ಗಾದಾಸನ ಈ ಜನಾನಖಾನೆಯ ಪ್ರವೇಶದ ನೆವದಿಂದ, ಬೇಗಮೆಯ ಮೇಲಿನ ಹೊಲಸು ಅಪವಾದವನ್ನು ಹೊರಸಿ, ಔರಂಗಜೇಬನ ಮನಸ್ಸು ಕೆಡಿಸಬೇಕೆಂದು ಆಕೆಯು ಮಾಡಿದಳು. ದುರ್ಗಾದಾಸನು ಉದೇಪುರದಿಂದ ಬಂದ ರಜಪೂತನೆಂತಲೂ, ಮೊದಲಿನಿಂದಲೇ ಸ್ನೇಹವಿದ್ದ ಆತನನ್ನು ದುರಾಚಾರಿಯಾದ ಬೇಗಮೆಯು ಗುಪ್ತರೀತಿಯಿಂದ ಕರೆಸಿಕೊಂಡಿದ್ದಾಳೆಂತಲೂ, ಹಾಗಲ್ಲದಿದ್ದರೆ ಜನಾನಖಾನೆಯನ್ನು ಪ್ರವೇಶಿಸುವ ಧೈರ್ಯವು ಪುರುಷಮಾತ್ರರಿಗೆ ಆಗದೆಂತಲೂ, ತನ್ನ ಅಣ್ಣನ ಮುಂದೆ ಹೇಳಿ, ಉದೇಪುರಿಯ ಮರ್ಯಾದೆಗೇಡು ಮಾಡಿ, ಆಕೆಯ ಪ್ರಾಣವನ್ನು ತಕ್ಕೊಳ್ಳಬೇಕೆಂದು ದುಷ್ಟರೋಷನಾರಳು ಆಲೋಚಿಸಿದಳು. ತನ್ನ ಈ ದುರಾಲೋಚನೆಯನ್ನು ಸಾಧಿಸುವದಕ್ಕಾಗಿ ಆಕೆಯು ತನ್ನ ಜನಾನಖಾನೆಯ ಮುಖ್ಯನಾದ ಫರುಕ್‌ಶಾಯರನ ಸಹಾಯದಿಂದ ದುರ್ಗಾದಾಸನನ್ನು ಹಿಡಿದು ತರಿಸಿ ಸೆರೆಯಲ್ಲಿಟ್ಟಳು. ದುರ್ಗಾದಾಸನು ತಾನು ರೋಷನಾರಳ ತಾವುಸವೆಂಬ ವಾದ್ಯವನ್ನು ನೆಟ್ಟಗೆ ಮಾಡಿ ಕೊಟ್ಟಿದ್ದರಿಂದ , ತನ್ನಮೇಲೆ ಆಕೆಯ ಮೇಹರ್ಬಾನಿಗೆಯಾದೀತೆಂದು ಆಶೆಪಟ್ಟಿದ್ದನು; ಆದರೆ, ಆತನ ಆಶೆಯು ವ್ಯರ್ಥವಾಗಿ, ದುಷ್ಟಸಹವಾಸದಿಂದ ಆತನು ಸೆರೆಮನೆಯಲ್ಲಿ ಕೊಳೆಯಬೇಕಾಯಿತು. ಪಾಪ! ಉದೇಪುರಿಯು ರೋಷನಾರಳ ಈ ದುಷ್ಟವಾಸನೆಯ ಗಂಧವನ್ನು ಕೂಡ ಅರಿಯಳು. ಅತ್ತ ಇಂದಿರೆಯು, ತನ್ನ ಅಣ್ಣನ ಚೀಟಿಯಲ್ಲಿ ಬರೆದಂತೆ ತನ್ನನ್ನು ಬಿಡಿಸಿಕೊಂಡು ಹೋಗಬಹುದೆಂದು ತಿಳಿದು, ಎರಡುಮೂರು ದಿನ ಹಾದಿಯನ್ನು ನೋಡಿದಳು. ಆದರೆ ದುರ್ಗಾದಾಸನು ತಿರುಗಿ ಜನಾನಖಾನೆಗೆ ಬರಲೇ ಇಲ್ಲ. ಅದರಿಂದ ಇಂದಿರೆಯು ಚಿಂತೆಗೊಳಗಾದಳು. ತನ್ನ ಅಣ್ಣನನ್ನು ಯಾರೋ ಸೆರೆಯಲ್ಲಿಟ್ಟಿರಬಹುದೆಂತಲೂ, ಹಾಗಲ್ಲದಿದ್ದರೆ ತನ್ನ

ಅಣ್ಣನು ಚೀಟಿಯಲ್ಲಿ ಬರೆದಂತೆ ತಿರುಗಿ ಜನಾನಖಾನೆಗೆ ಬರದೆ ಎಂದೂ ಇರುತ್ತಿದ್ದಿಲ್ಲವೆಂತಲೂ, ಆಕೆಯು ಭಾವಿಸಿದಳು.

ದುರ್ಗಾದಾಸನು ಮೊಗಲರ ಸೆರೆಮನೆಯಲ್ಲಿ ಕೊಳೆಯಹತ್ತಿದನು. ಆ ಸೆರೆಮನೆಯ ಗೋಳನ್ನು ಅಷ್ಟಿಷ್ಟೆಂದು ವರ್ಣಿಸುವಹಾಗಿದ್ದಿಲ್ಲ. ತಟ್ಟನೆ ತಲೆಹೊಡಿಸಿಕೊಂಡು ಮರಣಹೊಂದುವದು ಸುಖವು; ಆದರೆ ಆ ಸೆರೆಮನೆಯ ಯಾತನೆಯ ಭೋಗವು ಬೇಡವೆಂದು ಅಪರಾಧಿಗಳು ಅನ್ನಬೇಕಾಗುತ್ತಿತ್ತು; ಆದರೆ ಫರುಕ್‌ಶಾಯರನು ದುರ್ಗಾದಾಸನ ಗುಣಗಳಿಗೆ ಲುಬ್ಧನಾದದ್ದರಿಂದ ಆತನ ಅನುಕೂಲತೆಯಿಂದ ದುರ್ಗಾದಾಸನಿಗೆ ಸೆರೆಮನೆಯ ದುಃಖಭೋಗವು ತಪ್ಪಿತು. ಮಧ್ಯದಲ್ಲಿ ಔರಂಗಜೇಬನಿಗೆ ಜಡ್ಡು ಆದದ್ದರಿಂದ ರೋಷನಾರಳು ಆತನ ಸೇವೆಯಲ್ಲಿ ತೊಡಗಿ ದುರ್ಗಾದಾಸನನ್ನು ಮರೆತಳು. ಔರಂಗಜೇಬನ ಬೇನೆಯು ವಿಕೋಪಕ್ಕೆ ಹೋಗಲು, ಆ ದುಷ್ಟ ಸ್ತ್ರೀಯು ಬಾದಶಹನ ಹಿರಿಯಮಗನಾದ ಶಹಾಅಲಮುನನ್ನು ಸೆರೆಯಲ್ಲಿಡಿಸಿ, ತನಗೆ ಬೇಕಾಗಿದ್ದ ಬಾದಶಹನ ಚಿಕ್ಕಮಗನಾದ ಅಝುಮಶಹನನ್ನು ಪಟ್ಟಕ್ಕೆ ಕುಳ್ಳಿರಿಸಬೇಕೆಂದು ಯೋಚಿಸಿದಳು. ಬಾದಶಹನು ಮರಣಕಾಲದಲ್ಲಿ ಹಾಗೆ ಲೇಖಬರೆಸಿದಂತೆ ತಾನೇ ಲೇಖಬರೆದು, ಆದಕ್ಕೆ ಬಾದಶಹನ ಬೆರಳೊಳಗಿನ ಉಂಗರದ ಮೊಹರುಮಾಡಿ, ಬೇರೆ ಬೇರೆ ಅಮೀರ ಉಮರಾವರ ಕಡೆಗೂ, ಕೆಲವು ರಜಪೂತರಾಜರ ಕಡೆಗೂ ಪತ್ರಗಳನ್ನು ಕಳಿಸಿದಳು. ತನ್ನ ಪಕ್ಷದ ರಾಜಪುತ್ರನು ಪಟ್ಟಕ್ಕೆ ಕೂಡ್ರುವದರಿಂದ ತನ್ನ ಅಧಿಕಾರವು ಹೆಚ್ಚುವದೆಂತಲೂ, ಆ ಮೇಲೆ ಉದೇಪುರಿಯ ಸೇಡು ತೀರಿಸಿಕೊಂಡು, ಇಡಿಯ ಜನಾನಖಾನೆಯ ಮೇಲೆ ತನ್ನ ಅಮಲು ಕೂಡ್ರಿಸಿ, ಪ್ರತಿಬಾದಶಹನಂತೆ ಅಧಿಕಾರನಡಿಸಬೇಕೆಂತಲೂ ಆಕೆಯು ಯೋಚಿಸಿದ್ದಳು; ಆದರೆ ಆಕೆಯು ಈ ಕಪಟದ ಯೋಚನೆಯು ಕೈಗೂಡುವ ಯೋಗವಿದ್ದಿಲ್ಲ ; ಯಾಕಂದರೆ ಔರಂಗಜೇಬನಿಗೆ ದಿನದಿನಕ್ಕೆ ಗುಣವಾಗುತ್ತಹೋಯಿತು. ಆತನಿಗೆ ಪೂರ್ಣ ಗುಣವಾದ ಮೇಲೆ, ಉದೇಪುರೀಬೇಗಮೆಯು ಮುಖದಿಂದ ರೋಷನಾರಳ ಕಪಟೋಪಾಯಗಳೆಲ್ಲ ಆತನಿಗೆ ಗೊತ್ತಾಗಿ, ಆತನು ರೋಷನಾರಳ ಮೇಲಿನ ಮನಸ್ಸು ತೆಗೆದನು. ಬೇನೆಬಿದ್ದಾಗ ಯಾವ ಬೇಗಮೆಯನ್ನೂ, ಬಾದಶಹನ ಮಕ್ಕಳನ್ನೂ, ಅಮೀರ–ಉಮರಾವಗಳನ್ನು ರೋಷನಾರಳು ಬಾದಶಹನ ದರ್ಶನಕ್ಕೆ

ಕೂಡ ಬರಗೊಟ್ಟದ್ದಿಲ್ಲ. ಒಮ್ಮೆ ಉದೇಪುರಿಯು, ಇಂದಿರೆಯ ಪರವು ಸಾಹಸ-ಚಾತುರ್ಯಗಳಿಂದ ಬಾದಶಹನ ದರ್ಶನಕ್ಕೆ ಹೋದರೆ, ರೋಷ ನಾರಳು ಬೇಗಮೆಯ ಸಂಗಡ ಗುದುಮುರಿಗೆ ಹಾಕಿ, ಆಕೆಯ ವೈಮೋರೆ ಗಳನ್ನು ಹರಕೊಂಡು, ಆಕೆಯನ್ನು ನೆಲಕ್ಕೆ ಕೆಡವಿ ದರದರ ಹೊರಗೆ ಎಳ ದಿದ್ದಳು. ತಂಗಿಯ ಈ ಕ್ರೂರಕೃತ್ಯವನ್ನು ಉದೇಪುರಿಯು ಬಾದಹನಿಗೆ ಹೇಳಲು, ಅವನು ರೋಷನಾರಳ ಮೇಲೆ ಸಿಟ್ಟಾದನು. ಉದೇಪುರಿಯ ಮೇಲೆ ಆತನ ಪ್ರೇಮವು ಮೊದಲಿಗಿಂತ ಹೆಚ್ಚಾಯಿತು. ಕಪಟಿಯೂ, ತಂತ್ರಗಾರನೂ ಆದ ಅಲಮಗೀರನು, ತಂಗಿಯ ದುರಾಲೋಚನೆಯ ಬಗ್ಗೆ ಆಕೆಯನ್ನು ಸ್ಪಷ್ಟವಾಗಿ ಕೇಳಿ ಆಕೆಯನ್ನು ನಿಷೇಧಿಸದೆ, ಹೊರಗೆ ಸವಿಮಾತು ಗಳನ್ನಾಡುತ್ತ ಒಳಗಿಂದೊಳಗೆ ತಂಗಿಯ ಗುಪ್ತಕಾರಸ್ಥಾನದ ಶೋಧವನ್ನು ನಡಿಸಿದನು. ರೋಷನಾರಳ ಗುಣವನ್ನು ಬಾದಶಹನು ಪೂರಾ ಅರಿತಿದ್ದನು. ಪ್ರಸಂಗಬಂದರೆ, ನನ್ನ ಬುಡಮೇಲುಮಾಡಿ, ತನಗೆ ಬೇಕಾದವನನ್ನು ಪಟ್ಟಕ್ಕೆ ಕುಳ್ಳಿರಿಸುವ ಸಾಹಸ ಮಾಡಲಿಕ್ಕೆ ಆಕೆಯು ಹಿಂದೆಮುಂದೆ ನೋಡ ತಕ್ಕವಳಲ್ಲೆಂದು ಆತನು ಜಾಗರೂಕನಾಗಿರುತ್ತಿದ್ದನು. "ಕಳ್ಳನ ಹೆಜ್ಜೆ ಯನ್ನು ಕಳ್ಳನೇ ಬಲ್ಲನೆ"ಂಬಂತೆ, ಆ ಅಣ್ಣತಂಗಿಯರ ಸ್ಥಿತಿಯಿತ್ತು.

ತನ್ನ ತಂತ್ರವೆಲ್ಲ ಹೊರಬಿದ್ದದ್ದರಿಂದ ರೋಷನಾರಳಿಗೆ ಬಹಳ ಅಸ ಮಾಧಾನವಾಗಿತ್ತು; ಆದರೂ ಆಕೆಯು ಅಷ್ಟಕ್ಕೆ ಕೈಕಾಲುಗೆಟ್ಟು ಕುಳಿತು ಕೊಳ್ಳುವಂಥ ಹೆಣ್ಣುಮಗಳಿದ್ದಿಲ್ಲ. ತಾನು ಸೆರೆಯಲ್ಲಿಡಿಸಿದ್ದ ಮನುಷ್ಯನನ್ನು ಮುಂದೆ ಮಾಡಿ, ಉದೇಪುರೀಬೇಗಮೆಯ ಸೇಡುತೀರಿಸಿಕೊಳ್ಳಬೇಕೆಂದು ಮಾಡಿದಳು. ಆಕೆಯು ಫರುಕ್‌ಶಾಯರನನ್ನು ಕರೆಸಿ ಸೆರೆಮನೆಯಲ್ಲಿದ್ದ ಆ ಮನುಷ್ಯನನ್ನು ಕರತಾರೆಂದು ಆಜ್ಞಾಪಿಸಲು, ಫರುಕ್‌ಶಾಯರನು ವೇಷ ಧಾರಿಯಾದ ದುರ್ಗಾದಾಸನನ್ನು ರೋಷನಾರಳ ಎದುರಿಗೆ ಕರೆತಂದು ನಿಲ್ಲಿ ಸಿದನು. ತನ್ನ ಗುಣಗಳಿಂದ ದುರ್ಗಾದಾಸನು ಸೆರೆಮನೆಯ ಕಾವಲು ಗಾರರೇ ಮೊದಲಾದವರಿಗೆಲ್ಲ ಬೇಕಾದವನಾಗಿದ್ದಕಾರಣ, ಉಳಿದ ಸೆರೆ ಯಾಳುಗಳಂತೆ ಕೃಶವಾಗಿರದೆ ಆತನು ತಿಂದುಂಡು ಧಷ್ಟಪುಷ್ಟನಾಗಿದ್ದನು. ಆತನು ರೂಪದಿಂದ ಚಲುವನು. ಆತನ ಮುಖದ ಮೇಲೆ ಉಕ್ಕುತ್ತಿದ್ದ ಒಂದು ಪ್ರಕಾರದ ಬುದ್ಧಿತೇಜವು ವಿಲಕ್ಷಣವಾಗಿ ಒಪ್ಪುತ್ತಿತ್ತು. ಇದನ್ನೆಲ್ಲ

ನೋಡಿ ರೋಷನಾರಳು, ಈತನು ಹೊಟ್ಟೆತುಂಬಿಕೊಳ್ಳುವದಕ್ಕಾಗಿ ಕಲಾ ಕೌಶಲ್ಯದ ಉದ್ಯೋಗಮಾಡುವ ಮನುಷ್ಯನಲ್ಲೆಂದು ಕೂಡಲೆ ಗೊತ್ತು ಹಿಡಿದಳು. ಆಕೆಯು ಮನುಷ್ಯನ ಪರೀಕ್ಷೆಮಾಡುವಲ್ಲಿ ಒಳ್ಳೇ ಚತುರಳು. ಈತನು ಯಾವನೋ ರಜಪೂತ ಸರದಾರನಿದ್ದು, ಕಾರಾಗೀರನ ಸೋಗು ಹಾಕಿರುವನೆಂದು ನಿಶ್ಚಯಿಸಿದಳು. ಉದೇಪುರಿಯ ಸೇಡುತೀರಿಸಿಕೊಳ್ಳಲಿಕ್ಕೆ ಈತನು ತಕ್ಕವನಿದ್ದಾನೆಂದು ತಿಳಿದು, ಆಕೆಯು ದುರ್ಗಾದಾಸನನ್ನು ಕುರಿತು—ನೀನು ಕಾರಾಗೀರನಂತೆ ನನಗೆ ಕಾಣುವದಿಲ್ಲ. ನೀನು ಯಾರಿರುವೆ ನಿಜವಾಗಿ ಹೇಳು; ನನ್ನ ಮುಂದೆ ಮೋಸವು ನಡೆಯಲಾರದೆಂಬದು ನಿನಗೆ ಗೊತ್ತೇ ಇರುವದು. ನನ್ನ ಕೀರ್ತಿಯನ್ನು ಕೇಳದ ಮನುಷ್ಯನು ಈ ಸಮಸ್ತಭೂಮಂಡಲದಲ್ಲಿರುವದಿಲ್ಲ. ಹೇಳು, ನಿಜವಾದಸಂಗತಿಯನ್ನು ಹೇಳು, ಅನ್ನಲು, ದುರ್ಗಾದಾಸನು ಘಾಬರಿಯಾದವನಂತೆ ಮಾಡಿ— ಬೇಗಮುಸಾಹೇಬರೇ, ನಾನೊಬ್ಬ ಬಡ ಕಾರಾಗೀರನು; ರಜಪೂತಸ್ಥಾನದೊಳಗಿನ ಜೋಧಪುರವು ನನ್ನ ಮೂಲ ಊರು; ಆದರೆ ಬಹಳವರ್ಷಗಳಿಂದ ಇಲಹಾಬಾದದಲ್ಲಿದ್ದೆನು. ಅಲ್ಲಿ ಈ ವರ್ಷ ಹೊಟ್ಟೆತುಂಬದ ಹಾಗೆ ಆದದ್ದರಿಂದ, ಇಲ್ಲಿಗೆ ಬಂದೆನು. ಈ ಊರಲ್ಲಿರುವ ನನ್ನ ಅಬಚಿಯಮಗನ ಮನೆಯಲ್ಲಿದ್ದೇನೆ, ಎಂದು ಏನೇನೋ ರಗಳೆಯನ್ನು ಕೊಚ್ಚುತ್ತಿರಲು, ರೋಷನಾರಳು ಏನೋ ಮನಸ್ಸಿನಲ್ಲಿ ಯೋಚಿಸಿ ಫರುಕ್ ಶಾಯರನಿಗೆ ಫರುಕ್ ಶಾಯುರ—ಹೀಗೆ ಈತನು ನಿಜವಾದ ಸಂಗತಿಯನ್ನು ಹೇಳತಕ್ಕವನಲ್ಲ. ಸದ್ಯಕ್ಕೆ ಈತನನ್ನು ಸೆರೆಯಲ್ಲಿಟ್ಟು, ನಾನು ಹೇಳಿದಾಗ ಮತ್ತೆ ಕರಕೊಂಡು ಬಾ. ಈತನನ್ನು ಸೆರೆಯಲ್ಲಿಟ್ಟಮೇಲೆ ಅದೇ ಕೈಯಲ್ಲಿ ಅಲಮಗೀರ ಬಾದಶಹನ ಬಳಿಗೆ ಹೋಗಿ—ನಿಮ್ಮನ್ನು ಈಗಲೇ ಕಾಣಬೇಕಾಗಿದೆ. ಅನುಕೂಲವಿದ್ದರೆ ತಾವು ಬರಬೇಕು. ಇಲ್ಲದಿದ್ದರೆ ತಮ್ಮ ಅಪ್ಪಣೆಯಾದಲ್ಲಿ ನಾನೇ ತಾವಿದ್ದಲ್ಲಿಗೆ ಬರುವೆನು. ಎಂದು ಹೇಳು, ಎಂದು ಆಜ್ಞಾಪಿಸಿದಳು. ಕೂಡಲೆ ಫರುಕ್ ಶಾಯುರನು ಛೋಟುಸಿಂಗನನ್ನು ಸೆರೆಯಲ್ಲಿರಿಸಿ, ರೋಷನಾರಳ ವಿಜ್ಞಾಪನೆಯನ್ನು ತಿಳಿಸುವದಕ್ಕಾಗಿ ಬಾದಶಹನ ಬಳಿಗೆ ಹೋದನು.

ಫರುಕ್ ಶಾಯುರನು ಬಾದಶಹನ ಬಳಿಗೆ ಹೋದಾಗ ಬಾದಶಹನು ವಿಚಾರಮಗ್ನನಾಗಿದ್ದನು; ಯಾಕಂದರೆ ರೂಪನಗರವನ್ನು ಮುತ್ತಿದ್ದ ಸಾದತಖಾನನು, "ಹೊಸ ಸೈನ್ಯವು ಸಹಾಯಕ್ಕೆ ಬಾರದಿದ್ದರೆ ತನ್ನ ಪರಿಣಾಮವು

ವಾಗದೆಂತಲೂ, ಯಾವತ್ತು ರಜಪೂತರು ಉದೇಪುರದ ರಾಜಸಿಂಹನ ಅಧ್ಯಕ್ಷತೆಯಲ್ಲಿ ಒಟ್ಟುಗೂಡಿ ನಮ್ಮ ಮೇಲೆ ಸಾಗಿಬರುವವರಿದ್ದಾರೆಂತಲೂ, ಸೈನ್ಯದ ಸಹಾಯವು ಒದಗುವವರೆಗೆ ನಾನು ಹ್ಯಾಗಾದರೂ ಮಾಡಿ ರೂಪನಗರದ ಮುತ್ತಿಗೆಯನ್ನು ಎಬ್ಬಿಸುವದಿಲ್ಲೆಂತಲೂ" ಆತನಿಗೆ ಪತ್ರಬರೆದಿದ್ದನು. ಇಂಥ ರಾಜಕರಣದ ಪ್ರಸಂಗದಲ್ಲಿ ಬಾದಶಹನು ತನ್ನ ತಂಗಿಯ ವಿಚಾರವನ್ನು ಕೇಳಿಕೊಳ್ಳುತ್ತಿದ್ದನು. ಹೀಗಿರಲು, ಫರುಕ್‍ಶಾಯರನು ರೋಷನಾರಳ ವಿಜ್ಞಾಪನೆಯನ್ನು ಅರುಹಿದ್ದರಿಂದಬಾದಶಹನು ಕೂಡಲೆ ಆತನನ್ನು ಹಿಂಬಾಲಿಸಿ ರೋಷನಾರಳಬಳಿಗೆ ಹೋದನು. ಆಗಬಾದಶಹನು ರಜಪೂತರ, ವಿಶೇಷವಾಗಿ ರಾಜಸಿಂಹನ ಕೃತಿಯಿಂದ ಸಂತಪ್ತನಾಗಿದ್ದನು. ಈ ಉದ್ಧಟನ ಶಾಸನವನ್ನು ಹ್ಯಾಗೆ ಮಾಡಬೇಕೆಂದು ಆತನು ಆಲೋಚಿಸುತ್ತಿದ್ದನು. ಈ ಯಾವತ್ತು ಸಂಗತಿಯನ್ನು ರೋಷನಾರಳ ಮುಂದೆ ಯಾವಾಗ ಹೇಳೇನೆಂದು ಆತುರಪಡುತ್ತಿದ್ದ ಆ ಬಾದಶಹನು, ಒಮ್ಮೆ ತಂಗಿಯ ಮುಂದೆ ಅದನ್ನು ಬಡಬಡ ಕಾರಿಕೊಳ್ಳಲು, ಕಾರ್ಯಸಾಧಕಳಾದ ರೋಷನಾರಳು, ರಜಪೂತರ ಮೇಲಿನ ಬಾದಶಹನ ಈ ಸಂತಾಪವನ್ನು ನೋಡಿ ಮನಸ್ಸಿನಲ್ಲಿ ಸಮಾಧಾನಪಟ್ಟಳು. ಆಕೆಯು ಬಾದಶಹನನ್ನು ಕುರಿತು--ಅಲಮಗೀರ, ರಜಪೂತರ ಈ ಉದ್ಧಟತನವನ್ನು ಕೇಳಿ ಕೇಳಿ ನನಗೆ ಬೇಸರ ಬಂದಿತು. ನಿನ್ನಿಂದ ಅವರ ಶಾಸನವು ಎಂದು ಆಗುವದೋ ಏನೋ! ಸದ್ಯಕ್ಕೆ ಹೊರಗಿನ ರಜಪೂತರ ಶಾಸನದ ಗೊಡಿವೆಯನ್ನು ಬಿಟ್ಟು, ಮೊದಲು ನಿನ್ನ ಮನೆಯಲ್ಲಿದ್ದ ರಜಪೂತರ ಶಾಸನಮಾಡು. ಅಣ್ಣಾ, ಜನಾನಖಾನೆಯಲ್ಲಿ ರಜಪೂತರು ಬೇಕಾದ ಸೋಗುಹಾಕಿಕೊಂಡು ನಿರ್ಭಯದಿಂದ ಬರಹತ್ತಿದಬಳಿಕ, ನಿನ್ನ ಗೌರವವೇನು ಉಳಿಯಿತು ಹೇಳು. ನೀನು ಉದೇಪುರಿಯನ್ನು ಪಂಚಪ್ರಾಣವೆಂದು ಭಾವಿಸಿರುತ್ತೀ; ಆದರೆ ಆಕೆಯ ಕೃತಿಯನ್ನು ವಿಚಾರಿಸಿದರೆ, ಆಕೆಯು ನಿನ್ನ ಪ್ರಾಣಹರಣಮಾಡುವ ಘೋರವಿಷವಾಗಿರುವಳೆಂದು ನಿನಗೇ ಕಂಡುಬರಬಹುದು. ಜನಾನಖಾನೆಯ ಒಳತನಕ ತರುಣ ರಜಪೂತರ ಪ್ರವೇಶವೇ? ಅಲಮಗೀರ, ನಾನು ವ್ಯರ್ಥ ಮಾತುಗಳನ್ನಾಡುವದಿಲ್ಲ. ನನ್ನ ಮಾತುಗಳನ್ನು ಪ್ರಮಾಣಪೂರ್ವಕವಾಗಿ ಪ್ರತ್ಯಕ್ಷ ಸಿದ್ಧಮಾಡಿ ಕೊಡುವೆನು. ಉದೇಪುರಿಯ ಆಸ್ಪದವಿದ್ದ ಹೊರತು, ತರುಣರಜಪೂತನ ಪ್ರವೇಶವು ಅಂತರ್ಗೃಹದಲ್ಲಿ ಆಗಬಹುದೋ? ಬಾದಶಹಾ, ಸಾಕು, ನಾನು

ಈ ಹೊಲಸನ್ನು ನೋಡಲಾರೆ. ಮಕ್ಕಾಯಾತ್ರೆಗೆ ಹೋಗುವದಕ್ಕಾಗಿ ಮೊದಲು ನನಗೆ ಅಪ್ಪಣೆಯನ್ನು ಕೊಡು. ಆ ಮೇಲೆ ಉದೇಪುರಿಯ ಕೃತಿಯ ವಿಚಾರ ವನ್ನು ಮಾಡು, ಎಂದು ಹೇಳಿ, ತಸಬೀರು ಕೊರೆಯುವವನ ಸೋಗಿ ನಿಂದ ಭೋಟುಸಿಂಗನು ಉದೇಪುರಿಯ ಅಂತರ್ಗೃಹವ ಪ್ರವೇಶಿಸಿದ್ದನ್ನು ಹೇಳಿದಳು. ಅದನ್ನು ಕೇಳಿ ಬಾದಶಹನು— ರೋಷನಾರ, ಏನಂದಿ ? ಸೋಗು ಹಾಕಿಕೊಂಡು ತರುಣರಜಪೂತನು ಜನಾನಖಾನೆಯನ್ನು ಪ್ರವೇಶಿ ಸಿದನೆ ? ನಿನಗೆ ಹುಚ್ಚುಹಿಡಿದಿಲ್ಲವಷ್ಟೆ ? ಉದೇಪುರಿಯ ಮೇಲಿನ ದ್ವೇಷ ದಿಂದ ನೀನು ಏನಾದರೂ ಹುಟ್ಟಿಸಿಕೊಂಡು ಹೇಳುವೆಯೋ ಏನು ? ನಮ್ಮ ಉದೇಪುರಿ..............ಎಂದು ನುಡಿಯುತ್ತಿರಲು, ರೋಷನಾರಳು ನಡುವೇ ಬಾಯಿಹಾಕಿ— ಆಲಮಗೀರ, ನಾನು ನಿರಾಧಾರವಾಗಿ ಮಾತಾಡಿರುವದಿಲ್ಲ. ಅಂತರ್ಗೃಹವನ್ನು ಪ್ರವೇಶಿಸಿದ್ದ ಆ ತರುಣರಜಪೂತನನ್ನು ಸೆರೆಯಲ್ಲಿಟ್ಟಿ ದ್ದೇನೆ. ನೀನು ಉದೇಪುರಿಯ ಅಂತರ್ಗೃಹಕ್ಕೆ ಹೋಗು. ಅಲ್ಲಿಗೇ ಈಗ ಆತನನ್ನು ಕಳಿಸಿಕೊಡುವೆನು. ನಿನ್ನ ಪ್ರೀತಿಯ ರಜಪೂತ ತರುಣಿಯ ಸಮಕ್ಷ ಎಲ್ಲಮಾತು ಬೈಲಿಗೆ ಬರುವದು. ಅಥವಾ ಆ ಉಸಾಬರಿಯಾದರೂ ನನಗೆ ಯಾತಕ್ಕೆ ? ಆ ತರುಣ ರಜಪೂತನನ್ನು ಇಲ್ಲಿಯೇ ನಿನ್ನ ಮುಂದೆ ನಿಲ್ಲಿಸಿಬಿಡುವೆನು. ಬೇಕಾದದ್ದು ಮಾಡಿಕೋ, ಎಂದು ಹೇಳಿ, ಫರುಕ್ ಶಾಯರನ ಮುಖಾಂತರ ಭೋಟೂಸಿಂಗನನ್ನು ಬಾದಶಹನ ಮುಂದೆ ನಿಲ್ಲಿಸಿದಳು.

ಭೋಟೂಸಿಂಗನು ಬಾದಶಹನ ಮುಂದೆ ನಿಂತಿರಲು, ಕಾರಾಗೀರನ ಸೋಗಿನಿಂದ ಆತನು ಉದೇಪುರಿಯ ಅಂತರ್ಗೃಹವ ಪ್ರವೇಶಿಸಿದ್ದನ್ನು ರೋಷನಾರಳು ಮತ್ತೊಮ್ಮೆ ಬಾದಶಹನ ಮುಂದೆ ವರ್ಣಿಸಿ ಹೇಳಿದಳು. ಅದನ್ನು ಕೇಳುತ್ತಿದ್ದ ಬಾದಶಹನು, ಎವೆಯಿಕ್ಕದೆ ಭೋಟೂಸಿಂಗನ ಮುಖ ವನ್ನು ನೋಡುತ್ತಿದ್ದನು; ಆದರೆ ಭೋಟೂಸಿಂಗನ ಮುಖಮುದ್ರೆಯಲ್ಲಿ ಸ್ವಲ್ಪವಾದರೂ ಭಯದ ಚಿಹ್ನವು ತೋರಲಿಲ್ಲ. ಆಗ ಬಾದಶಹನು ಮನ ಸ್ಸಿನಲ್ಲಿ—ಈತನು ಸರ್ವಸಾಧಾರಣ ಕಾರಾಗೀರನಾಗಿದ್ದರೆ, ಹೀಗೆ ತನ್ನ ಮುಂದೆ ತಟಸ್ಥ ವೃತ್ತಿಯಿಂದ ನಿಂತುಕೊಳ್ಳಲಾರೆರಂತಲೂ, ಯಾವನೋ ಒಬ್ಬ ಅಚ್ಚ ರಜಪೂತನು'ಏನೋ ಒಳಸಂಚು ಸಾಧಿಸುವದಕ್ಕಾಗಿ ಕಾರಾಗೀರನ

ಸೋಗಿನಿಂದ ಅಂತರ್ಗೃಹವನ್ನು ಪ್ರವೇಶಿಸಿರುವನೆಂತಲೂ ಭಾವಿಸಿ ವ್ಯಕ್ತವಾಗಿ—ಹೀಗೇನು ? ಅಂತು ನನ್ನ ಪ್ರಿಯಳಾದ ಉದೇಪುರಿಯು ಈ ಮನೆ ಬಂದು ಮುಟ್ಟಿದಳು ! ಫರುಕ್‌ಶಾಯರ, ಈತನ ಹೆಡಮುರಿಗೆ ಕಟ್ಟಿ ಈಗಲೇ ಇವನನ್ನು ಉದೇಪುರಿಯ ಅಂತರ್ಗೃಹಕ್ಕೆ ಕರಕೊಂಡು ಬಾ. ನಮ್ಮ ಕಾಮುಬಕ್ಷನ ತಾಯಿಯು............ ಆದರೆ ಈಗೇ ಬಾಯಿಬಿಚ್ಚಿ ಯಾಕೆ ಮಾತಾಡಬೇಕು ? ರೋಷನಾರ, ಇಂದಿನಿಂದ ನೀನು ಯಾವತ್ತು ಜನಾನಖಾನೆಯ ಒಡೆಯಳಿರುತ್ತೀ. ನಿನ್ನ ವಿರುದ್ಧವಾಗಿ ಯಾರಾದರೂ ಒಂದು ಅಕ್ಷರ ನುಡಿದರೆ, ಅವರಿಗೆ ಬೇಕಾದಂಥ ಕ್ರೂರಶಿಕ್ಷೆಯನ್ನು ಮಾಡು; ನನ್ನನ್ನು ಕೇಳಲವಶ್ಯವಿಲ್ಲ. ನಡೆಯೋ ಫರುಕ್‌ಶಾಯರ ಇವನನ್ನು ಕರಕೊಂಡು, ಎಂದು ಗದ್ದರಿಸಿದನು. ಇದನ್ನು ನೋಡಿ ರೋಷನಾರಳಿಗೆ ಬಹಳ ಸಂತೋಷವಾಯಿತು. ತನ್ನ ಈ ಕಪಟಜಾಲದಿಂದ ಉದೇಪುರಿಯ ನಾಶವು ನಿಶ್ಚಯವಾಗಿ ಆಗುವದೆಂದು ಆಕೆಯು ಹಿಗ್ಗಿದಳು. ಇತ್ತ ಬಾದಶಹನಿಗೆ ಛೋಟೂಸಿಂಗನ ಮೋರೆಯ ಗುರುತು ಹತ್ತಿದಂತೆ ಆಗುತ್ತಿತ್ತು; ಆದರೆ ಇಂಥವನೇ ಎಂಬದು ಆತನ ಸ್ಮರಣಕ್ಕೆ ಬರಲೊಲ್ಲದು. ಯಃಕಶ್ಚಿತ ಕಾರಾಗೀರನಾಗಿದ್ದರೆ ಬಾದಶಹನ ಮುಂದೆ ನಿಂತಾಗ ಗಡಗಡ ನಡುಗಿ, ಅಳುತ್ತ ಕ್ಷಮೆಬೇಡಿ ಆತನ ಕಾಲಮೇಲೆ ಉರಳಾಡುತ್ತಿದ್ದನು. ಈತನು ಹಾಗೇನು ಮಾಡದೆ, ಬಂದ ಪ್ರಸಂಗಕ್ಕೆ ಎದೆಗೊಟ್ಟು ನಿಲ್ಲಲು ಸಿದ್ಧನಾಗಿರುವ ಅಚ್ಚರಜಪೂತನಂತೆ ತೋರುತ್ತಿದ್ದನು. ಒಬ್ಬನ ಹೆಡಮುರಿಗೆ ಕಟ್ಟಿಸಿಕೊಂಡು ಬಾದಶಹನು ತನ್ನ ಬಳಿಗೆ ಬರುತ್ತಾನೆಂಬದನ್ನು ಕೇಳಿ, ಉದೇಪುರಿಗೆ ಬಹಳ ಆಶ್ಚರ್ಯವಾಯಿತು. ಬಾದಶಹನು ಛೋಟೂಸಿಂಗನನ್ನು ಉದೇಪುರಿಯ ಮುಂದೆ ನಿಲ್ಲಿಸಿ— “ ಇವನು ಯಾರು ? ಹೇಳು ” , ಎಂದು ಕೇಳಲು, ಆಕೆಯು ಆಶ್ಚರ್ಯಮಗ್ನಳಾಗಿ ಒಮ್ಮೆ ಬಾದಶಹನನ್ನೂ , ಒಮ್ಮೆ ಛೋಟೂಸಿಂಗನನ್ನೂ ಸರತಿಯಿಂದ ನೋಡಹತ್ತಿದಳು. ಇದೇನು ಪ್ರಸಂಗವೆಂಬದು ಆಕೆಗೆ ತಿಳಿಯದೆ ಹೋಯಿತು. ಆಗ ಬಾದಶಹನು ಅದೇ ಪ್ರಶ್ನವನ್ನು ಗದ್ದರಿಸಿ ಮತ್ತೊಮ್ಮೆ ಕೇಳಲು, ಬೇಗಮೆಯು ಅಚ್ಛೆಯಿಂದ ಬಾದಶಹನ ಬಳಿಗೆ ಹೋಗಿ—ಈ ದಿನ ಇದೇನು ಸೋಗುಹಾಕಿರುತ್ತೀರಿ ? ಸಂತೆಯೊಳಗಿನ ಯಾವನೋ ಒಬ್ಬ ಮನುಷ್ಯನನ್ನು ಹಿಡಕೊಂಡು ಬಂದು ನನ್ನ ಎದುರಿಗೆ

ನಿಲ್ಲಿಸಿ— " ಇವನು ಯಾರು ? ಹೇಳು " ಎಂದು ಗದ್ದರಿಸಿ ಕೇಳುವದರ ಅರ್ಥವೇನು ? ಎಂದು ಕೇಳಿದಳು. ಆಗ ಬಾದಶಹನು ನಿಷ್ಠುರತನದಿಂದ, ದೂರಸರಿದುನಿಲ್ಲೆಂದು ಸನ್ನೆಯಿಂದ ತಿಳಿಸಿ—ಬಾಯಿಮುಚ್ಚು, ಸರಿ ಹಿಂದಕ್ಕೆ! ಇವನು ಯಾರು ? ಇವನನ್ನು ಇಲ್ಲಿಗೆ ಯಾರು ಕರೆಸಿದರು ? ಎಂಬದನ್ನು ಸ್ಪಷ್ಟವಾಗಿ ಹೇಳಿ, ನನ್ನ ಮನಸ್ಸಿನೊಳಗಿನ ಸಂಶಯವನ್ನು ದೂರಮಾಡುವ ವರೆಗೆ ನಿನ್ನನ್ನು ಮುಂದಕ್ಕೆ ಬರಗೊಡಲಿಕ್ಕಿಲ್ಲ. ಇವನನ್ನೂ, ನಿನ್ನನ್ನೂ ಕೂಡಿಯೇ ಕತ್ತೆಯ ಮೇಲೆ ಕುಳ್ಳಿರಿಸಿ, ಊರಲ್ಲಿ ಮೆರೆಸಿ, ಆನೆಯ ಕಾಲಿಗೆ ಕಟ್ಟಿಸಿ ಕೊಲ್ಲಿಸುವೆನು, ಎಂದು ನುಡಿಯಲು, ಉದೇಪುರಿಯು ಗಡಗಡನೆ ನಡುಗಿ— ನಿಮ್ಮ ಮನಸ್ಸಿನೊಳಗಿನ ಸಂಶಯವು ಯಾವದು ? ಯಾರ ವಿಷಯವಾಗಿ ಸಂಶಯವು ? ಇವನಿಗೂ ನನಗೂ ಸಂಬಂಧವೇನು ? ನೀವು ಆಡುವಮಾತೇ ನನಗೆ ತಿಳಿಯಲೊಲ್ಲದು; ಅಂದಬಳಿಕ ನಿಮ್ಮ ಮನಸ್ಸಿನೊಳಗಿನ ಸಂಶಯವನ್ನು ದೂರಮಾಡುವ ಬಗೆ ಹ್ಯಾಗೆ ?

ಉದೇಪುರಿಯ ಈ ಮಾತುಗಳನ್ನು ಕೇಳಿ ಬಾದಶಹನು— " ಏನು ? ಇವನು ಯಾರೆಂಬದು ನಿನಗೆ ಗೊತ್ತಿಲ್ಲವೆ ? ಚಿತ್ರಕೊರೆಯುವವನ ಸೋಗಿನಿಂದ ಇವನನ್ನು ನೀನು ಇಲ್ಲಿಗೆ ಕರೆಸಿಕೊಂಡಿದ್ದಿಲ್ಲವೆ ? ನಿನ್ನ ಮುಸಾವುದನು ಈತನನ್ನು ನಿನ್ನಬಳಿಗೆ ಕರಕೊಂಡು ಬಂದಿದ್ದಿಲ್ಲವೆ ? ಇವನು ಇಲ್ಲಿಯೇ ನಿನ್ನ ಮಂದಿರದಲ್ಲಿ ಇದ್ದಿಲ್ಲವೆ ? ಮಾತಾಡು, ಈಗ ಯಾಕೆ ಸುಮ್ಮನಾದೆ ? ಆ ?" ಎಂದು ಗದ್ದರಿಸಲು, ಬೇಗಮೆಯು ಮುಂದುಗಾಣದೆ ನಿಂತುಕೊಂಡಳು. ಆಶ್ಚರ್ಯಮಗ್ನಳಾದ್ದರಿಂದ ಆಕೆಯ ಮುಖದಿಂದ ಅಕ್ಷರಗಳು ಹೊರಡ ವಾದವು. ಆಕೆಯ ಹಿಂದೆ ನಿಂತುಕೊಂಡಿದ್ದ ಇಂದಿರೆಗೆ ಯಾವ ಸಂಗತಿಯೂ ತಿಳಿಯದಾಯಿತು; ಈ ಸ್ಥಿತಿಯಲ್ಲಿ ಬಾದಶಹನು ಬೇಗಮೆಯ ಮುಖಮುದ್ರೆಯನ್ನೂ, ಘೋಟೂಸಿಂಗನ ಮುಖಮುದ್ರೆಯನ್ನೂಪರೀಕ್ಷಿಸಲು, ಬೇಗಮೆಯ ಮುಖಮುದ್ರೆಯಲ್ಲಿ ನಿರಪರಾಧಿತ್ವವೂ, ಘೋಟೂಸಿಂಗನ ಮುಖಮುದ್ರೆಯಲ್ಲಿ ತಿರಸ್ಕಾರದ ಮೃದುಹಾಸ್ಯವೂ ತೋರುತ್ತಿದ್ದವು. ಕಡೆಗೆ ಉದೇಪುರಿಯು ಒಮ್ಮೆಲೆ ಬಾದಶಹನನ್ನು ಕುರಿತು— ಜಹಾಪನ್ನಾ, ನಿಮ್ಮ ಮನಸ್ಸಿನಲ್ಲಿ ಸಂಶಯವೇನು ಬಂದಿರುತ್ತದೆಂಬದನ್ನು ನೀವೇ ಬಲ್ಲಿರಿ. ಈ ಚಿತ್ರಗಾರನು ಮುಸಾವುದನ ಸಂಗಡ ಸ್ವಲ್ಪದಿನಗಳ ಹಿಂದೆ ನನ್ನ ಬಳಿಗೆ ಬಂದಿದ್ದನು.

ಈತನು ಇಲ್ಲಿಯೇ ಕುಳಿತು ಕೆಲವು ಚಿತ್ರಗಳನ್ನು ಕೊರೆದು ಕೊಟ್ಟನು. ಅವು ನನ್ನವು ನಿಮ್ಮವು ಇರುತ್ತವೆ. ಈತನು ಹಸ್ತಿದಂತದ ಒಂದು ಸುಂದರವಾದ ಬೀಸಣಿಕೆಯನ್ನೂ ಕೊಟ್ಟಿರುತ್ತಾನೆ, ಎಂದು ಹೇಳಿ, ಚಿತ್ರಗಳನ್ನೂ, ಬೀಸಣಿಕೆಯನ್ನೂ ಬಾದಶಹನಿಗೆ ತೋರಿಸಿದಳು. ಅಷ್ಟರಿಂದ ಬಾದಶಹನಿಗೆ ಸಮಾಧಾನವಾಗಲೊಲ್ಲದು. ಆತನು ಸಂತಾಪಯುಕ್ತ ತಿರಸ್ಕಾರದಿಂದ ಉದೇಪುರಿಯನು ಕುರಿತು—ಉದೇಪುರೀ, ನೀನು ಚಿತ್ರಗಳನ್ನು ತೋರಿಸು, ಏನು ಬೇಕಾದದ್ದು ಮಾಡು. ಈತನು ಚಿತ್ರ ಕೊರೆಯುವ ಕಾರಾಗೀರನಲ್ಲ ವೆಂಬದು ನಿಶ್ಚಯವು. ಈತನನ್ನು ನೀನು ಕರೆಸಿರುತ್ತಿ. ಈತನು ಯಾವನೋ ನಿನ್ನ ಹಳೆಯ ಜತೆಗಾರನಿರಬೇಕು, ಎಂದು ನುಡಿದನು. ಈ ಶಬ್ದಗಳು ಕಿವಿಗೆ ಬಿದ್ದಕೂಡಲೆ ಉದೇಪುರಿಯು ಖಣಖಣಿಸುವ ಧ್ವನಿಯಿಂದ ಗಟ್ಟಿಯಾಗಿ ನುಡಿದಳೇನಂದರೆ—ಜಹಾಪನ್ನಾ, ಇಂದು ನೀವು ನೀವೇ ಇರುತ್ತೀರಷ್ಟೆ ! ಇದೇನು ? ಯಾರಮುಂದೆ ಇಂಥ ಅಭದ್ರಮಾತುಗಳನ್ನು ಆಡುತ್ತೀರೆಂಬ ದನ್ನು ವಿಚಾರಮಾಡಿರಿ. ಈ ಉದೇಪುರಿಯ ಪರೀಕ್ಷೆಯನ್ನು ಈವೊತ್ತಿನ ವರೆಗೆ ಹೀಗೆಯೇ ಮಾಡಿದಿರೋ ? ಯಾವ ದುಷ್ಟರು ನಿಮ್ಮ ಮನಸ್ಸಿನಲ್ಲಿ ಇದನ್ನು ತುಂಬಿದರು ? ನನ್ನ ವಿಷಯವಾಗಿ ನಿಮ್ಮ ಮನಸ್ಸಿನಲ್ಲಿ ಇಂಥ ಕುತರ್ಕವೇ ? ಇನ್ನಂತು ಈ ವಿಚಾರವನ್ನು ಪೂರ್ಣವಾಗಿ ಮಾಡಲೇ ಬೇಕು. ನಾನು ಅಪರಾಧಿಯೆಂದು ಸಿದ್ಧವಾದರೆ ಬೇಕಾದ ಶಿಕ್ಷೆಯನ್ನು ವಿಧಿಸಿರಿ.

ಉದೇಪುರಿಯ ಈ ಸ್ವಾಭಿಮಾನದ ಸರಳ ನುಡಿಗಳ ಪರಿಣಾಮವು ಬಾದಶಹನ ಮೇಲೆ ಆಗಲಿಲ್ಲ. ಆತನು ಬೇಗಮೆಯನ್ನು ಕುರಿತು— ಇಂಥ ಅಕ್ಕಸದ ಮಾತುಗಳಿಗೆ ನಾನು ಮೋಸಹೋಗುವವನಲ್ಲ. ನನ್ನ ಮನಸ್ಸಿನಲ್ಲಿ ಸಂಶಯವು ಪೂರ್ಣವಾಗಿ ತುಂಬಿಕೊಂಡಿರುತ್ತವೆ. ಇಲ್ಲದಿದ್ದರೆ ನೆಟ್ಟಗೆ ನಿನ್ನತನಕ ಈತನು ಹ್ಯಾಗೆ ಬಂದನು ? ಎಂದು ನುಡಿದನು. ಅದನ್ನು ಕೇಳಿ ಬೇಗಮೆಯ ಮುಖದಿಂದ ಒಂದು ಅಕ್ಷರವು ಕೂಡ ಹೊರಡದಾಯಿತು; ಶಬ್ದಗಳು ಹೊರಬೀಳದಾದವು. ಔರಂಗಜೇಬನು ತನ್ನ ವಿಷಯವಾಗಿ ಹೀಗೆ ಸಂಶಯಪಟ್ಟಾನೆಂಬ ವಿಚಾರವು ಆಕೆಯ ಮನಸ್ಸಿನಲ್ಲಿ ಕೂಡ ಬಂದಿದ್ದಿಲ್ಲ. ಆಕೆಯು ತೀರ ಖಿನ್ನಳಾದಳು. ಏನು ಮಾಡಬೇಕು, ಏನು ಮಾತಾಡ

ಬೇಕೆಂಬದೇನೂ ಆಕೆಗೆ ತೋಚದಾಯಿತು. ಕಾಲು ಮುರಿದಂತಾಗಿ, ಆಕೆಯು ಬಳಿಯಲ್ಲಿದ್ದ ಒಂದು ರತ್ನಖಚಿತವಾದ ಕೋಚದ ಮೇಲೆ ಕುಸಿಬಿದ್ದವಳಂತೆ ಕುಳಿತುಬಿಟ್ಟಳು. ಇಂದಿರೆಯು ಆಕೆಯನ್ನು ಹಿಡಿಯಹೋಗಲು ಬೇಗಮೆಯು—ಇಂದಿರೆ, ಇದೆಲ್ಲಿಯ ಕೆಟ್ಟ ಅಪವಾದವು ನನ್ನ ಪಾಲಿಗೆ ಬಂತವ್ವಾ! ಎಂದು ನುಡಿಯಲು, ಇಂದಿರೆಯು ಸ್ವಲ್ಪಹೊತ್ತು ಸುತ್ತುಮುತ್ತು ನೋಡಿದಳು. ಆ ಮೇಲೆ ಬಾದಶಹನನ್ನು ನೋಡಿದಳು. ಅಷ್ಟರಲ್ಲಿ ಭೋಟೂಸಿಂಗನು ಬಾದಶಹನನ್ನು ಕುರಿತು ಏನೋ ಹೇಳಬೇಕೆಂದು "ಬಾದಶಹಾ" ಎಂದು ನುಡಿಯುತ್ತಿರಲು, ಬಾದಶಹನು—ಸುಮ್ಮನಿರು. ಒಂದು ಅಕ್ಷರವನ್ನು ನುಡಿದರೆ ನಿನ್ನ ನಾಲಿಗೆಯನ್ನು ಕೊಯ್ಸೇನು, ಎಂದು ಗದ್ದರಿಸಿದ್ದರಿಂದ ಭೋಟೂಸಿಂಗನು ಸುಮ್ಮನಾದನು. ಆಗ ಬಾದಶಹನು ಉದೇಪುರಿಯನ್ನು ಕುರಿತು—ಯಾಕೆ ? ಎಲ್ಲ ಹುಳಕು ಹೊರಬಿದ್ದದ್ದರಿಂದ ಇನ್ನು ಏನೂ ನಡೆಯುವ ಹಾಗಿಲ್ಲೆಂದು ಸುಮ್ಮನೆ ಬಿದ್ದುಕೊಂಡೆಯಹುದೇ ? ಎಲೇ...... .... " ಎಂದು ನುಡಿಯುತ್ತಿರಲು, ಇಂದಿರೆಯು ಬಾದಶಹನ ಬಳಿಗೆ ಬಂದು ಆತನನ್ನು ಕುರಿತು— ಅವರನ್ನು ಸುಮ್ಮನೆ ಯಾಕೆ ಛಲಿಸುತ್ತೀರಿ ? ಇನ್ನು ನಿಜವಾದ ಸಂಗತಿಯನ್ನು ಹೇಳದಿದ್ದರೆ ನಡೆಯುವ ಹಾಗಿಲ್ಲ. ನಿರಪರಾಧಿಯಾದ ಬೇಗಮೆಯ ಛಲನೆಯನ್ನು ನೋಡುವದು ನನ್ನಿಂದಾಗದು. ಬೇಗಮೆಯ ಬಿಡುಗಡೆಯು ನಮ್ಮ ನಿಜವಾದ ವೃತ್ತಾಂತವನ್ನು ಹೇಳಿದರೇ ಆಗುವದು. ಕಾರಣ ಈತನು ಯಾರು, ಇಲ್ಲಿಗೆ ಹ್ಯಾಗೆ ಬಂದನು ಎಂಬದನ್ನು ನಾನು ಹೇಳುತ್ತೇನೆ ಕೇಳಿರಿ. ಈತನು ನನ್ನ ಅಣ್ಣನಾದ ದುರ್ಗಾದಾಸನು. ಯಾವದಾದರೊಂದು ಹಂಚಿಕೆಯಿಂದ ನನ್ನನ್ನು ಬಂಧಮುಕ್ತವಾಗಿ ಮಾಡಬೇಕೆಂದು ಇಲ್ಲಿಗೆ ಬಂದಿದ್ದನು. ಯಾವದೊಂದು ನೆವವಿಲ್ಲದೆ ಯಾರು ಒಳಗೆ ಬಿಡುವರು ? ಆದ್ದರಿಂದ ತನಗೆ ಬರುತ್ತಿದ್ದ ಚಿತ್ರಕೊರೆಯುವ ಕಲೆಯನ್ನು ಮುಂದೆ ಮಾಡಿ ಈತನು ಅಂತರ್ಗೃಹವನ್ನು ಪ್ರವೇಶಿಸಿದನು. ಎರಡನೆಯ ಯಾವ ಗೂಢವೂ ಇದರಲ್ಲಿರುವದಿಲ್ಲ. ಇನ್ನು ಸಟೆದಿಟಗಳ ನಿರ್ಣಯವನ್ನು ನೀವು ಮಾಡಿಕೊಳ್ಳಿರಿ. ಬೇಗಮುಸಾಹೇಬರ ಸಬಂಧವು ಇದರಲ್ಲಿ ಎಷ್ಟು ಮಾತ್ರವೂ ಇರುವದಿಲ್ಲ. ನಮ್ಮ ಸಲುವಾಗಿ ನಿಷ್ಕಾರಣವಾಗಿ ಅವರು ಛಲಕ್ಕೆ ಗುರಿಯಾಗುವದನ್ನು ನಾನು ನೋಡಲಾರದೆ ಸತ್ಯವನ್ನು ನುಡಿದಿದ್ದೇನೆ.

ಇನ್ನು ನಮ್ಮಿಬ್ಬರ ಗತಿಯೇನಾಗುವದೆಂಬದನ್ನು ಎರಡನೆಯವರು ಹೇಳಲ ವಶ್ಯವಿಲ್ಲ. ನಮ್ಮ ಗತಿಯು ಏನಾದರೂ ಆಗಲಿ, ನಿಷ್ಕಾರಣವಾಗಿ ಆಗುತ್ತಿದ್ದ ಬೇಗಮಸಾಹೇಬರ ಛಲವು ತಪ್ಪಿದರೆ ಸಾಕು, ಎಂದು ನುಡಿದಳು. ಬಾದ ಶಹನು ಇದನ್ನು ಕೇಳಿ ಬೆರಗಾದನು. ದುರ್ಗಾದಾಸನೆಂಬ ಹೆಸರು ಕಿವಿಗೆ ಬಿದ್ದಕೂಡಲೆ ಆತನು ಆ ಛೋಟುಸಿಂಗನ ಮುಖಮುದ್ರೆಯನ್ನು ಹೆಚ್ಚು ದಿಟ್ಟಿಸಿ ನೋಡಹತ್ತಿದನು. ಆಗ ಉದೇಪುರೀಯ ದೇಹದಲ್ಲಿ ಪ್ರಾಣಸಂಚ ರಿಸಿದಂತಾಯಿತು. ಇಂದಿರೆಯು ಇಂದು ತನಗೆ ಪ್ರಾಣದಾನ ಮಾಡಿದಳೆಂದು ಬೇಗಮೆಯು ಭಾವಿಸಿದಳು. ಬರಿಯ ಸಂಶಯದಿಂದಲೇ ಬಾದಶಹನು ಎಂಥ ಕ್ರೂರವಾದ ಶಿಕ್ಷೆಯನ್ನು ಕೊಡುವನೋ, ಎಂದು ಆಕೆಯು ಬೆದರಿ ದ್ದಳು. ಹಿಂದಿನ ಬಾದಶಹರು ತಮ್ಮ ಬೇಗಮೆಯರಿಗೆ ಕೊಟ್ಟಿದ್ದ ಭಯಂಕರ ವಾದ ಶಿಕ್ಷೆಯ ಹಲವು ಕಥೆಗಳನ್ನು ಆಕೆಯು ಕೇಳಿದ್ದಳು. ಜೀವದಿಂದಿರು ತ್ತಲೇ ಭೂಮಿಯಲ್ಲಿ ಹುಗಿಸುವದು, ಕಲ್ಲುಕಟ್ಟಿ ನದಿಯಲ್ಲಿ ಅಥವಾ ಕೆರೆ ಯಲ್ಲಿ ಮುಣುಗಿಸುವದು, ಮೂರುಪಟ್ಟೆಗಳನ್ನು ತೆಗೆಸಿ ಊರೆಲ್ಲ ಮೆರೆಸಿ, ನಾಯಿನರಿಗಳಿಂದ ಹರಿಸಿ ತಿನಿಸುವದು, ಇಂಥ ಶಿಕ್ಷೆಗಳಲ್ಲಿ ಯಾವದಾದ ರೊಂದು ಶಿಕ್ಷೆಯು ತನ್ನ ಪಾಲಿಗೆ ಬರಬಹುದೆಂದು ಉದೇಪುರಿಯು ಭಾವಿಸಿ ದ್ದಳು. ತಾನು ಬಾದಶಹನ ಪಟ್ಟರಾಣಿಯಾಗುವ ಮಹತ್ವಾಕಾಂಕ್ಷೆಯನ್ನು ತಾಳಿ, ಅದು ಸಿದ್ಧಿಸುವದಕ್ಕಾಗಿ ಯಾಕೆ ಪ್ರಯತ್ನಿಸಿದೆನೆಂದು ಆಕೆಯು ಪಶ್ಚಾತ್ತಾಪ ಪಡುತ್ತಿದ್ದಳು. ಅಷ್ಟರಲ್ಲಿ ಇಂದಿರೆಯು ಮೇಲೆ ಹೇಳಿದಂತೆ ಅಮೃತವಾಣಿಯನ್ನು ಸುರಿಸಲು, ಆಕೆಯು ಚೇತರಿಸಿ ಇಂದಿರೆಯ ಬಳಿಗೆ ಧಾವಿಸುತ್ತ ಹೋಗಿ , ಕೇವಲ ನೋಟದಿಂದ ತನ್ನ ಕೃತಜ್ಞತೆಯನ್ನು ವ್ಯಕ್ತ ಮಾಡಿದಳು.

ಇಂದಿರೆಯ ಈ ಸತ್ಯನಿಷ್ಠೆಯಿಂದ ಉದೇಪುರಿಯ ವಿಷಯದ ಬಾದ ಶಹನ ಸಂಶಯವು ದೂರವಾಯಿತು. ಆತನು ಉದೇಪುರಿಯನ್ನು ಬಗೆ ಬಗೆಯಾಗಿ ಬಣ್ಣಿಸಿ ರಮಿಸಹತ್ತಿದನು. ಔರಂಗಜೇಬನು ಮಾತಿನಲ್ಲಿ ಬಹು ಚತುರನು. ತಾನು ರೋಷನಾರಳ ಸಮಾಧಾನಕ್ಕಾಗಿ ನಿನ್ನ ಮೇಲೆ ಈ ಅಪವಾದ ಹೊರಿಸಿದೆನಲ್ಲದೆ, ನಿನ್ನ ಪವಿತ್ರತೆಯ ಬಗ್ಗೆ ನನ್ನ ಮನಸ್ಸಿನಲ್ಲಿ ಎಳ್ಳಷ್ಟು ಸಂಶಯವಿಲ್ಲೆಂದು ಆತನು ಹೇಳಿದನು. ರೋಷನಾರಳು ಘಾತಕ

ಸ್ವಭಾವದವಳು. ಈಗಿನ ಕಾಲವು ಬಹು ಸೂಕ್ಷ್ಮವಾದದ್ದು. ಅತ್ತ ರಜಪೂತರು ಎದ್ದು ಕುಳಿತಿದ್ದಾರೆ; ಇತ್ತ ದಕ್ಷಿಣದಲ್ಲಿ ಮಹಾರಾಷ್ಟ್ರರ ಸುಳಿದಾಟಕ್ಕೆ ಆರಂಭವಾಗಿದೆ; ತಂದೆಯಾದ ಶಹಾಜಹಾನನು, ಸೆರೆಮನೆಯಲ್ಲಿ ಇನ್ನೂ ಜೀವದಿಂದ ಇರುತ್ತಾನೆ. ಇಂಥ ಪ್ರಸಂಗದಲ್ಲಿ ರೋಷನಾರಳನ್ನು ನನ್ನ ಬಳಿಯಲ್ಲಿಟ್ಟುಕೊಳ್ಳದಿದ್ದರೆ, ಆ ದುಷ್ಟ ಸ್ತ್ರೀಯು ನನ್ನ ಬುಡಮೇಲು ಮಾಡಲಿಕ್ಕೆ ಹಿಂದೆಮುಂದೆ ನೋಡುವಹಾಗಿಲ್ಲ. ಅಂತೇ ಆಕೆಯನ್ನು ಯುಕ್ತಿಪ್ರಯುಕ್ತಿಯಿಂದ ತಡೆದು ಸಿಲ್ಲಿಸುವದಕ್ಕಾಗಿ ನಾನು ಹೀಗೆ ಮಾಡಿದೆನು; ಎಂದು ಹೇಳಿದನು. ಅದನ್ನು ಕೇಳಿ ಭೋಳೇಸ್ವಭಾವದ ಉದೇಪುರಿಯು ಸಮಾಧಾನಪಟ್ಟಳು. ಬಾದಶಹನ ಮೇಲೆ ಆಕೆಯ ಪ್ರೇಮ ಬಹಳ. ಆತನ ಮಾತುಗಳು ಆಕೆಗೆ ಸಮರ್ಪಕವಾಗಿ ತೋರಿದವು. ಇತ್ತ ದುರ್ಗಾದಾಸನೆಂಬ ಹೆಸರು ಕಿವಿಗೆ ಬಿದ್ದ ಕೂಡಲೆ ಬಾದಶಹನಿಗೆ ಆತನ ಗುರುತು ಪೂರಾ ಹತ್ತಿದಂತಾಯಿತು. ಜಸವಂತಸಿಂಗನ ಸಂಗಡ ಬಂದಾಗ ಬಾದಶಹನು ದುರ್ಗಾದಾಸನನ್ನು ನೋಡಿದ್ದನು. ದುರ್ಗಾದಾಸನ ಯೋಗದಿಂದ ಜಸವಂತಸಿಂಗನ ಯಾವತ್ತು ಸಂಗತಿಯೂ, ಚಂದ್ರಾವತೀರಾಣಿಯ ವೃತ್ತಾಂತವೂ, ಆಕೆಯನ್ನು ಕಾಬೂಲದಿಂದ ಹೊಸಡಿಸಿದ್ದೂ ಬಾದಶಹನ ಕಣ್ಣಿಗೆ ಕಟ್ಟಿದಂತಾಗಿ, ದುರ್ಗಾದಾಸನನ್ನು ಕೂಡಲೆ ಶೂಲಕ್ಕೇರಿಸಬೇಕೆಂದು ಆತನು ನಿಶ್ಚಯಿಸಿದನು; ಆದರೆ ದುರ್ಗಾದಾಸನಂಥ ಶೂರ ತರುಣ ಮುತ್ಸದ್ದಿಯನ್ನು ಹೀಗೆ ಕೊಲ್ಲಿಸುವದಕ್ಕಿಂತ, ಆತನಿಗೆ ಮುಸಲ್ಮಾನೀಧರ್ಮದ ದೀಕ್ಷೆಯನ್ನು ಕೊಡಿಸಿ, ಅದು ಸಾಧಿಸದಿದ್ದರೆ ದೊಡ್ಡ ಅಧಿಕಾರವನ್ನು ಕೊಟ್ಟು, ಆತನನ್ನು ತನ್ನ ಪದರಿನಲ್ಲಿಟ್ಟುಕೊಂಡು, ರಜಪೂತರನ್ನು ಹಣ್ಣಿಗೆ ತರುವ ಕಾರ್ಯದಲ್ಲಿ ಆತನ ಸಹಾಯುವನ್ನು ಪಡೆಯಬಹುದೆಂದು ಬಾದಶಹನು ನೆನಸಿದನು. ಆಗ ಮೋಸಗಾರನಾದ ಅಲಮಗೀರನು— ದುರ್ಗಾದಾಸಜೀ, ನಾನು ನಿಮ್ಮ ಸ್ವಾಮಿಭಕ್ತಿಯನ್ನೂ, ಶೌರ್ಯವನ್ನೂ ಕೇಳಿಬಲ್ಲೆನು. ಕಾಬೂಲದಿಂದ ಚಂದ್ರಾವತೀರಾಣಿಯನ್ನು ಹೊರಡಿಸುವಾಗ, ನೀವೂ ನಿಮ್ಮ ತಂಗಿಯೂ ಮಾಡಿದ ಸಾಹಸವನ್ನು ಕೇಳಿದ್ದೇನೆ. ನಿಮ್ಮ ತಂಗಿಯ ಸತ್ಯನಿಷ್ಠೆಯನ್ನು ಇಂದು ಕಣ್ಣುಮುಟ್ಟ ನೋಡಿದ್ದೇನೆ. ಶತ್ರುವಿನ ಸದ್ಗುಣಗಳನ್ನೂ ಅಲಮಗೀರನು ದುರ್ಲಕ್ಷಿಸಲಾರನು. ಇಂದಿನಿಂದ ನಿಮ್ಮಿಬ್ಬರನ್ನೂ ಬಂಧಮುಕ್ತ

ಮಾಡುತ್ತೇನೆ. ನೀವು ಇಂದು ಐದುಸಾವಿರ ಸೈನ್ಯದ ಮನಸಬದಾರರಾದಿ ರೆಂದು ತಿಳಿಯಿರಿ. ಜಸವಂತಸಿಂಗಮಹಾರಾಜರ ಯಾವತ್ತು ಅಧಿಕಾರ ವನ್ನು ನಿಮಗೆ ಕೊಡುತ್ತೇನೆ. ಈಗಲೇ ನಿಮಗೆ ಉಡುಗರೆಯನ್ನು ತರಿಸಿ ಕೊಡುವೆನು. ತರುಣರಾಗಿದ್ದ ನೀವು, ತಂಗಿಯ ಸಂಗಡ ನನ್ನ ಪದರಿನಲ್ಲಿ ಸುಖವಾಗಿದ್ದು, ಪರಾಕ್ರಮವನ್ನು ಪ್ರಕಟಮಾಡಿ , ಹೆಚ್ಚು ಹೆಚ್ಚು ಉತ್ಕರ್ಷ ವನ್ನು ಪಡೆಯಿರಿ.

ದುರ್ಗಾದಾಸನು ಬಾದಶಹನ ಈ ಮಾತುಗಳನ್ನು ಕೇಳಿ ಸುಮ್ಮನೆ ನಿಂತುಕೊಂಡಿದ್ದನು. ಆಗ ಬಾದಶಹನು ಆತನನ್ನು ಕುರಿತು— ದುರ್ಗಾ ದಾಸಾ, ನಾನು ನಿನಗೆ ಐದುಸಾವಿರದ ಮನಸಬದಾರಿಯನ್ನು ಕೊಟ್ಟಿದ್ದೇನೆ. ಇನ್ನು ನನ್ನ ದರ್ಬಾರದಲ್ಲಿರು, ಎಂದು ಮತ್ತೊಮ್ಮೆ ಗಟ್ಟಿಯಾಗಿ ನುಡಿದನು. ಅದನ್ನು ಕೇಳಿ ದುರ್ಗಾದಾಸನು ಸ್ವಲ್ಪ ಅಧ್ಯೈತೆಯನ್ನು ವ್ಯಕ್ತಪಡಿಸುತ್ತ, ತಿರಸ್ಕಾರದ ಮುದ್ರೆಯಿಂದ ಬಾದಶಹನನ್ನು ನೋಡಿ— ಅಲಮಗೀರಬಾದ ಹನೇ, ನೀನು ನನ್ನನ್ನು ಈ ಬಗೆಯಾಗಿ ಮನ್ನಿಸಿದ್ದಕ್ಕಾಗಿ ನಾನು ಆನಂದ ಪಡಬೇಕೋ, ದುಃಖಪಡಬೇಕೋ , ಎಂಬದು ನನಗೆ ತಿಳಿಯದಾಗಿದೆ ! ನೀನು ನನ್ನ ಮೇಲೆ ಪ್ರಸನ್ನನಾಗಿದ್ದರೆ , ತಂಗಿಯನ್ನು ಕರಕೊಂಡು ಸ್ವದೇಶಕ್ಕೆ ಹೋಗುವದಕ್ಕೆ ನನಗೆ ಅಪ್ಪಣೆಕೊಡು. ನಾನೂ, ಆಕೆಯೂ ನಮ್ಮ ಬಾಲರಾಜನ ಸೇವೆಯನ್ನು ಮಾಡುತ್ತ ಜನ್ಮದ ಸಾರ್ಥಕಮಾಡಿ ಕೊಳ್ಳುವೆವು. ನಮ್ಮ ರಾಜನ ಸೇವೆಯಲ್ಲಿ ನಮಗಾಗುವ ಆನಂದವು, ನೀನು ಮನಸುಬದಾರಿಯನ್ನು ಕೊಟ್ಟರೂ, ದಿವಾಣಗಿರಿಯನ್ನು ಕೊಟ್ಟರೂ ನಮಗೆ ಆಗುವದಿಲ್ಲ. ಮೊಗಲರ ಚಾಕರಿಯನ್ನು ಕೈಕೊಂಡು, ರಾಣಿಯನ್ನೂ ಬಾಲರಾಜನನ್ನೂ ಅತ್ತ ಚಲ್ಲಿಕೊಡುವದು ನಮ್ಮ ಶೀಲವಲ್ಲ. ನಾನು ಒಬ್ಬನೇ ಒಬ್ಬನು; ನನ್ನ ತಂಗಿಯು ಬಾಲವಿಧವೆಯು. ಇನ್ನು ನಮ್ಮಿಬ್ಬರದು ಏನು ಆಗಬೇಕಾಗಿದೆ ? ನಮ್ಮ ಸ್ವಾಮಿಯ ಸೇವೆಯಿಂದ ನಾವು ಸಂತುಷ್ಟ ರಾಗತಕ್ಕವರು. ಎಂದು ಸ್ಪಷ್ಟವಾಗಿ ಹೇಳಿದನು. ಅದನ್ನು ಕೇಳಿ ಬಾದ ಶಹನು ಸಂತಾಪಗೊಂಡನು. ಆದರೂ ಆತನು ಸಂತಾಪವನ್ನು ವ್ಯಕ್ತ ಪಡಿಸದೆ, ದುರ್ಗಾದಾಸನಿಗೆ ಪರಿಪರಿಯಾಗಿ ತಿಳಿಸಿ ಹೇಳಿದನು. ಆದರೆ ಅದೆಲ್ಲ ವ್ಯರ್ಥವಾಯಿತು. ಆಗ ಬಾದಶಹನು ದುರ್ಗಾದಾಸನನ್ನು ಸೆರೆ

ಯಲ್ಲಿರಿಸಿದನು. ಇಂದಿರೆಯನ್ನು ಪೀಡಿಸಿ, ದುರ್ಗಾದಾಸನನ್ನು ಹಾದಿಗೆ ತರಬೇಕೆಂದು ಮಾಡಿದನು; ಆದರೆ ಉದೇಪುರಿಯು ಅದನ್ನು ನಿಷೇಧಿಸಿದಳು. ಉದೇಪುರಿಯು ಇಂದಿರೆಯ ವಿಷಯವಾಗಿ ಅತ್ಯಂತ ಕೃತಜ್ಞಳಾಗಿದ್ದಳು. ಬಾದಶಹನು ಪ್ರಸಂಗದಲ್ಲಿ ಇಂದಿರೆಯನ್ನು ಸೆರೆಯಲ್ಲಿರಿಸಲಿಕ್ಕೆ ಹಿಂದೆಮುಂದೆ ನೋಡನೆಂದು ತಿಳಿದು, ಆಕೆಯನ್ನು ಬಹು ಜಾಗರೂಕತೆಯಿಂದ ಕಾಯಬೇಕೆಂದು ಬೇಗಮೆಯು ನಿಶ್ಚಯಿಸಿದಳು. ಇಷ್ಟೆಲ್ಲ ಆದಮೇಲೆ ಬಾದಶಹನು ಉದೇಪುರಿಯ ಮಂದಿರದಿಂದ ಹೊರಟು, ಸಾದತಖಾನನ ಸಹಾಯಕ್ಕೆ ಯಾರನ್ನು ಕಳಿಸಬೇಕು, ಸೈನ್ಯವನ್ನು ಎಲ್ಲಿಂದ ಕೂಡಿಸಬೇಕು, ಎಂದು ಆಲೋಚಿಸಹತ್ತಿದನು. ರಜಪೂತರ ಸಿದ್ಧತೆಯು ಒತ್ತರದಿಂದ ನಡೆದಿರುವದನ್ನು ಕೇಳಿ ಆತನು ಚಿಂತೆಗೊಳಗಾದನು.

## ೧೬ನೆಯ ಪ್ರಕರಣ

# ಕ್ರೂರತನ

ತಾನು ಒಡ್ಡಿದ ಬಲೆಯೊಳಗಿಂದ ಉದೇಪುರಿಯನ್ನು ಬಿಡಿಸಿದ್ದಕ್ಕಾಗಿ ರೋಷನಾರಳು ಇಂದಿರೆಯ ಮೇಲೆ ಬೆಂಕಿಯನ್ನು ಕಾರಹತ್ತಿದಳು. ಇಂದಿರೆಯ ಸೇಡುತೀರಿಸಿಕೊಂಡ ಹೊರತು, ಆ ದುಷ್ಟ ರೋಷನಾರಳಿಗೆ ಸಮಾಧಾನವಾಗಲೊಲ್ಲದು. ಆಕೆಯು ಹೊಂಚುಹಾಕಿ ತನ್ನ ಫರುಕ್‌ಶಾಯರನ ಸಹಾಯದಿಂದ ಇಂದಿರೆಯನ್ನು ಉದೇಪುರಿಯ ಅಂತರ್ಗೃಹದೊಳಗಿಂದ ಯಾರಿಗೂ ಗೊತ್ತಾಗದಂತೆ ರಾತ್ರಿ ಹೊರಿಸಿ ತರಿಸಿ ಸೆರೆಯಲ್ಲಿಟ್ಟಳು. ಅತ್ತ ಉದೇಪುರಿಯು, ಒಮ್ಮಿಂದೊಮ್ಮೆ ಇಂದಿರೆಯು ಅಂತರ್ಗೃಹದಲ್ಲಿ ಕಾಣದ ಹಾಗೆ ಆದದ್ದರಿಂದ ಅಸಮಾಧಾನಪಟ್ಟಳು. ತನ್ನನ್ನು ಪ್ರಾಣಸಂಕಟದಿಂದ ಉಳಿಸಿದ ಇಂದಿರೆಯನ್ನು ಬಂಧಮುಕ್ತಮಾಡಿ ಕೃತಜ್ಞತೆಯನ್ನು ವ್ಯಕ್ತಮಾಡಬೇಕೆಂದು ಸರಳ ಹೃದಯದ ಆ ಉದೇಪುರಿಯು ಯೋಚಿಸಿದ್ದಳು. ಇಂದಿರೆಯ ಹಲವು ಸದ್ಗುಣಗಳು ಉದೇಪುರಿಯ ಮನಸ್ಸನ್ನು ಕರಗಿಸಿದ್ದವು. ಈ ಸ್ಥಿತಿಯಲ್ಲಿ ಉದೇಪುರಿಯು ಮನಃಪೂರ್ವಕವಾಗಿ ಇಂದಿರೆಯ ಶೋಧ ಮಾಡಿಸಿದ್ದು ಆಶ್ಚರ್ಯವಲ್ಲ. ಆಕೆಯು ಬಾದಶಹನಿಗೆ ಈ ಸುದ್ದಿಯನ್ನು ತಿಳಿಸಿ, ನನ್ನ ಇಂದಿರೆಯನ್ನು ಹುಡುಕಿಸಿ ಕೊಟ್ಟಹೊರತು ನನಗೆ ಸಮಾಧಾನವಾಗದೆಂದು ಹೇಳಿದಳು. ಅದಕ್ಕೆ ಬಾದಶಹನು— ಪ್ರಿಯೇ, ಇಂದಿರೆಯನ್ನು ಎರಡನೆಯವರು ನಿನ್ನ ಅಂತರ್ಗೃಹದೊಳಗಿಂದ ಹೊರಡಿಸಿಕೊಂಡು ಹೋಗುವದು ಶಕ್ಯವಲ್ಲ. ಉಪಾಯಕೋವಿದಳಾದ ಆ ಇಂದಿರೆಯು,

ತಾನಾಗಿಯೇ ಪಾರಾಗಿ ಹೋಗಿರಬಹುದು. ನಿನ್ನಂಥ ಸಜ್ಜನಳನ್ನು ವಂಚಿಸುವದು ಆಕೆಗೆ ಕಠಿಣವಲ್ಲ. ಇಂದಿರೆಯ ಯೋಗ್ಯತೆಯೇನು ? ಇಂದಿರೆಯು ಹೋದರೆ ಇನ್ನು ರೂಪಮತಿಯು ನಿನ್ನ ದಾಸಿಯಾಗುವಳು. ದಾಸಿಯನ್ನು ಹುಡುಕುತ್ತ ಕುಳಿತುಕೊಳ್ಳಲಿಕ್ಕೆ ಇದು ಸಮಯವಲ್ಲ. ಇಡಿಯ ರಜಪೂತಸ್ಥಾನವು ನನ್ನ ವಿರುದ್ಧವಾಗಿ ತೋಳುತಟ್ಟಿ ನಿಲ್ಲಲು ಸಿದ್ಧವಾಗುತ್ತಿರುವಂತೆ ತೋರುತ್ತದೆ. ಕೇವಲ ರೂಪಮತಿಯನ್ನು ಸೆರೆಹಿಡಕೊಂಡು ಬಂದು ನನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿಕೊಳ್ಳುವದಕ್ಕಾಗಿಯೇ ಅಲ್ಲ, ಬಾದಶಾಹಿಯ ಗೌರವವನ್ನು ಕಾಯುವದಕ್ಕಾಗಿ ನಾನು ಈಗ ರಜಪೂತರೊಡನೆ ನನ್ನ ಬಲವನ್ನೆಲ್ಲ ಒಟ್ಟುಗೂಡಿಸಿ ಜಾಗ್ರತೆಯಿಂದ ಯುದ್ಧಮಾಡಬೇಕಾಗಿದೆ. ಸಾದತಖಾನನಿಂದ ಈ ಕಠಿಣಕಾರ್ಯವು ಸಾಧಿಸಲಾರದು. ಬೇರೆಯವರನ್ನು ಸಹಾಯಕ್ಕೆ ಕಳಿಸಿದರೂ ಈ ಕಾರ್ಯವು ನೀಗದು; ಆದ್ದರಿಂದ ನಾನೇ ನನ್ನ ಪ್ರಚಂಡ ಸೈನ್ಯದೊಡನೆ ರಜಪೂತಸ್ಥಾನದ ಮೇಲೆ ಸಾಗಿಹೋಗುವೆನು, ನೀನೂ ಬರುವೆಯಷ್ಟೆ? ಇಂದಿರೆಯ ಮೇಲಿರುವ ನಿನ್ನ ವಿಶ್ವಾಸವನ್ನು ನಾನು ಬಲ್ಲೆನು. ಯುದ್ಧಕ್ಕೆ ಹೊರಡಲು ಮೂರುದಿನಗಳ ಅವಕಾಶವಿರುವದರಿಂದ ಅಲ್ಲಿಯವರೆಗೆ ಇಂದಿರೆಯ ಶೋಧವನ್ನು ಮಾಡಿಸುವೆನು, ನೀನು ಅಸಮಾಧಾನ ಪಡಬೇಡ, ಅನ್ನಲು, ಉದೇಪುರಿಯು ಬಾದಶಹನನ್ನು ಕುರಿತು—ಖಾವಿಂದ, ಇಂದಿರೆಯು ದಾಸಿಯಲ್ಲ, ನನ್ನ ಪ್ರಾಣದಾತ್ರಿಯು. ಇರಲಿ, ತಾವು ಶೋಧಮಾಡಿಸುವೆನೆಂದು ಹೇಳುವಮಾತಿನಲ್ಲಿ ನಾನು ಸಂಪೂರ್ಣ ವಿಶ್ವಾಸವಿಟ್ಟು ಸಮಾಧಾನ ಪಡುವೆನು; ಆದರೆ ತಾವು “ ನನ್ನ ಸಂಗಡ ಬರುವಿಯಷ್ಟೆ ” ಎಂದು ಕೇಳಿದಿರಲ್ಲ ? ತಾವಿದ್ದಲ್ಲಿ ನಾನು. ತಾವಿಲ್ಲದೆ ಈ ಯಮಪುರಿಯಲ್ಲಿ ನಾನು ಯಾವ ಆಶೆಯಿಂದ ಇರಬೇಕು? ನಾನು ಒಬ್ಬಳೇ ಇದ್ದದ್ದಾದರೆ ರೋಷನಾರಳು ನನ್ನನ್ನು ಕೊಲ್ಲಿಸಲಿಕ್ಕೆ ಸಹ ಹಿಂದೆಮುಂದೆ ನೋಡಲಿಕ್ಕಿಲ್ಲ. ತ್ರಿಕರಣಪೂರ್ವಕವಾಗಿ ಪತಿಯನ್ನು ಆಶ್ರಯಿಸಿ, ಆತನು ಪರದೈವತವೆಂದು ತಿಳಿದು ಆತನನ್ನು ಅಗಲದೆ ಇರುವದು ಹಿಂದು ಸ್ತ್ರೀಯರ ಧರ್ಮವಾಗಿರುವದು; ಅಂದಬಳಿಕ ಖಾವಂದರವರ ಪ್ರಶ್ನವೇ ನನಗೆ ನಿಷ್ಠುರವಾಗಿ ತೋರುತ್ತದೆ. ಹ್ಯಾಗೇ ಇರಲಿ, ತಮ್ಮ ಸಂಗಡ ದಂಡಯಾತ್ರೆಗೆ ನಾನು ನಿಶ್ಚಯವಾಗಿ ಬರತಕ್ಕವಳು.

ಪತಿಯೊಡನೆ ಯುದ್ಧಕ್ಕೆ ಹೊರಡುವ ವಿಚಾರದಲ್ಲಿ ಉದೇಪುರಿಯು ಇಂದಿರೆಯ ಹಂಬಲವನ್ನು ಕೆಲಮಟ್ಟಿಗೆ ಮರೆತಳೆಂದು ಹೇಳಬಹುದು. “ಯುದ್ಧಕ್ಕೆಹೊರಡುವವರೆಗೆ ನಿನ್ನ ಇಂದಿರೆಯ ಶೋಧಮಾಡಿಸುತ್ತೇನೆ”ಂದು ಹೆಂಡತಿಯ ಸಮಾಧಾನಕ್ಕಾಗಿ ಹೇಳಿದ ಬಾದಶಹನು, ಯುದ್ಧದ ಸಿದ್ಧತೆಯ ಗದ್ದಲದಲ್ಲಿ ಮನಃಪೂರ್ವಕವಾಗಿ ಶೋಧನದ ಕಾರ್ಯವನ್ನು ಸಾಗಿಸಲಿಲ್ಲ. ಗೊತ್ತಾದಂತೆ ಮೂರನೆಯ ದಿವಸ ಆತನ ಪ್ರಚಂಡಸೈನ್ಯವು ದಿಲ್ಲಿಯಿಂದ ಹೊರಟಿತು. ದಿಲ್ಲಿಯು ಪಟ್ಟಣದಿಂದ ಇಪ್ಪತ್ತು ಹರದಾರಿ ಹೋಗುವವರೆಗೆ ಬೀಡು ಬಿಡಲಾಗದೆಂದು ಬಾದಶಹನು ಅಪ್ಪಣೆ ಮಾಡಿದ್ದನು. ಔರಂಗಜೇಬನ ಪ್ರಚಂಡ ಸೈನ್ಯದ ಕಲ್ಪನೆಯು ಯಾರಿಗೂ ಆಗದು. ಸೈನ್ಯವು ತಳವೂರಿದರೆ ಅದು ಒಂದು ಪಟ್ಟಣದ ಸ್ವರೂಪವನ್ನು ಹೊಂದುತ್ತಿತ್ತು. ಒಬ್ಬ ಫ್ರೇಂಚ ಗ್ರಂಥಕಾರನ ವರ್ಣನದ ತಾತ್ಪರ್ಯವೇನಂದರೆ—“ಔರಂಗಜೇಬನ ದಂಡಿನಲ್ಲಿ ಮನುಷ್ಯರ ಸಂಖ್ಯೆಯಾದರೂ ಎಷ್ಟಿರುತ್ತದೆಂದು ಕೇಳಿದರೆ, ಅದನ್ನು ಇಷ್ಟೇ ಎಂದು ಹೇಳುವದು ಅಸಾಧ್ಯವು. ಆ ದಂಡಿನಲ್ಲಿ ಕುದುರೆಯಮೇಲೆ ಕುಳಿತುಕೊಳ್ಳುವವರು ಸುಮಾರು ಒಂದು ಲಕ್ಷ ಜನರಿದ್ದರೆಂತಲೂ, ಆನೆ–ಕುದುರೆ–ಹೇಸರಗತ್ತೆಗಳು ಕೂಡಿ ಒಂದುವರೆ ಲಕ್ಷವಿದ್ದವೆಂತಲೂ ಹೇಳಿದರೆ ಅತಿಶಯೋಕ್ತಿಯಾಗದು. ಇವುಗಳ ಹೊರತು ಸುಮಾರು ಐವತ್ತುಸಾವಿರ ಒಂಟೆಗಳೂ, ಅಷ್ಟೇ ಎತ್ತುಗಳೂ – ಬಾಜಾರಬುಣಗಿನವರ ದನಕರಗಳೂ ಆತನ ದಂಡಿನಲ್ಲಿ ಇರುತ್ತಿದ್ದವು! ಬಾಜಾರಬುಣಗಿನಲ್ಲಿ ವ್ಯಾಪಾರಸ್ಥರೇ ಮೊದಲಾದವರು ತಮ್ಮ ಹೆಂಡರುಮಕ್ಕಳನ್ನು ಕೂಡಿಕೊಂಡು ಬರುತ್ತಿದ್ದರು! ಆಳುಹೋಳುಗಳ ಗೊಂದಲವನ್ನಂತು ವರ್ಣಿಸಲಾಸಲ್ಲ. ಒಬ್ಬ ರಾವುತನ ಬಳಿಯಲ್ಲಿ ಮೂವರು ಸೇವಕರು ಇರುತ್ತಿದ್ದರು. ಎಷ್ಟೋಜನರ ಮತದಂತೆ ದಂಡಿನೊಳಗಿನ ಯಾವತ್ತು ಜನರ ಲೆಕ್ಕವು ನಾಲ್ಕು ಲಕ್ಷವಾಗುವದು. ಯಾವತ್ತು ದಿಲ್ಲಿ ಪಟ್ಟಣದೊಳಗಿನ ಅರ್ಧಕ್ಕರ್ಧ ವಸತಿಯು ದಂಡಿನಲ್ಲಿತ್ತೆಂದು ಹೇಳಿದರೆ ಎಷ್ಟು ಮಾತ್ರವೂ ಅತಿಶಯೋಕ್ತಿಯಾಗದು.” ಈ ವರ್ಣನದಂತೆ ಜನಸಂಖ್ಯೆಯು ಸದ್ಯಕ್ಕೆ ಔರಂಗಜೇಬನ ದಂಡಿನಲ್ಲಿ ಇತ್ತೆಂದು ಹೇಳಲಾಗುವದಿಲ್ಲ; ಯಾಕಂದರೆ ಸದ್ಯಕ್ಕೆ ಆತನ ದಂಡು ದಕ್ಷಿಣ ಹಿಂದುಸ್ಥಾನವೇ ಮೊದಲಾದ ಬೇರೆಬೇರೆ ನಿಟ್ಟುಗಳ ಕಡೆಗೆ ಯುದ್ಧಕ್ಕೆ ಹೋಗಿತ್ತು.

ಮನೆಯಲ್ಲಿ ಹರಕಮುರಕ ಆಯುಧವಿದ್ದವರೂ, ಹತ್ತಲಿಕ್ಕೆ ಕುದುರೆಯಿದ್ದ ವರೂ ಯುದ್ಧಕ್ಕೆ ಹೊರಟಿದ್ದರು; ಯಾಕಂದರೆ ಯುದ್ಧಕ್ಕೆ ಎದುರಾಗಲಿ— ಎದುರಾಗದಿರಲಿ, ದಂಡಿನಲ್ಲಿದ್ದವರ ಚಕ್ಕಂದವು ಹೆಚ್ಚುತ್ತಿತ್ತು. ಹ್ಯಾಗಾ ದರೂ ಮಾಡಿ ರಜಪೂತರನ್ನು ಹೆದರಿಸಬೇಕೆಂದು ಔರಂಗಜೇಬನು ಮಾಡಿ ದ್ದನು. ತನ್ನ ಪ್ರಚಂಡ ಸೈನ್ಯವನ್ನು ನೋಡಿದ ಮಾತ್ರದಿಂದ ರಜಪೂತರು ಕೈಕಾಲುಗೆಟ್ಟು ಹಿಂದಕ್ಕೆ ಸರಿದಬಳಿಕ, ತಾನು ಅವರನ್ನು ಹಣ್ಣಿಗೆ ತರ ಬೇಕೆಂದು ಆತನು ಬಗೆದಿದ್ದನು. ಆತನು ತನ್ನ ಪ್ರಚಂಡ ಸೈನ್ಯವು ದಿಲ್ಲಿ ಯಿಂದ ಸಾಗಿಹೋದ ಮರುದಿವಸ ಉದೇಪುರಿಯು ಬೇಗಮೆಯೊಡನೆ ಸಸೈನ್ಯ ನಾಗಿ ದಿಲ್ಲಿಯಿಂದ ಹೊರಟನು.

ಔರಂಗಜೇಬನು ದಿಲ್ಲಿಯಿಂದ ಹೊರಟುಹೋದದ್ದರಿಂದ ಆತನ ದರ್ಪದ ಕಸುವು ಅಲ್ಲಿ ಕೆಲಮಟ್ಟಿಗೆ ಕುಗ್ಗಿದಂತಾಯಿತು. ರೋಷನಾರಳು ಇಂದಿರೆಯ ಸೇಡು ತೀರಿಸಿಕೊಳ್ಳಲಿಕ್ಕೆ ಸಿದ್ಧಳಾದಳು. ನಯನಪಾಲನೂ , ದುರ್ಗಾದಾಸನೂ ಬಂಧಮುಕ್ತವಾಗಲು ಯತ್ನಿಸತೊಡಗಿದರು. ರೋಷ ನಾರಳು ತನ್ನ ಜನಾನಖಾನೆಯ ಆವಾರಗೋಡೆಯನ್ನು ಒತ್ತಟ್ಟಿಗೆ ತೋಡಿಸಿ, ಅದರಲ್ಲಿ ಇಂದಿರೆಯನ್ನು ಸೇರಿಸಿ ಮತ್ತೆ ಯಥಾಸ್ಥಿತವಾಗಿ ಗೋಡೆಯನ್ನು ಕಟ್ಟಿಸಬೇಕೆಂದು ಮಾಡಿದಳು. ಅದರಂತೆ ಆಕೆಯು ಫರುಕ್‌ಶಾಯರನಿಗೆ ಆಜ್ಞಾಪಿಸಿದ್ದರಿಂದ ಆತನು ಆ ಭಯಂಕರ ಕೆಲಸವನ್ನು ಕೊನೆಗಾಣಿಸುವ ಸಿದ್ಧತೆಯಲ್ಲಿ ತೊಡಗಿದನು; ಆದರೆ ಆ ಸ್ವಾಮಿಭಕ್ತಳಿಗೆ ಅಂಥ ಭಯಂಕರ ಮರಣವೊದಗುವದು ದೇವರ ಮನಸ್ಸಿಗೆ ಬರಲಿಲ್ಲ. ಆಕೆಯನ್ನು ಕಾಬೂಲದ ಹಾದಿಯಲ್ಲಿ ಪರಿಪರಿಯಿಂದ ಕಾಡಿದ ನಯನಪಾಲನೂ, ಆಕೆಯ ಅಣ್ಣ ನಾದ ದುರ್ಗಾದಾಸನೂ ಆಕೆಯ ಈ ದುರ್ಮರಣವನ್ನು ತಪ್ಪಿಸಿದರು. ನಯನಪಾಲನು ಆಕೆಯ ದುಃಖನಿವಾರಣ ಮಾಡಿದನೆಂಬ ಮಾತು ವಾಚಕ ರಿಗೆ ಆಶ್ಚರ್ಯಕರವಾಗಿ ತೋರಬಹುದು; ಆದರೆ " ಜತೆಯಂತೆಮತಿಯೆ"ಂಬ ದೊಡ್ಡವರ ಮಾತನ್ನು ಮನಸ್ಸಿನಲ್ಲಿ ತಂದರೆ, ಇಂದಿರೆ– ದುರ್ಗಾದಾಸರಂಥ ಸ್ವಾಮಿಭಕ್ತ ಸುಶೀಲರ ಸಹವಾಸದಿಂದ ನಯನಪಾಲನ ಮನಸ್ಸಿನಸ್ಥಿತಿಯು ಬದಲಾದದ್ದು ಅಸಂಭವವಲ್ಲ. ಇಂದಿರೆಯಂಥ ಯಃಕಶ್ಚಿತ ಸ್ತ್ರೀಯು ಕೇವಲ ಸ್ವಾಮಿಭಕ್ತಿಯಿಂದ ಜೋಧಪುರದ ರಾಜ್ಯದ ರಕ್ಷಣಮಾಡುತ್ತಿರಲು,

ಜೋಧಪುರದ ರಾಜಮನೆತನಕ್ಕೆ ಸಂಬಂಧಿಸಿದ ಮೊಸೆಹೊತ್ತ ಗಂಡಸು ತಾನು, ಮೊಗಲರ ಸೇವಕನಾಗಿ ಜೋಧಪುರದ ರಾಜವಂಶದ ನಾಶಕ್ಕೆ ಹೆಣಗುವದು ಲಜ್ಜಾಸ್ಪದವೆಂದು ಆತನು ಪಶ್ಚಾತ್ತಾಪಪಟ್ಟನು. ತಾನು ಕುಲಾಭಿಮಾನವನ್ನು ತ್ಯಜಿಸಿ ಔರಂಗಜೇಬನ ಸೇವೆಯನ್ನು ಮಾಡಿದರೂ, ಆತನು ತನ್ನನ್ನು ತುಚ್ಛೀಕರಿಸಿ ಸೆರೆಯಲ್ಲಿ ಹಾಕಿದ್ದರಿಂದ ನಯನಪಾಲನ ಸ್ವಾಭಿಮಾನವು ಜಾಗ್ರತವಾಗಿ ಆತನು ಮೊಗಲರ ಸೇವೆಗೆ ಹೇಸಿ, ಇನ್ನು ಜನ್ಮವಿರುವತನಕ ತನ್ನ ಜನ್ಮಭೂಮಿಯಾದ ಜೋಧಪುರದ ಸೇವೆಯಲ್ಲಿ ದೇಹವನ್ನು ಸವಿಸಬೇಕೆಂದು ನಿಶ್ಚಯಿಸಿದನು. ಆತನು ಮೊದಲು ಇಂದಿರೆ ದುರ್ಗಾದಾಸರನ್ನು ಬಂಧಮುಕ್ತಮಾಡಿ ಅವರ ಕ್ಷಮೆ ಬೇಡಿಕೊಂಡು ಅವರೊಡನೆ ಸ್ವಾಮಿಸೇವೆಯನ್ನು ಕೈಕೊಳ್ಳಬೇಕೆಂದು ಆತುರ ಪಟ್ಟನು. ಧನಿಕನಾದ ನಯನಪಾಲನಿಗೆ ಸೆರೆಮನೆಯಿಂದ ಮುಕ್ತವಾಗಲಿಕ್ಕೆ ವಿಲಂಬವಾಗಲಿಲ್ಲ. ಆತನು ಪೂರ್ವ ಪರಿಚಿತರಾದ ಕಾವಲುಗಾರರ ಕೈಬೆಚ್ಚಗೆ ಮಾಡಿ ಸೆರೆಮನೆಯಿಂದ ಹೊರಬಿದ್ದನು. ಆತನು ಮುಸಲ್ಮಾನ ಸಾಧುವಿನ ಸೋಗು ಹಾಕಿಕೊಂಡು ರೋಷನಾರಳ ಅಂತರ್ಗೃಹವನ್ನು ಪ್ರವೇಶಿಸಿ ಸಾಮುದ್ರಿಕ, ಯಂತ್ರ-ತಂತ್ರಗಳ ಆಶೆಯಿಂದ ಫರುಕ್‌ಶಾಯರನ ಮನಸ್ಸನ್ನು ಒಲಿಸಿಕೊಂಡು, ಇಂದಿರೆಯ ಮರಣದ ಭಯಂಕರ ಪ್ರಕಾರವನ್ನು ಅರಿತುಕೊಂಡನು. ಆತನಿಗೆ ಒಬ್ಬ ನಂಬಿಗೆಯ ಮನುಷ್ಯನ ಸಹಾಯದ ಅವಶ್ಯಕತೆಯಿತ್ತು. ಆತನು ಒಂದುದಿನ ದಿಲ್ಲಿಯ ಬೀದಿಯನ್ನು ಹಿಡಿದು ಮುಸಲ್ಮಾನ ಸಾಧುವಿನ ವೇಷದಿಂದ ಸಾಗಿರಲು, ಮೊಗಲ ಸಿಪಾಯಿಯ ವೇಷದಿಂದ ಸಾಗಿದ್ದ ದುರ್ಗಾದಾಸನು ಆತನ ಕಣ್ಣಿಗೆ ಬಿದ್ದನು. ಅವಸರದಿಂದ ಸಾಗಿದ್ದ ದುರ್ಗಾದಾಸನಿಗೆ ಸಾಧುವೇಷಧಾರಿಯಾದ ನಯನಪಾಲನ ಗುರುತು ಹತ್ತಲಿಲ್ಲ; ಆದರೆ ಇಂದಿರೆ-ದುರ್ಗಾದಾಸರ ವಿಷಯವಾಗಿ ಪೂಜ್ಯಬುದ್ಧಿಯುಳ್ಳ ನಯನಪಾಲನು, ದುರ್ಗಾದಾಸನ ಗುರುತು ಹಿಡಿದು, " ದುರ್ಗಾದಾಸಜೀ " ಎಂದು ಕೂಗಿದನು. ಅದನ್ನು ಕೇಳಿ, ದುರ್ಗಾದಾಸನು ಬೆಟ್ಟಬಿದ್ದು ನಯನಪಾಲನ ಕಡೆಗೆ ತಿರುಗಿ ನೋಡಿದನು. ಆ ಮೇಲೆ ಅವರಿಬ್ಬರು ಏಕಾಂತಸ್ಥಳಕ್ಕೆ ಹೋದರು. ಮೊದಲಿಗೆ ನಯನಪಾಲನ ವಿಶ್ವಾಸವು ದುರ್ಗಾದಾಸನಿಗೆ ಆಗಲಿಲ್ಲ; ಆದರೆ ನಯನಪಾಲನು ಪ್ರತಿಜ್ಞಾಪೂರ್ವಕವಾಗಿ ತನ್ನ ಪಶ್ಚಾತ್ತಾಪ

ವನ್ನು ಪ್ರಕಟಮಾಡಿ ಇಂದಿರೆಯ ವೃತ್ತಾಂತವನ್ನು ಹೇಳಿದನು. ತಂಗಿಯು ಭೋಗಿಸಬೇಕಾಗಿದ್ದ ಭಯಂಕರ ಮರಣದಿಂದ ಆಕೆಯನ್ನು ಉಳಿಸುವ ದಕ್ಕಾಗಿ ನಯನಪಾಲನು ಮನಃಪೂರ್ವಕವಾಗಿ ಯತ್ನಿಸಿದ್ದನ್ನು ನೋಡಿ, ದುರ್ಗಾದಾಸನು ತನ್ನ ಆ ಪೂರ್ವದ ವೈರಿಯ ಮೇಲೆ ವಿಶ್ವಾಸವನ್ನು ತಾಳಿದನು. ಅವರಿಬ್ಬರ ಮನಸ್ಸುಗಳು ಶುದ್ಧವಾಗಿ ಒಂದಾದವು. ನಯನಪಾಲನು ಫರುಕ್‌ಶಾಯರನನ್ನು ಒಡಕೊಂಡು, ಗೋಡೆತೋಡಲಿಕ್ಕೆ ತಮ್ಮಿಬ್ಬರನ್ನು ಕರಕೊಂಡು ಹೋಗಬೇಕೆಂದು ಹೇಳಿ, ತಾನೂ ದುರ್ಗಾದಾಸನೂ ಕೂಲಿಕಾರರ ವೇಷದಿಂದ ರೋಷನಾರಳ ಜನಾನಖಾನೆಯನ್ನು ಸೇರಿದರು. ಫರುಕ್‌ಶಾಯರನು ಅವರ ಕಣ್ಣು ಕಟ್ಟಿ ಕರಕೊಂಡುಹೋದದ್ದರಿಂದ ಹಾದಿಯ ಸ್ಮರಣವು ಅವರಿಗುಳಿಯಲಿಲ್ಲ.

ಅವರು ಒಳಗೆ ಹೋದ ಬಳಿಕ ರೋಷನಾರಳು ಅಲ್ಲಿಗೆ ಬಂದಳು. ಆಕೆಯು ವೇಷಧಾರಿಗಳಾದ ದುರ್ಗಾದಾಸನನ್ನೂ, ನಯನಪಾಲನನ್ನೂ ತನ್ನ ಹದ್ದಿನ ಕಣ್ಣುಗಳಿಂದ ನೋಡಿದಳು. ಸುದೈವದಿಂದಲೇ ಆ ವೇಷಧಾರಿಗಳು ಆಕೆಯ ಕೈಯೊಳಗಿಂದ ಪಾರಾದರೆಂದು ಹೇಳಬಹುದು. ರೋಷನಾರಳು ತೋರಿಸಿದ ಕಡೆಯಲ್ಲಿ ಆ ವೇಷಧಾರಿಗಳಾದ ಕೂಲಿಕಾರರು ಗೋಡೆಯನ್ನು ಅಗಿಯಹತ್ತಿದರು. ರೋಷನಾರಳು ಕೆಲವು ಹೊತ್ತು ನಿಂತುಕೊಂಡು ತೋಡುವದು ಮುಗಿಯುತ್ತ ಬಂದ ಸಂಧಿಯಲ್ಲಿ ಸ್ವಲ್ಪ ಒಳಗೆ ಹೋದಳು. ಆಗ ದುರ್ಗಾದಾಸ-ನಯನಪಾಲರು ಒಂದು ಮೂಲೆಯಲ್ಲಿ ಗೋಡೆಯನ್ನು ಆರುಪಾರು ತೋಡಿದರು. ನಯನಪಾಲನು ಆ ಖಿಂಡಿಯಲ್ಲಿ ತಲೆಯನ್ನು ಹಾಕಿ ಆಚೆಗೆ ನೋಡಲು, ಯಮುನಾನದಿಯು ಕಾಣಿಸಿತು. ಅದನ್ನು ನೋಡಿ ಅವನಿಗೆ ಬಹಳ ಸಮಾಧಾನವಾಯಿತು. ಆತನು ಆ ಸ್ಥಳದ ಗುರುತುಮಾಡಿಕೊಂಡು ತನ್ನ ತಲೆಯನ್ನು ತಕ್ಕೊಂಡನು. ನೆವಕ್ಕೆ ನಾಲ್ಕು ಕಲ್ಲುಗಳನ್ನು ಏರಿಸಿ ಖಿಂಡಿಯನ್ನು ಮುಚ್ಚಿದಂತೆ ಮಾಡಿದರು. ಅಷ್ಟರಲ್ಲಿ ರೋಷನಾರಳು ಅಲ್ಲಿಗೆ ಬಂದು, ಇನ್ನು ಗೋಡೆ ಅಗಿಯುವದು ಸಾಕೆಂದು ಹೇಳಿದಳು. ಅತ್ತ ಸಿದ್ದಿಗುಲಾಮರು ಇಂದಿರೆಯನ್ನು ಎಳೆತಂದರು. ಆಕೆಯು ತೀರ ಹಣ್ಣಾಗಿದ್ದಳು. ಏಳುವ ತ್ರಾಣವು ಕೂಡ ಅವಳಿಗಿದ್ದಿಲ್ಲವೆಂದು ಹೇಳಬಹುದು. ಆಕೆಯನ್ನು ನೋಡಿ ದುರ್ಗಾದಾಸನಿಗೂ,

ನಯುನಪಾಲನಿಗೂ ಬಹಳ ವ್ಯಸನವಾಯಿತು. ಈ ಸಂಕಟದೊಳಗಿಂದ ಈಕೆಯನ್ನು ಹ್ಯಾಗೆ ಪಾರಮಾಡಬೇಕೆಂದು ಅವರು ಯೋಚಿಸತೊಡಗಿದರು. ಒಂದು ಉಪಾಯವೂ ಅವರಿಗೆ ಸಂಭವನೀಯವಾಗಿ ತೋರಲಿಲ್ಲ; ಆದರೆ ಅವರು ಪಿಟ್ಟೆಂದು ಮಾತಾಡದೆ, ನಿಂತಲ್ಲಿ ನಿಂತುಕೊಂಡಿದ್ದರು. ರೋಷನಾರಳು ಇನ್ನು ಅಪ್ಪಣೆಯನ್ನು ಕೊಡತಕ್ಕವಳು, ಅಷ್ಟರಲ್ಲಿ ಫರುಕ್‍ಶಾಯುರನು ಆಕೆಯ ಕಿವಿಯ ಹತ್ತರ ಹೋಗಿ ಏನೋ ಮೆಲ್ಲನೆ ಹೇಳಿದನು. ಅದನ್ನು ಕೇಳಿ ರೋಷನಾರಳು ಸಂಶಯದ ಮುದ್ರೆಯಿಂದ ನಯುನಪಾಲನನ್ನು ನೋಡಿ--ಇನ್ನು ಇಬ್ಬರ ಕೆಲಸವಿಲ್ಲ, ಒಬ್ಬನು ಸಾಕು. ಈ ಗಡ್ಡದವನನ್ನು ಹೊರಗೆ ಕಳಿಸು, ಎಂದು ಹೇಳಿದಳು. ಅಪ್ಪಣೆಯಾಗುವದೊಂದೆ ತಡ, ಫರುಕ್‍ಶಾಯುರನು ಕೂಡಲೆ ನಯುನಪಾಲನನ್ನು ಹೊರಗೆ ಕರಕೊಂಡು ಹೋದನು. ಇತ್ತ ರೋಷನಾರಳು ತೋಡಿದ ಗೋಡೆಯಲ್ಲಿ ಇಂದಿರೆಯನ್ನು ಸೇರಿಸಲು ಸಿದ್ದೀಜನರಿಗೆ ಆಜ್ಞಾಪಿಸಿದಳು. ಸಿದ್ದೀ ಜನರು ಆಕೆಯನ್ನು ಎತ್ತಿ ಗೋಡೆಯಲ್ಲಿ ಸೇರಿಸುತ್ತಿರಲು, ಆಕೆಯು ಕೆಟ್ಟದನಿಯಿಂದ ಚೀರಿದಳು. ಕೂಡಲೆ ದುರ್ಗಾದಾಸನು ಸಂತಾಪಗೊಂಡನು. ಆತನು ಈ ಮೊದಲೆ ನಯುನಪಾಲನೊಡನೆ ಆಲೋಚಿಸಿದ್ದನ್ನು ಮರೆತು, ಗುಲಾಮರ ಮೈಮೇಲೆ ಬಿದ್ದು ಅವರನ್ನು ಹಿಂದಕ್ಕೆ ದೂಡಿದನು. ಇದನ್ನು ನೋಡಿ ರೋಷನಾರಳು ಆಶ್ಚರ್ಯಪಟ್ಟು ಸಿಟ್ಟಿನಿಂದ ಉರಿಯುತ್ತ ಬಾಗಿಲಲ್ಲಿ ನಿಂತುಕೊಂಡಳು. ದುರ್ಗಾದಾಸನು ಒಳ್ಳೆಯ ವಿಚಾರಿಯಾದರೂ, ತಂಗಿಯ ದುರವಸ್ಥೆಯನ್ನು ನೋಡಿ ಆತನಮೈಮೇಲಿನ ಎಚ್ಚರವು ತಪ್ಪಿತು. ತನ್ನ ಕಣ್ಣೆದುರಿಗೆ ತಂಗಿಯು ಗೋಡೆಯಲ್ಲಿ ಸಿಕ್ಕು ಮರಣಹೊಂದುವದನ್ನು ನೋಡಿ ಯಾವ ಅಣ್ಣನು ಸಂತಾಪಗೊಳ್ಳಲಿಕ್ಕಿಲ್ಲ ? ನಯುನಪಾಲನೂ ದುರ್ಗಾದಾಸನೂ ಮಾಡಿದ ಯೋಚನೆಯು ಒತ್ತಟ್ಟಿಗೆ ಉಳಿಗು, ದುರ್ಗಾದಾಸನು ತನ್ನ ತಂಗಿಯ ಬಂಧವಿಮೋಚನಕ್ಕೆ ತಾನಾಗಿ ವಿಘ್ನವನ್ನು ತಂದುಕೊಂಡಂತಾಯಿತು. ಆಯುತ ಸಮಯದಲ್ಲಿ ನಯುನಪಾಲನು ಹೊರಟುಹೋದದ್ದರಿಂದ ದುರ್ಗಾದಾಸನು ಸಹಾಯ ರಹಿತನಾದನು. ಆತನು ನಯುನಪಾಲನೇ ತನ್ನನ್ನು ಮೋಸಗೊಳಿಸಿರಬೇಕೆಂದು ತರ್ಕಿಸಿದನು. ಮೊಗಲರ ಸೇವಕನಾದ ಆ ನೀಚನು ರೋಷನಾರಳ ಸಂಗಡ ಮೊದಲೇ ಆಲೋಚಿಸಿ ನನ್ನನ್ನು ಹಿಡಕೊಟ್ಟು ತಾನು

ಬೇಗವೆಯ ಅಪ್ಪಣೆಯಿಂದ ಹೊರಟುಹೋದವನಂತೆ ಹೋಗಿಬಿಟ್ಟನೆಂದು ದುರ್ಗಾದಾಸನು ಕಲ್ಪಿಸಿದನು.

ದುರ್ಗಾದಾಸನು ಸಿದ್ದೀಜನರ ಮೇಲೆ ಏರಿಹೋದ ಕೂಡಲೆ ರೋಷನಾರಳ ಸೇವಕರು ಅವನನ್ನು ಹಿಡಿದೆಳೆದು ಹೊಡೆದು ಹಣ್ಣುಮಾಡಿ ರೋಷನಾರಳ ಬಳಿಗೆ ಎಳೆದೊಯ್ದರು. ತೀಕ್ಷ್ಣದೃಷ್ಟಿಯ ರೋಷನಾರಳಿಗೆ ಕೂಡಲೆ ದುರ್ಗಾದಾಸನ ಗುರುತು ಹತ್ತಿತು. ಆಗ ಆಕೆಗಾದ ಆನಂದವನ್ನು ವರ್ಣಿಸಲಾಸಲ್ಲ. ಅಣ್ಣತಂಗಿಯರಿಬ್ಬರೂ ತನ್ನ ಕೈಯಲ್ಲಿ ಸಿಕ್ಕರೆಂದು ಆಕೆಯು ಹಿಗ್ಗಿದಳು. ಅತ್ತ ದುಃಖಾತಿಶಯದಿಂದ ಮೈಮರೆತು ಬಿದ್ದಿದ್ದ ಇಂದಿರೆಯು ಕೆಲವು ಹೊತ್ತಿನ ಮೇಲೆ ಎಚ್ಚತ್ತು ಕಣ್ದೆರೆದು ಸುತ್ತುಮುತ್ತು ನೋಡಲು, ಆಕೆಯ ಅಣ್ಣನು ಕಣ್ಣಿಗೆ ಬಿದ್ದನು. ಕೂಡಲೆ ಆಕೆಯು ಎದ್ದುನಿಂತು ಅಣ್ಣನನ್ನು ಅಪ್ಪಿಕೊಳ್ಳುವದಕ್ಕಾಗಿ ಮುಂದುವರಿಯಲು, ರೋಷನಾರಳು—ನಿಲ್ಲು ನಿಲ್ಲು ! ಇನ್ನು ಸ್ವಲ್ಪಹೊತ್ತಿನಲ್ಲಿ ನೀವಿಬ್ಬರು ಅಣ್ಣತಂಗಿಯರು ಸ್ಥಿರವಾದ ಆಲಿಂಗನವನ್ನು ಹೊಂದಿ ಮರಣಹೊಂದುವಿರಿ. ಸ್ವಲ್ಪತಡೆ, ಎಂದು ಇಂದಿರೆಯನ್ನು ಹಂಗಿಸಿದಳು. ಆಕೆಯು ಫರುಕ್‌ಶಾಯರಸಿಗೆ ಗೋಡೆಯನ್ನು ಇನ್ನಿಷ್ಟು ವಿಸ್ತಾರವಾಗಿ ತೋಡಿಸೆಂದು ಆಜ್ಞಾಪಿಸಿ, ಅವರು ತನ್ನ ಮನಸ್ಸಿನಂತೆ ತೋಡಿದ ಮೇಲೆ ಸಿದ್ದೀಜನರಿಗೆ—ಹಾ; ಸೇರಿಸಿರಿ ಇನ್ನು ಇವರಿಬ್ಬರನ್ನು ಗೋಡೆಯಲ್ಲಿ. ಮೊದಲು ದುರ್ಗಾದಾಸನನ್ನು ಗೋಡೆಯಲ್ಲಿ ಸೇರಿಸಿ, ಆ ಮೇಲೆ ಇಂದಿರೆಯನ್ನು ಸೇರಿಸಿರಿ, ಎಂದು ಅಜ್ಞಾಪಿಸಿದಳು. ಸಿದ್ದೀಜನರು ಹಾಗೆ ಮಾಡಹೋಗಲು, ದುರ್ಗಾದಾಸನು ಬೇಕಾದಷ್ಟು ಬಡದಾಡಿದನು. ಆದರೆ ಬಹುಜನ ಸಿದ್ದೀಜನರ ಮುಂದೆ ಅವನ ಆಟಸಾಗಲಿಲ್ಲ. ಬರಬರುತ್ತ ಕತ್ತಲಾಯಿತು. ದೀಪದ ಬೆಳಕಿನಲ್ಲಿ ಸಿದ್ದೀಜನರು ಮೊದಲು ದುರ್ಗಾದಾಸನನ್ನೂ, ಆ ಮೇಲೆ ಇಂದಿರೆಯನ್ನೂ ಗೋಡೆಯಲ್ಲಿ ಸೇರಿಸಿ, ಸರಿದಾಡದಂತೆ ಅವರನ್ನು ಗಟ್ಟಿಯಾಗಿ ಹಿಡಿದು ಗೋಡೆಯನ್ನು ಕಟ್ಟಹತ್ತಿದರು. ಗೋಡೆಯು ಮುಗಿಯುವವರೆಗೆ ಕ್ರೂರಳಾದ ಆ ರೋಷನಾರಳು ಕ್ರೂರವ್ಯಾಘ್ರಿಯಂತೆ ಕೆಟ್ಟಗಣ್ಣಿನಿಂದ ನೋಡುತ್ತ ಅಲ್ಲಿಯೇ ನಿಂತುಕೊಂಡಿದ್ದಳು. ಗೋಡೆ ಮುಗಿದ ಮೇಲೆ ಆಕೆಯು ಕೃತಕೃತ್ಯಳಾಗಿ ಮನಸ್ಸಿನಲ್ಲಿ ಆನಂದಪಡುತ್ತ ಅಂತರ್ಗೃಹವನ್ನು ಪ್ರವೇಶಿಸಿದಳು. ಗೋಡೆಯಲ್ಲಿ ಸಿಕ್ಕಿಕೊಂಡಿದ್ದ ಆ ಬಡ

ಪ್ರಾಣಿಗಳ ಗತಿಯೇನಾದೀತೆಂಬ ಅಂತಃಕರಣದ ವಿಚಾರವು, ಲೇಶವಾದರೂ ಆಕೆಯ ಮನಸ್ಸಿನಲ್ಲಿ ಬರಲಿಲ್ಲ. ಇತ್ತ ನಯನಪಾಲನು ಕೈಗೆ ಬಂದಂತೆ ಹಣ ವೆಚ್ಚಮಾಡಿ ಒಂದು ಡೋಣಿಯನ್ನೂ, ನಾಲ್ವರು ಗಟ್ಟಿಗರನ್ನೂ ಕರಕೊಂಡು ಯಮುನೆಯೊಳಗಿಂದ ವೇಗವಾಗಿ ಸಾಗಿಬಂದನು. ಆತನು ತಾನು ಮೊದಲು ಗುರುತುಮಾಡಿಕೊಂಡಿದ್ದ ಸ್ಥಳದ ಗೊತ್ತಿನಿಂದ ಗೋಡೆಯ ಭಾಗವನ್ನು ಗೊತ್ತುಹಿಡಿದು, ತಾನು ಮೊದಲು ತೋಡಿದ ಖಿಂಡಿಯನ್ನು ನೋಡಿ ಆನಂದಬಟ್ಟು ಆಳುಗಳೂ, ತಾನೂ ಕೂಡಿ ಬಡ ಬಡ ಗೋಡೆಯನ್ನು ಎಚ್ಚರದಿಂದ ಅಗಿಯಹತ್ತಿದರು. ಸ್ವಲ್ಪಹೊತ್ತಿನಲ್ಲಿ ದುರ್ಗಾದಾಸನು ಆತನ ಕೈಗೆ ಹತ್ತಿದನು. ಬಳಿಕ ಇಂದಿರೆಯು ಹತ್ತಿದಳು. ಆ ಇಬ್ಬರು ಅಣ್ಣತಂಗಿಯರು ಕೇವಲ ಶವಪ್ರಾಯರಾಗಿದ್ದರು. ಅವರು ಜೀವದಿಂದಿರುವ ಆಶೆಯು ನಯನಪಾಲನಿಗೆ ಉಳಿಯಲಿಲ್ಲ. ಆದರೂ ಆತನು ಅವರಿಬ್ಬರನ್ನು ಎತ್ತಿಕೊಂಡು ಹೋಗಿ, ಡೋಣಿಯಲ್ಲಿ ಮಲಗಿಸಿ ಒತ್ತರದಿಂದ ಡೋಣಿಯನ್ನು ಸಾಗಿಸಿದನು. ಡೋಣಿಯು ನದಿಯ ಮಧ್ಯಕ್ಕೆ ಬರಲು, ರಾತ್ರಿಯ ತಂಗಾಳಿಯಿಂದ ದುರ್ಗಾದಾಸನು ಎಚ್ಚತ್ತನು. ಅದನ್ನು ನೋಡಿ ನಯನಪಾಲನು ಸಂತೋಷಪಡುತ್ತಿರಲು, ಇಂದಿರೆಯೂ ಮಿಸುಕಾಡಹತ್ತಿದಳು. ಆಗ ನಯನಪಾಲನು ತನ್ನ ಶ್ರಮವು ಸಾರ್ಥಕವಾಯಿತೆಂದು ಸಮಾಧಾನಪಟ್ಟನು. ಕೆಲವು ಹೊತ್ತಿನ ಮೇಲೆ ಅಣ್ಣತಂಗಿಯರಿಬ್ಬರೂ ಎಚ್ಚತ್ತರು. ತಮ್ಮನ್ನು ಮೃತ್ಯುವಿನ ದವಡೆಯೊಳಗಿಂದ ನಯನಪಾಲನು ಪಾರಮಾಡಿದ್ದನ್ನು ನೋಡಿ ಆ ಬಂಧುಭಗಿನಿಯರು ಪರಮಾಶ್ಚರ್ಯಪಟ್ಟು, ಅವನ ವಿಷಯವಾಗಿ ಕೃತಜ್ಞರಾದರು. ಅವರು ತಮಗಾಗಿ ಮೂರು 'ಕುದುರೆಗಳನ್ನು ಸಂಪಾದಿಸಿ, ಆದಷ್ಟು ಬೇಗನೆ ದಿಲ್ಲಿಯಿಂದ ಹೊರಟು ರಜಪೂತಸ್ಥಾನದ ಕಡೆಗೆ ಸಾಗಿದರು. ಉದೇಪುರದ ರಾಜಸಿಂಹನು ಎಲ್ಲ ರಜಪೂತರನ್ನು ಒಟ್ಟುಗೂಡಿಸಿ ಔರಂಗಜೇಬನ ವೈಮೆತ್ತಗೆ ಮಾಡಲುದ್ಯೋಗಿಸಿದ್ದು ಅವರಿಗೆ ಗೊತ್ತಿತ್ತು. ಆ ದೇಶಾಭಿಮಾನದ ಕಾರ್ಯಕ್ಕೆತಮ್ಮಿಂದಾದಷ್ಟು ಸಹಾಯಮಾಡಬೇಕೆಂದು ಆ ಮೂವರು ಸಾಹಸಿಗರು ವೇಗವಾಗಿ ಮಾರ್ಗವನ್ನು ಕ್ರಮಿಸಹತ್ತಿದರು. ಅವರು ಔರಂಗಜೇಬನಿಗಿಂತ ಮೊದಲೆ , ಅಬೂಪರ್ವತದ ಬುಡವನ್ನು ಹೊಂದಿದರು. ನಿರ್ವಿಘ್ನದಿಂದ ತಾವು ಬಂದದ್ದಕ್ಕಾಗಿ ಅವರಿಗೆ ಪರಮಾನಂದ

ವಾಯಿತು. ಇಂದಿರೆಯು ಪುರುಷವೇಷವನ್ನು ಧರಿಸಿದ್ದಳು. ಅವರು ಪರ್ವತಶಿಖರವನ್ನೇರಿ ಅಚಲೇಶ್ವರನ, ಹಾಗು ವೈಕುಂಠಯೋಗಿಗಳ ದರ್ಶನ ವನ್ನು ತಕ್ಕೊಂಡು ಮುಂದಿನ ಕಾರ್ಯಕ್ಕೆ ಉಪಕ್ರಮಿಸಬೇಕೆಂದು ಪರ್ವತದ ಬುಡದಲ್ಲಿ ಕುದುರೆಗಳನ್ನು ಕಟ್ಟಿ, ಶಿಖರವನ್ನು ಏರಹತ್ತಿದರು.

## ೧೭ ನೆಯ ಪ್ರಕರಣ

# ಪಾಣಿಗ್ರಹಣ

ಪ್ರಿಯವಾಚಕರೇ, ರೂಪಮತಿಯ ಕಾಲಲ್ಲಿ ಉಂಟಾದ ಸಂಗ್ರಾಮದ ಪರಿಣಾಮವು ಏನಾಯಿತೆಂಬದನ್ನು ಇನ್ನು ವಿಚಾರ ಮಾಡೋಣ. ರೂಪ ಮತಿಯ ತಂದೆಯಾದ ವಿಜಯಸಿಂಹನು ಜೀವದ ಹಂಗುದೊರೆದು ಕಾದಲು ಸಿದ್ಧನಾಗಿದ್ದನು. ಇಡಿಯ ರಜಪೂತಸ್ಥಾನದ ಆದರಕ್ಕೆ ಪಾತ್ರನಾಗಿದ್ದ, ಆ ತರುಣ ರಾಜಸಿಂಹನು, ತನಗೆ ಸಹಾಯ ಮಾಡಬೇಕೆಂದು ಯಾವತ್ತು ರಜಪೂತರಿಗೆ ಪತ್ರಗಳನ್ನು ಬರೆದು, ಅವರು ಪತ್ರದಂತೆ ಸಂಗ್ರಾಮಕ್ಕೆ ಸಿದ್ಧ ವಾಗುತ್ತಿರಲು, ತಾನು ದಂಡಿನೊಡನೆ ವಿಜಯಸಿಂಹನಿಗೆ ಸಹಾಯಮಾಡುವ ದಕ್ಕಾಗಿ ಅವಸರದಿಂದ ಸಾಗಿಬರುತ್ತಲಿದ್ದನು. ಇತ್ತ ದುರ್ಗಾದಾಸ-ನಯನ ಪಾಲರೂ, ಇಂದಿರೆಯೂ ಪರಮ ಸಾಹಸದಿಂದ ತಮ್ಮ ಸಂಕಟಗಳನ್ನು ನೀಗಿ ಮಾರ್ಗಾಯಾಸವನ್ನು ಲಕ್ಷಿಸದೆ, ರಾಜಸಿಂಹನಿಗೆ ಸಹಾಯಮಾಡಿ ರಜಪೂತ ಸ್ಥಾನದ ಲಜ್ಜೆಯನ್ನು ಕಾಯುವದಕ್ಕಾಗಿ ತಮ್ಮಿಂದಾದಷ್ಟು ಹೆಣಗುವದಕ್ಕೆ ಸಿದ್ಧರಾಗಿ, ವೈಕುಂಠಯೋಗಿಗಳ ದರ್ಶನಕ್ಕಾಗಿ ಅಬೂಪರ್ವತದ ಶಿಖರ ವನ್ನೇರುತ್ತಲಿದ್ದರು. ಇತ್ತ ಪ್ರತಿಪಕ್ಷಿಯಾದ ಸಾದತಖಾನನು ತನ್ನ ಸೈನ್ಯ ವನ್ನು ಎರಡು ಭಾಗವಾಗಿ ವಿಭಾಗಿಸಿ, ಔರಂಗಜೇಬನ ದೊಡ್ಡ ಸೈನ್ಯವು ತನ್ನ ಸಹಾಯಕ್ಕೆ ಬರುತ್ತದೆಂಬ ಭ್ರಾಂತಿಯನ್ನು ರೂಪನಗರದ ಯಾವತ್ತು ಜನರಲ್ಲಿ ಉಂಟುಮಾಡುತ್ತಿರಲು, ಆಲಮಗೀರ ಬಾದಶಹನು ತನ್ನ ಪ್ರಚಂಡ

ಸೈನ್ಯದೊಡನೆ ತಾನೇ ವೇಗವಾಗಿ ಸಾಗಿಬರುತ್ತಲಿದ್ದನು. ರಾಜಸಿಂಹನು ತನ್ನ ಸಹಾಯಕ್ಕಾಗಿ ಬರುವನೆಂಬದು ವಿಜಯಸಿಂಹನಿಗೆ ಗೊತ್ತಾಗಿದ್ದಿಲ್ಲ; ರಜಪೂತಸ್ಥಾನದ ಉಳಿದ ರಜಪೂತರೂ ಆಲಮಗೀರನೊಡನೆ ಯುದ್ಧಕ್ಕೆ ಸಿದ್ಧರಾಗಿರುತ್ತಾರೆಂಬ ಸುದ್ದಿಯೂ ಆತನಿಗೆ ಹತ್ತಿದ್ದಿಲ್ಲ. ಪಾಪ ! ಸಾದತ ಖಾನನ ಬಲವಾದ ಮುತ್ತಿಗೆಯಲ್ಲಿ ಸಿಕ್ಕಿಕೊಂಡಿದ್ದ ಆತನಿಗೆ, ಈ ಹೊರಗಿನ ಸುದ್ದಿಗಳು ಹ್ಯಾಗೆ ಗೊತ್ತಾಗಬೇಕು ? ರಜಪೂತರು ಸ್ವಾರ್ಥಾಭಿಲಾಷೆಯಿಂದ ಹತವೀರ್ಯರಾದ್ದರಿಂದ ತನ್ನ ಸಹಾಯಕ್ಕೆ ಯಾರೂ ಬರುವದಿಲ್ಲೆಂದು ಆತನು ತಿಳಕೊಂಡಿದ್ದನು. ಅವರಲ್ಲಿ ಸಾದತಖಾನನು ಮೋಸದಿಂದ ದಂಡಿನ ಅವಾಢವ್ಯ ವ್ಯೂಹವನ್ನು ರಚಿಸಿ, ವಿಚಿತ್ರಭ್ರಾಂತಿಯನ್ನುಂಟು ಮಾಡಿದ್ದನು. ಈ ಸ್ಥಿತಿಯಲ್ಲಿ ವಿಜಯಸಿಂಹನು ದುರ್ಗದ ಕೊತ್ತಳವನ್ನೇರಿ ನೋಡಲು, ಮೊದಲು ನೋಡಿದ ಸೈನ್ಯವು ಸಮೀಪಕ್ಕೆ ಬರತೊಡಗಿತ್ತು. ಆ ಸೈನ್ಯವಲ್ಲದೆ ಮತ್ತೊಂದು ಪ್ರಚಂಡ ಸೈನ್ಯವು ಬೇರೊಂದು ದಿಕ್ಕಿನಿಂದ ವೇಗವಾಗಿ ಸಾಗಿ ಬರುತ್ತಿತ್ತು. ಅದನ್ನು ನೋಡಿಯಂತು ವಿಜಯಸಿಂಹನು ಔರಂಗಜೇಬನ ಸೈನ್ಯವು ಸಾದತಖಾನನ ಸಹಾಯಕ್ಕೆ ಬಂತೆಂದು ನಿಶ್ಚಯಿಸಿದನು. ಅಷ್ಟ ರಲ್ಲಿ ಸಾದತಖಾನನು ವಿಜಯಸಿಂಹನ ಬಳಿಗೆ ಒಬ್ಬ ವಕೀಲನನ್ನೂ ನಾಲ್ಕು ಜನರನ್ನೂ ಕಳಿಸಿ— "ಬಾದಶಹನ ಸೈನ್ಯವು ಬಂದೊದಗಿತು. ಇನ್ನು ಕೋಟೆಯನ್ನು ವಶಮಾಡಿಕೊಳ್ಳಲಿಕ್ಕೆ ತಡವಾಗದು; ವಶಮಾಡಿಕೊಳ್ಳುವದು ಕಠಿಣವೂ ಅಲ್ಲ; ಅದ್ದರಿಂದ ನೀನು ಕೈಕಟ್ಟಿಕೊಂಡು ಬಂದು ಮಗಳನ್ನು ಬಾದಶಹನಿಗೆ ಒಪ್ಪಿಸಿ, ಜೀವದಾನಕ್ಕಾಗಿಯೂ, ರಾಜ್ಯ ರಕ್ಷಣಕ್ಕಾಗಿಯೂ ಆತನನ್ನು ಪ್ರಾರ್ಥಿಸು. ಇಲ್ಲದಿದ್ದರೆ ವ್ಯರ್ಥವಾಗಿ ಜೀವವನ್ನು ಕಳಕೊಂಡೀ, ರಾಜ್ಯವಂತೂ ಹೋಗೀಯೇ ಹೋಗುವದು. ಮಗಳಂತು ಬಾದಶಹನ ಕೈಸೇರದಳಂದು ತಿಳಿ" ಎಂದು ಹೇಳಿ ಕಳಿಸಿದನು. ವಕೀಲನನ್ನು ಕಳಿಸು ವಷ್ಟು ಧೈರ್ಯವು ಸಾದತಖಾನನಿಗೆ ಬಂದಬಳಿಕ, ಹೊಸ ಸೈನ್ಯವು ಆತನ ಸಹಾಯಕ್ಕೆ ಬಂದಿರಬಹುದೆಂದು ವಿಜಯಸಿಂಹನು ತಿಳಿದನು. ಅದರಿಂದ ವಿಜಯಸಿಂಹನು ಹತಾಶನಾಗದೆ ಸಂತಾಪದಿಂದ ಉರಿಯಹತ್ತಿ, ಸಂತಾಪದ ಭರದಲ್ಲಿ ಆತನು ವಕೀಲನನ್ನು ಬಹಳವಾಗಿ ಅಪಮಾನಗೊಳಿಸಿ ಹೊರಗೆ ಹಾಕಿಸಿಬಿಟ್ಟನು.

ಇಷ್ಟಾದ ಮೇಲೆ ವಿಜಯಸಿಂಹನು ಎದ್ದು, ಒಮ್ಮೆ ಕೋಟೆಯಲ್ಲೆಲ್ಲ ತಿರುಗಿ ಬಂದು ಎಲ್ಲ ವ್ಯವಸ್ಥೆಯನ್ನು ಕಣ್ಣುಮುಟ್ಟಿ ನೋಡಿ, ಉತ್ತೇಜಕವಾದ ಆವೇಶದ ಬೋಧದಿಂದ ಸೈನಿಕರನ್ನು ಹುರುಪುಗೊಳಿಸಿದನು. ತಾನು ಇನ್ನು ಬಾದಶಹನ ಪ್ರಚಂಡ ಸೈನ್ಯದ ನಡುವೆ ಸಿಕ್ಕು ಜಿಬ್ಬಿಯಾಗುವ ಪ್ರಸಂಗಬಂದದ್ದರಿಂದ ಪ್ರಾಚೀನ ರಜಪೂತರ ಶೀಲವನ್ನು ಕಾಯ್ದುಕೊಳ್ಳುವದು ಅವಶ್ಯವೆಂದು ಭಾವಿಸಿ, ಕೂಡಲೆ ಮಗಳ ಮಂದಿರದ ಕಡೆಗೆ ಸಾಗಿದನು. ರೂಪಮತಿಯಾದರೂ ಮೇಲುಪ್ಪರಿಗೆಯ ಕಿಡಿಕೆಯೊಳಗಿಂದ ಎರಡು ಕಡೆಯಿಂದ ಬರುವ ಸೈನ್ಯಗಳನ್ನು ನೋಡಿ ಚಿಂತಾಮಗ್ನಳಾಗಿದ್ದಳು. ವಿಜಯಸಿಂಹನು ಮಗಳನ್ನು ಕಂಡಕೂಡಲೆ ಆಕೆಯನ್ನು ವಾತ್ಸಲ್ಯದಿಂದ ಗಟ್ಟಿಯಾಗಿ ಅಪ್ಪಿಕೊಂಡು— ತಂಗೀ, ನೀನು ನನಗೆ ಅತ್ಯಂತ ಪ್ರಿಯಳಾಗಿರುವದು ನಿಜವು; ಆದರೆ ನನ್ನ ಕುಲದ ಶೀಲವೂ, ಅಭಿಮಾನವೂ ಅದಕ್ಕಿಂತಲೂ ಹೆಚ್ಚು ಪ್ರಿಯವಾಗಿರುತ್ತವೆ. ವಿಜಯಸಿಂಹನ ಮಗಳನ್ನು ಆತನು ಬದುಕಿರುವಾಗ, ಅಥವಾ ಆತನು ಮರಣಹೊಂದಿದ ಮೇಲೆ ಮೊಗಲರು ಅಪಹರಿಸಿಕೊಂಡು ಹೋದರೆಂಬ ವರ್ತಮಾನವನ್ನು ಸ್ವರ್ಗಸ್ಥ ಪಿತೃಗಳು ಕೇಳಿದರೆ, ಅವರು ಅತ್ಯಂತ ದುಃಖಿತರಾಗಿ ಅಧಃಪತನವನ್ನು ಹೊಂದಬಹುದು; ಆದ್ದರಿಂದ ಈಗಿನ ಕಾಲದಲ್ಲಿ ಜೋಹಾರದ ಹೊರತು ಬೇರೆ ಯಾವ ಮಾರ್ಗವೂ ಇಲ್ಲದಾಗಿದೆ. ಎಲ್ಲ ರಜಪೂತರಾಜರು ಕೈಯಲ್ಲಿ ಬಳೆಯಿಟ್ಟ ಬಳಿಕ, ನಾವು ಮಾಡುವದಾದರೂ ಏನು? ನೀನೂ ಕೋಟೆಯೊಳಗಿನ ಯಾವತ್ತು ರಜಪೂತಸ್ತ್ರೀಯರೂ ಮಗಣಕ್ಕೆ ಸಿದ್ಧವಾಗಲಿಕ್ಕೆ ಬೇಕು. ನಡೆ ಹಾಗಾದರೆ, ನಿನ್ನ ಗೆಳತಿಯರನ್ನೂ, ಬೇರೆ ರಜಪೂತಸ್ತ್ರೀಯರನ್ನೂ ಕರಕೊಂಡು ಮಂಗಲಕರವಾದ ಮರಣಕ್ಕೆ ಸಿದ್ಧಳಾಗು. ಈ ಕಾರ್ಯದಲ್ಲಿ ನೀನೇ ಮುಂದಾಳಾಗು. ರಜಪೂತ ಕನ್ಯೆಗೆ ಯೋಗ್ಯವಾದದ್ದನ್ನು ಈಗ ನೀನು ಮಾಡು. ರಜಪೂತ ವೀರರಿಗೆ ಉಚಿತವಾದದ್ದನ್ನು ನಮ್ಮ ಜನರಿಂದ ನಾನು ಮಾಡಿಸುವೆನು, ಎಂದು ಹೇಳಿದನು. ತಂದೆಯ ಈ ಮಾತುಗಳನ್ನು ಕೇಳಿ ರೂಪಮತಿಯು, ಒಮ್ಮೆ ತನ್ನ ತಂದೆಯ ಕಡೆಗೆ, ಒಮ್ಮೆ ಕಿಡಿಕೆಯೊಳಗಿಂದ ಬರುತ್ತಿರುವ ಆ ಎರಡು ಸೈನ್ಯಗಳ ಕಡೆಗೆ, ಒಮ್ಮೆ ಛತ್ತಿನಕಡೆಗೆ ನೋಡಿ ಒಮ್ಮೆಲೆ ತಂದೆಯನ್ನು ಕುರಿತು—ಅಪ್ಪಾ, ರಜಪೂತರ ಶೀಲ, ಹಾಗು ತಮ್ಮ ಅಪ್ಪಣೆ ಇವುಗಳಿಗಿಂತ

ಹೆಚ್ಚಿನದು ನನಗೆ ಯಾವದಿರುವದು ? ಅನ್ನಲು, ವಿಜಯಸಿಂಹನಿಂದ ಒಂದು ಅಕ್ಷರವನ್ನು ಕೂಡ ಉಚ್ಚರಿಸುವದಾಗಲಿಲ್ಲ. ಆತನು ತನ್ನ ಕಣ್ಣುಗಳೊಳಗಿಂದ ಉದುರುತ್ತಿರುವ ಎರಡು ಅಶ್ರುಬಿಂದುಗಳನ್ನು ತಟ್ಟನೆ ಒರಸಿಕೊಂಡು ಸದ್ಗದಿತ ಕಂಠದಿಂದ— "ತಂಗೀ, ನೀನು ನಿಜವಾಗಿ ನನ್ನ ಮಗಳಿರುತ್ತೀ." ಎಂಬದೊಂದೇ ವಾಕ್ಯವನ್ನು ನುಡಿದು ಅಲ್ಲಿಂದ ಹೊರಟುಹೋದನು. ರೂಪಮತಿಯು ಕ್ಷಣಮಾತ್ರ ವಿಚಾರಮಾಡುತ್ತ ನಿಂತುಕೊಂಡಳು. ಆ ಮೇಲೆ ಆಕೆಯು ಪದ್ಮೆ, ಕುಂದೆ ಮೊದಲಾದ ಸಖಿಯರನ್ನು ಕರೆಸಿ, ಯಾವತ್ತು ರಜಪೂತ ಸ್ತ್ರೀಯರನ್ನು ಇಂಥದೊಂದು ಅಶ್ವಶಾಲೆಯ ಬಳಿಗೆ ಕರಕೊಂಡು ಬರಬೇಕೆಂದು ಆಜ್ಞಾಪಿಸಿದಳು. ಅವರು ರೂಪಮತಿಯ ಅಪ್ಪಣೆಯನ್ನು ಪಾಲಿಸುವದಕ್ಕಾಗಿ ಹೊರಟುಹೋದರು. ರೂಪಮತಿಯು ತಾನು ಸ್ವತಃ ಆ ಅಶ್ವಶಾಲೆಗೆ ಹೋಗಿ, ಅದನ್ನು ತೆರವು ಮಾಡಿ ಕೊಡಬೇಕೆಂದು ಸಮಾಧಾನದಿಂದ ಹೇಳಿದಳು. ತೆರವು ಮಾಡುವ ಕೆಲಸವು ಪೂರ್ಣವಾಗುವವರೆಗೆ ಆಕೆಯು ಅಲ್ಲಿಯೇ ನಿಂತುಕೊಂಡಳು. ಅಶ್ವಶಾಲೆಯೆಂದರೆ, ಗುಡ್ಡದೊಳಗಿನ ಒಂದು ಪ್ರಚಂಡಗವಿಯಾಗಿತ್ತು. ಏನಿಲ್ಲೆಂದರೂ ಐದುನೂರು ಜನರು ಗಪ್ಪಾಗುವಷ್ಟು ಆ ಗವಿಯು ವಿಸ್ತಾರವಾಗಿತ್ತೆಂದು ಹೇಳಬಹುದು. ಅಪ್ಪಣೆಯಂತೆ ಆ ಅಶ್ವಶಾಲೆಯು ತೆರವು ಮಾಡಲ್ಪಟ್ಟಿತು. ಕೂಡಲೆ ರೂಪಮತಿಯು ಕೋಟೆಯೊಳಗಿನ ಎಲ್ಲ ಉರವಲವನ್ನು ತಂದು ಆ ಗುಹೆಯಲ್ಲಿ ಒಟ್ಟಲಿಕ್ಕೆ ಹೇಳಿದಳು. ಇನ್ನುಮೇಲೆ ಇಲ್ಲಿ ಯಾವ ಭಯಂಕರ ಪ್ರಸಂಗ ಒದಗತಕ್ಕದ್ದೆಂಬದು ಎಲ್ಲರಿಗೆ ಗೊತ್ತಾಯಿತು. ತಮ್ಮ ಪಶ್ಚಾತ್ ತಮ್ಮ ಹೆಂಡರು ಮಕ್ಕಳನ್ನು ಮುಸಲ್ಮಾನರಿಗೆ ಒಪ್ಪಿಸದೆ, ತಾವಿರುವಾಗಲೆ ಅವರನ್ನು ಸಂಹರಿಸಿ ತಾವೆಲ್ಲರೂ ಶೌರ್ಯದಿಂದ ಯುದ್ಧಮಾಡಿ ಸಾಮರಭೂಮಿಯಲ್ಲಿ ದೇಹವಿಡಬೇಕೆಂದು ಎಲ್ಲರು ನಿಶ್ಚಯಿಸಿದರು. ಒಳಗೆ ಹೋಗುವಷ್ಟು ಹಾದಿಯನ್ನು ಬಿಟ್ಟು ಉಳಿದ ಕಡೆಯಲ್ಲೆಲ್ಲ ಉರವಲವನ್ನೂ, ಜ್ವಾಲಾಗ್ರಾಹೀಪದಾರ್ಥಗಳನ್ನೂ ರೂಪಮತಿಯು ತುಂಬಿಸಿದಳು. ಎಲ್ಲ ಕೆಲಸವನ್ನು ಆಕೆಯು ಸಮಾಧಾನದಿಂದ ಮಾಡಿಸುತ್ತಿದ್ದಳು. ಅಷ್ಟರಲ್ಲಿ ಪದ್ಮೆಯು ಕೋಟೆಯೊಳಗಿನ ಯಾವತ್ತು ರಜಪೂತಸ್ತ್ರೀಯರನ್ನು ಕರಕೊಂಡು ಬಂದಳು. ಕುಂದೆಯು ಮಾತ್ರ ಎತ್ತೋ ತಪ್ಪಿಸಿಕೊಂಡು ಹೋದಳು. ರೂಪಮತಿಯು ಕೂಡಿದ

ಜನರನ್ನು ಕುರಿತು—''ನಮ್ಮ ಜಾತಿಯ ಮಾನರಕ್ಷಣಕ್ಕಾಗಿ ಪರಂಪರಾಗತ ಪದ್ಧತಿಯಂತೆ ಈಗ ನಾವೆಲ್ಲರು ಅಗ್ನಿನಾರಾಯಣನ ಆಶ್ರಯವನ್ನು ಪಡೆಯೋಣ. ನೀವೆಲ್ಲರು ಅದಕ್ಕಾಗಿ ಸಿದ್ಧರಾಗಿರಿ. ನಮ್ಮ ತಂದೆಗಳಿಗೂ, ಬಂಧು ಬಾಂಧವರಿಗೂ ನಿಶ್ಚಿಂತವಾಗಿ ರಣಪಾಂಡಿತ್ಯವನ್ನೂ, ನಿಜವಾದ ಕ್ಷಾತ್ರ ತೇಜಸ್ಸನ್ನೂ ತೋರಿಸಲಿಕ್ಕೆ ಅನುಕೂಲತೆಯನ್ನುಂಟು ಮಾಡೋಣ. ಅವರು ಶೌರ್ಯದಿಂದ ಕಾದಿ ರಣಭೂಮಿಯಲ್ಲಿ ದೇಹವಿಟ್ಟು ವೀರ ಸ್ವರ್ಗವನ್ನು ಪಡೆಯಲಿ' ಎಂದು ನುಡಿದಳು. ಮುಂದೆ ಆಕೆಯ ಮುಖದಿಂದ ಅಕ್ಷರಗಳು ಹೊರಡದಾದವು. ಆಕೆಯು ಅಗ್ನಿಪ್ರವೇಶಮಾಡಲಿಕ್ಕೆ ಯೋಗ್ಯವಾದ ವಸ್ತ್ರಗಳನ್ನುಟ್ಟುಕೊಂಡು ಬರಲಿಕ್ಕೆ ಹೊರಟುಹೋದಳು.

ಇತ್ತ ವಿಜಯಸಿಂಹನೂ, ಅವನ ಪರಿವಾರದವರೂ ನಖಶಿಖಾಂತವಾಗಿ ಕೇಶವರ್ಣದ ಉಡುಪುಗಳನ್ನು ಧರಿಸಿ, ಆ ಅಗ್ನಿಪ್ರವೇಶದ ಸ್ಥಳಕ್ಕೆ ಬಂದರು. ಆಗ ರೂಪಮತಿಯಿಂದ ಸಹಿತರಾದ ಎಲ್ಲ ಸ್ತ್ರೀಯರು ಅಗ್ನಿಪ್ರವೇಶಕ್ಕೆ ಸಿದ್ಧರಾಗಿ ನಿಂತಿದ್ದರು. ಒಬ್ಬರ ಕಣ್ಣೊಳಗಿಂದಲೂ ತಟ್ಟೆಂದು ಕಣ್ಣೀರ ಹನಿಯು ಉದುರುತ್ತಿದ್ದಿಲ್ಲ! ಅಂದಬಳಿಕ ರಂಬಾಟದ ಆಳೋಣವೆತ್ತ ಕಣ್ಣಿಗೆ ಬೀಳಬೇಕು ? ರೂಪಮತಿಯು ಎಲ್ಲರ ಮುಂದುಗಡೆಯಲ್ಲಿದ್ದಳು. ಆಕೆಯು ಇನ್ನು ಜಗದಂಬೆಯ ಸ್ಮರಣಮಾಡಿ ಅಗ್ನಿಪ್ರವೇಶ ಮಾಡತಕ್ಕವಳು. ಅಷ್ಟರಲ್ಲಿ ಕೋಟೆಯ ಕೆಳಗಡೆಯಲ್ಲಿ ಭಯಂಕರವಾದ ಗದ್ದಲವಾಗತೊಡಗಿತು. ಆಗ ಬೆಳಗು ಹರಿದು ಪೂರ್ವದಿಕ್ಕು ಕೆಂಪಾಗತೊಡಗಿತ್ತು. ಕೆಳಗಿನ ಗದ್ದಲವನ್ನು ಕೇಳಿ ಕೋಟೆಯೊಳಗಿನ ಜನರ ಚಿತ್ತಗಳು ಚಂಚಲವಾದವು. ಮೊಗಲರು ಇನ್ನು ಬೇಗನೆ ಕೋಟೆಯನ್ನು ಕೈವಶಮಾಡಿಕೊಳ್ಳಬಹುದಾದ್ದರಿಂದ, ಅಗ್ನಿಪ್ರವೇಶದ ಕಾರ್ಯವನ್ನು ತೀವ್ರ ನೆರವೇರಿಸಿ ವೈರಿಗಳ ಮೇಲೆ ಬೀಳಬೇಕೆಂದು ಅವರು ಅವಸರ ಮಾಡಹತ್ತಿದರು. ರೂಪಮತಿಯು ಗುಹೆಯ ದ್ವಾರವನ್ನು ನೋಡಿ ಕಡೆಯಸಾರೆ ಜಗದಂಬೆಯನ್ನು ಸ್ಮರಿಸಿ, ಇನ್ನು ಅಗ್ನಿಯನ್ನು ಪ್ರವೇಶಿಸುತ್ತಿದ್ದಳು. ಅಷ್ಟರಲ್ಲಿ ಕೋಟೆಯ ಕೆಳಗೆ ಕೇವಲ ಮೊಗಲರ ಗರ್ಜನೆಯು ಕೇಳಸದೆ, ರಜಪೂತರ ರಣಗರ್ಜನೆಯೂ ಕೇಳಿಸತೊಡಗಿತು. ಮೊಗಲರಗಿಂತ ರಜಪೂತರ ಗರ್ಜನೆಯೇ ಹೆಚ್ಚು ಅಭ್ರಾಟವಾಗಿ ಕೇಳಿಸುತ್ತಿರುವದೆಂಬದನ್ನು ವಿಜಯಸಿಂಹನು ಮನಗಂಡನು. ತನ್ನ ಸಹಾಯಕ್ಕಾಗಿ ಯಾವನೊಬ್ಬ

ರಜಪೂತವೀರನ ಸೈನ್ಯವು ಬಂದಿರಬಹುದೋ, ಎಂಬ ಸಂಶಯವು ಆತನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಹೀಗಿದ್ದರೆ ಇನ್ನೂ ಕೋಟೆಯನ್ನು ರಕ್ಷಿಸಿಕೊಳ್ಳುವ ಆಶೆಯಿರುವದರಿಂದ, ಸುಮ್ಮನೆ ಇಷ್ಟು ಜನರ ಪ್ರಾಣಹಾನಿಯನ್ನು ಮಾಡುವದು ಸರಿಯಲ್ಲೆಂದು ಯೋಚಿಸಿ, ಆತನು ಸ್ತ್ರೀಯರ ಅಗ್ನಿಪ್ರವೇಶದ ಕಾರ್ಯವನ್ನು ತಡೆದನು. ಆತನು ಮುಂದಕ್ಕೆ ಹೋಗಿ ವಿಚಾರಿಸಲು, ಉದೇಪುರದ ರಾಜಸಿಂಹನು ಸಾದತಖಾನನ ಸೈನ್ಯವನ್ನು ದಿಕ್ಕುಪಾಲಾಗಿ ಓಡಿಸಿದನೆಂದು ಜನರು ಹೇಳಿದರು. ಪ್ರತ್ಯಕ್ಷಾನುಭವದಿಂದಲೂ ವಿಜಯಸಿಂಹನಿಗೆ ಆ ಮಾತು ಸತ್ಯವಾಗಿ ತೋರಿತು. ಈ ಆನಂದದ ಸಂಗತಿಯಿಂದ ಆ ವೃದ್ಧವೀರನ ಕಂಠವು ಸದ್ಗದಿತವಾಗಿ, ಆತನು ಹಲವು ಸಾರೆ ರಾಜಸಿಂಹನನ್ನು ಮನಸ್ಸಿನಲ್ಲಿ ಅಭಿನಂದಿಸಿದನು. ಆತನು ಅಗ್ನಿಪ್ರವೇಶಮಾಡಲು ಸಿದ್ಧರಾಗಿ ನಿಂತಿದ್ದ ಸ್ತ್ರೀಯರ ಬಳಿಗೆ ಹೋಗಿ— ಸುಮಂಗಲೆಯರೇ, ನಿಮ್ಮ ಸತ್ವಕ್ಕಾಗಿ ಈಶ್ವರನು ದಯದೋರಿದಂತೆ ಕಾಣುತ್ತದೆ. ಸದ್ಯಕ್ಕೆ ಇಷ್ಟು ಜನರ ಪ್ರಾಣಹಾನಿಯಾಗುವ ಅವಶ್ಯವಿರುವದಿಲ್ಲ. ಈಗ ನೀವು ನಿಮ್ಮನಿಮ್ಮ ಮನೆಗಳಿಗೆ ಹೋಗಿರಿ, ಎಂದು ಹೇಳಿದನು. ಆಗ ರೂಪಮತಿಯೇ ಮೊದಲಾದವರು ಆಶಾತಂತುವಿನಿಂದ ಕಟ್ಟಲ್ಪಟ್ಟವರಾಗಿ ತಮ್ಮ ತಮ್ಮ ಸ್ಥಳಗಳಿಗೆ ಹೋದರು. ಇತ್ತ ವಿಜಯಸಿಂಹನು ಕೋಟೆಯೊಳಗಿನ ತನ್ನ ಸೈನ್ಯವನ್ನು ಸಜ್ಜುಗೊಳಿಸಿ, ಕೋಟೆಯ ಕೆಳಗಿನ ಸೈನ್ಯದ ಮೇಲೆ ಬಾಣಗಳ, ಹಾಗು ಗುಂಡುಗಳ ಮಳೆ ಸುರಿಸಹತ್ತಿದನು. ನಿಜವಾಗಿಯೇ ರಾಜಸಿಂಹನ ಸೈನ್ಯವು ಸಾದತಖಾನನ ಸೈನ್ಯವನ್ನು ಸೋಲಿಸಿ ಓಡಿಸಿತ್ತು. ಸಾದತಖಾನನು ತನ್ನ ಸೈನ್ಯದಲ್ಲಿ ಎರಡು ಭಾಗಮಾಡಿ ತಾನಾಗಿಯೆ ಸಂಕಟತಂದುಕೊಂಡಂತೆ ಆಗಿತ್ತು. ಆತನ ಸೈನ್ಯವು ಒಕ್ಕಟ್ಟಾಗಿದ್ದರೆ ಆತನು ಇಷ್ಟು ಬೇಗನೆ ರಜಪೂತರಿಗೆ ಹಣಿಯುತ್ತಿದ್ದಿಲ್ಲ. ರಾಜಸಿಂಹನು ವಿಜಯಸಿಂಹನೊಡನೆ ಕೋಟೆಯನ್ನು ಪ್ರವೇಶಿಸಿದನು. ಅವರಿಬ್ಬರು ಒಬ್ಬರನೊಬ್ಬರು ಆಲಂಗಿಸಿದರು. ರಾಜಸಿಂಹನ ಸೈನ್ಯವು ಸಾದತಖಾನನ ಸೈನ್ಯವನ್ನು ಬೆನ್ನಟ್ಟಿ ಓಡಿಸತೊಡಗಿತು. ರಾಜಸಿಂಹನು ಕೋಟೆಯ ಮೇಲೆ ಬಂದದ್ದನ್ನು ನೋಡಿ ರೂಪಮತಿಗಾದ ಆನಂದವನ್ನು ವರ್ಣಿಸಲಾಸಲ್ಲ. ಸಾಮಳಪಂಡಿತನ ಸಂಗಡ ತಾನು ಕಳಿಸಿದ ಪತ್ರದಂತೆ ರಾಜಸಿಂಹನು ಬಂದು ತನ್ನ ಸಂಕಟವನ್ನು ದೂರ

ಮಾಡಿದನೆಂದು ಆಕೆಯು ಅಭಿಮಾನಪಟ್ಟು, ಮನಸ್ಸಿನಿಂದ ರಾಜಸಿಂಹನನ್ನು ವರಿಸಿದಳು. ಹೀಗೆ ಕೋಟೆಯೊಳಗಿನ ಎಲ್ಲ ರಜಪೂತರು ವಿಜಯಾನಂದದಲ್ಲಿರುವಾಗ ಒಬ್ಬ ಚಾರನು ಬಂದು ರಾಜಸಿಂಹನನ್ನು ಬಹುವಿನಯದಿಂದ ನಮಸ್ಕರಿಸಿ—ಮಹಾರಾಜರೇ, ಮೊಗಲರ ಸೈನ್ಯವು ಸಮೀಪಕ್ಕೆ ಬಂದಿತು. ಆದರೆ ಎಲ್ಲಕ್ಕೂ ಮುಂದಿನ ಭಾಗವು ಇಲ್ಲಿಂದ ಹತ್ತು ಹರದಾರಿಗಳ ಮೇಲೆ ಬೀಡು ಬಿಟ್ಟಿರುತ್ತದೆ. ನಾಳೆ ಬೆಳಗಾಗುವದರೊಳಗೆ ಇಲ್ಲಿಗೆ ಬರಬಹುದು. ಇಲ್ಲಿಂದ ಓಡಿಹೋಗಿರುವ ಜನರು ಆ ಸೈನ್ಯವನ್ನು ಮುಟ್ಟಿದರಂತು ಆ ಹೊಸ ಸೈನ್ಯವು ವೇಗವಾಗಿ ಬರುವದರಲ್ಲಿ ಸಂಶಯುವಿಲ್ಲ, ಎಂದು ಹೇಳಿದನು. ವಿಜಯಸಿಂಹನೂ, ರಾಜಸಿಂಹನೂ ಅದನ್ನು ಕೇಳಿಕೊಂಡರು. ತಾನು ರಾಜಸಿಂಹನನ್ನು ಮನಬಂದಂತೆ ಹಳಿದರೂ ಪ್ರಸಂಗಕ್ಕೆ ಆತನೇ ತನಗೆ ಸಹಾಯ ಮಾಡಿದನೆಂದು ಆ ವೃದ್ಧ ರಜಪೂತನು ಅತ್ಯಂತ ಕೃತಜ್ಞನಾಗಿರಲು, ರಾಜಸಿಂಹನು ಆತನನ್ನು ಕುರಿತು— ವಿಜಯಸಿಂಹರೇ, ಏನೂ ಚಿಂತೆಯಿಲ್ಲ. ಮೊಗಲರ ಸೈನ್ಯವು ಬೇಕಾದಾಗ ಬರಲೊಲ್ಲದೇಕೆ; ಆದರೆ ಯಾವ ರೂಪಮತಿಯ ಸಲುವಾಗಿ ಇಂಥ ರಣಸಂಗ್ರಾಮವು ಉಂಟಾಗಿರುವದೋ, ಆ ರೂಪಮತಿಯನ್ನಷ್ಟು ಮೊದಲು, ಈ ಕೋಟೆಯಿಂದ ಹೊರಡಿಸುವದು ಯುಕ್ತವೆಂದು ನನಗೆ ತೋರುತ್ತದೆ, ಎಂದು ಹೇಳಿದನು.

ಈ ಮಾತುಗಳನ್ನು ಕೇಳಿ ವಿಜಯಸಿಂಹನು ಸ್ವಲ್ಪ ನಕ್ಕು ರಾಜಸಿಂಹನನ್ನು ನೋಡಿ— ಕುಲದೀಪಕನಾದ ರಾಜಸಿಂಹಮಹಾರಾಜನೇ, ನನ್ನ ರೂಪಮತಿಯನ್ನು ಈಗಲೇ ನಿನಗೆ ಸಮರ್ಪಿಸುತ್ತೇನೆ. ನೀನು ಆಕೆಯ ಪಾಣಿಗ್ರಹಣಮಾಡಿ, ಆಕೆಯ ಸಂರಕ್ಷಣದ ಭಾರವನ್ನು ವಹಿಸಿ, ವೃದ್ಧನಾದ ನನ್ನನ್ನು ಭಾರಮುಕ್ತನಾಗ ಮಾಡು. ಈಗಲೇ ಈ ಎಲ್ಲ ಜನರ ಸಮಕ್ಷ ರೂಪಮತಿಯ ಹಸ್ತವನ್ನು ನಿನ್ನ ಹಸ್ತದಲ್ಲಿರಿಸುತ್ತೇನೆ. ಆಕೆಯನ್ನು ನಿನ್ನ ಹಿಂದೆ ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ಉದೇಪುರಕ್ಕೆ ಕರಕೊಂಡು ಹೋಗು. ಆಕೆಯನ್ನು ಕುಳ್ಳಿರಿಸಿಕೊಂಡು ಹೋಗುವ ಕುದುರೆಯೇ ವರನನ್ನು ಕರೆಯುಕಳುಹಿದ ಕುದುರೆಯು. ಆಕೆಯನ್ನು ಕರಕೊಂಡು ಹೋಗುವದೇ ಮೆರವಣಿಗೆಯು. ಈ ಕಾರ್ಯವನ್ನು ಮಾಡಲಿಕ್ಕೆ ಒದಗಿರುವ ಈಗಿನ ಅವಸರದ ಸಮಯವೇ ಸುಸಮಯವು. ಒತ್ತಟ್ಟಿಗೆ ಲಗ್ನಕ್ಕಾಗಿ ಅವಸರ

ಮಾಡಬೇಕಾಗಿದ್ದರೆ, ಮತ್ತೊತ್ತಟ್ಟಿಗೆ ಸಂಗ್ರಾಮಕ್ಕಾಗಿ ಅವಸರ ಮಾಡ ಬೇಕಾಗಿದೆ. ಈ ಕಾಲದಲ್ಲಿ ಇವೆರಡೂ ಕಾರ್ಯಗಳು ಮಹತ್ವದವಾಗಿರು ವವು, ಎಂದು ಹೇಳಿ, ರೂಪಮತಿಯನ್ನು ಹತ್ತರ ಕರಕೊಂಡು ಅವಗುಂಠನ ದಿಂದ ಆಕೆಯ ಸರ್ವಾಂಗವನ್ನು ಮುಚ್ಚಿ ಆಕೆಯ ಹಸ್ತವನ್ನು ರಾಜಸಿಂಹನ ಹಸ್ತದಲ್ಲಿರಿಸಿದನು; ಮತ್ತು ವೃದ್ಧ ಮನುಷ್ಯರಲ್ಲಿರತಕ್ಕ ನೈಸರ್ಗಿಕವಾದ ಅವಸರದಿಂದ ಅವರಿಬ್ಬರನ್ನು ಕುದುರೆಯ ಮೇಲೆ ಕುಳ್ಳಿರಿಸಿ ಉದೇಪುರದ ಹಾದಿಯನ್ನು ಹಿಡಿಸಬೇಕೆಂದು ಮಾಡಿದನು. ರಾಜಸಿಂಹನು ತನ್ನ ಹೆಂಡತಿ ಯನ್ನು ಉದೇಪುರಕ್ಕೆ ಮುಟ್ಟಿಸಿ ಆ ಮೇಲೆ ಶತ್ರುವಿನ ಮಗ್ಗಲುಮುರಿಯುವ ದಕ್ಕಾಗಿ ಯುದ್ಧಕ್ಕೆ ಬರಬೇಕೆಂದು ವಿಜಯಸಿಂಹನು ಹಟಹಿಡಿದನು. ಒಂದು ದೃಷ್ಟಿಯಿಂದ ವೃದ್ಧ ವಿಜಯಸಿಂಹನ ಈ ಆಲೋಚನೆಯು ಯೋಗ್ಯವಾದ ದ್ದೆಂದು ರಾಜಸಿಂಹನಿಗೆ ತೋರಿದ್ದರಿಂದ ಹಾಗೆ ಮಾಡಲು ಆತನು ಸಮ್ಮತಿಸಿ, ಸಮವೃತ್ತ ವಧುವನ್ನು ತನ್ನ ಹಿಂದೆ ಕುಳ್ಳಿರಿಸಿಕೊಂಡು, ಆರಿಸಿದ ಇನ್ನೂರು– ಇನ್ನೂರಾಐವತ್ತು ದಂಡಾಳುಗಳೊಡನೆ ಉದೇಪುರಕ್ಕೆ ಹೋಗುವದಕ್ಕಾಗಿ ಹೊರಟನು. ರಾಜಸಿಂಹನು ತನ್ನ ಉಳಿದ ಸೈನ್ಯವನ್ನು ರೂಪನಗರದಲ್ಲಿಯೇ ಬಿಟ್ಟನು. ಕೆಲವು ಮಾರ್ಗವನ್ನು ಕ್ರಮಿಸಿಹೋದಮೇಲೆ ರೂಪಮತಿಯು ತಾನು ಉದೇಪುರದಲ್ಲಿ ಉಳಿದು ಪತಿಯನ್ನು ಯುದ್ಧಕ್ಕೆ ಕಳಿಸಲಿಕ್ಕೆ ಒಪ್ಪಿ ಕೊಳ್ಳಲಿಲ್ಲ. ಯುದ್ಧದಲ್ಲಿ ಸಮದುಃಖಿಯಾಗಿ ತಮ್ಮ ಬಳಿಯಲ್ಲಿಯೇ ಇರುವೆನೆಂದು ಆಕೆಯು ಹಟಹಿಡಿದದ್ದರಿಂದ ರಾಜಸಿಂಹನು ಮಾರ್ಗಕ್ರಮಿ ಸುವದನ್ನು ಬಿಟ್ಟು, ಒಂದು ಸುರಕ್ಷಿತವಾದ ಸ್ಥಳದಲ್ಲಿ ರೂಪಮತಿಯನ್ನು ಇರಿಸಿ ಯುದ್ಧಕ್ಕೆ ಸನ್ನದ್ಧನಾಗಬೇಕಾಯಿತು. ವೈಕುಂಠಯೋಗಿಗಳ ಭವಿಷ್ಯ ದಂತೆ ರಾಜಸಿಂಹನಿಗೆ ಜಯಪ್ರಾಪ್ತಿಯಾಗುವ ಯೋಗವಿದ್ದದ್ದರಿಂದ, ಆಗಿನ ಪ್ರಸಂಗದಲ್ಲಿ ಕಡ್ಡಿಯಿಂದ ಗುಡ್ಡದಂಥ ಕಾರ್ಯಗಳಾದದ್ದು ಆಶ್ಚರ್ಯವಲ್ಲ. ವಿಚಾರಮಾಡಿ ನೋಡಿದರೆ ನಯನಪಾಲನು ಮೊಗಲರ ಪಕ್ಷಪಾತಿಯು. ತನ್ನ ಹಿತಕ್ಕಾಗಿ ಬೇಕಾದ ನೀಚಕೃತ್ಯವನ್ನು ಮಾಡಲಿಕ್ಕೆ ಹಿಂದೆಮುಂದೆ ನೋಡುವವನಲ್ಲೆಂಬದನ್ನು ಅವನ ನಡತೆಯ ಮೇಲಿಂದ ವಾಚಕರಾದರೂ ಬಲ್ಲರು. ಅಂಥವನಿಂದ ರಜಪೂತರ ಜಯಕ್ಕೆ ಸಹಾಯವಾಯಿತೆಂದಬಳಿಕ ಅನುಕೂಲಕಾಲದ ಮಹಿಮೆಯನ್ನೇನು ವರ್ಣಿಸಬೇಕು ? ನಯನ

ಪಾಲನು ವೈಕುಂಠಯೋಗಿಗಳ ದರ್ಶನಕ್ಕಾಗಿ ಇಂದಿರೆ–ದುರ್ಗಾದಾಸರೊಡನೆ ಪರ್ವತಶಿಖರವನ್ನು ಏರಿಹೋಗಿ, ಅಚಲೇಶ್ವರ ದೇವಸ್ಥಾನವನ್ನು ಮುಟ್ಟಿದನು. ಪುರಾಣ ಪ್ರಸಿದ್ಧವಾದ ಆ ರಮ್ಯ ಸ್ಥಳವನ್ನೂ, ಅಚಲೇಶ್ವರ ದೇವಸ್ಥಾನವನ್ನೂ ನೋಡಿ ಅವರಿಗೆ ಬಹಳ ಸಂತೋಷವಾಯಿತು. ತನ್ನ ಬಾಲರಾಜನಾದ ಅಜಿತಸಿಂಗನು ವೈಕುಂಠಯೋಗಿಗಳ ಬಳಿಯಲ್ಲಿಯೇ ಇರಬಹುದೆಂದು ನೆನಿಸಿ, ಇಂದಿರೆಯು ಆತುರದಿಂದ ಅಚಲೇಶ್ವರದೇವಸ್ಥಾನವನ್ನು ಪ್ರವೇಶಿಸಲು, ಯೋಗಿಗಳು ಸಮಾಧಿಸ್ಥರಾಗಿ ಕುಳಿತಿದ್ದು, ಅವರ ಬಳಿಯಲ್ಲಿ ಅಜಿತಸಿಂಗ ಕುಮಾರನು ಆಡುತ್ತಿದ್ದನು. ಆತನನ್ನು ನೋಡಿದ ಕೂಡಲೆ ಇಂದಿರೆಯ ಅಂತಃಕರಣವು ಉಕ್ಕಿಬಂದು, ಪ್ರೇಮಾಶ್ರುಗಳು ಆಕೆಯ ಕಣ್ಣೊಳಗಿಂದ ಸುರಿಯಹತ್ತಿದವು. ತಾನು ಹಿಂದಕ್ಕೆ ಕಾಬೂಲದಲ್ಲಿ ಗೌಳಿಗರ ಸೋಗು ಹಾಕಿಕೊಂಡು ಗಂಡಾಂತರದಿಂದ ಮುಕ್ತಮಾಡಿದ ಕುಮಾರನು, ಇಷ್ಟು ದೊಡ್ಡವನಾಗಿ ತನ್ನ ಕಣ್ಣಿಗೆ ಬಿದ್ದದ್ದರಿಂದ, ಆಕೆಯು ಆನಂದಪರವಶಳಾಗಿ ಯೋಗಿಗಳ ಸಮಾಧಿಭಂಗವಾದೀತೆಂಬದರ ಎಚ್ಚರವಿಲ್ಲದೆ, ರಾಜಕುಮಾರನನ್ನು ಎತ್ತಿ ಎದೆಗವಚಿಕೊಂಡು, ಆತನನ್ನು ಹಲವು ಸಾರೆ ಚುಂಬಿಸಿದಳು. ಆಗ ದುರ್ಗಾದಾಸನು— “ ಇಂದಿರೇ, ಇಂದಿರೇ, ಯೋಗಿರಾಜರ ಸಮಾಧಿಭಂಗವಾದರೆ, ಅವರಿಗೆ ಸಿಟ್ಟು ಬಂದೀತೆಂಬವರ ವಿಚಾರವಿರಲಿ. ಸ್ವಲ್ಪದೂರ ಅತ್ತಕಡೆಗಾದರೂ ರಾಜಕುಮಾರನನ್ನು ಕರಕೊಂಡು ಹೋಗು, ” ಅನ್ನಲು , ಇಂದಿರೆಯನ್ನು ಪ್ರೇಮಾರ್ದ್ರದೃಷ್ಟಿಯಿಂದ ನೋಡುತ್ತಿದ್ದ ನಯನಪಾಲನು— ಈ ಪ್ರಕಾರದ ಪ್ರೇಮದಿಂದ, ಒಂದೇಕೆ ಸಾವಿರ ಸಮಾಧಿಗಳ ಭಂಗವಾದರೂ, ಪ್ರತ್ಯಕ್ಷ ಶಂಕರನು ಕೂಡ ಆ ಪ್ರೇಮವನ್ನು ನೋಡಿ ಹಾಸ್ಯಮಾಡದೆ ಇರಲಿಕ್ಕಿಲ್ಲ. ಅಂದಬಳಿಕ ಯೋಗಿರಾಜರಂಥ ಶಾಂತಸ್ವಭಾವದವರು ಸಿಟ್ಟಾಗುವದೆತ್ತ ? ಎಂದು ಇಂದಿರೆಯ ಪಕ್ಷವನ್ನು ಕಟ್ಟಿ ಮಾತಾಡಿದನು. ಆತನು ಹೀಗೆ ಮಾತಾಡಲಿಕ್ಕೂ, ಯೋಗಿರಾಜರ ಸಮಾಧಿಯು ಇಳಿಯಲಿಕ್ಕೂ ಗಂಟುಬಿದ್ದಿತು. ಅವರು ನಯನಪಾಲನನ್ನು ಕುರಿತು— ನಯನಪಾಲಾ, ನೀನಾಡುವ ಮಾತು ಅಕ್ಷರಶಃ ನಿಜವಿರುತ್ತದೆ. ನಿರ್ಮಿಶ್ರವೂ. ನಿರಾಮಯವೂ ಆದ ಇಂಥ ಪ್ರೇಮವನ್ನು ನೋಡಿ, ಸಮಾಧಿಭಂಗದ ಕ್ರೋಧವು ಯಾರಿಗೂ ಬರಲಿಕ್ಕಿಲ್ಲ. ಒಂದು ಪಕ್ಷದಲ್ಲಿ ಯಾವನೊಬ್ಬ

ತಪೋನಿಷ್ಠುರನು ಕ್ರೋಧಾಂಧನಾಗಿ ಶಾಪವನ್ನು ಕೊಟ್ಟರೆ, ಆ ಶಾಪದ ಪ್ರಭಾವವು ಇಂಥ ಸಾಧ್ವಿಯ ಮೇಲೆ ಏನೂ ನಡೆಯಲಾರದು. ಕೇವಲ ಸ್ವಾರ್ಥತ್ಯಾಗ ಮಾಡಿ ಪರೋಪಕಾರಕ್ಕಾಗಿಯೇ ದೇಹವನ್ನು ವಹಿಸಿರುವ ಈಕೆಯ ಪ್ರೇಮವು, ನಮ್ಮ ಸಾವಿರಾರು ಸಮಾಧಿಗಳಿಗಿಂತ ಹೆಚ್ಚು ಪ್ರಭಾವ ಶಾಲಿಯಾಗಿರುವದು. ಈಕೆಯ ತಪಸ್ಸು ನಮ್ಮ ತಪಸ್ಸಿಗಿಂತ ಬಹುದೊಡ್ಡ ದಿರುವದು; ಇಂಥ ಪರೋಪಕಾರಿಗಳಿಗೆ ಪರಲೋಕದಲ್ಲಿ ಸ್ಥಳವು ಗೊತ್ತು ಮಾಡಿಟ್ಟಿರುವದು. ನಾವು ಆ ಸ್ಥಳವನ್ನು ಸಂಪಾದಿಸಬೇಕಾಗಿದೆ ! ಎಂದು ನುಡಿಯುತ್ತಿರಲು, ಇಂದಿರೆಯು ಎತ್ತಿಕೊಂಡಿದ್ದ ರಾಜಕುಮಾರನನ್ನು ಕೆಳಗೆ ಇಳಿಸದೆ, ಯೋಗಿಗಳನ್ನು ವಂದಿಸಿ ಆಶೀರ್ವಾದವನ್ನು ಪಡೆದಳು. ಆಕೆಯು ಅಜಿತಸಿಂಗನನ್ನು ಯೋಗಿಗಳ ಪಾದಕ್ಕೆ ಕೆಡವಬೇಕೆಂದು ಆತನನ್ನು ಇಳಿಸ ಹೋಗಲು, ಆ ರಾಜಕುಮಾರನು ಬಹುದಿವಸ ಅಗಲಿದ ತಾಯಿಯನ್ನು ಬಿಟ್ಟು ಇಳಿಯದವನಂತೆ, ಇಂದಿರೆಯ ಬಗಲುಬಿಟ್ಟು ಇಳಿಯದಾದನು. ಅದನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು; ಆದರೆ ಯೋಗಿಗಳು ಆಶ್ಚರ್ಯಪಡದೆ ಇಂದಿರೆಯನ್ನು ಕುರಿತು— ಇಂದಿರೇ, ಆ ಕುಮಾರನ ಕೃತಿಯು ಯಥಾರ್ಥವಾದದ್ದು. ಚಂದ್ರಾವತಿಯು ಹಡೆದ ತಾಯಿಯಾದರೂ ಪ್ರಾಣರಕ್ಷಕತಾಯಿಯಾದ ನಿನಗಿಂತ ಆಕೆಯ ಯೋಗ್ಯತೆಯೇನು ಹೆಚ್ಚಿನ ದಲ್ಲ. ಮುಂದೆಯಾದರೂ ನಿನ್ನಿಂದ ಆ ಕುಮಾರನ ಸಂರಕ್ಷಣವಾಗ ಬೇಕಾಗಿರುವದು. ಆತನನ್ನು ನಮ್ಮಿಬ್ಬರ ಅಣ್ಣತಂಗಿಯರ ಉಡಿಯಲ್ಲಿ ಹಾಕುವವರೆಗೆ ನನ್ನ ಕೆಲಸವಿತ್ತು. ಆ ಕೆಲಸವು ಇಂದಿಗೆ ಮುಗಿದಂತಾಯಿತು. ಇನ್ನು ನನ್ನ ಕೆಲಸವಿಲ್ಲ, ನಾನು ಹೊರಟೆನು, ಎಂದರು. ಇತ್ತ ದುರ್ಗಾ ದಾಸನೂ, ನಯನಪಾಲನೂ ಯೋಗಿಗಳನ್ನು ನಮಸ್ಕರಿಸಿ ಆಶೀರ್ವಾದ ಪಡೆದರು. ಯೋಗಿಗಳು ದುರ್ಗಾದಾಸನನ್ನು ಬಹಳವಾಗಿ ಹೊಗಳಿ, ನಯನಪಾಲನನ್ನು ಕುರಿತು— ನಯನಪಾಲಾ, ಇಷ್ಟುದಿನ ಯೋಗಭ್ರಷ್ಟ ನಂತೆ ನಿನ್ನ ಸ್ಥಿತಿಯಾಗಿತ್ತು. ಬೇಗನೆ ನಿನ್ನ ಕಣ್ಣುಗಳು ತೆರೆದು ನಿನ್ನ ಮನೆ ತನದ ಸಂರಕ್ಷಣಕ್ಕಾಗಿ ನೀನು ಮತ್ತೆ ತಿರುಗಿ ಬಂದದಕ್ಕಾಗಿ ನನಗೆ ಬಹಳ ಸಂತೋಷವಾಗಿದೆ. ನಿನ್ನ ತಮ್ಮನಾದ ಈ ಅಜಿತಸಿಂಗನನ್ನು ನಿನಗೆ ಒಪ್ಪಿ ಸುತ್ತೇನೆ. ಚಂದ್ರಾವತೀರಾಣಿಯನ್ನು ನಿನ್ನ ತಾಯಿಯೆಂದು ತಿಳಿದು, ಈ

ಕುಮಾರನನ್ನು ರಕ್ಷಿಸುವ ವಿಷಯದಲ್ಲಿ ನೀನು ಆಕೆಗೆ ಸಹಾಯಮಾಡು. ಇನ್ನುಮೇಲೆ ಔರಂಗಜೇಬನೊಡನೆ ಒದಗುವ ಯುದ್ಧದಲ್ಲಿ ನಿನ್ನಿಂದ ರಜಪೂತರಿಗೆ ದೊಡ್ಡ ಸಹಾಯವಾಗುವದು. ಇನ್ನು ನನ್ನ ಕೆಲಸತೀರಿತು. ಇಲ್ಲಿಯವರೆಗೆ ಈ ರಾಜಸ್ಥಾನದಲ್ಲಿ ಪ್ರಕಟವಾಗಿರಬೇಕೆಂದು ಗುರುಗಳ ಆಜ್ಞೆಯಾಗಿತ್ತು. ಇನ್ನು ನಾನು ಇಲ್ಲಿಂದ ಗುಪ್ತನಾಗುವೆನು ಎಂದು ಹೇಳಿ, ಯೋಗಿರಾಜರು ಗುಡಿಯನ್ನು ಹೊಕ್ಕರು. ಎಷ್ಟು ಹೊತ್ತಾದರೂ ಅವರು ಹೊರಗೆ ಬಾರದಾಗಲು, ನಯನಪಾಲ–ದುರ್ಗಾದಾಸರು ಗುಡಿಯೊಳಗೆ ಹೋಗಿ ನೋಡಿದರು; ಆದರೆ ಅಲ್ಲಿ ಯೋಗಿಗಳು ಇದ್ದಿಲ್ಲ. ಹೋಗಲಿಕ್ಕೆ ಅನ್ಯಮಾರ್ಗವಿಲ್ಲದೆ ಯೋಗಿಗಳು ಅಕಸ್ಮಾತ್ ಗುಪ್ತವಾದದ್ದಕ್ಕಾಗಿ ಎಲ್ಲರಿಗೂ ಆಶ್ಚರ್ಯವಾಯಿತು.

## ೧೮ನೆಯ ಪ್ರಕರಣ

# ಗರ್ವಭಂಗ

ರಾಜಕುಮಾರನನ್ನು ಒಪ್ಪಿಸಿ ಯೋಗೀಶ್ವರರು ಒಮ್ಮೆಲೆ ಅದೃಶ್ಯವಾದದ್ದಕ್ಕಾಗಿ ಎಲ್ಲರೂ ಆಶ್ಚರ್ಯಪಟ್ಟು ಮುಂದಿನ ಕೆಲಸದ ಬಗ್ಗೆ ಯೋಚಿಸತೊಡಗಿದರು. ಔರಂಗಜೇಬನನ್ನು ಇರುಕಿನಲ್ಲಿ ಸಿಗಿಸುವ ಯುಕ್ತಿಯು ನಯನಪಾಲನಿಗೆ ತೋಚಿತು. ಅದನ್ನು ಆತನು ದುರ್ಗಾದಾಸನ ಮುಂದೆ ಹೇಳಲು, ವಿಚಾರಾಂತದಲ್ಲಿ ದುರ್ಗಾದಾಸನಿಗೂ ಅದು ಸಮರ್ಪಕವಾಗಿ ತೋರಿತು. ಬಾದಶಹನು ನಯನಪಾಲನ ಮಾತಿನಮೇಲೆ ವಿಶ್ವಾಸವಿಟ್ಟು, ಆತನು ಹೇಳಿದಂತೆ ಕೇಳಿದರೆ ಉತ್ತಮರೀತಿಯಿಂದ ಕಾರ್ಯವು ಸಾಧಿಸಬಹುದಾಗಿತ್ತು; ಆದರೆ ತಂತ್ರಗಾರನಾದ ಅಲಮಗೀರನು ನಯನಪಾಲನ ಮಾತಿಗೆ ಕಿವಿಗೊಡುವನೋ ಇಲ್ಲವೋ ಎಂಬ ಸಂಶಯವು ಅವರಿಬ್ಬರನ್ನು ಬಾಧಿಸಹತ್ತಿತು. ಆದರೂ ನಯನಪಾಲನು ಯತ್ನಮಾಡದೆ ಬಿಡುವದಿಲ್ಲೆಂದು ಹೇಳಿ, ದುರ್ಗಾದಾಸನನ್ನು ಇಂದಿರೆಯ, ಹಾಗು ರಾಜಕುಮಾರನ ಸಂರಕ್ಷಣಕ್ಕಾಗಿ ನಿಯಮಿಸಿ, ತಾನು ಔರಂಗಜೇಬನ ಕಡೆಗೆ ಹೊರಡತಕ್ಕವನಿದ್ದನು. ಅಷ್ಟರಲ್ಲಿ ಶಿವಸಿಂಗನು ಅಕಸ್ಮಾತ್ತಾಗಿ ಅಲ್ಲಿಗೆ ಬಂದನು. ಶಿವಸಿಂಗನ ಗುರುತನ್ನು ವಾಚಕರು ಮರೆತಿರಲಿಕ್ಕಿಲ್ಲ. ಆತನು ರೂಪಮತಿಯ ಅಣ್ಣನು. ತಂದೆಯಾದ ವಿಜಯಸಿಂಹನ ಮಾತು ಕೇಳದೆ, ಆತನು ಜಸವಂತಸಿಂಗನ ಪಕ್ಷವನ್ನು ವಹಿಸಿದ್ದನು. ಶಿವಸಿಂಗನು ಈ ಪ್ರಸಂಗದಲ್ಲಿ ಬಂದದ್ದರಿಂದ ಬಹಳ ಅನುಕೂಲವಾಯಿತು. ನಯನಪಾಲನು ತಮ್ಮ ಪಕ್ಷಕ್ಕೆ

ಶುದ್ಧ ಮನಸ್ಸಿನಿಂದ ಕೂಡಿದ್ದನ್ನು ದುರ್ಗಾದಾಸನು ಶಿವಸಿಂಗನಿಗೆ ಹೇಳಿದನು. ಆದನ್ನು ಕೇಳಿ ಶಿವಸಿಂಗನು ಆಶ್ಚರ್ಯಪಟ್ಟರೂ, ದುರ್ಗಾದಾಸನ ಮೇಲೆ ವಿಶ್ವಾಸವಿಟ್ಟು ಆತನು ನಯನಪಾಲನನ್ನು ನಂಬಿದನು. ಮುಂದಿನ ಕಾರ್ಯ ವನ್ನು ಕುರಿತು ಆ ಮೂವರೂ ಕೂಡಿ ಆಲೋಚಿಸಿದರು. ನಯನಪಾಲನು ಔರಂಗಜೇಬನ ಕಡೆಗೆ ಹೋಗಿ ಅಲ್ಲಿಯ ಕೆಲಸವನ್ನು ಚಾತುರ್ಯದಿಂದ ಮಾಡಬೇಕೆಂತಲೂ, ಶಿವಸಿಂಗನು ತನಗೆ ಭೆಟ್ಟಿಯಾದ ರಜಪೂತ ಸೈನ್ಯಗಳಿಗೆ ಆಯಕಟ್ಟಿನ ಸ್ಥಳಹಿಡಿದು ಕುಳಿತುಕೊಳ್ಳುವಂತೆ ಬೋಧಿಸಬೇಕೆಂತಲೂ, ದುರ್ಗಾದಾಸನು ಅಜಿತಸಿಂಗನ, ಹಾಗು ಇಂದಿರೆಯ ಯೋಗಕ್ಷೇಮುವನ್ನು ನೋಡಿಕೊಂಡು ಯುದ್ಧಕ್ಕಾಗಿ ರಜಪೂತರನ್ನು ಪ್ರೋತ್ಸಾಹಿಸಬೇಕೆಂತಲೂ ಗೊತ್ತಾಯಿತು. ನಯನಪಾಲನು ವಿಲಂಬಮಾಡದೆ ಔರಂಗಜೇಬನ ಛಾವ ಣಿಯ ಕಡೆಗೆ ವೇಗದಿಂದ ಸಾಗಿದನು. ಸ್ವಲ್ಪಹೊತ್ತಿನಲ್ಲಿಯೇ ಆತನು ಆ ಪ್ರಚಂಡ ಛಾವಣಿಯ ಮುಂಭಾಗವನ್ನು ಮುಟ್ಟಿದನು. ನಯನಪಾಲನು ಎಲ್ಲರ ಗುರುತಿನವನಾದ್ದರಿಂದ ಅಲ್ಲಿಯವರು "ನೀನು ಸೆರೆಮನೆಯಿಂದ ಹ್ಯಾಗೆ ಪಾರಾಗಿಬಂದೆ" ಎಂದು ಕೇಳಿದರು. ಆದಕ್ಕೆ ನಯನಪಾಲನು—ನಾನು ಹ್ಯಾಗೆ ಪಾರಾದೆನು, ಇಲ್ಲಿಗೆ ಹ್ಯಾಗೆ ಬಂದೆನು, ಮುಂತಾದ ನಿರರ್ಥಕ ಮಾತುಗಳನ್ನು ಕೇಳುತ್ತ ಕಾಲಹರಣ ಮಾಡುವಲ್ಲಿ ಅರ್ಥವಿಲ್ಲ. ಈ ಕ್ಷಣ ದಲ್ಲಿ ಬಾದಶಹರ ಭೆಟ್ಟಿಯನ್ನು ಮಾಡಿಸಿರಿ. ನಾನು ಬಹು ಮಹತ್ವದ ಸುದ್ದಿಯನ್ನು ತಂದಿರುತ್ತೇನೆ. ಮೊದಲು ಬಾದಶಹರ ಮುಂದೆ ಆದನ್ನು ಹೇಳಬೇಕಾಗಿದೆ. ಆ ಮೇಲೆ ನನ್ನ ಸುದ್ದಿಯನ್ನು ಹೇಳುವೆನು, ಎಂದು ಹೇಳಿ ಅವಸರ ಮಾಡಹತ್ತಿದನು. ಶತ್ರುಗಳ ಕಡೆಯದೇನಾದರೂ ಮಹತ್ವದ ಸುದ್ದಿಯಿರಬಹುದೆಂದು ತಿಳಿದು, ಅಧಿಕಾರಿಗಳು ಬಾದಶಹನಿಗೆ ಆ ಸಂಗತಿ ಯನ್ನು ತಿಳಿಸಿದರು. ನಯನಪಾಲನು ಸುದ್ದಿಯನ್ನು ತಂದಿರುತ್ತಾನೆಂದು ಕೇಳಿದ ಕೂಡಲೆ ಬಾದಶಹನಿಗೆ ಬಹಳ ಆಶ್ಚರ್ಯವಾಯಿತು. ಸೆರೆಮನೆ ಯಲ್ಲಿದ್ದ ಆತನು, ಸುದ್ದಿಯನ್ನು ಅರಿತುಕೊಳ್ಳುವದಕ್ಕಾಗಿ ಇತ್ತಕಡೆಗೆ ಹ್ಯಾಗೆ ಬಂದನು? ತನ್ನ ಸಿಟ್ಟನ್ನು ಇಳಿಸಿ, ಮತ್ತೆ ತನ್ನ ಮನಸ್ಸನ್ನು ಸುಪ್ರಸನ್ನ ಮಾಡಿಕೊಳ್ಳಬೇಕೆಂದು ಆ ಮಹತ್ವಾಕಾಂಕ್ಷಿಯಾದ ತರುಣ ರಜಪೂತನು, ಯಾವದೊಂದು ಯುಕ್ತಿಯಿಂದ ಸೆರೆಮನೆಯಿಂದ ಪಾರಾಗಿಬಂದು ಶತ್ರುಗಳ

ಕಡೆಯ ಸುದ್ದಿಯನ್ನು ತಂದಿರಬಹುದು, ಎಂದು ಅಲಮಗೀರನು ಸಮಾಧಾನ ಮಾಡಿಕೊಂಡು, ನಯನಪಾಲನನ್ನು ಕರತರಲು ಆಜ್ಞಾಪಿಸಿದನು. ನಯನಪಾಲನು ಎದುರಿಗೆ ಬಂದು ನಿಂತಕೂಡಲೆ ಬಾದಶಹನು—ಏ ಬದಮಾಷ, ನೀನು ಮೋಸಮಾಡಿ ಸೆರೆಮನೆಯಿಂದ ಪಾರಾಗಿ ಬಂದೆಯೇನು ? ಎಂದು ಕೇಳಿದನು.

ಅಲಮಗೀರನ ಈ ಮಾತುಗಳನ್ನು ಕೇಳಿ ನಯನಪಾಲನು—ಖಾವಿಂದ, ನಾನು ಮೋಸಮಾಡಿ ಓಡಿಹೋಗಬೇಕಾಗಿದ್ದರೆ, ಇಲ್ಲಿಯ ತನಕ ಯಾಕೆ ಬರುತ್ತಿದ್ದೆನು ? ಆದರೆ ಗರೀಬಪರವರ, ನಾನು ಮಹತ್ವದ ಸುದ್ದಿಯನ್ನು ತಂದಿರುತ್ತೇನೆ. ಈಗ ಖಾವಿಂದರು ಅಚಲೇಶ್ವರ ಪರ್ವತದ ಮೇಲೆಯೂ, ರೂಪನಗರದ ಕೋಟೆಯ ಮೇಲೆಯೂ ಒಮ್ಮೆಲೆ ಸಾಗಿಹೋದರೆ, ಇಬ್ಬರು ಶತ್ರುಗಳು ಹಸ್ತಗತರಾಗಿ ದೊಡ್ಡ ಜಯಪ್ರಾಪ್ತಿಯಾಗುವಹಾಗಿದೆ. ಸದ್ಯಕ್ಕೆ ಅಚಲೇಶ್ವರ ದೇವಸ್ಥಾನದಲ್ಲಿ ದುರ್ಗಾದಾಸನು, ಆತನ ತಂಗಿಯಾದ ಇಂದಿರೆಯು, ಜಸವಂತಸಿಂಗನ ಮಗನಾದ ಅಜಿತಸಿಂಗಕುಮಾರನು ಇದ್ದಾರೆ. ಇತ್ತ ಎರಡನೆಯ ಮಗ್ಗಲಿಗೆ ಸಾದತಖಾನನ ಸೈನ್ಯವನ್ನು ಓಡಿಸಿ, ರೂಪಮತಿಯೊಡನೆ ಉದೇಪುರಕ್ಕೆ ಅಲ್ಪ ಸೈನ್ಯದೊಡನೆ ಸಾಗಿರುವ ರಾಜಸಿಂಹನು ಸಮೀಪದಲ್ಲಿಯೇ ಹೋಗುತ್ತಲಿದ್ದಾನೆ. ಇಂಥ ಸುಸಂಧಿಯು ತಿರುಗಿ ಒದಗಲಿಕ್ಕಿಲ್ಲ, ಎಂದು ಹೇಳಲು, ಔರಂಗಜೇಬನ ಕಣ್ಣುಗಳು ವಿಸ್ತೃತವಾದವು. ಈ ಸುದ್ದಿಯು ಈತನಿಗೆ ಹ್ಯಾಗೆ ಹತ್ತಿತು ? ಅದು ಎಷ್ಟರ ಮಟ್ಟಿಗೆ ನಿಜವಿರುತ್ತದೆ, ಎಂಬದನ್ನು ತಿಳಿಕೊಂಡ ಹೊರತು ಇವನನ್ನು ಹತ್ತರ ಬರಗೊಡಬಾರದು, ಎಂದು ಯೋಚಿಸಿ, ಅಲಮಗೀರನು ತನ್ನ ನಿತ್ಯದ ಕಠೋರವಾಣಿಯಿಂದ ಮತ್ತೆ ನಯನಪಾಲನನ್ನು ಕುರಿತು— ನಯನಪಾಲಾ, ನೀನು ಏನು ಹೇಳುತ್ತೀಯೆಂಬದು ನನ್ನ ಮನಸ್ಸಿನಲ್ಲಿ ಬರಲೊಲ್ಲದು. ಏನಂದಿ ? ದುರ್ಗಾದಾಸನೂ—ಇಂದಿರೆಯೂ—ಅಜಿತಸಿಂಗನೂ ಸದ್ಯಕ್ಕೆ ಈ ಅಚಲೇಶ್ವರ ಶಿಖರದ ಮೇಲೆ ಇರುವರೇ? ದಿಲ್ಲಿಯ ಸೆರೆಮನೆಯಿಂದ ಪಾರಾಗಿ ಬಂದಿರುವ ನಿನಗೆ ಇದು ಹ್ಯಾಗೆ ಗೊತ್ತಾಯಿತೋ ? ಅನ್ನಲು, ನಯನಪಾಲನು—ಖಾವಿಂದ, ನನಗೆ ಈ ಸುದ್ದಿಯು ಹ್ಯಾಗೆ ಗೊತ್ತಾಯಿತೆಂಬದನ್ನು ಸಮರ್ಪಕವಾಗಿ ಹೇಳಿದರೇ ನನ್ನ ಮಾತಿನ ಮೇಲೆ ವಿಶ್ವಾಸವಿಟ್ಟು, ನನ್ನನ್ನು ಮತ್ತೆ

ಪದರಿನಲ್ಲಿ ಹಾಕಿಕೊಂಡು, ನನ್ನ ಯುಕ್ತಿಗಳನ್ನು ಕೇಳಿರಿ. ಇಲ್ಲದಿದ್ದರೆ ಇದೇ ಕೈಯಲ್ಲಿ ನನ್ನನ್ನು ಶೂಲಕ್ಕೆ ಏರಿಸಿ ಹದ್ದು ಕಾಗೆಗಳಿಂದ ಹರಿಸಿ ತಿನಿಸಲಿಕ್ಕೆ ಖಾವಂದರಿಗೇನು ತೊಂದರೆಯಾಗುವ ಹಾಗಿದೆ? ಗರೀಬಲಾಚಾರಬಂದಾ ಗುಲಾಮ. ಅಪ್ಪಣೆಯಾದರೆ ಹೇಳುವೆನು. ಇಲ್ಲದಿದ್ದರೆ ಹುಜೂರುಮಾಡಿದ್ದು ಮಾಡಲಿ, ಎಂದು ನುಡಿದು ಸುಮ್ಮನಾದನು. ಆಗ ಔರಂಗಜೇಬನು ಮಾತಾಡಲಿಕ್ಕೆ ಸಮ್ಮತಿಯನ್ನು ತೋರಿಸುವದಕ್ಕಾಗಿ ತಲೆಯನ್ನು ಅಲ್ಲಾಡಿಸಲು, ನಯನಪಾಲನು—ಗರೀಬಪರವರ, ತಮ್ಮ ಅಪ್ಪಣೆಯಂತೆ ನನ್ನನ್ನು ಸೆರೆಮನೆಯಲ್ಲಿ ಹಾಕಿದರಷ್ಟೆ? ಆದರೆ ಏನಾದರೂ ಹಂಚಿಕೆಮಾಡಿ ಸೆರೆಮನೆಯಿಂದ ಪಾರಾಗಿ, ಕಳೆದುಹೋಗಿದ್ದ ಖಾವಿಂದರ ಸುಪ್ರಸನ್ನತೆಯನ್ನು ಮತ್ತೆ ಸಂಪಾದಿಸಬೇಕೆಂತಲೂ, ಯುದ್ಧದಲ್ಲಿ ಪರಾಕ್ರಮವನ್ನು ತೋರಿಸಿ, ತಮ್ಮ ಮನಸ್ಸನ್ನು ಸಂತೋಷಪಡಿಸಬೇಕೆಂತಲೂ ನಿಶ್ಚಯಿಸಿ ದಿಲ್ಲಿಯಿಂದ ಓಡುತ್ತ ಬಂದೆನು. ಸುಮಾರು ಹತ್ತುಹದಿನೈದು ಹರದಾರಿಗಳ ಮೇಲೆ ಆ ಇಬ್ಬರು ಅಣ್ಣತಂಗಿಯರು ನನಗೆ ಭೆಟ್ಟಿಯಾದರು. ಒಬ್ಬರಗುರುತು ಮತ್ತೊಬ್ಬರು ಹಿಡಿದೆವು. ಆಗ ದುರ್ಗಾದಾಸನು ನನ್ನ ಮೇಲೆ ಏರಿಬರಲು, ನಾನು ಇದು ಬಡದಾಡಲಿಕ್ಕೆ ಸಮಯವಲ್ಲೆಂದು ತಿಳಿದು ಆತನನ್ನು ಮೋಸಗೊಳಿಸುವದಕ್ಕಾಗಿ— ದುರ್ಗಾದಾಸಾ, ನಾನು ಮೊದಲಿನ ನಯನಪಾಲನಲ್ಲ. ಬಾದಶಹನ ನಿರ್ದಯದ ನಡತೆಯಿಂದ ಪಶ್ಚಾತ್ತಾಪಪಟ್ಟು ಉದೇಪುರದ ರಾಜಸಿಂಹನ ಚಾಕರಿಯಲ್ಲಿ ಜನ್ಮ ಕಳೆಯಬೇಕೆಂದು ನಿಶ್ಚಯಿಸಿದ ನಯನಪಾಲನಿರುತ್ತೇನೆ. ನೀನು ನನ್ನನ್ನು ಮಿತ್ರನೆಂದು ತಿಳಿದು ಸ್ವೀಕರಿಸುವ ಹಾಗಿದ್ದರೆ ಸ್ವೀಕರಿಸು. ಈಗ ಹ್ಯಾಗೂ ರಜಪೂತರು ಆಲಮಗೀರನೊಡನೆ ಯುದ್ಧವನ್ನು ಹೂಡಿರುತ್ತಾರೆ. ಅದರಲ್ಲಿ ನಾವು ಕೈಲಾದಮಟ್ಟಿಗೆ ಸಹಾಯ ಮಾಡೋಣ, ಅನ್ನಲು, ಕಣ್ಣಲ್ಲಿ ನೀರು ತಂದು ನಾನು ಆಡಿದ ಈ ಮಾತುಗಳ ಪರಿಣಾಮವು ದುರ್ಗಾದಾಸನಿಗಿಂತ ಇಂದಿರೆಯ ಮೇಲೆ ಚನ್ನಾಗಿ ಆಯಿತು. ಆಕೆಯು ಅಣ್ಣನಿಗೆ ಹೇಳುವಹಾಗೆ ಹೇಳಿ, ನನ್ನನ್ನು ಸಂಗಡ ಕರಕೊಂಡು ಹೋಗುವಂತೆ ಮಾಡಿದಳು. ನಾನು ಅವರ ಸಂಗಡ ಹೋಗುವಾಗ ಅವರ ಹೊಟ್ಟೆಯಲ್ಲಿ ಹೊಕ್ಕು ಬೆನ್ನಲ್ಲಿ ಬಿರಿದು, ಹಲವು ಸಂಗತಿಗಳನ್ನು ಕೇಳಿಕೊಂಡೆನು. ರಾಜಸಿಂಹನು ಸಾದತಖಾನನನ್ನು ಓಡಿಸಿ

ರೂಪಮತಿಯನ್ನು ಕರಕೊಂಡು ಹೋದ ಸುದ್ದಿಯು ನನಗೆ ಗೊತ್ತಾಯಿತು. ನಾವು ಅಚಲೇಶ್ವರ ದೇವಸ್ಥಾನಕ್ಕೆ ಹೋಗಲು, ಒಬ್ಬ ಗೋಸಾವಿಯ ಬಳಿಯಲ್ಲಿ ಅಜಿತಸಿಂಗನು ಇದ್ದದ್ದನ್ನು ನೋಡಿದೆನು. ಈ ಎರಡು ಸಂಗತಿಗಳು ಗೊತ್ತಾದ ಕೂಡಲೆ ಖಾವಂದರವರಿಗೆ ಈ ಸುದ್ದಿಯನ್ನು ಯಾವಾಗ ತಿಳಿಸೇನೆಂಬ ಚಡಪಡಿಕೆಯು ನನಗೆ ಆಯಿತು. ಅಷ್ಟರಲ್ಲಿ ಖಾವಂದರವರ ಪ್ರಚಂಡ ಸೇನೆಯು ಗುಡ್ಡದ ಮೇಲಿಂದ ಕಾಣಿಸಲು, ಒಂದು ನೆವ ತೆಗೆದು ಸುದ್ದಿಯನ್ನು ಹೇಳಲಿಕ್ಕೆ ಓಡುತ್ತ ಸನ್ನಿಧಿಗೆ ಬಂದಿರುತ್ತೇನೆ. ಆಚಲೇಶ್ವರ ಶಿಖರಕ್ಕೂ, ರೂಪನಗರದ ಕೋಟೆಗೂ ನಡುವೆ ವಿಸ್ತಾರವಾದ ಕಂದರವಿರುತ್ತದೆ. ತಮ್ಮ ಪ್ರಚಂಡಸೇನೆಯು ಅಲ್ಲಿ ಸುರಕ್ಷಿತವಾಗಿ ನಿಂತು, ಒಮ್ಮೆಲೆ ಎರಡೂ ಕಡೆಗೆ ಏರಿಹೋಗಲಿಕ್ಕೆ ಅನುಕೂಲವಾಗುವದು. ರಜಪೂತರ ಬಲವೆಷ್ಟು? ಅವರ ಸೈನ್ಯವು ಎಷ್ಟಿರುತ್ತದೆಂಬದು ನನಗೆ ಗೊತ್ತಿರುತ್ತದೆ. ಅಲ್ಪಕಾಲದಲ್ಲಿ ಖಾವಂದರ ಪ್ರಚಂಡ ಸೈನ್ಯವು ಜಯಶಾಲಿಯಾಗುವದು. ಇದರಿಂದ ಅಜಿತಸಿಂಗನು ಸಿಗುವನು; ರೂಪಮತಿಯು ಕೈಸೇರಿ ಖಾವಿಂದರ ಪ್ರತಿಜ್ಞೆಯು ಪೂರ್ಣವಾಗುವದು. ರಾಜಸಿಂಹ–ವಿಜಯಸಿಂಹರ, ಹಾಗು ಉಳಿದ ರಜಪೂತರ ಮಗ್ಗಲು ಮುರಿಯುವವು; ಆದರೆ ಕಾವು ಮೀರಿದರೆ ಎಲ್ಲ ಕೆಲಸ ಕೆಟ್ಟು ಹೋಗುವದು; ಯಾಕಂದರೆ, ಅಜಿತಸಿಂಗನನ್ನು ದುರ್ಗಾದಾಸನು ಎಲ್ಲಿಯಾದರೂ ಅಡಗಿಸಿ ಇಡುವನು. ರೂಪಮತಿಯು ಉದೇಪುರವನ್ನು ಮುಟ್ಟುವಳು. ಆ ಮೇಲೆ ರೂಪನಗರವನ್ನು ಕಷ್ಟಪಟ್ಟು ಸ್ವಾಧೀನಪಡಿಸಿಕೊಂಡರೂ ವ್ಯರ್ಥವಾಗುವದು. ಈ ಎಲ್ಲ ಸಂಗತಿಗಳ ವಿಚಾರವನ್ನು ಮಾಡಿ ಖಾವಂದರವರು ಈ ಗುಲಾಮನನ್ನು ಆಜ್ಞಾಪಿಸಬೇಕು, ಎಂದು ನುಡಿದು ನಯನಪಾಲನು ಸುಮ್ಮನಾದನು.

ನಯನಪಾಲನ ಈ ಮಾತುಗಳನ್ನು ಕೇಳಿ ಔರಂಗಜೇಬನು ವಿಚಾರಮಗ್ನನಾದನು. ಆತನು— ನಯನಪಾಲಾ, ಒಳ್ಳೆಯದು, ವಿಚಾರಮಾಡುತ್ತೇನೆ. ನಿನ್ನ ಮಾತಿನಂತೆಯೇ ಮಾಡೇನೆಂದು ಮಾತ್ರ ತಿಳಿಯಬೇಡ. ನಾಳೆ ಬೆಳಗಿನಲ್ಲಿ ನಿನಗೆ ತಿಳಿಸುವೆನು. ಸದ್ಯಕ್ಕೆ ನೀನು ಕಾವಲಿನಲ್ಲಿರು, ಎಂದು ಹೇಳಿ, ಆತನನ್ನು ಬಾದಶಹನು ಪ್ರತಿಬಂಧದಲ್ಲಿಡಿಸಿದನು. ಆ ದಿನ ರಾತ್ರಿ ಔರಂಗಜೇಬನಿಗೆ ನಿದ್ದೆ ಬರಲಿಲ್ಲ. ಬೆಳತನಕ ಒಬ್ಬನೇ ವಿಚಾರಮಾಡಿ,

ಬೆಳಗಾಗುತ್ತಲೆ ನಯನಪಾಲನನ್ನು ಕರೆಸಿ–ನಯನಪಾಲಾ, ನಿನ್ನಯುಕ್ತಿಯೇ ನಮಗೆ ಸಮರ್ಪಕವಾಗಿ ತೋರುತ್ತದೆ. ನಿನ್ನನ್ನು ಸಿಟ್ಟಿನಭರದಲ್ಲಿ ಪ್ರತಿ ಬಂಧದಲ್ಲಿರಿಸಿದ್ದನ್ನು ನೀನು ಮನಸ್ಸಿನಲ್ಲಿ ಹಿಡಿಯಬೇಡ. ಈ ಯುದ್ಧದಲ್ಲಿ ಜಯಪ್ರಾಪ್ತಿಯಾದಮೇಲೆ ನಿನಗೆ ಏನು ಕೊಡುವೆನೆಂಬದನ್ನು ಈಗ ಹೇಳುವದಿಲ್ಲ. ಅನ್ನಲು, ನಯನಪಾಲನಿಗೆ ಬಹಳ ಸಂತೋಷವಾಯಿತು. ಆತನು ಹೆಚ್ಚಿಗೆ ಏನೂ ಮಾತಾಡದೆ ''ತಮ್ಮ ಸಿದ್ಧತೆಯಾದ ಕೂಡಲೆ ನನಗೆ ಅಪ್ಪಣೆಯಾಗಬೇಕು, ಹಾದಿಯನ್ನು ತೋರಿಸಲಿಕ್ಕೆ ನಾನು ಸಿದ್ಧನಾಗಿರುತ್ತೇನೆ." ಎಂದು ಹೇಳಿದನು. ಇನ್ನು ಅರ್ಧತಾಸಿನಲ್ಲಿ ಸೈನ್ಯದ ತಳವು ಕಿತ್ತಬೇಕೆಂದು ಔರಂಗಜೇಬನು ಆಜ್ಞಾಪಿಸಿದನು. ತಾನು ಎಲ್ಲಿಗೆ ಹೋಗತಕ್ಕವನೆಂಬದನ್ನು ಬಾದಶಹನು ಬೇರೆ ಯಾರಿಗೂ ತಿಳಿಸಲಿಲ್ಲ. ಬಾದಶಹನನ್ನು ಕೇಳುವ ಧೈರ್ಯವು ಯಾರಿಗೂ ಇದ್ದಿಲ್ಲ. ಸಾದತಖಾನನು ಧೈರ್ಯಮಾಡಿ, "ಎಲ್ಲಿಗೆ ದಯಮಾಡಿಸುವ"ದದು ಕೇಳಲು, ಔರಂಗಜೇಬನು ಸಿಟ್ಟಿನಿಂದ ಆತನ ಮೈಮೇಲೆ ಹೋದನು. ಯುದ್ಧದಲ್ಲಿ ಸೋತು ಓಡಿಬಂದದ್ದರಿಂದ ಬಾದಶಹನು ಆತನ ಮೇಲೆ ಸಿಟ್ಟಾಗಿದ್ದನು. ಆಲಮಗೀರನು ಸಾದತಖಾನನಿಗೆ— ಇಂದು ಸೇನಾಪತಿಯು ನಾನು. ನಾನು ಹೋದತ್ತ ನೀವೆಲ್ಲರು ಬರತಕ್ಕದ್ದು. ಹೆಚ್ಚಿನ ಪ್ರಶ್ನೆಮಾಡುವ ಕಾರಣವಿಲ್ಲ, ಎಂದು ಗದ್ದರಿಸಿದನು. ಅಂದಬಳಿಕ ಹೆಚ್ಚಿನ ಪ್ರಶ್ನಗಳನ್ನು ಮಾಡಲಿಕ್ಕೆ ಸಾದತಖಾನನಿಗೆ ಹ್ಯಾಗೆ ಧೈರ್ಯವಾಗಬೇಕು ? ಮೊಗಲ ಸೈನ್ಯಕ್ಕೆ ಬೇಗನೆ ತಳಕಿತ್ತಿ ಗೊತ್ತಿದ್ದಿಲ್ಲ. ಆದರೆ ಔರಂಗಜೇಬನು ಅತಿ ನಿಷ್ಠುರನಾಗಿ ಈಗ ತಳಕಿತ್ತಲೇಬೇಕೆಂದು ಹಟಹಿಡಿದು, ಕುದುರೆಹತ್ತಿ ನಿಂತದ್ದರಿಂದ, ನಾಲ್ಕು ತಾಸಿನಮೇಲೆ ಸೈನ್ಯವು ಮುಂದಕ್ಕೆ ಸಾಗಿತು. ಔರಂಗಜೇಬನು ಅಶ್ವಾರೂಢನಾಗಿ ಎಲ್ಲಕ್ಕೂ ಮುಂದೆ ಸಾಗಿದ್ದನು. ನಯನಪಾಲನು ಆತನ ಸಂಗಡ ನಡೆದಿದ್ದನು. ನಯನಪಾಲನು ಹೇಳಿದ ವಿಶಾಲವಾದ ಕಂದರವನ್ನು ಒಂದು ಇಕ್ಕಟ್ಟಿನ ಮಾರ್ಗದಿಂದ ಪ್ರವೇಶಿಸಬೇಕಾಗಿತ್ತು. ಹತ್ತುಜನರ ಹೊರತು ಹನ್ನೊಂದನೆಯವನು ಪ್ರವೇಶಿಸಲಿಕ್ಕೆ ಬಾರದಷ್ಟು ಆ ಮಾರ್ಗವು ಸಂಕೋಚವಾಗಿತ್ತು. ''ವಿನಾಶಕಾಲಕ್ಕೆ ವಿಪರೀತ ಬುದ್ಧಿಯೆ"ಂಬಂತೆ, ಔರಂಗಜೇಬನು ದೀರ್ಘವಿಚಾರಕ್ಕೆ ಹೋಗದೆ, ಆ ಇಕ್ಕಟ್ಟಿನ ಮಾರ್ಗದಿಂದ ತನ್ನ

ಕುದುರೆಯನ್ನು ಮುಂದಕ್ಕೆ ನೂಕಿದನು. ಆತನ ಬೆನ್ನಹತ್ತಿ ಹತ್ತು ಹತ್ತು ಜನರಂತೆ ಸಾಲುಗಟ್ಟಿ ಪ್ರಚಂಡ ಸೈನ್ಯವು ಕಂದರವನ್ನು ಪ್ರವೇಶಿಸಹತ್ತಿತು. ಹೀಗೆ ಸೈನ್ಯವು ಪ್ರವೇಶಿಸುವಾಗ ಅದಕ್ಕೆ ಯಾರಿಂದಲೂ ತೊಂದರೆಯಾಗ ಲಿಲ್ಲ. ಎಲ್ಲ ಕಡೆಯಲ್ಲಿ ಶಾಂತತೆಯು ಪ್ರಸ್ಥಾಪಿತವಾಗಿತ್ತು. ತನ್ನ ಸೈನ್ಯ ವನ್ನು ತಡೆಯುವಷ್ಟು ಶಕ್ತಿಯು ರಜಪೂತರಲ್ಲಿ ಇಲ್ಲೆಂತಲೂ, ತನ್ನ ಪ್ರಚಂಡ ಸೈನ್ಯವನ್ನು ದೂರದಿಂದ ನೋಡಿ ಅವರು ಅಂಜಿ ಸುಮ್ಮನೆ ಕುಳಿತಿರುತ್ತಾ ರೆಂತಲೂ ಔರಂಗಜೇಬನು ತಿಳಕೊಂಡನು. ಕ್ರಮವಾಗಿ ಸೈನ್ಯವೆಲ್ಲ ಕಂದರ ವನ್ನು ಪ್ರವೇಶಿಸಿ ಅರ್ಧ ಜನಾನಖಾನೆಯು ಕಂದರವನ್ನು ಸೇರಿತು. ಇನ್ನು ಉದೇಪುರೀ ಬೇಗಮೆಯು ದಾಟಿಹೋಗುವ ಸಂಧಿಯಲ್ಲಿ ರಜಪೂತರು ಒಮ್ಮೆಲೆ ಮಾರ್ಗವನ್ನು ತಡೆದು, ಔರಂಗಜೇಬನ ಸೈನಕರನ್ನು ತುಂಡರಿಸಿ, ಉದೇಪುರಿಯನ್ನು ಸೆರೆಹಿಡಿದರು. ಸೈನ್ಯದ ಹತ್ತುಪಟ್ಟು ಇದ್ದ ಮೊಗಲರ ಬಾಜಾರಬುಣಗಿನವರು ಉದೇಪುರಿಯ ಹಿಂದೆ ಇದ್ದರು. ಕೆಲಸಕ್ಕೆ ಬಾರದ ಆ ಜನರು, ರಜಪೂತರ ಈ ಉಪಟಲವನ್ನು ನೋಡಿ, ಬೆದರಿ ದಿಕ್ಕುಪಾಲಾಗಿ ಓಡಹತ್ತಿದರು. ಅದರಿಂದ ವಿಚಿತ್ರ ಗದ್ದಲವಾಗಹತ್ತಿತು. ಹೀಗೆ ಮಾರ್ಗ ವನ್ನು ಪ್ರತಿಬಂಧಿಸಿದವರು ರಾಜಸಿಂಹನ ಸೈನಿಕರಾಗಿದ್ದರು. ಹೀಗೆ ಪ್ರತಿಬಂಧಿಸುವ ಬಗ್ಗೆ ದುರ್ಗಾದಾಸನು ಈ ಮೊದಲೆ ರಾಜಸಿಂಹನನ್ನು ಬೇಡಿಕೊಂಡಿದ್ದನು.

ಇದೇನು ಗದ್ದಲವೆಂದು ಮುಂದಕ್ಕೆ ಹೋದ ಮೊಗಲ ಸೈನಿಕರು ಹಿಂದಕ್ಕೆ ಬಂದು ನೋಡಲು, ಅವರ ಶಿರಸ್ಸುಗಳು ನೆಲಕ್ಕುರುಳಿದವು. ಹೀಗೆ ತಿರುಗಿಬಂದವರು ನೆಲಕ್ಕೆ ಬೀಳಹತ್ತಿದ್ದರಿಂದ ಸೈನಿಕರು ತಾವು ಪ್ರವೇಶಿಸಿದ ಮಾರ್ಗದ ಕಡೆಗೆ ಬಾರದಾದರು. ತಾನು ಪ್ರವೇಶಿಸಿದ ಮಾರ್ಗದ ಕಡೆಗೆ ಗದ್ದಲವೇನೆಂದು ಔರಂಗಜೇಬನು ವಿಚಾರಿಸುತ್ತಿರಲು, ಎರಡೂ ಕಡೆಯ ಗುಡ್ಡಗಳ ಮೇಲಿಂದ ಬಾಣ, ಗುಂಡು, ಕಲ್ಲು, ಬೇರೆ ಪ್ರಾಣಹಾರಕ ಪದಾರ್ಥ ಗಳು ಆತನ ಸೈನ್ಯದಮೇಲೆ ಬಂದು ಬೀಳಹತ್ತಿ ಸೈನಿಕರ ಪ್ರಾಣಹರಣ ಮಾಡಹತ್ತಿದವು. ಆಗ ಔರಂಗಜೇಬನು ಒಮ್ಮೆ ಎರಡೂ ಮಗ್ಗಲು ನೋಡಿ ದನು. ತಾನು ಎಂಥ ಭಯಂಕರ ಸ್ಥಿತಿಯಲ್ಲಿರುವೆನು, ಎಷ್ಟು ನಿರಾಶೆಯ ಪ್ರಸಂಗವಿರುವದು ಎಂಬದರಕಲ್ಪನೆಯು ಬಾದಶಹನಿಗೆ ಕೆಲವುಟ್ಟಿಗೆ ಆಯಿತು.

ತನ್ನ ಸೈನ್ಯದಲ್ಲಿ ಎರಡು ಭಾಗಗಳನ್ನು ಮಾಡಿ, ಒಮ್ಮೆಲೆ ಅಚಲೇಶ್ವರ ಪರ್ವತದ ಮೇಲೆ, ಹಾಗು ರೂಪನಗರದ ಕೋಟೆಯ ಮೇಲೆ ಸಾಗಿಹೋಗ ಬೇಕೆಂದು ಮಾಡಿದನು; ಆದರೆ ಎರಡೂ ಮಗ್ಗಲಿನ ಪರ್ವತಗಳು ಬಹಳ ಕಡಿದಾಗಿದ್ದದ್ದರಿಂದ ಮನುಷ್ಯರಂತು ಇರಲಿ, ಉಡಗಳಾದರೂ ಸರಸರ ಏರಿಹೋಗುವವೋ ಇಲ್ಲವೋ ಎಂಬ ಸಂಶಯವು ಬಾದಶಹನಲ್ಲಿ ಉಂಟಾಗಿ, ಆತನು ನಿರಾಶೆಪಟ್ಟನು. ಆದರೆ ಆತನು ನಿರಾಶೆಪಟ್ಟು, ಸುಮ್ಮನೆ ಕುಳಿತು ಕೊಳ್ಳುವ ಸ್ವಭಾವದವನಿದ್ದಿಲ್ಲ. ಆತನು ಕೂಡಲೆ ಸೈನ್ಯದಲ್ಲಿ ಎರಡು ಭಾಗ ಗಳನ್ನು ಮಾಡಿ, ಇಬ್ಬರು ಅಧಿಕಾರಿಗಳನ್ನು ನಿಯಮಿಸಿ, ಕೂಡಲೆ ಎರಡೂ ಪರ್ವತಗಳನ್ನು ಏರಿಹೋಗಬೇಕೆಂದು ಆಜ್ಞಾಪಿಸಿದನು; ಆದರೆ ಅಪ್ಪಣೆ ಮಾಡಲಿಕ್ಕೆ ಆತನಿಗೆ ಸುಲಭವಾದಷ್ಟು, ಅದನ್ನು ನಡಿಸಲಿಕ್ಕೆ ಆತನ ಜನ ರಿಗೆ ಸುಲಭವಾಗಲಿಲ್ಲ. ಅವರು ಪರ್ವತವನ್ನು ಏರಹತ್ತಿದ ಕೂಡಲೆ ಪ್ರತಿಯೊಂದು ಕಂಟಿಯ, ಇಲ್ಲವೆ ಬಂಡೆಯ ಹಿಂದಿನಿಂದ ಭಿಲ್ಲರ ಇಲ್ಲವೆ ರಜ ಪೂತರ ತಲೆಯು ಕಾಣಹತ್ತಿ, ಬಾಣ, ಗುಂಡು ಮೊದಲಾದವುಗಳು ಮುಸ ಲ್ಮಾನರ ಮೇಲೆ ಸುರಿಯುಹತ್ತಿದವು. ಔರಂಗಜೇಬನ ಸೈನಿಕರಲ್ಲಿ ಕೆಲವರು ಶಸ್ತ್ರಾಸ್ತ್ರಗಳ ಪೆಟ್ಟಿನಿಂದ ನೆಲಕ್ಕುರುಳಿದರು. ಕೆಲವರು ಕಾಲುಜಾರಿ ನೆಲಕ್ಕು ರುಳಿದರು. ಶತ್ರುಗಳ ಕಡೆಯವನೊಬ್ಬನೂ ಸಾಯದೆ, ತನ್ನ ಸೈನಿಕರು ಮಾತ್ರ ಪಟಪಟ ಬಿದ್ದು, ತರಗೆಲೆಗಳಂತೆ ಕೆಳಗೆ ಉದುರಿ ಬೀಳುವದನ್ನು ನೋಡಿ ಔರಂಗಜೇಬನು ನೊಂದುಕೊಂಡನು. ಆಗ ಆತನು ಏನು ಮಾಡ ಬೇಕೆಂಬದನ್ನು ಅರಿಯದೆ, ಕೈಲಾಗದವನಂತೆ ಹುಚ್ಚು ಹಿಡಿದು ಎಡಕ್ಕೆಬಲಕ್ಕೆ ನೋಡುತ್ತ ನಿಂತುಕೊಂಡನು. ಅವನ ಉಪದೇಶಕನಾದ ನಯನಪಾಲನು ಎತ್ತ್ರೋ ಹೊರಟು ಹೋಗಿದ್ದನು. ಈಗ ಆತನು ಔರಂಗಜೇಬನ ಕಣ್ಣಿಗೆ ಬಿದ್ದಿದ್ದರೆ ನುಚ್ಚುನುಚ್ಚಾಗುತ್ತಿದ್ದನೆಂಬದರಲ್ಲಿ ಸಂಶಯವಿಲ್ಲ. ತನ್ನ ಸೈನ್ಯದ ಸಂಹಾರವು ಮಿತಿಮೀರಿ ಆಗುವದನ್ನು ನೋಡುವದಕ್ಕಿಂತ, ಸೈನಿಕರನ್ನು ಕರೆಸಿಕೊಂಡು ಹಿಂದಿರುಗಬೇಕೆಂಬ ವಿಚಾರವು ಬಾದಶಹನ ಮನಸ್ಸಿನಲ್ಲಿ ಮೇಲಿಂದಮೇಲೆ ಬರುತ್ತಿತ್ತು; ಆದರೆ ಹಿಂದಿರುಗಿ ಹೋಗುವಾಗ ತನ್ನ ಪರಿ ಣಾಮವೇನಾಗುವದೆಂಬದು ಇನ್ನೂ ಆತನಿಗೆ ಗೊತ್ತಾಗಿದ್ದಿಲ್ಲ. ಆತನು ಹೀಗೆ ವಿಚಾರ ಮಗ್ನನಾಗಿರಲು, "ಒಬ್ಬರಜಪೂತಚಾರನು, ರಾಜಸಿಂಹನ

ಪತ್ರವನ್ನು ತಕ್ಕೊಂಡು ನಿಮ್ಮಕಡೆ ಬಂದಿದ್ದಾನೆ, ಆತನನ್ನು ಸನ್ನಿಧಿಗೆ ಕರಕೊಂಡು ಬರಲಾ" ಎಂದು ಒಬ್ಬ ಸರದಾರನು ಔರಂಗಜೇಬನನ್ನು ಕೇಳಿದನು. ಔರಂಗಜೇಬನು ಮೊದಲು ಕರಕೊಂಡು ಬರಬೇಡೆಂದು ಆಜ್ಞಾಪಿಸಿದನು; ಆದರೆ ಆತನಿಗೆ ಮತ್ತೆ ಏನು ತಿಳಿಯಿತೋ ಏನೋ ಕರಕೊಂಡ ಬರಬೇಕೆಂದು ಮತ್ತೆ ಆಜ್ಞಾಪಿಸಿದನು. ಕೆಲಹೊತ್ತಿನ ಮೇಲೆ ಆ ಚಾರನು ಬಂದು ರಾಜಸಿಂಹನ ಪತ್ರವನ್ನು ಬಾದಶಹನಿಗೆ ಕೊಟ್ಟನು. ಬಾದಶಹನು ಅದನ್ನು ಆತುರದಿಂದ ಒಡೆದು ನೋಡಲು, ಅದರಲ್ಲಿ "ಪರಮೇಶ್ವರನು ಎಲ್ಲರನ್ನು ಸುಖದಿಂದಿರಿಸಿ ಬಾದಶಹನಿಗೆ ಸದ್ಬುದ್ಧಿಯನ್ನು ಕೊಡಲಿ. ಆಲಮಗೀರ ಬಾದಶಹರೇ, ನೀವು ಎಂಥ ಭಯಂಕರವಾದ ಇರುಕಿನಲ್ಲಿ ಸಿಕ್ಕಿರುತ್ತೀರೆಂಬದನ್ನು ವಿಚಾರಿಸಿರಿ. ನಿಷ್ಕಾರಣವಾಗಿ ದೇವರ ಪ್ರಾಣಿಗಳ ಸಂಹಾರವಾಗುವದನ್ನು ನೋಡಿ ನನಗೆ ಬಹಳ ದುಃಖವಾಗುತ್ತದೆ. ಆದರೆ ನೀವು ಸ್ವತಃ ರಜಪೂತರ ಶೀಲದ ಮೇಲೆಯೂ, ನನ್ನ ಹೆಂಡತಿಯ ಮರ್ಯಾದೆಯ ಮೇಲೆಯೂ, ಬಡವರಾದ ಹಿಂದುಗಳ ಜೀವದಮೇಲೆಯೂ ಗದಾಪ್ರಹಾರ ಮಾಡಲು ಉದ್ಯೋಗಿಸಿರುವಿರಿ. ಹೀಗೆ ಮಾಡಬಾರದೆಂದು ನಾನು ವಿನಯದಿಂದ ಹೇಳಿಕೊಂಡರೂ ನನ್ನ ಸದ್ಬುದ್ಧಿವಾದಕ್ಕೆ ನೀವು ಕಿವಿಗೊಡಲಿಲ್ಲ. ಆದ್ದರಿಂದ ಎಲ್ಲರ ಸಂರಕ್ಷಣಕ್ಕಾಗಿ ನನ್ನ ಕತ್ತಿಯನ್ನು ಒರೆಯಿಂದ ಹಿರಿದು, ಈ ಯುದ್ಧ ಪ್ರಸಂಗವನ್ನುಂಟುಮಾಡಬೇಕಾಯಿತು. ಉದೇಪುರೀಬೇಗಮೆಯು ನನ್ನ ಬಳಿಯಲ್ಲಿರುತ್ತಾಳೆ; ಆಕೆಯು ನನ್ನ ಒಡಹುಟ್ಟಿದ ತಂಗಿಗೆ ಸಮಾನಳಾಗಿರುವಳು. ನನ್ನ ಪತ್ನಿಯು ಆಕೆಯ ಯೋಗಕ್ಷೇಮವನ್ನು ವಿಚಾರಿಸಿ ಸಮಾಧಾನವನ್ನು ಹೇಳುತ್ತಿರುವಳು. ಬೇಗಮೆಯ ಕೂದಲು ಕೊಂಕಲಾರದು. ತಾವು ಹೇಳಿದಾಗ ಆಕೆಯನ್ನು ತಮ್ಮ ಕಡೆಗೆ ಕಳಿಸುವೆನು. ನಿಮ್ಮ ಬಾಜಾರಬುಣಗಿನವರು ಕಾಳುಕಡಿ ಮೊದಲಾದ ಪದಾರ್ಥಗಳನ್ನು ಚಲ್ಲಿಕೊಟ್ಟು, ದಶದಿಕ್ಕುಗಳಿಗೆ ಓಡಿಹೋದರು. ಕಂದರದಲ್ಲಿ ಸಿಕ್ಕಿರುವ ನಿಮ್ಮ ಸೈನ್ಯದ ಗತಿಯು ಏನಾಗಿರುವದೆಂಬದನ್ನು ನೀವು ನೋಡೇ ನೋಡುವಿರಿ. ಈ ಪ್ರಸಂಗದಲ್ಲಿ ಒಪ್ಪಂದ ಮಾಡಿಕೊಂಡು ಹೋಗಲಿಚ್ಛಿಸುತ್ತಿದ್ದರೆ, ಶಸ್ತ್ರಾಸ್ತ್ರಗಳನ್ನು ಕಂದರದಲ್ಲಿ ಚಲ್ಲಿಕೊಟ್ಟು ನೀವು ಹೊರಟು ಹೋಗಬಹುದು. ನಾನು ನಿಮ್ಮನ್ನು ಹೋಗಗೊಡುತ್ತೇನೆ. ಇದರಮೇಲೆ

ನಿಮ್ಮ ಇಚ್ಛೆಯಂತೆ ಮಾಡಬೇಕು.

ಪತ್ರವನ್ನು ಓದಿದಕೂಡಲೆ ಔರಂಗಜೇಬನು ಸಂತಾಪದಿಂದ ಉರಿಯ ಹತ್ತಿದನು. ಆತನು ಪತ್ರತಂದಿದ್ದ ರಜಪೂತನ ಕಡೆಗೆ ಒಮ್ಮೆ ನೋಡಿ—ಅಯ ಕಂಬಖತ್, ನೀನೇ ಈ ಪತ್ರವನ್ನು ತಂದೆಯಲ್ಲವೇ ? ಎಂದು ನುಡಿದು, ಖಡ್ಗದ ಒಂದೇ ಕಡತದಿಂದ ಅವನ ಪ್ರಾಣಹರಣ ಮಾಡಿದನು. ಆತನ ಸಂತಾಪವು ಹೊಟ್ಟೆಯಲ್ಲಿ ಹಿಡಿಸಲೊಲ್ಲದು. ಖಡ್ಗಪ್ರಹಾರಮಾಡಿ ಅಷ್ಟಕ್ಕೇ ಸುಮ್ಮನಿರದೆ ಆತನು ಕೆಳಗೆ ಬಿದ್ದ ಚಾರನನ್ನು ಕಾಲಿನಿಂದ ಒದ್ದು ಹಿಂದಕ್ಕೆ ದೂಡಿದನು. ತಾನು ಎಂಥ ಅನ್ಯಾಯದ ಕೆಲಸ ಮಾಡುತ್ತೆನೆಂಬದರ ಅರಿವು ಬಾದಶಹನಿಗೆ ಉಳಿಯಲಿಲ್ಲ. ಕೆಲವು ಕಾಲ ಕ್ರಮಿಸಿದ ಮೇಲೆ ಹೊತ್ತು ಮುಣುಗಿ ಕತ್ತಲಾಯಿತು. ಯುದ್ಧ ವ್ಯಾಪಾರವು ನಿಂತಿತು. ಯಾರು ಎಲ್ಲಿರುತ್ತಾರೆ, ಯಾರು ಏನು ಮಾಡುತ್ತಾರೆಂಬದರ ಗೊತ್ತೇಹತ್ತದಾಯಿತು. ಬಾಜಾರಬುಣಗಿನವರೂ, ಘರಾಶಿಗಳೂ ಹಿಂದೆ ಉಳಿದದ್ದರಿಂದ ಸೈನಿಕರು ಇಳಕೊಳ್ಳಲಿಕ್ಕೆ ಡೇರೆಗಳು ಇಲ್ಲದಾದವು. ಅವರ ಕ್ಷುಧಾಶಾಂತಿಗೆ ಆಹಾರವು ದೊರೆಯದಾಯಿತು. ಔರಂಗಜೇಬನ ಡೇರೆಯು ಮಾತ್ರ ಆತನ ಸಂಗಡಲೇ ಇರುತ್ತಿದ್ದದರಿಂದ ಒಳಗೆ ಬಂದಕೂಡಲೆ ಡೇರೆ ಹೊಡೆದಕಾರಣ ಬಾದಶಹನ ಮಟ್ಟಿಗೆ ಬೆಚ್ಚಗಾಯಿತು. ಉಳಿದವರು ರಾತ್ರಿ ಚಳಿಯಿಂದ ಗದಗುಟ್ಟಿ ನಡಗಹತ್ತಿದರು. ದೊಡ್ಡ ದೊಡ್ಡ ಅಧಿಕಾರಿಗಳೂ, ಸರದಾರರೂ ಸಹ ಅಪ್ಪಗೈ ಹಚ್ಚಿಕೊಂಡು ರಾತ್ರಿಯನ್ನು ಕಳೆಯಬೇಕಾಯಿತು. ಔರಂಗಜೇಬನೊಬ್ಬನು ಬೆಚ್ಚಗಿದ್ದರೂ ಆತನ ಜೀವಕ್ಕೆ ಸಮಾಧಾನವಿದ್ದಿಲ್ಲ. ಜನರು ಥಂಡಿಯಿಂದ ಗದಗುಟ್ಟಿ ನಡಗುವ ಧ್ವನಿಯೂ, ಅವರ ತ್ರಾಸದ ನುಡಿಗಳೂ ಬೈಗಳೂ, ಶಾಪಗಳೂ ಆತನ ಕಿವಿಗೆ ಬೀಳಹತ್ತಿದವು. ಆದರೆ ಆತನು ಏನು ಮಾಡುವನು? ಯಾವ ಶಬ್ದಗಳಿಂದ ಜನರನ್ನು ಉತ್ತೇಜನಗೊಳಿಸುವನು? ಅವರಿಗೆ ಆಶೆಯನ್ನೇನು ತೋರಿಸುವನು ? ಈ ಭಯಂಕರ ಪ್ರಸಂಗದಿಂದ ಸುರಕ್ಷಿತ ಪಾರಾಗುವ ಉಪಾಯವು ಬಾದಶಹನಿಗೆ ತೋಚದಾಯಿತು. ಹಾಗು ಹೀಗು ರಾತ್ರಿಯು ಕ್ರಮಿಸಿತು. ಸೂರ್ಯೋದಯವಾದ ಕೂಡಲೆ ಬಾದಶಹನು ತನ್ನ ಶಾಮಿಯಾನದಿಂದ ಹೊರಗೆ ಬಂದು ಸುತ್ತುಮುತ್ತು ನೋಡುತ್ತಾನೆ. ಪರ್ವತದ ಮೇಲಿಂದ ಬಿದ್ದವರ, ಹಾಗು ಥಂಡಿಯಿಂದ

ಸೇಡುಹಿಡಿದು ಆಸನ್ನಮರಣರಾದವರ ರಾಶಿಗೆ ರಾಶಿಯಾದದ್ದು ಆತನ ಕಣ್ಣಿಗೆ ಬಿದ್ದಿತು. ಆದರೂ ಆತನು ಎರಡೂ ಪರ್ವತಗಳ ಮೇಲೆ ಏರಿ ಹೋಗಲಿಕ್ಕೆ ಮತ್ತೆ ಆಜ್ಞಾಪಿಸಿ, ತಾನು ಕಂದರವನ್ನು ಪ್ರವೇಶಿಸಿಬಂದಿದ್ದ ಮಾರ್ಗದ ನಿಜವಾದ ಸ್ಥಿತಿಯಾದರೂ ಹ್ಯಾಗಿರುತ್ತದೆಂಬದನ್ನು ನೋಡುವ ದಕ್ಕಾಗಿ ಕೆಲವು ಸೈನಿಕರೊಡನೆ ಆತನು ಅತ್ತಕಡೆಗೆ ಸಾಗಿದನು; ಆದರೆ ಎತ್ತ ಹೋಗುತ್ತಾನೆ ? ಅಲ್ಲಿ ಹೋದವರ ಚಂಡುಗಳು ತುಂಡರಿಸುವ ವೆಂಬದನ್ನು ಪ್ರತ್ಯಕ್ಷ ನೋಡಿ ಹಿಂದಕ್ಕೆ ತಿರುಗಿದನು. ಹಾಗು ಹೀಗು ಜನರಿಗೆ ಧೈರ್ಯಹೇಳುತ್ತ ಹೊತ್ತುಗಳೆದನು. ಮತ್ತೆ ರಾತ್ರಿಯಾಯಿತು. ಒಟ್ಟಿನ ಮೇಲೆ ಪ್ರಸಂಗವು ಬಹಳ ಕಠಿಣವಿರುತ್ತದೆಂಬ ವಿಚಾರವು ಆತನ ಮನಸ್ಸಿನಲ್ಲಿ ದೃಢವಾಯಿತು. ಆತನು ಉಪಾಯಗಾಣದೆ ರಾಜಸಿಂಹನ ಕಡೆಗೆ—"ನಿನ್ನ ಮಾತು ನನಗೆ ಒಪ್ಪಿಗೆಯಾಗಿವೆ. ನನ್ನನ್ನು ತಿರುಗಿ ಹೋಗಗೊಡಿಸು," ಎಂದು ಹೇಳಿಬಿಟ್ಟು ಬರೆಯಬೇಕೆಂದು ಮಾಡಿದನು. ವಿಚಾರಾಂತದಲ್ಲಿ ಆತನು ಹಾಗೆ ಮಾಡದೆ, ರಾಜಸಿಂಹನ ಕಡೆಗೆ ವಕೀಲನನ್ನು ಮಾತ್ರ ಕಳಿಸ ಬೇಕೆಂದು ನಿಶ್ಚಯಿಸಿದನು. ಕಡೆಗೆ ಸಾದತಖಾನನಿಗೇ ಆ ಅಪಮಾನಕಾರಕ ವಾದ ವಕೀಲಿಯನ್ನು ಮಾಡಲಿಕ್ಕೆ ಆಜ್ಞಾಪಿಸಿದನು. ಅಪ್ಪಣೆಯಂತೆ ಸಾದತಖಾನನು ರಾಜಸಿಂಹನ ಕಡೆಗೆ ಹೋದನು. ಮರುದಿನ ಮತ್ತೆ ಬೆಳಗಾಯಿತು. ಸೂರ್ಯನು ಉದಯಿಸಿದನು. ಔರಂಗಜೇಬನು ಶಾಮಿಯಾನದಿಂದ ಹೊರಗೆ ಬಂದು ಸುತ್ತುಮುತ್ತು ನೋಡಿದನು. ಸಾದತ ಖಾನನು ಏನು ಸುದ್ದಿಯನ್ನು ತರುವನೋ ಎಂದು ಆತನು ಹಾದಿಯನ್ನು ನೋಡಹತ್ತಿದನು. ಕಂದರದಲ್ಲಿ ಅಲ್ಲಲ್ಲಿ ಹದ್ದುಗಳು ಮುಸಲ್ಮಾನ ವೀರರ ಶವಗಳನ್ನು ಹರಿಯುತ್ತಿದ್ದವು. ವೈರಿಗಳ ಕಡೆಯವನೊಬ್ಬನೂ ಸಾಯದೆ ತನ್ನ ಸೈನಿಕರು ಮಾತ್ರ ಸಾವಿಗೀಡಾಗುವದನ್ನು ನೋಡಿ, ತಾನೇ ಈ ಅನರ್ಥದ ಕಾರಣನೆಂದು ಬಾದಶಹನು ಪಶ್ಚಾತ್ತಾಪಪಟ್ಟನು. ಆತನು ತನ್ನ ಸೈನಿಕರನ್ನೆಲ್ಲ ಯುದ್ಧಬಿಡಿಸಿ ಒತ್ತಟ್ಟಿಗೆ ಒಟ್ಟುಗೂಡಿಸಬೇಕೆಂದು ಆಜ್ಞಾಪಿಸಿದನು. ಅಷ್ಟರಲ್ಲಿ ಸಾದತಖಾನನು ಬಂದನು. "ಒಡಂಬಡಿಕೆಯನ್ನು ಮಾಡಿಕೊಂಡು ಹೋಗಬೇಕೆಂದು ಈ ಮೊದಲೇ ನಾನಾಗಿಯೇ ಚಾರನನ್ನು ಕಳಿಸಿದ್ದೆನಾದ್ದರಿಂದ, ಒಡಂಬಡಿಕೆಗೆ ನನ್ನಿಂದ ಎಷ್ಟು ಮಾತ್ರವೂ ಪ್ರತಿಬಂಧ

ವಿಲ್ಲ. ಪ್ರತಿಯೊಬ್ಬ ದಂಡಾಳುವು ಶಸ್ತ್ರಗಳನ್ನು ಚಲ್ಲಿಕೊಟ್ಟು ಹೊರಗೆ ಬರಬೇಕು, ಅಂದರೆ ನಾನು ಹೋಗಗೊಡುವೆನು," ಎಂದು ರಾಜಸಿಂಹನು ಹೇಳಿದನೆಂದು ಸಾದತಖಾನನು ವಿಜ್ಞಾಪಿಸಿದನು. ಅತ್ಯಂತ ಅಪಮಾನಕಾರಕವಾದ ಈ ಮಾತಿಗೆ ನಿರ್ವಾಹವಿಲ್ಲದೆ ಔರಂಗಜೇಬನು ಒಪ್ಪಿಕೊಳ್ಳಬೇಕಾಯಿತು. ಮುಂದೆ ಎಂದಾದರೂ ಇದರ ಸೇಡು ತೀರಿಸಿಕೊಂಡೇನೆಂದು ಆತನು ಮನಸ್ಸಿನಲ್ಲಿ ನಿಶ್ಚಯವನ್ನಂತು ಮಾಡಿಕೊಂಡನು. ಆದರೆ ಆಗ ಶಸ್ತ್ರವನ್ನು ಚಲ್ಲಿಕೊಟ್ಟು ಆತನು ಹೊರಡಲಿಕ್ಕೆ ಸಿದ್ಧನಾಗಬೇಕಾಯಿತು. ಒಡಂಬಡಿಕೆಯ ಕರಾರುಗಳು ಗೊತ್ತಾಗುವದು ಗೊತ್ತಾಗಿ ಸೈನಿಕರು ಶಸ್ತ್ರಗಳನ್ನು ಚಲ್ಲಿಕೊಟ್ಟು ಹೊರಬೀಳಹತ್ತಿದರು. ಔರಂಗಜೇಬನು ಹೋಗುವಾಗ ತನಗೆ ಭೆಟ್ಟಿಯನ್ನು ಕೊಡಬೇಕೆಂದು ರಾಜಸಿಂಹನು ಇಚ್ಛೆಯನ್ನು ಪ್ರದರ್ಶಿತಮಾಡಿದನು; ಆದರೆ ಔರಂಗಜೇಬನು ಅದಕ್ಕೆ ಒಪ್ಪಿಕೊಳ್ಳಲಿಲ್ಲ. ರಾಜಸಿಂಹನಾದರೂ ಆ ಮಾತಿನ ವಿಷಯವಾಗಿ ಆಗ್ರಹವನ್ನು ತಾಳಲಿಲ್ಲ. ಉದೇಪುರಿಯನ್ನೂ, ಆಕೆಯ ಜನಾನಖಾನೆಯನ್ನೂ ಸುಖರೂಪದಿಂದ ಬಾದಶಹನ ಸಂಗಡ ಕಳಿಸಿ ಕೊಟ್ಟನು. ಅವಮಾನಿತನಾದ ಔರಂಗಜೇಬನೂ ಆತನ ಜನರೂ ದಿಲ್ಲಿಯ ಹಾದಿಯನ್ನು ಹಿಡಿದರು.

ಇಲ್ಲಿಗೆ ನಮ್ಮ ಕಥಾಭಾಗವು ಮುಗಿಯಿತೆಂದು ಹೇಳುವ ಮೊದಲು, ಕೆಲವು ಮಾತುಗಳನ್ನು ತಿಳಿಸುವದು ಅವಶ್ಯವಾಗಿರುತ್ತದೆ. ರಾಜಸಿಂಹನು ಜಯಶಾಲಿಯಾಗಿ ಉದೇಪುರಕ್ಕೆ ಹೋದಬಳಿಕ, ರೂಪಮತಿಯೊಡನೆ ಸಮಾರಂಭದಿಂದ ಆತನ ವಿವಾಹವಾಯಿತು. ಪದ್ಮೆಯು ತನ್ನ ದಾಸಿಯಾದರೂ, ತನ್ನ ಮಗನಾದ ಶಿವಸಿಂಗನು ಆಕೆಯನ್ನೂ, ಆಕೆಯು ಶಿವಸಿಂಗನನ್ನೂ ಪ್ರೀತಿಸುವದನ್ನು ನೋಡಿ, ವಿಜಯಸಿಂಹನು ಅವರಿಬ್ಬರ ವಿವಾಹವನ್ನು ಮಾಡಿದನು. ಆ ವೃದ್ಧರಜಪೂತನು ತನ್ನ ಮಗನ ಮೇಲಿನ ಸಿಟ್ಟನ್ನು ಮರೆತು, ಸೊಸೆಯಾದ ಪದ್ಮೆಯನ್ನು ಮಗಳಂತೆ ನಡಿಸಿಕೊಳ್ಳಹತ್ತಿದನು. ಆತನು ಯಾವತ್ತು ಕಾರಭಾರವನ್ನು ಮಗನಿಗೆ ಒಪ್ಪಿಸಿದನು. ದುರ್ಗಾದಾಸನು ಅಜಿತಸಿಂಗನ ಹೆಸರಿನಿಂದ ಜೋಧಪುರದ ರಾಜ್ಯವನ್ನು ಸಾಗಿಸಿದನು. ಇಂದಿರೆಯೂ, ಚಂದ್ರಾವತೀರಾಣಿಯೂ ಪರಮೇಶ್ವರ ಭಕ್ತಿಯಲ್ಲಿ ಕಾಲಹರಣಮಾಡಹತ್ತಿದರು. ಇಂದಿರೆಯು ತಾನು ಸುರಕ್ಷಿತ

ವಾಗಿ ಇದ್ದದ್ದಕ್ಕಾಗಿಯೂ, ದಿಲ್ಲಿಯಲ್ಲಿ ತನ್ನನ್ನು ಒಳ್ಳೆಯ ರೀತಿಯಿಂದ ನಡಿಸಿಕೊಂಡದ್ದಕ್ಕಾಗಿಯೂ ಉದೇಪುರಿಯ ಬೇಗಮೆಗೆ ಕೃತಜ್ಞತೆಯ ಪತ್ರವನ್ನು ಬರೆದಳು, ಉದೇಪುರಿಯು ರೂಪಮತಿಯ ಮೇಲಿನ ಸಿಟ್ಟನ್ನು ಸಂಪೂರ್ಣವಾಗಿ ಮರೆತುಬಿಟ್ಟಳು; ಆದರೆ ಔರಂಗಜೇಬನು ಮಾತ್ರ ರಾಜಸಿಂಹನ ಸೇಡು ತೀರಿಸಿಕೊಳ್ಳಬೇಕೆಂದು ನಿಶ್ಚಯಿಸಿದ್ದನ್ನು ಎಂದೂ ಮರೆಯಲಿಲ್ಲ. ನಯನಪಾಲನು ಯುದ್ಧದಲ್ಲಿ ;ಶೌರ್ಯದಿಂದ ಕಾದಿ ಮರಣಹೊಂದಿದನು. ರಾಜಸಿಂಹನು ಸಪತ್ನೀಕನಾಗಿ ಅಚಲೇಶ್ವರಕ್ಕೆ ಹೋಗಿ, ವೈಕುಂಠ ಯೋಗಿಗಳ ಶೋಧಮಾಡಲು, ಅವರು ಎಲ್ಲಿಯೂ ದೊರೆಯಲಿಲ್ಲ. ಕಡೆಗೆ ಅವರ ಹೆಸರಿನಿಂದ ಸುವರ್ಣಪಾದುಕೆಗಳನ್ನು ಮಾಡಿಸಿ, ತನ್ನ ಸಿಂಹಾಸನದ ಬಳಿಯಲ್ಲಿಟ್ಟನು. ಆ ರಾಜನಂತೆ ನಮ್ಮ ಮನಸ್ಸಾದರೂ ಯಾವಾಗಲೂ ಸತ್ಪುರುಷರಲ್ಲಿರುವಂತೆ ಸದ್ಗುರುವನ್ನು ಪ್ರಾರ್ಥಿಸೋಣ !

— ಸಮಾಪ್ತ. —

ಗಳಗನಾಥರ

# ಜನಪ್ರಿಯ ಸುರಸ ಕಾದಂಬರಿಗಳು

## — ಮರಾಟರ ಐತಿಹಾಸಿಕ ಕಾದಂಬರಿಗಳು —

| | | | | | |
|---|---|---|---|---|---|
| ೧ | ಈಶ್ವರೀಸೂತ್ರ | ೩–೦–೦ | ೫ | ಕಮಲಕುಮಾರಿ | ೨–೮–೦ |
| ೨ | ಮರಾಟರ ಅಭ್ಯುದಯ | ೩–೦–೦ | ೬ | ಗೃಹಕಲಹ | ೨-೧೦-೦ |
| ೩ | ಛತ್ರಪತಿ | ೩–೦–೦ | ೭ | ಶಿವಪ್ರಭುವಿನಪುಣ್ಯ | ೩–೦– |
| ೪ | ಸ್ವರಾಜ್ಯ ಸುಗಂಧ | ೩–೦–೦ | ೮ | ಕುರುಕ್ಷೇತ್ರ | ೨–೮– |

## — ಕನ್ನಡಿಗರ ಐತಿಹಾಸಿಕ ಕಾದಂಬರಿಗಳು —

| | | | | |
|---|---|---|---|---|
| ೧ | ಮಾಧವ ಕರುಣಾವಿಲಾಸ | .... | .... .... | ೯–೦–೦ |
| ೨ | ಕನ್ನಡಿಗರ ಕರ್ಮಕಥೆ | ೪–೦–೦ | ಪೂರ್ಣಕ್ಯಾಲಿಕೋ | ೫–೦–೦ |
| ೩ | ಕುಮುದಿನಿ | ೨–೮–೦ | ,, | ೩–೮–೦ |

## ರಜಪೂತರ ಐತಿಹಾಸಿಕ ಕಾದಂಬರಿಗಳು

| | | |
|---|---|---|
| ೧ನೆಯದು | ರಾಣೀ-ಮೃಣಾಲಿನಿ | ೩—೮—೦ |
| ೨ನೆಯದು | ರಾಣಾ—ರಾಜಸಿಂಹ | ೧—೧೨—೦ |
| ೩ನೆಯದು | ಧಾರ್ಮಿಕತೇಜ | ೩—೮—೦ |
| ೪ನೆಯದು | ವೈಭವ ಅಥವಾ ಚಾಣಕ್ಯನ—ಕಾರಸ್ಥಾನ | ೨—೦—೦ |
| ೫ನೆಯದು | ಶೌರ್ಯ—ಸಂಜೀವನ ಅಥವಾ ಸತ್ವಸಾರ | ೧—೮—೦ |
| ೬ನೆಯದು | ಕ್ಷಾತ್ರತೇಜ | ೧—೮—೦ |

## — ಪೌರಾಣಿಕ ಗ್ರಂಥಗಳು —

| | | |
|---|---|---|
| ೧ | ಸಚಿತ್ರ ರಹಸ್ಯಪ್ರಕಾಶಿತ ಮಹಾಭಾರತಾಮೃತ ಆದಿಪರ್ವ | ೪-೦-೦ |
| ೨ | ನಳಚರಿತ್ರೆ .... .... .... .... .... | ೧–೮–೦ |
| ೩ | ವೇಂಕಟೇಶ ಮಾಹಾತ್ಮ್ಯ .... ...... .... .... | ೨-೮-೦ |

— ಕಾಲ್ಪನಿಕ ಕಾದಂಬರಿ —

೧ ಪ್ರಬುದ್ಧ ಪದ್ಮನಯನೆ .... .... .... .... ೨-೮-೦

ಇತರ ಪುಸ್ತಕಗಳು

| | |
|---|---|
| ಸದ್ಗುರೋತ್ತರು | ೦—೬—೦ |
| ವೀರಪ್ರತಾಪ | ೦—೬—೦ |
| ಗಳಗನಾಥರ ಜೀವನ ಚರಿತ್ರೆ | ೧—೮—೦ |
| ದಾಂಪತ್ಯ | ೧—೦—೦ |
| ವೈಕುಂಠಮುತ್ತಿಗೆ | ೧—೮—೦ |
| ಮಹಾರಥಿ ಭೀಷ್ಮ | ೧—೧೨—೦ |
| ಶ್ರೀಕೃಷ್ಣಗೀತಾಮೃತ | ೧—೪—೦ |
| ಅಂತರಗಂಗೆ | ೧—೪—೦ |

FROM—

**S. M. JOSHI**

*Galaganath Surasa Grantha Mala*

**Jawali Peth DHARWAR**



ವೇ. ತಿ. ಗಳಗನಾಥರು.